ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## (ಪರಿಷ್ಕೃತ ಪಠ್ಯಪುಸ್ತಕ)

## ಭಾಗ – 2

# 9

## ಒಂಬತ್ತನೆಯ ತರಗತಿ

©KTBS Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 85

# ಪರಿವಿಡಿ


| ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 5. | ಮೊಘಲರು ಮತ್ತು ಮರಾಠರು | **1** |
| 6. | ಭಕ್ತಿ ಪಂಥ | **14** |
| 7. | ಮಧ್ಯಯುಗದ ಯುರೋಪ್ | **21** |
| 8. | ಆಧುನಿಕ ಯುರೋಪ್ | **25** |
| 9. | ಕ್ರಾಂತಿಗಳು ಮತ್ತು ರಾಷ್ಟ್ರಗಳ ಏಕೀಕರಣ | **38** |
| | **ರಾಜ್ಯಶಾಸ್ತ್ರ** | |
| 4. | ನ್ಯಾಯಾಂಗ ವ್ಯವಸ್ಥೆ | **48** |
| 5. | ಭಾರತದ ಚುನಾವಣಾ ವ್ಯವಸ್ಥೆ | **56** |
| 6. | ದೇಶದ ರಕ್ಷಣೆ | **63** |
| 7. | ರಾಷ್ಟ್ರೀಯ ಭಾವೈಕ್ಯತೆ | **72** |
| | **ಸಮಾಜಶಾಸ್ತ್ರ** | |
| 3. | ಸಾಮಾಜಿಕ ಬದಲಾವಣೆ | **77** |
| 4. | ಸಮುದಾಯ | **81** |
| | **ಭೂಗೋಳ ವಿಜ್ಞಾನ** | |
| 6. | ಕರ್ನಾಟಕದ ಖನಿಜ ಸಂಪನ್ಮೂಲಗಳು | **90** |
| 7. | ಕರ್ನಾಟಕದ ಸಾರಿಗೆ | **93** |
| 8. | ಕರ್ನಾಟಕದ ಕೈಗಾರಿಕೆಗಳು | **99** |
| 9. | ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು | **105** |
| 10. | ಕರ್ನಾಟಕದ ಜನಸಂಖ್ಯೆ | **109** |
| | **ಅರ್ಥಶಾಸ್ತ್ರ** | |
| 3. | ಬಡತನ ಮತ್ತು ಹಸಿವು | **112** |
| 4. | ಶ್ರಮ ಹಾಗೂ ಉದ್ಯೋಗ | **120** |
| | **ವ್ಯವಹಾರ ಅಧ್ಯಯನ** | |
| 2. | ಹಣಕಾಸಿನ ನಿರ್ವಹಣೆ | **127** |
| 3. | ವ್ಯವಹಾರ ಶಾಸ್ತ್ರದಲ್ಲಿ ಲೆಕ್ಕ ಬರಹ | **134** |


©KTBS Not to be re published

## ಅಧ್ಯಾಯ-5

# ಮೊಘಲರು ಮತ್ತು ಮರಾಠರು

### ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ಉತ್ತರ ಭಾರತದಲ್ಲಿ ಆಳ್ವಿಕೆ ಮಾಡಿದ ಮೊಘಲ್ ದೊರೆಗಳು.
- ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ಮೊಘಲ್ ದೊರೆಗಳ ಕೊಡುಗೆಗಳು.
- ಮರಾಠ ರಾಜ್ಯದ ಉಗಮ ಹಾಗೂ ಶಿವಾಜಿಯ ಆಡಳಿತ.

ದೆಹಲಿ ಸುಲ್ತಾನರ ಆಡಳಿತ ದುರ್ಬಲಗೊಂಡಾಗ ಬಾಬರನು ಸಾ.ಶ.1526ರಲ್ಲಿ ಮೊಘಲ್ ಸಾಮ್ರಾಜ್ಯವನ್ನು ಆರಂಭಿಸಿದನು.

## ಭಾರತದಲ್ಲಿ ಮೊಘಲರ ಆಡಳಿತ (ಸಾ.ಶ.1526–1707)

### ಬಾಬರ್

ಭಾರತದಲ್ಲಿ ಮೊಘಲ್ ಸಾಮ್ರಾಜ್ಯ ಸ್ಥಾಪಿಸಿದ ಬಾಬರ್ ಮೂಲತಃ ತುರ್ಕಿಸ್ಥಾನದವನು. ಈತನ ತಂದೆ ಉಮರ್‌ಶೇಖ್ ಮಿರ್ಜಾ ಮಧ್ಯ ಏಷಿಯಾದ ಚಿಕ್ಕ ರಾಜ್ಯವಾದ ಫರ್ಗಾನದ ದೊರೆ. ತಂದೆಯ ಮರಣದಿಂದಾಗಿ ಬಾಬರ್ ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ಫರ್ಗಾನದ ಸಿಂಹಾಸನ ಏರಿದನು. ಆದರೆ ಕೆಲವೇ ದಿನಗಳಲ್ಲಿ ಸಂಬಂಧಿಕರು ಹಾಗೂ ಶತ್ರುಗಳ ಪಿತೂರಿಯಿಂದಾಗಿ ರಾಜ್ಯವನ್ನು ಕಳೆದುಕೊಂಡು ಅಲೆಮಾರಿ ಜೀವನ ನಡೆಸುವಂತಾಯಿತು. ವಿವಿಧ ಬಗೆಯ ಒತ್ತಡಗಳಿಂದ ಸೃಷ್ಟಿಯಾದ ಸಂದರ್ಭವು ಭಾರತದ ಮೇಲೆ ದಾಳಿ ಮಾಡಲು ಪ್ರೇರಣೆ ನೀಡಿತು. ಬಾಬರನು ಐದು ಬಾರಿ ದಾಳಿ ಮಾಡಿದನು. ಸಾ.ಶ.1526ರಲ್ಲಿ ನಡೆದ ಮೊದಲನೆಯ ಪಾಣಿಪತ್ ಯುದ್ಧದಲ್ಲಿ ದೆಹಲಿ ಸುಲ್ತಾನನಾಗಿದ್ದ ಇಬ್ರಾಹಿಂ ಲೋದಿ ಹಾಗೂ ಆತನ ಆಫ್ಘನ್ ಬೆಂಬಲಿಗರನ್ನು ಸೋಲಿಸಿ ಭಾರತದಲ್ಲಿ ಮೊಘಲರ ಆಳ್ವಿಕೆಗೆ ಅಡಿಪಾಯ ಹಾಕಿದನು. ದೆಹಲಿ ಈತನ ರಾಜಧಾನಿಯಾಯಿತು. ಇವನು ತನ್ನ ನಾಲ್ಕು ವರ್ಷಗಳ ಅವಧಿಯಲ್ಲಿ ಮೇವಾರದ ರಾಣಾ ಸಂಗ್ರಾಮಸಿಂಗ್, ರಜಪೂತ ದೊರೆ ಚಾಂದೇರಿಯ ಮೇದಿನರಾಯ ಹಾಗೂ ಇಬ್ರಾಹಿಂ ಲೋದಿಯ ಸೋದರನಾದ ಮಹಮದ್ ಲೋದಿಯರನ್ನು ಸೋಲಿಸಿದ. ಬಾಬರನು ಪಾಣಿಪತ್, ಕಣ್ವ ಮತ್ತು ಗೋಗ್ರ ಎಂಬ ಮೂರು ಯುದ್ಧಗಳನ್ನು ಗೆಲ್ಲುವ ಮೂಲಕ ಉತ್ತರ ಭಾರತದ ವಿಶಾಲವಾದ ಪ್ರದೇಶದಲ್ಲಿ ಮೊಘಲ್ ಸಾಮ್ರಾಜ್ಯವನ್ನು ಸ್ಥಾಪಿಸಿದ.

> **ನಿಮಗಿದು ತಿಳಿದಿರಲಿ:**
>
> ಬಾಬರನಾಮಾ (ತುಝುಕ್-ಇ-ಬಾಬರಿ) ಬಾಬರ್ ತನ್ನ ಆತ್ಮ ಚರಿತ್ರೆಯನ್ನು ತುರ್ಕಿ ಬಾಷೆಯಲ್ಲಿ ಬರೆದನು. ಈ ಗ್ರಂಥದಲ್ಲಿ ರಾಜಕೀಯ ಸಂಘಟನೆಯಲ್ಲದೆ ವಿವಿಧ ನಾಡುಗಳ ಪ್ರಾಕೃತಿಕ ಸ್ವರೂಪ, ಸೌಂಧರ್ಯ, ಅಲ್ಲಿನ ಪ್ರಾಣಿ ಸಂಕುಲ, ಸಸ್ಯವರ್ಗ, ಪಕ್ಷಿ, ತೋಟಗಳ ಬಗ್ಗೆ ವರ್ಣಿಸಲಾಗಿದೆ. ಬಾಬರ್ ಕವಿ ಹಾಗೂ ಉತ್ತಮ ಚಿತ್ರಕಾರನಾಗಿದ್ದನು. ಅಬ್ದುಲ್‌ರಹೀಮ್‌ಖಾನ್ ಇದನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದನು.

### ಹುಮಾಯೂನ್

ಹುಮಾಯೂನನು ಬಾಬರ್‌ನ ಹಿರಿಯ ಮಗ. ಇವನು ಸಾ.ಶ.1530ರಲ್ಲಿ ಅಧಿಕಾರಕ್ಕೆ ಬಂದಾಗ ಅನೇಕ ಕಠಿಣ ಸವಾಲುಗಳನ್ನು ಎದುರಿಸಬೇಕಾಯಿತು. ಅವುಗಳೆಂದರೆ ಅಸ್ಥಿರತೆಯಿಂದ ಕೂಡಿದ ರಾಜಕೀಯ ವ್ಯವಸ್ಥೆ,



©KTBS Not to be republished

ಅಫ್ಘನ್ನರಿಂದ ಎದುರಾಗುತ್ತಿದ್ದ ಗುಜರಾತಿನ ಬಹದ್ದೂರ್‌ಷಾನ ವೈರತ್ವ, ತನ್ನ ಸಹೋದರರ ಅಸಹಕಾರ ಮುಂತಾದವು. ಕಾಲಿಂಜರ್ ಹಾಗೂ ಚುನಾರ್ ಕೋಟೆಗಳ ಮೇಲಿನ ಮುತ್ತಿಗೆಯಲ್ಲಿ ವಿಫಲನಾದರೂ ದೌರಾ, ಜಾನ್‌ಪುರ, ಮಾಂಡಸರ್‌ಗಳನ್ನು ವಶಪಡಿಸಿಕೊಂಡನು. ಕೊನೆಗೆ ಶೇರ್‌ಷಾನಿಂದ ಸೋತ ಹುಮಾಯೂನನು ಸಿಂಧ್ ಪ್ರಾಂತ್ಯದಲ್ಲಿ ಆಶ್ರಯ ಪಡೆದು ಶೇರ್‌ಷಾನ ಮರಣದ ನಂತರ ಪುನ: ಆಡಳಿತ ನಡೆಸಿದನು.

**ಶೇರ್‌ಷಾ (ಸಾ.ಶ. 1540–1545)**

ಶೇರ್‌ಷಾನು ಮೂಲತಃ ಅಫ್ಘಾನಿಸ್ತಾನದ ಸೂರ್ ಮನೆತನಕ್ಕೆ ಸೇರಿದವನು. ಇವನ ಮೂಲ ಹೆಸರು ಫರೀದ್. ಇವನು ಬಾಲ್ಯದಲ್ಲಿ ತಂದೆ–ತಾಯಿಯ ಪ್ರೀತಿ, ವಾತ್ಸಲ್ಯದಿಂದ ವಂಚಿತನಾಗಿ ಅಲೆಮಾರಿ ಜೀವನ ನಡೆಸಿದನು. ದಕ್ಷಿಣ ಬಿಹಾರದ ದೊರೆಯಾಗಿದ್ದ ಬಹಾರಖಾನ್ ಲೋಹಣಿಯ ಸೇವೆಯಲ್ಲಿದ್ದಾಗ ಒಬ್ಬನೇ ಹುಲಿಯನ್ನು ಕೊಂದ. ಆದ್ದರಿಂದ ಫರೀದನಿಗೆ ಶೇರ್‌ಖಾನ್ ಎಂಬ ಬಿರುದು ಬಂದಿತು. ಬಾಬರ್ ಭಾರತದಲ್ಲಿ ಆಡಳಿತ ವಹಿಸಿಕೊಂಡ ನಂತರ ಆತನ ಸೇವೆಗೆ ಸೇರಿ ಮಹತ್ವದ ಪಾತ್ರವಹಿಸಿದನು. ನಂತರ ಹುಮಾಯೂನನನ್ನು ಸೋಲಿಸಿದ ಶೇರ್‌ಷಾನು ಪಂಜಾಬ್, ಸಿಂಧ್, ಮುಲ್ತಾನ್, ಗ್ವಾಲಿಯರ್, ಮಾಳ್ವಾ, ರೈಸಿನ್‌ದುರ್ಗಾ, ಮಾರ್ವಾಡ ಹಾಗೂ ಕಾಲಿಂಜರ್‌ಗಳನ್ನು ವಶಪಡಿಸಿಕೊಂಡನು. ಈತನ ಸಾಮ್ರಾಜ್ಯವು ಅಸ್ಸಾಂ, ಗುಜರಾತ್ ಮತ್ತು ಕಾಶ್ಮೀರಗಳನ್ನು ಹೊರತುಪಡಿಸಿ ಇಡೀ ಉತ್ತರ ಭಾರತದಾದ್ಯಂತ ವಿಸ್ತರಿಸಿತ್ತು.

**ಶೇರ್‌ಷಾನ ಆಡಳಿತ ವ್ಯವಸ್ಥೆ:** ಇವನ ಆದ್ಯತೆ ಆಡಳಿತ ವ್ಯವಸ್ಥೆಯನ್ನು ಬಿಗಿಗೊಳಿಸುವುದಾಗಿತ್ತು. ಶೇರ್‌ಷಾನು ಒಟ್ಟು ಆಡಳಿತದ ಮುಖ್ಯಸ್ಥನಾಗಿದ್ದನು ಹಾಗೂ ಮಂತ್ರಿಮಂಡಲದ ಸಹಾಯದಿಂದ ದಕ್ಷ ಆಡಳಿತವನ್ನು ನಡೆಸುತ್ತಿದ್ದನು. ರಾಜನು ಪೌರ ಹಾಗೂ ಸೈನಿಕ ಕ್ಷೇತ್ರಗಳೆರಡರ ಅಧಿಕಾರವನ್ನು ತನ್ನಲ್ಲಿಯೇ ಕೇಂದ್ರೀಕರಿಸಿಕೊಂಡಿದ್ದನು.

ಈತನು ಇಡೀ ಸಾಮ್ರಾಜ್ಯವನ್ನು ಸರ್ಕಾರ್(ಪ್ರಾಂತ್ಯ), ಪರಗಣಗಳನ್ನಾಗಿ ವಿಂಗಡಿಸಿದ್ದನು. ಇವನ ಸೈನ್ಯದಲ್ಲಿ ಕಾಲ್ದಳ, ಅಶ್ವದಳ, ಫಿರಂಗಿದಳ ಹಾಗೂ ಗಜದಳಗಳಿದ್ದವು. ಇವುಗಳಲ್ಲಿ ಅಶ್ವದಳ ಹೆಚ್ಚು ಪ್ರಬಲವಾಗಿತ್ತು. ಸೈನ್ಯದಲ್ಲಿ ಶಿಸ್ತು ಮೂಡಿಸುವ ಸಲುವಾಗಿ ಸೈನಿಕರ ಹಾಜರಾತಿ ಪುಸ್ತಕ, ಕುದುರೆಗಳಿಗೆ ಮುದ್ರೆ(ದಾಗ್) ಹಾಕುವ ಪದ್ಧತಿಯನ್ನು ಜಾರಿಗೆ ತಂದನು. ಸೈನ್ಯವನ್ನು ಅನೇಕ ಫೌಜಗಳನ್ನಾಗಿ ವಿಂಗಡಿಸಿ ಅವುಗಳ ಮೇಲ್ವಿಚಾರಣೆಗೆ ಫೌಜದಾರ(ದಳಪತಿ)ರನ್ನು ನೇಮಿಸಿದ್ದನು. ಸೈನ್ಯ ಸಂಘಟನೆ, ಯುದ್ಧ ಸಾಮಗ್ರಿಗಳು ಮತ್ತು ಸೈನಿಕರ ಶಿಸ್ತಿನ ವಿಷಯದಲ್ಲಿ ಶೇರ್‌ಷಾ ಸ್ವತಃ ಆಸಕ್ತಿ ವಹಿಸಿದ್ದನು.

ತನ್ನ ಸಾಮ್ರಾಜ್ಯದಲ್ಲಿ ಬೇಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಅಳತೆ ಮಾಡಿಸಿ ಕಂದಾಯ ನಿಗದಿ ಮಾಡುತ್ತಿದ್ದನು. ಭೂಮಿಯನ್ನು ಅದರ ಫಲವತ್ತತೆಗೆ ಅನುಗುಣವಾಗಿ ಉತ್ತಮ, ಮಧ್ಯಮ ಹಾಗೂ ಕನಿಷ್ಠ ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಿದ್ದನು. ರೈತರು ತಮ್ಮ ಬೆಳೆಯ ಉತ್ಪಾದನೆಯ $\frac{1}{3}$ ಭಾಗವನ್ನು ಭೂಕಂದಾಯವೆಂದು ಸರ್ಕಾರಕ್ಕೆ ನೀಡುತ್ತಿದ್ದರು.

ಶೇರ್‌ಷಾನು ನಿಷ್ಪಕ್ಷಪಾತವಾದ ನ್ಯಾಯದಾನಕ್ಕೆ ಹೆಸರಾಗಿದ್ದ. ಸುಲ್ತಾನನೇ ಸಾಮ್ರಾಜ್ಯದ ಮುಖ್ಯ ನ್ಯಾಯಾಧೀಶನಾಗಿ ಅಂತಿಮ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದನು. ಪ್ರತಿ ಬುಧವಾರ ಸಾಯಂಕಾಲ ನ್ಯಾಯದಾನ ನೀಡಲು ದರ್ಬಾರು ನಡೆಸುತ್ತಿದ್ದನು.

ಶೇರ್‌ಷಾ 'ದಾಮ್' ಎಂಬ ಹೊಸ ಬೆಳ್ಳಿಯ ರೂಪಾಯಿ ನಾಣ್ಯವನ್ನು ಜಾರಿಗೆ ತಂದನು. ಈ ಬೆಳ್ಳಿ ನಾಣ್ಯದ ತೂಕ 180 ಗುಲಗಂಜಿ. ಇದನ್ನು ನಂತರದ ಎಲ್ಲ ಮೊಘಲ್ ದೊರೆಗಳು ಮುಂದುವರಿಸಿಕೊಂಡು ಬಂದರು.

©KTBS Not to be republished

**ನಿಮಗಿದು ತಿಳಿದಿರಲಿ:**

***ನಾಲ್ಕು ಪ್ರಮುಖ ರಾಜಮಾರ್ಗಗಳೆಂದರೆ :***

*1. ಸೋನಾರ್ ಗಾಂವ್‌ನಿಂದ ಆರಂಭಿಸಿ ಆಗ್ರಾ, ದಿಲ್ಲಿ ಹಾಗೂ ಲಾಹೋರ್‌ಗಳ ಮೂಲಕ ಸಿಂಧೂ ನದಿ ತೀರದವರೆಗೆ. ಈ ಮಾರ್ಗವನ್ನು ಸಡಕ್–ಇ–ಅಜಂ ಎಂದು ಕರೆಯಲಾಗುತ್ತಿತ್ತು.*

*2. ಆಗ್ರಾದಿಂದ ಬರ್ಹಾನ್‌ಪುರದವರೆಗೆ*

*3. ಆಗ್ರಾದಿಂದ ಚಿತ್ತೋಡದವರೆಗೆ*

*4. ಲಾಹೋರ್‌ನಿಂದ ಮುಲ್ತಾನ್‌ವರೆಗೆ*

ರಾಜಮಾರ್ಗದ ಎರಡು ಬದಿಗೆ ನೆರಳು ನೀಡುವ ಮರಗಳು ಹಾಗೂ 1700 ವಿಶ್ರಾಂತಿ ಗೃಹ(ಸರಾಯಿ)ಗಳನ್ನು ಪ್ರವಾಸಿಗರಿಗೆ ನೆರವಾಗಲು ನಿರ್ಮಿಸಿದ್ದರು.


## ಅಕ್ಬರ್


ಅಕ್ಬರ್

ಮೊಘಲ ಅರಸರಲ್ಲಿಯೇ ಪ್ರಸಿದ್ಧ ದೊರೆ ಅಕ್ಬರ್. ಇವನು ಸಿಂಧ್‌ನ ಅಮರಕೋಟೆಯಲ್ಲಿ ಜನಿಸಿದನು. ಈತನ ತಂದೆ ಹುಮಾಯೂನ್, ತಾಯಿ ಹಮಿದಾಬಾನು ಬೇಗಂ. ಅಧಿಕಾರಕ್ಕೆ ಬಂದಾಗ ಅಕ್ಬರ್‌ನು ಹದಿಮೂರು ವರ್ಷದ ಬಾಲಕ ಆಗಿದ್ದರಿಂದ ಅವನ ಪೋಷಕನಾಗಿದ್ದ ಬೈರಾಮ್‌ಖಾನ್ ರಾಜಪ್ರತಿನಿಧಿಯಾಗಿ ಆಳ್ವಿಕೆ ನಡೆಸಿದನು. ಅಕ್ಬರ್ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಬಂಗಾಳದ ದೊರೆ ಮಹಮ್ಮದಷಾ ಅಬ್ದಾಲಿಯ ದಂಡನಾಯಕ ಹೇಮು ಮೊಘಲರನ್ನು ವಿರೋಧಿಸತೊಡಗಿದನು. ಅಲ್ಲದೆ ದೆಹಲಿ ಹಾಗೂ ಆಗ್ರಾವನ್ನು ವಶಪಡಿಸಿಕೊಂಡನು. ಹೀಗಾಗಿ ಹೇಮು ಮತ್ತು ಅಕ್ಬರನ ನಡುವೆ ಸಾ.ಶ 1556ರಲ್ಲಿ 2ನೇ ಪಾಣಿಪತ್ ಯುದ್ಧ ಸಂಭವಿಸಿತು. ಈ ಯುದ್ಧದಲ್ಲಿ ಬೈರಾಮ್‌ಖಾನನ ನೆರವಿನಿಂದ ಅಕ್ಬರ್‌ನಿಗೆ ಗೆಲುವು ಲಭಿಸಿತು.

ಅಕ್ಬರ್ ಸ್ವತಂತ್ರವಾಗಿ ಮಾಳ್ವ, ಚುನಾರ್, ಜೈಪುರ, ಗೊಂಡವಾನ, ಚಿತ್ತೋರ್, ರಣಥಂಬೋರ್, ಕಾಲಿಂಜರ್, ಗುಜರಾತ್‌ಗಳನ್ನು ವಶಪಡಿಸಿಕೊಂಡನು. ಈ ಯುದ್ಧಗಳಲ್ಲಿಯೇ ಹಳದಿಘಾಟ್ ಕದನ ಮಹತ್ವದ್ದು. ಚಿತ್ತೋರ್‌ನ ಅರಸ ರಾಣಾ ಉದಯಸಿಂಗನ ಮರಣದ ನಂತರ ಆತನ ಮಗ ರಾಣಾಪ್ರತಾಪಸಿಂಗ್ ರಾಜನಾದನು. ಮೇವಾರದ ಬಹುಭಾಗ ಪ್ರತಾಪಸಿಂಗ್‌ನ ಅಧೀನದಲ್ಲೇ ಉಳಿದಿತ್ತು. ಆದುದರಿಂದ ಅಕ್ಬರ್ ತನ್ನ ದಂಡನಾಯಕರಾದ ಮಾನ್‌ಸಿಂಗ್ ಮತ್ತು ಅಸಫ್‌ಖಾನರ ನೇತೃತ್ವದಲ್ಲಿ ಸೈನ್ಯವನ್ನು ಪ್ರತಾಪಸಿಂಗ್‌ನ ವಿರುದ್ಧ ಕಳಿಸಿದನು. ಎರಡೂ ಸೈನ್ಯಗಳ ನಡುವೆ ಹಳದಿಘಾಟ್ ಎಂಬಲ್ಲಿ ನಡೆದ ಯುದ್ಧದಲ್ಲಿ ಅಕ್ಬರನ ಸೈನ್ಯ ಜಯಗಳಿಸಿತು. ನಂತರದಲ್ಲಿ ಬಿಹಾರ, ಬಂಗಾಳ, ಕಾಬೂಲ್, ಕಾಶ್ಮೀರ, ಸಿಂಧ್, ಒರಿಸ್ಸಾ, ಬಲೂಚಿಸ್ತಾನ, ಕಾಂದಹಾರ್ ಹಾಗೂ ಅಹಮದ್‌ನಗರಗಳನ್ನು ಅಕ್ಬರನು ಯಶಸ್ವಿಯಾಗಿ ವಶಪಡಿಸಿಕೊಂಡನು ಮತ್ತು ಮೊಘಲರು ಮಧ್ಯಯುಗದ ಭಾರತದಲ್ಲಿ ಬೃಹತ್ ಸಾಮ್ರಾಜ್ಯ ಶಕ್ತಿಯಾಗಿ ಬೆಳೆಯಲು ಧೃಡವಾದ ತಳಹದಿಯನ್ನು ನಿರ್ಮಿಸಿದನು.

©KTBS Not to be re published




**ಅಕ್ಬರನ ಧಾರ್ಮಿಕ ನೀತಿ :** ಅಕ್ಬರ್ ತನ್ನ ತಾಯಿ, ಶಿಕ್ಷಕರು ಹಾಗೂ ಸೂಫಿಗಳೊಂದಿಗಿನ ಒಡನಾಟದಿಂದಾಗಿ ಧಾರ್ಮಿಕ ಸಂಪ್ರದಾಯದ ಸಂಕೋಲೆಗಳನ್ನು ಕಿತ್ತೊಗೆದಿದ್ದನು. ತನ್ನ ರಜಪೂತ ಪತ್ನಿಯರಿಗೆ ಅರಮನೆಯಲ್ಲಿಯೇ ದೇವತಾರಾಧನೆಗೆ ಅನುಮತಿ ನೀಡಿದನು. ವೈರಿ ರಾಜ್ಯದಲ್ಲಿನ ಸ್ತ್ರೀಯರು ಹಾಗೂ ಮಕ್ಕಳನ್ನು ಹಿಂಸಿಸಬಾರದು, ಯುದ್ಧಕಾಲದಲ್ಲಿ ಯುದ್ಧದಲ್ಲಿ ಭಾಗವಹಿಸದ ಹಿಂದೂಗಳನ್ನು ಬಂಧಿಸಬಾರದು, ಗುಲಾಮರನ್ನಾಗಿ ಮಾಡಕೂಡದು ಹಾಗೂ ಇಸ್ಲಾಮಿಗೆ ಮತಾಂತರಿಸಬಾರದು ಎಂಬ ಆಜ್ಞೆಗಳನ್ನು ಹೊರಡಿಸಿದನು. ಹಿಂದೂಗಳ ಮೇಲಿನ ಜೆಸಿಯಾ ತಲೆಗಂದಾಯವನ್ನು ರದ್ದುಪಡಿಸಿದನು. ಹಿಂದೂ ಧರ್ಮ ಗ್ರಂಥಗಳನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದನು. ತನಗೆ ಕಂಡ ಅರ್ಹ ಹಿಂದೂಗಳಿಗೆ ಉನ್ನತ ಹುದ್ದೆಗಳನ್ನು ನೀಡಿದನು. ಹನ್ನೆರಡು ಪ್ರಾಂತೀಯ ಅರ್ಥಸಚಿವರಲ್ಲಿ ಎಂಟು ಜನರೂ ಹಿಂದೂಗಳೇ ಆಗಿದ್ದರು. ಆಸ್ಥಾನದಲ್ಲಿ ರಾಖೀ, ದೀಪಾವಳಿ ಹಾಗೂ ಶಿವರಾತ್ರಿ ಮುಂತಾದ ಹಬ್ಬಗಳ ಆಚರಣೆಗೂ ಆದೇಶ ನೀಡಿದನು.

**ದೀನ್–ಇ–ಇಲಾಹಿ :** ಅಕ್ಬರನು 1582ರಲ್ಲಿ ದೀನ್–ಇ–ಇಲಾಹಿ ಎಂಬ ಹೊಸ ಪಂಥ(ಧರ್ಮ)ವನ್ನು ಸ್ಥಾಪಿಸಿದನು. ಎಲ್ಲ ಧರ್ಮಗಳ ಉತ್ತಮಾಂಶಗಳು ಇದರಲ್ಲಿ ಸೇರಿದ್ದವು. ಇಬಾದತ್‌ಖಾನದಲ್ಲಿ ನಡೆಯುತ್ತಿದ್ದ ಹಿಂದೂ, ಜೈನ, ಜೊರಾಸ್ಟ್ರಿಯನ್ ಹಾಗೂ ಕ್ರೈಸ್ತ ಧರ್ಮಗಳ ಧಾರ್ಮಿಕ ಚರ್ಚೆಗಳ ಅಂತಿಮ ಸಾರವಾಗಿ ಈ ಹೊಸ ಪಂಥ ರೂಪ ತಳೆಯಿತು. ಈ ಮೂಲಕ ತನ್ನ ಸಾಮ್ರಾಜ್ಯದ ಎಲ್ಲ ಜನರನ್ನೂ

©KTBS Not to be re published

ಒಂದುಗೂಡಿಸುವುದು ಅವನ ಗುರಿಯಾಗಿತ್ತು. ಇದೊಂದು ಧಾರ್ಮಿಕ ಪಂಥವಾಗಿದ್ದು, ಅಬುಲ್ ಫಜಲನು ಇದರ ಮುಖ್ಯ ರೂವಾರಿಯಾಗಿದ್ದ. ಈ ಪಂಥವು ಸಂಸ್ಕಾರ, ನಡವಳಿಕೆ ಹಾಗೂ ಏಕೇಶ್ವರವಾದದಲ್ಲಿ ನಂಬಿಕೆ ಹೊಂದಿತ್ತು.

**ನಿಮಗಿದು ತಿಳಿದಿರಲಿ:**


*ದೀನ್–ಇ–ಇಲಾಹಿ– ರಕ್ತಬೀಪಾಸುಗಳಾಗಿದ್ದ* ಮೂಲಭೂತವಾದ ವರ್ಗವನ್ನು ನಿಯಂತ್ರಣದಲ್ಲಿ ಇಡುವುದು ಈ ಹೊಸ ಪಂಥದ ಸ್ಥಾಪನೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿತ್ತು.

**ಅಕ್ಬರನ ಆಡಳಿತ ಪದ್ಧತಿ :** ಆಡಳಿತದ ಅನುಕೂಲಕ್ಕಾಗಿ ಅಕ್ಬರ್ ತನ್ನ ರಾಜ್ಯವನ್ನು ಕೇಂದ್ರ ಸರ್ಕಾರ, ಪ್ರಾಂತೀಯ ಸರ್ಕಾರ ಹಾಗೂ ಪರಗಣಗಳೆಂದು ವಿಂಗಡಿಸಿದ್ದನು. ಅಕ್ಬರನು ಅರಸ, ಸೈನ್ಯದ ದಂಡನಾಯಕನಷ್ಟೇ ಅಲ್ಲದೆ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಮುಖ್ಯಸ್ಥನೂ ಆಗಿದ್ದನು. ಅರಸನಿಗೆ ಆಡಳಿತದಲ್ಲಿ ನೆರವು ನೀಡಲು ವಕೀಲ್, ಮೀರ್ ಭಕ್ಷಿ, ಮುಖ್ಯ ಸದರ್, ಮುಖ್ಯ ಖಾಜಿ, ಮುಹ್ತಸೀಬ್ ಎಂಬ ಪ್ರಮುಖ ಮಂತ್ರಿಗಳಿದ್ದರು. ತನ್ನ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಿ ಅವುಗಳನ್ನು ಸುಭಾಗಳೆಂದು ಕರೆಯುತ್ತಿದ್ದರು. ಇವುಗಳ ರಾಜಕೀಯ ಹಾಗೂ ಮಿಲಿಟರಿ ಕಾರ್ಯಗಳನ್ನು ಸುಭೇದಾರ ನೋಡಿಕೊಳ್ಳುತ್ತಿದ್ದನು. ದಿವಾನ್ ಭಕ್ಷಿ, ಸದರ್, ಖಾಜಿ, ಕೊತ್ವಾಲ್ ಮತ್ತು ವಕೀಯಾ ನವೀಸ್ ಮುಂತಾದವರು ಆಡಳಿತದ ಭಾಗವಾಗಿ ಇದ್ದರು. ಪ್ರತಿಯೊಂದು ಸರ್ಕಾರ್(ಜಿಲ್ಲೆ)ಗಳನ್ನು ಫೌಜುದಾರರು ನೋಡಿಕೊಳ್ಳುತ್ತಿದ್ದರು. ನೆರವಿಗೆ ಅಮಲ್ ಗುಜಾರ್, ಬಿಟಿಕ್ಚಿ, ಖಜಾಂದಾರ್ ಇದ್ದರು. ಪರಗಣಗಳ ಆಡಳಿತವನ್ನು ಶಿಕದಾರ್, ಅಮಿರ್, ಪೋತ್‌ದಾರ್, ಕನುಂಗೊ ನೋಡಿಕೊಳ್ಳುತ್ತಿದ್ದರು. ಅಕ್ಬರನು ಸೈನ್ಯದಲ್ಲಿ ಅನೇಕ ಹಂತಗಳ ಹುದ್ದೆಗಳನ್ನು ಸೃಷ್ಟಿ ಮಾಡಿದ್ದನು. ಉನ್ನತ ದರ್ಜೆಯನ್ನು ಮನ್ಸಬ್ ಎಂದೂ, ಅವುಗಳ ಮುಖ್ಯಸ್ಥರಿಗೆ ಮನ್ಸಬ್‌ದಾರರೆಂದು ಹೆಸರು ನೀಡಲಾಯಿತು. ಇವನ ಸೈನ್ಯದಲ್ಲಿ ಅಶ್ವದಳ, ಕಾಲ್ದಳ, ಫಿರಂಗಿದಳ ಮತ್ತು ಗಜದಳಗಳಿದ್ದವು. ಕುದುರೆಗಳಿಗೆ ಮುದ್ರೆ ಹಾಕಲು ದಾಗ್ ಮಹಲೀ ಎಂಬ ಪ್ರತ್ಯೇಕ ಇಲಾಖೆ ಇತ್ತು.

**ನಿಮಗಿದು ತಿಳಿದಿರಲಿ:**

***ಅಕ್ಬರನ ಆಸ್ಥಾನದಲ್ಲಿನ ನವರತ್ನಗಳು:*** *ತೋದರಮಲ್ಲ, ಅಬುಲ್ ಫಜಲ್, ಫೈಜಿ, ಬೀರಬಲ್, ತಾನಸೇನ, ಅಬ್ದುರ ರಹೀಂ ಖಾನ್, ಹಮೀಮ ಹುಮಾಮ್, ಮುಲ್ಲಾ ದೊ ಪಯ್ಯಾಜ ಮತ್ತು ಮಾನಸಿಂಗ್.*

**ಕಂದಾಯ ವ್ಯವಸ್ಥೆ:** ಅಕ್ಬರನು ಜುಬ್ತಿ ಪದ್ಧತಿಯನ್ನು ಜಾರಿಗೆ ತಂದನು. ಇದನ್ನು ತೋದರಮಲ್ಲನ ಬಂದೋಬಸ್ತ್ ಪದ್ಧತಿ ಎಂದು ಕರೆಯಲಾಗಿದೆ. ಭೂಮಾಪನಕ್ಕಾಗಿ ಕಬ್ಬಿಣದ ಕೊಂಡಿಗಳುಳ್ಳ ಬಿದಿರಿನ ಅಳತೆಗೋಲುಗಳನ್ನು ಬಳಸುತ್ತಿದ್ದರು. ಭೂಮಿಯನ್ನು ಪಲೌಜ್, ಪರೌತಿ, ಚಾಚರ್ ಹಾಗೂ ಬಂಜರ್ ಎಂದು ವರ್ಗೀಕರಿಸಿದ್ದರು. ಬಂಜರ್ ಭೂಮಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಕಾರದ ಭೂಮಿಯ ಫಲವತ್ತೆಯನ್ನು ಆಧರಿಸಿ ಉತ್ತಮ, ಮಧ್ಯಮ ಮತ್ತು ಕನಿಷ್ಠ ಎಂದು ವಿಂಗಡಿಸಿದ್ದರು. ಪ್ರತಿಯೊಬ್ಬ ರೈತನಿಗೂ ಪಟ್ಟಾ ವಿತರಿಸುತ್ತಿದ್ದರು.



**ಫತೇಪುರ್ ಸಿಕ್ರಿಯಲ್ಲಿರುವ ಪಂಚಮಹಲ್**

ಅಕ್ಬರನ ಕಾಲದಲ್ಲಿ ಪೊಲೀಸ್ (ಕೊತ್ವಾಲ) ವ್ಯವಸ್ಥೆ ಸುವ್ಯವಸ್ಥಿತವಾಗಿತ್ತು. ಪರಗಣಗಳಲ್ಲಿ ಪೊಲೀಸ್ ಠಾಣೆಗಳನ್ನು ತೆರೆಯುವ ಮೂಲಕ ಬಿಗಿ ಭದ್ರತೆಯನ್ನು ಒದಗಿಸಿದ್ದು ಅಕ್ಬರನ ವಿಶೇಷ. ಇವನ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೂ ಪ್ರೋತ್ಸಾಹ ನೀಡಿದನು.


©KTBS Not to be republished

ಪ್ರಮುಖ ಸ್ಮಾರಕಗಳೆಂದರೆ ಅಕ್ಬರಿ ಮಹಲ್, ಜಹಾಂಗಿರಿ ಮಹಲ್, ಹೊಸ ರಾಜಧಾನಿ ಫತೇಪುರಸಿಕ್ರಿ, ದಿವಾನ್-ಇ-ಖಾಸ್, ಪಂಚಮಹಲ್, ಜೋದಬಾಯಿ ಮಹಲ್, ಬೀರಬಲ್ ಮಹಲ್, ಇಬಾದತ್ ಖಾನ, ಮಕ್ತಬ ಖಾನಾ, ದಪ್ತರ ಖಾನಾ ಮುಂತಾದವುಗಳು.

ಅಕ್ಬರನ ನಂತರ ಹಿರಿಯ ಮಗನಾದ ಜಹಂಗೀರನು ಉತ್ತಮ ಆಡಳಿತವನ್ನು ನಡೆಸಿದನು. ಇವನು ಅಕ್ಬರನ ನೀತಿಗಳನ್ನೇ ಮುಂದುವರೆಸಿದನು. ರಜಪೂತ ರಾಜರೊಂದಿಗೆ ವೈಯಕ್ತಿಕ ಮತ್ತು ವೈವಾಹಿಕ ಸಂಬಂಧಗಳನ್ನು ಇರಿಸಿಕೊಂಡಿದ್ದನು. ಮೇವಾಡದ ರಾಜನಿಗೆ ವಿಧಿಸಿದ ಕೆಲವು ನಿರ್ಬಂಧಗಳನ್ನು ಸಡಿಲಗೊಳಿಸಿದನು. ಜಹಾಂಗೀರನೇ ನೇರವಾಗಿ ಯುದ್ಧದಲ್ಲಿ ಭಾಗವಹಿಸಿ ಸಾ.ಶ. 1613ರಲ್ಲಿ ಮೇವಾಡದ ರಾಣನನ್ನು ಸೋಲೊಪ್ಪಿಕೊಳ್ಳುವಂತೆ ಮಾಡಿದ್ದನು. ಈತನ ನಂತರ ಮಗನಾದ ಷಾಜಹಾನನು ಅಧಿಕಾರಕ್ಕೆ ಬಂದನು.

**ಷಾಜಹಾನ್**

ಷಾಜಹಾನನ ಅವಧಿಯಲ್ಲಿಯೂ ಮೊಘಲರ ದಾಳಿಗಳು ದಕ್ಷಿಣ ಭಾರತದ ಮೇಲೆ ಮುಂದುವರಿದವು. ಆಫ್ಘಾನಿಸ್ಥಾನದ ನೊಬೆಲ್ ಖಾನ್‌ಜಹಾನ್ ಲೋದಿಯು ಇವನ ವಿರುದ್ಧ ದಂಗೆ ಎದ್ದು ಸೋತನು. ಅಲ್ಲದೆ ಸಾ.ಶ.1632ರಲ್ಲಿ ಪೋರ್ಚುಗೀಸರನ್ನು ಸೋಲಿಸಿ ಹೂಗ್ಲಿಯನ್ನು ವಶಪಡಿಸಿಕೊಂಡನು. ಅಹಮದ್‌ನಗರವನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ನಂತರ ಸಿಖ್ಖರು, ಬುಂದೇಲರೊಂದಿಗೆ ಇವನ ಸಂಬಂಧವೂ ಹದಗೆಟ್ಟಿತು. ಮಧ್ಯ ಏಷ್ಯಾದ ದಂಡಯಾತ್ರೆಯಲ್ಲಿ ಉಜ್ಬೇಗರಿಂದ ಬಲ್ಕ್ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ ಸೋತನು. ಷಹಜಹಾನ್‌ನು ದಕ್ಷಿಣದಲ್ಲಿ ಭೂಮಾಪನ ಮತ್ತು ಭೂಮಿಯ ಫಲವತ್ತತೆಯ ಮೌಲ್ಯಮಾಪನವನ್ನು ಅನುಸರಿಸಿದನು. ಭೂಮಿಯ ಫಲವತ್ತತೆಗೆ ಅನುಗುಣವಾಗಿ ಕಂದಾಯವನ್ನು ನಿಗದಿಪಡಿಸಿದನು. ದೆಹಲಿಯ ಕೆಂಪುಕೋಟೆ, ಆಗ್ರಾದ ತಾಜಮಹಲ್ ಹಾಗೂ ಇನ್ನಿತರೆ ಕಟ್ಟಡಗಳು ಇವನ ಮಹತ್ವದ ಕೊಡುಗೆಗಳಾಗಿವೆ. ಮೊಘಲರ ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಪ್ರೋತ್ಸಾಹದಿಂದಾಗಿ ಇವನ ಅವಧಿಯನ್ನು 'ಸುವರ್ಣಯುಗ'ವೆಂದು ಕರೆಯಲಾಗಿದೆ. ಕೊನೆಯಲ್ಲಿ ಷಹಜಹಾನ್‌ನ ಮಕ್ಕಳಲ್ಲಿ ಸಿಂಹಾಸನಕ್ಕಾಗಿ ನಡೆದ ಆಂತರಿಕ ಕಲಹದಲ್ಲಿ ಔರಂಗಜೇಬ ಮೊಘಲರ ದೊರೆಯಾದನು.



ತಾಜಮಹಲ್

**ತಾಜಮಹಲ್ :** *ಇದನ್ನು ಷಾಜಹಾನನು ತನ್ನ ಪತ್ನಿ ಮಮತಾಜ್ ಮಹಲ್‌ಳ ನೆನಪಿಗಾಗಿ ಕಟ್ಟಿಸಿದನು. ಇದು ಆಗ್ರಾ ಬಳಿಯ ಯಮುನಾ ನದಿಯ ದಂಡೆಯಲ್ಲಿ (ಈಗಿನ ಉತ್ತರ ಪ್ರದೇಶ) ಇದೆ. ಸಾ.ಶ. 1632ರಲ್ಲಿ ಇದರ ನಿರ್ಮಾಣ ಕಾರ್ಯ ಆರಂಭವಾಗಿ 1653ರ ಹೊತ್ತಿಗೆ ಪೂರ್ಣಗೊಂಡಿದೆ. ಇದನ್ನು ಬಿಳಿಯ ಮಾರ್ಬಲ್ ಕಲ್ಲುಗಳಿಂದ ನಿರ್ಮಿಸಿರುವುದು ವಿಶೇಷ. ಪ್ರಪಂಚದಲ್ಲಿರುವ ಪ್ರಮುಖ ಸ್ಮಾರಕಗಳಲ್ಲಿ ಇದು ಒಂದಾಗಿದ್ದು ಯುನೆಸ್ಕೋ ಸ್ಮಾರಕ ಪಟ್ಟಿಗೆ ಸೇರಿದೆ.*

**ಔರಂಗಜೇಬ**

ತಂದೆ ಷಾಜಹಾನ್‌ನನ್ನು ಬಂಧನದಲ್ಲಿಟ್ಟು 'ಅಲಂಗೀರ್' ಎಂಬ ಬಿರುದಿನೊಂದಿಗೆ ಔರಂಗಜೇಬನು ಸಿಂಹಾಸನ ಏರಿದನು. ಇವನ ಆಡಳಿತದ ವಿರುದ್ಧ ಈಶಾನ್ಯ ಭಾಗದಲ್ಲಿ ಅಹೋಮರು, ವಾಯುವ್ಯದಲ್ಲಿ ಯೂಸಫ್ಜಾಯಿಗಳು ದಂಗೆ ಎದ್ದಾಗ ಅವುಗಳನ್ನು ತಾತ್ಕಾಲಿಕವಾಗಿ ಅಡಗಿಸಿದನು. ಮರಾಠ ದೊರೆ ಶಿವಾಜಿಯನ್ನು ಅವಮಾನಗೊಳಿಸಿ, ಬಂಧಿಸಿದ್ದು ಮುಂದೆ ಮೊಘಲರ ವಿರುದ್ಧ ದಾಳಿಗಳನ್ನು ನಡೆಸಲು ಕಾರಣವಾಯಿತು. ಉತ್ತರ ಭಾರತದಲ್ಲಿಯೂ ಮೇವಾರದ ರಜಪೂತ ರಾಠೋಡರು, ಸಿಖ್ಖರು, ಜಾಟರು,

©KTBS Not to be republished

ಬುಂದೇಲರು ಹಾಗೂ ಸತ್ನಾಮಿಗಳ ದಂಗೆಗಳನ್ನು ಎದುರಿಸಬೇಕಾಯಿತು. ಬಿಜಾಪುರದ ಆದಿಲ್‌ಶಾಹಿ ಹಾಗೂ ಗೋಲ್ಕಂಡದ ನಿಜಾಮ್‌ಶಾಹಿಗಳೊಂದಿಗೆ ಹೋರಾಡಿ ಅವುಗಳನ್ನು ತನ್ನ ರಾಜ್ಯದಲ್ಲಿ ವಿಲೀನಗೊಳಿಸಿದ. ಆದರೆ ಕೊನೆಯಲ್ಲಿ ಪ್ರಬಲ ಶಕ್ತಿಯಾಗಿದ್ದ ರಜಪೂತರ ಜೊತೆಗಿನ ಇವನ ವೈರತ್ವದಿಂದ ಮೊಘಲರ ಅವನತಿ ಪ್ರಾರಂಭವಾಯಿತು.

ಔರಂಗಜೇಬನು ಕುರಾನಿನ ತತ್ವಗಳನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರಲು ಪ್ರಯತ್ನಿಸಿದನು. ಇವನ ಕಾಲದಲ್ಲಿ ಹಲವು ಪ್ರಸಿದ್ಧ ಹಿಂದೂ ದೇವಾಲಯಗಳು ನಾಶವಾದವು. ಸಾಮ್ರಾಜ್ಯದಲ್ಲಿ ಸತಿ ಆಚರಣೆ, ಸಂಗೀತ ಕಚೇರಿ, ಮೆರವಣಿಗೆ, ಜೂಜಾಟ, ಮದ್ಯಪಾನ ಹಾಗೂ ಗಾಂಜಾ ಉತ್ಪನ್ನಗಳನ್ನು ಉಪಯೋಗಿಸುವುದನ್ನು ನಿಷೇಧಿಸಿದನು. ಆಡಂಬರಕ್ಕೆ ಮಹತ್ವ ನೀಡದೆ ಸರಳವಾಗಿ ತನ್ನ ಬದುಕನ್ನು ಕಳೆದನು. ಇವನನ್ನು ಜಿಂದಾ ಫಕೀರ್ ಅಥವಾ ಜೀವಂತ ಫಕೀರ ಎಂದು ಕರೆಯುತ್ತಿದ್ದರು.

### ಮೊಘಲರ ಕೊಡುಗೆಗಳು

**ಆಡಳಿತ :** ಸುಮಾರು ಎರಡು ಶತಮಾನಗಳ ಕಾಲ ರಾಜಕೀಯ ಅಧಿಕಾರವನ್ನು ಹೊಂದಿದ್ದ ಮೊಘಲರು ವಿವಿಧ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಮೊಘಲರ ಆಡಳಿತವು ವಂಶಪಾರಂಪರ್ಯವಾಗಿತ್ತು. ಕೇಂದ್ರೀಕೃತ ನಿರಂಕುಶ ಪ್ರಭುತ್ವವಾಗಿದ್ದು ರಾಜನು ಹೆಚ್ಚಿನ ಅಧಿಕಾರವನ್ನು ಪಡೆದಿದ್ದನು. ತಮ್ಮನ್ನು ಸಾಮ್ರಾಟರೆಂದು ಪರಿಗಣಿಸಿ 'ಬಾದಶಹ' ಎಂಬ ಬಿರುದು ಪಡೆದಿದ್ದರು. ಸುಲ್ತಾನನು ಸರ್ಕಾರದ ಮುಖ್ಯಸ್ಥ, ದಂಡನಾಯಕ ಹಾಗೂ ನ್ಯಾಯಾಂಗದ ಮುಖ್ಯಸ್ಥನಾಗಿದ್ದನು. ಈತನಿಗೆ ಆಡಳಿತದಲ್ಲಿ ಸಲಹೆ ನೀಡಲು ಮಂತ್ರಿಗಳು ಹಾಗೂ ಅಧಿಕಾರಿಗಳಿದ್ದರು. ಇವರನ್ನು ನೇಮಿಸುವ ಹಾಗೂ ತೆಗೆಯುವ ಅಧಿಕಾರವನ್ನು ಸುಲ್ತಾನರು ಹೊಂದಿದ್ದರು. ಮನ್ಸಬ್‌ದಾರರ ನೇಮಕ, ಜಾಗೀರು ನೀಡುವುದು ಹಾಗೂ ಕಾನೂನು ರೂಪಿಸುವುದು ದೊರೆಯ ಮುಖ್ಯ ಕರ್ತವ್ಯಗಳಾಗಿದ್ದವು. ಪರ್ಶಿಯನ್ ಭಾಷೆ ಆಡಳಿತ ಭಾಷೆಯಾಗಿತ್ತು. ಸಾಮ್ರಾಜ್ಯವನ್ನು ಪ್ರಾಂತ, ಸರ್ಕಾರ್ ಹಾಗೂ ಪರಗಣಗಳೆಂದು ವಿಂಗಡಿಸಲಾಗಿತ್ತು. ಕೇಂದ್ರ ಸರ್ಕಾರದಲ್ಲಿ ವಕೀಲ್, ದಿವಾನ್, ಮೀರ್‌ಭಕ್ಷಿ ಹಾಗೂ ಮುಖ್ಯ ಸದರ್ ಪ್ರಮುಖ ಮಂತ್ರಿಗಳಾಗಿದ್ದರು. ಅಲ್ಲದೇ ರಾಜ್ಯಪಾಲ, ಭಕ್ಷಿ, ವಕೀಯಾ ನವೀಸ್, ಕೊತ್ವಾಲ್, ಫೌಜುದಾರ್, ಅಮಲ್ ಗುಜಾರ್ ಹಾಗೂ ಬತಿಕ್ಚಿ ಎಂಬ ಅಧಿಕಾರಿಗಳು ಆಡಳಿತದಲ್ಲಿ ನೆರವು ನೀಡುತ್ತಿದ್ದರು.

**ಕಂದಾಯ ವ್ಯವಸ್ಥೆ :** ಮೊಘಲ್ ಸಾಮ್ರಾಜ್ಯದಲ್ಲಿ ಬಹುಸಂಖ್ಯಾತರು ಕೃಷಿಕರಾಗಿದ್ದರು. ಭೂಮಿಯ ಫಲವತ್ತತೆಯನ್ನು ಆಧರಿಸಿ ಭೂಕಂದಾಯವನ್ನು ಸಂಗ್ರಹಿಸಲಾಗುತ್ತಿತ್ತು. ಕೃಷಿ ಭೂಮಿಯನ್ನು ಅಳತೆ ಮಾಡಿ ಕಂದಾಯ ನಿಗದಿಪಡಿಸಲಾಗುತ್ತಿತ್ತು. ಭೂಮಿಯ ಉತ್ಪನ್ನದ $\frac{1}{3}$ ಭಾಗವನ್ನು ನಗದು ಅಥವಾ ದವಸಧಾನ್ಯಗಳ ರೂಪದಲ್ಲಿ ಕಂದಾಯ ಸಲ್ಲಿಕೆಯಾಗುತ್ತಿತ್ತು. ಇಂದಿಗೂ ನಮ್ಮ ಕಂದಾಯ ವ್ಯವಸ್ಥೆಯ ಆಡಳಿತದಲ್ಲಿ ಮೊಘಲರ ಕಾಲದಲ್ಲಿ ಚಾಲ್ತಿಯಲ್ಲಿದ್ದ ಕಂದಾಯ ವ್ಯವಸ್ಥೆಯ ಸೂಚಕ ಪದಗಳಿರುವುದನ್ನು ಗಮನಿಸಬಹುದು.

**ಸಮಾಜ :** ಅಂದಿನ ಸಮಾಜದಲ್ಲಿ ದೊರೆ, ಮಂತ್ರಿಗಳು, ಅಧಿಕಾರಿಗಳು, ನೌಕರರಿಗೆ ಗೌರವದ ಸ್ಥಾನವಿತ್ತು. ಇವರು ದುಬಾರಿ ಉಡುಪುಗಳನ್ನು ಹಾಗೆಯೇ ಮುತ್ತು, ರತ್ನ ಹಾಗೂ ಇನ್ನಿತರೆ ಲೋಹಗಳಿಂದ ತಯಾರಿಸಿದ ಆಭರಣಗಳನ್ನು ಧರಿಸುತ್ತಿದ್ದರು. ಔರಂಗಜೇಬನನ್ನು ಹೊರತುಪಡಿಸಿದರೆ ಉಳಿದವರು ಸಂಗೀತ, ನೃತ್ಯ, ಮದ್ಯಪಾನ, ಜೂಜಾಟ ಮುಂತಾದ ಮನರಂಜನೆಗಳಲ್ಲಿ ತೊಡಗಿಕೊಂಡಿದ್ದರು. ಕೃಷಿಕರು ಅಧಿಕ ಭೂಕಂದಾಯ ಹಾಗೂ ಸರ್ಕಾರದ ಅಸಮರ್ಪಕ ನೀತಿಗಳು ಹಾಗೂ ಮಧ್ಯವರ್ತಿಗಳ ಕಿರುಕುಳದಿಂದ ಕಷ್ಟದ ಬದುಕನ್ನು ನಡೆಸುತ್ತಿದ್ದರು. ಕೃಷಿಯೇತರ ವರ್ಗದಲ್ಲಿ ಚರ್ಮ ಹದಮಾಡುವವರು, ಕುಂಬಾರರು, ಬಡಗಿಗಳು, ಚಮ್ಮಾರರು, ಅಗಸರು ಮುಂತಾದವರು ಸೇವಾ ವರ್ಗಕ್ಕೆ ಸೇರಿದ್ದರು. ಸತಿಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ, ಕನ್ಯಾಶುಲ್ಕ ಪದ್ಧತಿಗಳು ಆಚರಣೆಯಲ್ಲಿದ್ದವು.




©KTBS Not to be republished

**ಅರ್ಥವ್ಯವಸ್ಥೆ :** ಉತ್ತರ ಭಾರತವು ಅನೇಕ ನದಿಗಳನ್ನು ಹೊಂದಿದ್ದರಿಂದ ಕೃಷಿಗೆ ಯೋಗ್ಯವಾದ ಭೂಮಿ ನೈಸರ್ಗಿಕವಾಗಿ ದೊರೆತಿತ್ತು. ಉತ್ತಮ ನೀರಾವರಿ ವ್ಯವಸ್ಥೆಯು ಕೃಷಿ ಅಭಿವೃದ್ಧಿಗೆ ನೆರವಾಗಿತ್ತು. ಅಂದು ಸರ್ಕಾರಿ ಕಾರ್ಖಾನೆಗಳಿದ್ದವು. ಅವುಗಳಲ್ಲಿ ಹತ್ತಿ ಬಟ್ಟೆ ಕೈಗಾರಿಕೆಗಳು ಬನಾರಸ, ಪಾಟ್ನಾ, ಢಾಕಾ, ಚಾಬಾಸ್ಪುರ, ಸೋನಾರ್, ಲಾಹೋರ್, ಫತೇಪುರ್ ಸಿಕ್ರಿ ಹಾಗೂ ಆಗ್ರಾದಲ್ಲಿ ಕೇಂದ್ರೀಕರಿಸಿದ್ದವು. ಅಕ್ಬರನು ಶಾಲು ಮತ್ತು ಜಮಖಾನ ನೇಕಾರಿಕೆಯನ್ನು ಅಭಿವೃದ್ಧಿಪಡಿಸಿದನು. ಮೊಘಲರ ಕಾಲದಲ್ಲಿ ಆಂತರಿಕವಾಗಿ ಮಾತ್ರವಲ್ಲದೆ ಏಷ್ಯಾ ಹಾಗೂ ಯೂರೋಪಿನ ಅನೇಕ ದೇಶಗಳೊಡನೆ ವಾಣಿಜ್ಯ ಸಂಬಂಧವನ್ನು ಹೊಂದಿತ್ತು. ಕಚ್ಚಾ ರೇಷ್ಮೆ, ಲೋಹಗಳು, ಕುದುರೆ, ಸುಗಂಧದ್ರವ್ಯ, ಬಂಗಾರ ಮತ್ತು ಬೆಳ್ಳಿ ಆಮದು ವಸ್ತುಗಳಾಗಿದ್ದವು. ಹತ್ತಿಬಟ್ಟೆ, ಮೆಣಸು, ಅಫೀಮು, ಪೆಟ್ಲುಪ್ಪು ಮತ್ತು ಉಣ್ಣೆ ಬಟ್ಟೆಗಳು ಪ್ರಮುಖ ರಫ್ತುಗಳಾಗಿದ್ದವು.

**ಸಾಹಿತ್ಯ :** ಮೊಘಲರ ಕಾಲದಲ್ಲಿ ಪರ್ಶಿಯನ್, ಅರೆಬಿಕ್, ತುರ್ಕಿ, ಉರ್ದು, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಕೃತಿಗಳು ರಚನೆಯಾದವು. ಬಾಬರ್ ಹಾಗೂ ಜಹಂಗೀರ್ ಸ್ವತಃ ವಿದ್ವಾಂಸರಾಗಿದ್ದು ತಮ್ಮ ಆತ್ಮಕಥನಗಳಾದ 'ಬಾಬರ್‌ನಾಮಾ' ಹಾಗೂ 'ತುಜಿಕಿ–ಇ–ಜಹಂಗೀರ್'ಗಳನ್ನು ರಚಿಸಿದರು. ಹುಮಾಯೂನ್ ಕೂಡ ಲೇಖಕನಾಗಿದ್ದನು. ಅಕ್ಬರನ ಆಸ್ಥಾನದಲ್ಲಿ ಅಬುಲ್ ಫಜಲ್‌ನು 'ಐನ್–ಇ–ಅಕ್ಬರಿ', 'ಅಕ್ಬರ್ ನಾಮಾ' ಕೃತಿಗಳನ್ನು ಪರ್ಶಿಯನ್ ಭಾಷೆಯಲ್ಲಿ ರಚಿಸಿದನು. ಬದೌನಿಯು ರಾಮಾಯಣ, ಫೈಜಿಯು ಲೀಲಾವತಿ ಎಂಬ ಗ್ರಂಥ, ತೋದರಮಲ್ಲನು ಭಾಗವತ ಪುರಾಣವನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದರು. ತುಳಸಿದಾಸರ–ರಾಮಚರಿತ ಮಾನಸ, ಸೂರದಾಸರ–ಸೂರ್‌ಸಾಗರ್ ಹಿಂದಿ ಭಾಷೆಯಲ್ಲಿ ರಚಿತವಾದ ಮಹತ್ವದ ಕೃತಿಗಳು.

**ಕಲೆ ಮತ್ತು ವಾಸ್ತುಶಿಲ್ಪ :** ಮೊಘಲರ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಕೊಡುಗೆ ನೀಡಿದವರಲ್ಲಿ ಅಕ್ಬರ್ ಹಾಗೂ ಷಾಜಹಾನ್ ಪ್ರಮುಖರು. ಇವರು ನಿರ್ಮಿಸಿರುವ ಸ್ಮಾರಕಗಳು ಫತೇಪುರ್ ಸಿಕ್ರಿ, ಆಗ್ರಾ ಹಾಗೂ ದೆಹಲಿಯಲ್ಲಿವೆ. ಅಕ್ಬರನ ಅವಧಿಯಲ್ಲಿ ಇಂಡೋ–ಪರ್ಶಿಯನ್ ಶೈಲಿಯ ಸಮ್ಮಿಶ್ರಣವಿದೆ. ಪ್ರಸಿದ್ಧ ಅರಮನೆಗಳಾದ ಅಕ್ಬರಿ ಮಹಲ್, ಜಹಾಂಗಿರಿ ಮಹಲ್, ಫತೇಪುರ್ ಸಿಕ್ರಿ(ವಿಜಯದ ನಗರ)ಯಲ್ಲಿ ಪಂಚಮಹಲ್, ಜೋದಾಬಾಯಿ ಮಹಲ್, ಬೀರ್‌ಬಲ್ ಮಹಲ್, ಇಬಾದತ್–ಖಾನಾ, ಜಾಮಿ ಮಸೀದಿ, ಬುಲಂದ್‌ದರ್‌ವಾಜ್ ಇವನ ಕಾಲದ ಮಹತ್ವದ ಕೊಡುಗೆಗಳು.

ಷಾಜಹಾನನ ಕಾಲದಲ್ಲಿ ದೆಹಲಿಯಲ್ಲಿ ಕೆಂಪುಕೋಟೆ, ಮೋತಿ ಮಸೀದಿ, ದಿವಾನ್–ಇ–ಆಮ್, ದಿವಾನ್–ಇ ಖಾಸ್, ರಂಗಮಹಲ್, ಖಾಸ್ ಮಹಲ್, ಮಮತಾಜ್ ಮಹಲ್ ಮುಂತಾದ ಕಟ್ಟಡಗಳನ್ನು ನಿರ್ಮಿಸಲಾಯಿತು. ಮಯೂರ ಸಿಂಹಾಸನದ ತಯಾರಿಕೆ (ಏಳು ವರ್ಷಗಳ ಅವಧಿಯಲ್ಲಿ ಅಂದಿನ ಒಂದು ಕೋಟಿ ವೆಚ್ಚ), ದೇಶದ ಅತ್ಯಂತ ದೊಡ್ಡದಾದ ಜಾಮಿಯಾ ಮಸೀದಿ ಇವನ ಕಾಲದ ಕೊಡುಗೆಗಳು. ಅಲ್ಲದೇ ಲಾಹೋರ್, ಕಾಬೂಲ್, ಕಾಶ್ಮೀರ್, ಕಾಂದಹಾರ್, ಅಜ್ಮೀರ್, ಅಹಮದಾಬಾದ್ ಮುಂತಾದೆಡೆ ಷಾಜಹಾನನ ಕಾಲದ ವಾಸ್ತುಶಿಲ್ಪಗಳು ಕಂಡುಬರುತ್ತವೆ.


**ಕೆಂಪುಕೋಟೆ**

©KTBS Not to be republished

**ಚಿತ್ರಕಲೆ:** ಹುಮಾಯೂನನ ಕಾಲದಲ್ಲಿ ಮೊಘಲರ ಚಿತ್ರಕಲೆ ಪ್ರಾರಂಭವಾಗಿ, ಅಕ್ಬರ್, ಜಹಾಂಗೀರ್‌ನ ಅವಧಿಯಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ಪಡೆದುಕೊಂಡಿತು. ಮೀರ್ ಸೈಯದ್ ಅಲಿ ಹಾಗೂ ಅಬ್ದುಲ್ ಸಮದ್‌ರು ಪರ್ಶಿಯಾದ ಚಿತ್ರಕಾರರಾಗಿದ್ದರು. ಆದರೆ ಹಿಂದೂ ಚಿತ್ರಕಾರರದೇ ಮೇಲುಗೈ ಆಗಿತ್ತು. ಅಕ್ಬರನ ಆಸ್ಥಾನದ 17 ಚಿತ್ರಕಲಾಕಾರರಲ್ಲಿ 13 ಕಲಾಕಾರರು ಹಿಂದೂಗಳೇ ಆಗಿದ್ದರು. ಅವರಲ್ಲಿ ದಸ್ವಂತ್, ಬಸ್ವಾನ್, ಲಾಲ, ಮುಕುಂದ, ಜಗನ್ನಾಥ್, ಮಹೇಶ್ ಪ್ರಮುಖರು. ಜಹಾಂಗೀರನ ಆಸ್ಥಾನದಲ್ಲಿಯೂ ಉಸ್ತಾದ ಮನ್ಸೂರ್ ಮತ್ತು ಅಬ್ದುಲ್ ಹಸನ್ ಎಂಬ ಚಿತ್ರಕಾರರಿದ್ದರು. ಆದರೆ ಷಾಜಹಾನ್ ಹಾಗೂ ಔರಂಗಜೇಬನಿಗೆ ಚಿತ್ರಕಲೆಯ ಬಗ್ಗೆ ಆಸಕ್ತಿ ಇರಲಿಲ್ಲ. ಹೀಗೆ ಮೊಘಲರು ವಿವಿಧ ಕ್ಷೇತ್ರಗಳಿಗೆ ಅನನ್ಯ ಕೊಡುಗೆಗಳನ್ನು ನೀಡಿರುವುದನ್ನು ಗಮನಿಸಬಹುದು.

## ಮರಾಠರು

ಹದಿನೇಳನೆಯ ಶತಮಾನದಲ್ಲಿ ದಖನ್ ಭಾಗದಲ್ಲಿ ಮರಾಠ ರಾಜ್ಯ ಉದಯವಾಗಿದ್ದು ಒಂದು ಪ್ರಮುಖ ಬೆಳವಣಿಗೆ. ಇದು ಇಂದಿನ ಪಶ್ಚಿಮ ಭಾರತದ ಭಾಗದಲ್ಲಿ ವಿಸ್ತರಿಸಿತ್ತು. ಹದಿನೇಳನೆಯ ಶತಮಾನದಲ್ಲಿ ಮರಾಠವಾಡ ಪ್ರದೇಶವು ಅಹಮ್ಮದ್‌ನಗರದ ನಿಜಾಮಷಾಹಿ ಮತ್ತು ಬಿಜಾಪುರದ ಆದಿಲಷಾಹಿಗಳ ಅಧೀನದಲ್ಲಿತ್ತು. ಈ ಸುಲ್ತಾನರು ಸ್ಥಳೀಯ ಮರಾಠರನ್ನು ಸೈನ್ಯದಲ್ಲಿ ನೇಮಕ ಮಾಡಿಕೊಂಡರು. ಶಹಾಜಿ ಭೋಸ್ಲೆ ಬಿಜಾಪುರದ ಸುಲ್ತಾನರಲ್ಲಿ ಆಡಳಿತಗಾರನಾಗಿದ್ದು ಸುಲ್ತಾನರಿಂದ ಕೆಲವು ಜಾಗೀರುಗಳನ್ನು ಪಡೆದುಕೊಂಡಿದ್ದನು. ದೇಶಪಾಂಡೆ ಮತ್ತು ದೇಶಮುಖರು ಸ್ಥಳೀಯವಾಗಿ ಪ್ರಭಾವಿ ನಾಯಕರಾಗಿದ್ದರು.

### ಶಿವಾಜಿ


ಶಿವಾಜಿ

ಮರಾಠ ರಾಜ್ಯದ ಸ್ಥಾಪನೆ ಮಧ್ಯಕಾಲದ ಭಾರತದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿತು. ಔರಂಗಜೇಬನ ಆಳ್ವಿಕೆಯ ಕಾಲಕ್ಕೆ ಮೊಘಲ್ ಸಾಮ್ರಾಜ್ಯ ಅವನತಿ ಹೊಂದುತ್ತಿತ್ತು. ಹಿಂದಿನ ಮೊಘಲ್ ಸಾಮ್ರಾಟರು ಕಟ್ಟಿದ್ದ ಸಮರ್ಥವಾದ ಆಡಳಿತ ಕ್ರಮೇಣ ದುರ್ಬಲವಾಗುತ್ತಿತ್ತು. ರಾಜಧಾನಿಯಿಂದ ದೂರದಲ್ಲಿದ್ದ ಪ್ರಾಂತ್ಯಗಳು ನಿಶ್ಶಕ್ತಗೊಂಡ ಆಡಳಿತದ ಫಲವಾಗಿ ಅರಾಜಕಸ್ಥಿತಿಯಲ್ಲಿದ್ದವು. ಅಧಿಕಾರಿಗಳು ಸಾಮ್ರಾಟನ ಆದೇಶಗಳನ್ನು ಪಾಲಿಸುತ್ತಿರಲಿಲ್ಲ. ಪಶ್ಚಿಮ ಭಾಗದಲ್ಲಿ ಮೊಘಲ್ ಸಾಮ್ರಾಜ್ಯದ ಅಂಚಿನಲ್ಲಿದ್ದ ಮರಾಠವಾಡ ಪ್ರಾಂತ್ಯದಲ್ಲಿ ಅಧಿಕಾರಿಗಳ ದಬ್ಬಾಳಿಕೆ ಮಿತಿಮೀರಿತ್ತು. ಕೃಷಿಕರು ವರ್ತಕರು ಮತ್ತು ಕರಕುಶಲಿಗಳು ಅಧಿಕ ತೆರಿಗೆ ಭಾರದಿಂದ ಬಸವಳಿದಿದ್ದರು. ಅಧಿಕಾರಿಗಳ ಕಿರುಕುಳಗಳಿಂದ ಸಾಮಾಜಿಕ ಜೀವನ ಸಹ ಅಸ್ತವ್ಯಸ್ತವಾಗಿತ್ತು. ಮುಕ್ತವಾಗಿ ಸಾಮಾಜಿಕ ಮತ್ತು ಧಾರ್ಮಿಕ ಸಮಾರಂಭಗಳನ್ನು ನಡೆಸುವಂತಿರಲಿಲ್ಲ, ತೆರಿಗೆಗಳನ್ನು ಕಟ್ಟಬೇಕಾಗಿತ್ತು. ಇಂತಹ ಅರಾಜಕ ಪರಿಸ್ಥಿತಿಯಲ್ಲಿ ಧರ್ಮ, ಸಂಸ್ಕೃತಿಗಳ ಬಗೆಗೆ ಮರಾಠರಲ್ಲಿದ್ದ ನಿಷ್ಠೆಯನ್ನು ಉದ್ದೀಪಿಸಿದ ಶಿವಾಜಿ ಔರಂಗಜೇಬನ ವಿರುದ್ಧ ಹೋರಾಡಿ ಮರಾಠ ರಾಜ್ಯವನ್ನು ಸ್ಥಾಪಿಸಿದನು. ಮರಾಠರಲ್ಲಿ ಶಿವಾಜಿ ಶ್ರೇಷ್ಠ ದೊರೆ. ರಾಜ್ಯ ವಿಸ್ತರಣೆ ಜೊತೆಗೆ ಉತ್ತಮ ಆಡಳಿತ ನೀಡುವುದರಲ್ಲಿಯೂ ಶಿವಾಜಿ ಯಶಸ್ವಿಯಾದನು. ಮಹಾರಾಷ್ಟ್ರದ ಸುಪ್ರಸಿದ್ಧ ಸಂತರ ಬೋಧನೆಗಳಿಂದ, ಸ್ಫೂರ್ತಿ ಪಡೆದ ಶಿವಾಜಿಗೆ ಹಿಂದೂ ಧರ್ಮ ರಕ್ಷಣೆ ಮತ್ತು ಮರಾಠ ರಾಜ್ಯ ಸ್ಥಾಪನೆ ಪ್ರಮುಖ ಆದ್ಯತೆಗಳಾಗಿದ್ದವು.


ಶಿವಾಜಿ ಪುಣೆ ಜಿಲ್ಲೆಯ ಶಿವನೇರಿ ಎಂಬಲ್ಲಿ ಜನಿಸಿದನು. ಈತನ ತಂದೆ ಶಹಾಜಿ ಭೋಸ್ಲೆ ಬಿಜಾಪುರ ಸುಲ್ತಾನರ ಸೇವೆಯಲ್ಲಿದ್ದನು. ಇವನ ತಾಯಿಯಾದ ಜೀಜಾಬಾಯಿ ಧರ್ಮ, ಶ್ರದ್ಧೆಯುಳ್ಳ ಸಾತ್ವಿಕ ಮಹಿಳೆಯಾಗಿದ್ದು ಪುತ್ರನಲ್ಲಿ ಧರ್ಮಶ್ರದ್ಧೆ, ಸ್ಥೈರ್ಯ, ಜೀವನ ನಿಷ್ಠೆ ಹಾಗೂ ಉನ್ನತಾದರ್ಶಗಳನ್ನು ಬೆಳೆಸಿದಳು. ದಾದಾಜಿಕೊಂಡದೇವ ಶಿವಾಜಿಯ ಗುರುವಾಗಿದ್ದು, ಶಸ್ತ್ರಾಸ್ತ್ರ ಮತ್ತು ಶಾಸ್ತ್ರಗಳಲ್ಲಿ ತರಬೇತಿಗೊಳಿಸಿದನು. ಶಿವಾಜಿ ಅಂಗಸಾಧನೆ, ಖಡ್ಗ

©KTBS Not to be re published

ಪ್ರಯೋಗ, ಕುದುರೆ ಸವಾರಿ ಮುಂತಾದ ಕ್ಷಾತ್ರ ಕಲೆಗಳಲ್ಲಿ ಪರಿಣತಿ ಪಡೆದನು. ಶಿವಾಜಿ ಬಾಲ್ಯದಲ್ಲಿಯೆ, ಸ್ವತಂತ್ರ ರಾಜ್ಯ ನಿರ್ಮಿಸುವ ಕನಸನ್ನು ಹೊಂದಿದ್ದನು. ಪುಣೆಯನ್ನು ಕೇಂದ್ರವನ್ನಾಗಿಟ್ಟುಕೊಂಡು ರಾಜ್ಯ ವಿಸ್ತರಿಸುವ ಕಾರ್ಯದಲ್ಲಿ ತೊಡಗಿದನು. ಈ ದಿಶೆಯಲ್ಲಿ ಶಿವಾಜಿಯು ತನ್ನ ಸ್ಥಳೀಯ ನಿವಾಸಿಗಳಾದ ಮಾವಳಿ ಯುವಕರ ಸೈನ್ಯ ಸಂಘಟಿಸಿ ಅವರಿಗೆ ಗೆರಿಲ್ಲಾ ಯುದ್ಧ ತಂತ್ರಗಳಲ್ಲಿ ಸೈನಿಕ ತರಬೇತಿ ನೀಡಿದನು. ಶಿವಾಜಿಯು ಬಿಜಾಪುರದ ಸುಲ್ತಾನನಿಂದ ತೋರಣಗಡ ಕೋಟೆ, ಪುರಂದರಗಡ ಕೋಟೆ, ಚಕನ್ ಕೋಟೆ, ಸಿಂಹಗಡ, ಜವಳಿ ಕೋಟೆ ವಶಪಡಿಸಿಕೊಂಡನು. ತೋರಣಕೋಟೆಯ ಹತ್ತಿರದ ಹೊಸದುರ್ಗಕ್ಕೆ ರಾಯಗಡವೆಂದು ಕರೆದನು. ಪ್ರತಾಪಗಡ ಎಂಬ ಹೊಸ ಕೋಟೆಯನ್ನು ನಿರ್ಮಿಸಿದನು. ಶಿವಾಜಿಯು ಬಿಜಾಪುರ ಸುಲ್ತಾನರ ವಿರುದ್ಧ ಹೋರಾಟ ನಡೆಸಿದ್ದರಿಂದ ಆತನ ತಂದೆ ಶಹಜಿಯನ್ನು ಸುಲ್ತಾನನು ಬಂಧಿಸಿದನು. ಮತ್ತೆ ಹೋರಾಟ ನಡೆಸುವುದಿಲ್ಲ ಎಂಬ ಆಶ್ವಾಸನೆಯ ಮೇಲೆ ಶಹಾಜಿಯನ್ನು ಬಿಡುಗಡೆಗೊಳಿಸಲಾಯಿತು.

**ಮೊಘಲರು ಹಾಗೂ ಶಿವಾಜಿ ಸಂಬಂಧ**

ಶಿವಾಜಿ ಅನೇಕ ವರ್ಷಗಳ ಕಾಲ ಮೊಘಲ ದೊರೆ ಔರಂಗಜೇಬನೊಂದಿಗೆ ಹೋರಾಟ ನಡೆಸಿದನು. ದಕ್ಷಿಣ ಭಾರತದಲ್ಲಿ ಷಾಹಿ ರಾಜ್ಯಗಳನ್ನು ಸೋಲಿಸುವುದರ ಜೊತಗೆ ಮರಾಠ ರಾಜ್ಯವನ್ನು ಸಹ ಸಂಪೂರ್ಣವಾಗಿ ಸೋಲಿಸಬೇಕೆಂದು ಔರಂಗಜೇಬನು ನಿಶ್ಚಯಿಸಿದ್ದನು. ಈ ಉದ್ದೇಶ ಈಡೇರಿಕೆಗಾಗಿ ಶಾಯಿಸ್ತಾಖಾನ, ಜೈಸಿಂಗ್‌ರನ್ನು ನೇಮಕ ಮಾಡಿದನು. ಜೈಸಿಂಗ್ ಶಿವಾಜಿಯನ್ನು ಸೋಲಿಸಿ ಪುರಂದರಘಡದಲ್ಲಿ ಒಪ್ಪಂದ ಮಾಡಿಕೊಂಡನು. ಅದರನ್ವಯ ಶಿವಾಜಿ ತನ್ನ 23 ದುರ್ಗಗಳನ್ನು ಹಾಗೂ ವಾರ್ಷಿಕ 16 ಲಕ್ಷ ವರಮಾನ ಬರುವ ಪ್ರದೇಶವನ್ನು ನೀಡಿದನು. ಮೊಘಲ್‌ರೊಂದಿಗೆ ನಿಷ್ಠೆಯಿಂದಿರುವುದಾಗಿ ಹೇಳಿ ತನ್ನ ಪುತ್ರ ಸಂಭಾಜಿಯ ನೇತೃತ್ವದಲ್ಲಿ 5000 ಅಶ್ವದಳದೊಂದಿಗೆ ದೆಹಲಿಗೆ ಕಳುಹಿಸಿದನು. ಬಿಜಾಪುರದ ಆದಿಲ್ ಷಾ ಹಾಗೂ ಗೋಲ್ಕಂಡದ ಕುತುಬ್ ಶಾಹಿ ಸುಲ್ತಾನರೊಂದಿಗೆ ಶಿವಾಜಿ ಕೈಜೋಡಿಸಬಾರದೆಂಬ ಉದ್ದೇಶದಿಂದ ಆತನಿಗೆ ಆಗ್ರಾಕ್ಕೆ ಬರಲು ಜೈಸಿಂಗ್ ತಿಳಿಸಿದನು. ಔರಂಗಜೇಬ ತನ್ನ ದರ್ಬಾರಿನಲ್ಲಿ ಶಿವಾಜಿಗೆ ಸೂಕ್ತ ಗೌರವ ನೀಡದೆ ಅಪಮಾನಗೊಳಿಸಿದನು. ಇದನ್ನು ಪ್ರತಿಭಟಿಸಿದ್ದಕ್ಕಾಗಿ ಶಿವಾಜಿ ಹಾಗೂ ಅವನ ಪುತ್ರ ಸಂಭಾಜಿಯನ್ನು ಆಗ್ರಾದ ಸೆರೆಮನೆಯಲ್ಲಿ ಬಂಧನದಲ್ಲಿಡಲಾಯಿತು. ಆದರೆ ಕೆಲವು ದಿನಗಳಲ್ಲಿ ಶಿವಾಜಿ ತನ್ನ ಪುತ್ರನೊಂದಿಗೆ ಮಿಠಾಯಿ ಬುಟ್ಟಿಯಲ್ಲಿ ಕುಳಿತುಕೊಂಡು ಸೆರೆಮನೆಯಿಂದ ಪಾರಾಗಿ ರಾಯಗಢ ತಲುಪಿದನು. ಮುಂದೆ ತನ್ನ ಸೈನ್ಯವನ್ನು ಬಲಗೊಳಿಸಿ ತಾನು ಕಳೆದುಕೊಂಡಿದ್ದ ಅನೇಕ ಕೋಟೆಗಳನ್ನು ಪುನಃ ವಶಪಡಿಸಿಕೊಂಡನು. ಶಿವಾಜಿಯು ಮೊಘಲ್ ಮತ್ತು ಷಾಹಿ ಪ್ರದೇಶಗಳಿಂದ ಚೌತ (ಭೂಕಂದಾಯದ ಒಂದರ ನಾಲ್ಕಾಂಶ ಭಾಗ) ಮತ್ತು ತನ್ನ ರಾಜ್ಯದಲ್ಲಿ ಸರದೇಶಮುಖಿ (ಭೂಕಂದಾಯದ




©KTBS Not to be re published

ಒಂದರ ಹತ್ತಾಂಶ ಭಾಗ) ಸಂಗ್ರಹಿಸುತ್ತಿದ್ದನು. ಸಾ.ಶ.1674ರಲ್ಲಿ ರಾಯಘಢದಲ್ಲಿ ಶಿವಾಜಿಯ ಪಟ್ಟಾಭಿಷೇಕ ನಡೆಯಿತು. ಅಲ್ಲಿ ಶಿವಾಜಿಗೆ 'ಛತ್ರಪತಿ'ಯೆಂಬ ಬಿರುದು ನೀಡಿ ಗೌರವಿಸಲಾಯಿತು.

**ಶಿವಾಜಿಯ ಆಡಳಿತ:** ಶಿವಾಜಿ ತನ್ನ ವಿಶಾಲ ರಾಜ್ಯದಲ್ಲಿ ಉತ್ತಮ ಆಡಳಿತ ಸಂಘಟಿಸಿದ್ದನು. ತನ್ನ ರಾಜ್ಯವನ್ನು ಅನೇಕ ಪ್ರಾಂತಗಳಾಗಿ ವಿಂಗಡಿಸಿದ್ದನು. ಅವುಗಳನ್ನು ಸ್ವರಾಜ್ಯ ಮತ್ತು ಮೊಘಲರ ರಾಜ್ಯಗಳೆಂದು ಕರೆಯುತ್ತಿದ್ದರು. ಮರಾಠಿ ಅಡಳಿತ ಭಾಷೆಯಾಗಿತ್ತು. ಸರ್ಕಾರದ ಮುಖ್ಯಸ್ಥನಾಗಿದ್ದ ದೊರೆಗೆ ಆಡಳಿತದಲ್ಲಿ ನೆರವು ನೀಡಲು ಅಷ್ಠ ಪ್ರಧಾನರೆಂಬ ಮಂತ್ರಿಗಳಿದ್ದರು. ಜೊತೆಗೆ ಸಹಾಯಕ್ಕಾಗಿ ಇತರೆ ಅಧಿಕಾರಿಗಳಿದ್ದರು. ಪ್ರಾಂತ, ಜಿಲ್ಲೆ, ಗ್ರಾಮ ಆಡಳಿತದ ಘಟಕಗಳಾಗಿದ್ದವು.

**ಕಂದಾಯ ವ್ಯವಸ್ಥೆ:** ಶಿವಾಜಿಯ ಕಂದಾಯ ಪದ್ಧತಿ ರೈತರಿಗೆ ಅನುಕೂಲಕರವಾಗಿತ್ತು. ಅವನು ಜಾಗೀರುದಾರಿ ಕಂದಾಯ ಪದ್ಧತಿಯನ್ನು ರದ್ದುಪಡಿಸಿದನು. ಕಂದಾಯವನ್ನು ಹಣದ ಅಥವಾ ವಸ್ತು ರೂಪದಲ್ಲಿ ನೀಡಬೇಕಿತ್ತು. ಚೌತ್ ಹಾಗೂ ಸರದೇಶಮುಖಿಯೆಂಬ ಭೂಕಂದಾಯಗಳಿದ್ದವು.

**ನ್ಯಾಯಾಂಗ ಪದ್ಧತಿ:** ಶಿವಾಜಿ ಆಡಳಿತದಲ್ಲಿ ಪರಂಪರಾನುಗತ ನ್ಯಾಯಾಂಗ ವ್ಯವಸ್ಥೆ ಜಾರಿಯಲ್ಲಿತ್ತು. ಗ್ರಾಮಗಳಲ್ಲಿ ಪಂಚಾಯತಿಗಳು ನ್ಯಾಯದಾನ ನೀಡುತ್ತಿದ್ದವು. ಬ್ರಾಹ್ಮಣ ನ್ಯಾಯಾಧೀಶರು ಸ್ಮೃತಿಗಳ ಆಧಾರದ ಮೇಲೆ ನಿರ್ಣಯ ನೀಡುತ್ತಿದ್ದರು.

**ಸೈನ್ಯ :** ಮರಾಠ ಸೈನ್ಯದಲ್ಲಿ ಕಾಲ್ದಳ, ಗಜದಳ, ಅಶ್ವದಳ ಮತ್ತು ಫಿರಂಗಿ ದಳಗಳಿದ್ದವು. ರಾಯಗಡ, ರಾಜಗಡ, ತೋರಣ ಗಡ, ಪ್ರತಾಪಗಡ ಮತ್ತು ಸಿಂಹಗಡಗಳಲ್ಲಿ ಪ್ರಮುಖ ಕೋಟೆಗಳಿದ್ದವು. ಹವಾಲ್ದಾರ ಕೋಟೆಯ ಮೇಲ್ವಿಚಾರಕನಾಗಿದ್ದನು. ಸೈನ್ಯದಲ್ಲಿ ಅನೇಕ ಚಿಕ್ಕ ಘಟಕಗಳಿದ್ದವು. ಗೆರಿಲ್ಲಾ ಯುದ್ಧತಂತ್ರಗಾರಿಕೆಯಲ್ಲಿ ಶಿವಾಜಿ ಸೈನಿಕರು ವಿಶೇಷ ತರಬೇತಿ ಪಡೆದಿದ್ದರು.

> ***ಗೆರಿಲ್ಲಾ ಯುದ್ಧ :***
> *ಬೆಟ್ಟ-ಗುಡ್ಡ, ಕಾಡು-ಮೇಡುಗಳಲ್ಲಿ ಅಡಗಿ ಕುಳಿತು ಒಮ್ಮೆಲೇ ಶತ್ರುಗಳ ಮೇಲೆ ದಾಳಿ ಮಾಡುವ ಯುದ್ಧ ಕಲೆ.*

**ಶಿವಾಜಿಯ ಉತ್ತಾರಾಧಿಕಾರಿಗಳು :** ಶಿವಾಜಿಗೆ ಮರಣದ ಸಮಯದಲ್ಲಿ ಆತನ ಪತ್ನಿಯರಾದ ಸಾಯಿಬಾಯಿ (ಸಾಂಬಾಜಿಯ ತಾಯಿ), ಸೊಯ್ರಾಬಾಯಿ ಶಿರ್ಕೆ (ರಾಜಾರಾಮನ ತಾಯಿ)ಯರ ಮಧ್ಯ ಆಂತರಿಕ ಕಲಹ ಉಂಟಾಯಿತು. ಸಾಂಬಾಜಿ ತನ್ನ ಶಕ್ತಿಯಿಂದ ಮರಾಠ ರಾಜ್ಯವನ್ನು ವಶಪಡಿಸಿಕೊಂಡು ಆಳ್ವಿಕೆ ಪ್ರಾರಂಭಿಸಿದನು. ಈತನಿಗೆ ದೂರದೃಷ್ಟಿ ಮತ್ತು ವಿವೇಕ ಇರಲಿಲ್ಲ. ಇದರಿಂದ ರಾಜ್ಯ ಸಂರಕ್ಷಿಸುವುದರ ಬದಲಾಗಿ ಔರಂಗಜೇಬನ ದಾಳಿಗೆ ತುತ್ತಾಗಿ ಕೊಲ್ಲಲ್ಪಟ್ಟನು. ಆತನ ಪತ್ನಿ ಹಾಗೂ ಚಿಕ್ಕ ಮಗ ಶಾಹುನನ್ನು ಸೆರೆಹಿಡಿಯಲಾಯಿತು. ಹೀಗಾಗಿ ರಾಜಾರಾಮ ಶಾಹು (ಸಾಂಬಾಜಿಯ ಪುತ್ರ) ರಾಜಪ್ರತಿನಿಧಿಯಾಗಿ ಆಡಳಿತದ ಸೂತ್ರ ವಹಿಸಿಕೊಂಡನು. ರಾಜಾರಾಮ ಪುನಃ ಮೊಘಲರೊಂದಿಗೆ ಹೋರಾಟ ಮಾಡಿ ಗುಜರಾತ, ಮಾಳ್ವಾ, ಖಾನದೇಶ, ಬಿರಾರಗಳನ್ನು ಮತ್ತು ಕೆಲವು ಕೋಟೆಗಳನ್ನು ವಶಪಡಿಸಿಕೊಂಡನು. ರಾಜಾರಾಮ ಸಾ.ಶ. 1700ರಲ್ಲಿ ಮರಣ ಹೊಂದಿದ್ದರಿಂದ ಆತನ ಪತ್ನಿ ತಾರಾಬಾಯಿ ಮೋಹಿತೆ ತನ್ನ ಹತ್ತು ವರ್ಷದ ಮಗ ಎರಡನೆಯ ಶಿವಾಜಿಯನ್ನು ಪಟ್ಟಕ್ಕೇರಿಸಿ ಅಧಿಕಾರ ಪ್ರಾರಂಭಿಸಿದಳು. ಇವಳು ಸಾ.ಶ. 1700 ರಿಂದ 1708ರವರೆಗೆ ರಾಜಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದಳು. ಇವಳು ಸಹ ಔರಂಗಜೇಬನೊಂದಿಗೆ ಯುದ್ಧ ಪ್ರಾರಂಭಿಸಿದಳು. ಪ್ರಾರಂಭದಲ್ಲಿ ಮೊಘಲರು ವಿಜಯಶಾಲಿಗಳಾದರೆ ನಂತರ ಮರಾಠರು ತಾವು ಕಳೆದುಕೊಂಡಿದ್ದ ಕೋಟೆಗಳನ್ನು ಪುನಃ ವಶಪಡಿಸಿಕೊಂಡರು. ಔರಂಗಜೇಬನ ಉತ್ತರಾಧಿಕಾರಿಯಾದ ಒಂದನೆಯ ಬಹದ್ದೂರ ಷಾ ಸಾಂಬಾಜಿಯ ಪುತ್ರ ಶಾಹುನನ್ನು ಬಂಧನದಿಂದ ಬಿಡುಗಡೆಗೊಳಿಸಿ ದಕ್ಷಿಣದಲ್ಲಿದ್ದ ಮೊಘಲರ ಸುಭಾಗಳಿಂದ ಚೌತ್ ಮತ್ತು ಸರದೇಶಮುಖಿಗಳನ್ನು ಸಂಗ್ರಹಿಸಲು ಅನುಮತಿ ನೀಡಿದನು. ಇದು ತಾರಾಬಾಯಿ ಮತ್ತು ಶಾಹುನ ನಡುವೆ ಆಂತರಿಕ ಕಲಹಕ್ಕೆ ಕಾರಣವಾಗಿ ತಾರಾಬಾಯಿ ಪರಾಭವಗೊಂಡಳು. ಆದರೆ ಶಾಹುವೂ ಸಹ ಸಾಮರ್ಥ್ಯ ಹೊಂದಿರಲಿಲ್ಲ. ಇದರಿಂದಾಗಿ ತನ್ನ ಆಡಳಿತವನ್ನು ಪೇಶ್ವೆಗೆ (ಪ್ರಧಾನ ಮಂತ್ರಿ) ಬಿಟ್ಟುಕೊಡಬೇಕಾಯಿತು. ಹೀಗೆ ಮರಾಠ ರಾಜ್ಯದಲ್ಲಿ ಪೇಶ್ವೆಯರ ಆಡಳಿತ ಪ್ರಾರಂಭವಾಯಿತು.

©KTBS Not to be republished

# ಪೇಶ್ವೆಗಳು

**ಬಾಲಾಜಿ ವಿಶ್ವನಾಥ (ಸಾ.ಶ.1713–1720) :** ಶಾಹುನ ಸೇನಾಪತಿಯಾಗಿ ಪ್ರಸಿದ್ಧಿಯನ್ನು ಪಡೆದ ಇವನು ಮರಾಠ ನಾಯಕನಾಗಿ ರೂಪಗೊಂಡನು. ನಿಷ್ಠೆ ಹಾಗೂ ಸಾಮರ್ಥ್ಯವನ್ನು ಗುರುತಿಸಿ ಬಾಲಾಜಿ ವಿಶ್ವನಾಥನನ್ನು ಪೇಶ್ವೆಯೆಂದು ನೇಮಕ ಮಾಡಲಾಯಿತು. ಈತನು ಶಾಹು ಮತ್ತು ಆತನ ತಾಯಿಯನ್ನು ಮೊಘಲರ ಬಂಧನದಿಂದ ಬಿಡುಗಡೆಗೊಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದನು. ಮೊಘಲ ಸುಲ್ತಾನ ಸೈಯದ್ ಸಹೋದರ ಸ್ನೇಹವನ್ನು ಸಂಪಾದಿಸಿ, ಶಿವಾಜಿಯ ಅಧೀನದಲ್ಲಿದ್ದು ಮೊಘಲರು ವಶಪಡಿಸಿಕೊಂಡ ಪ್ರದೇಶಗಳಲ್ಲಿನ ಭೂಕಂದಾಯ ಸಂಗ್ರಹಿಸುವ ಅಧಿಕಾರ ಪಡೆದನು. ಮರಾಠ ಒಕ್ಕೂಟದ ಧುರೀಣರಾದ ಭೋನ್ಸ್ಲೆ, ಗಾಯಕವಾಡ, ಹೋಳ್ಕರ್, ಸಿಂಧಿಯಾ ಮುಂತಾದವರನ್ನು ಒಂದುಗೂಡಿಸಿ ಮರಾಠರ ಕೀರ್ತಿಯನ್ನು ಪುನಃ ಸ್ಥಾಪಿಸಿದನು.

**ಒಂದನೆಯ ಬಾಜೀರಾವ್ (ಸಾ.ಶ. 1720–1740) :** ಬಾಲಾಜಿ ವಿಶ್ವನಾಥನ ಮರಣದ ನಂತರ ಆತನ ಹಿರಿಯ ಪುತ್ರನಾದ ಒಂದನೆಯ ಬಾಜೀರಾವ್ ಪೇಶ್ವೆಯಾಗಿ ನೇಮಕಗೊಂಡನು. ಕೇವಲ ಹತ್ತೊಂಬತ್ತು ವರ್ಷದವನಾಗಿದ್ದರೂ ಇವನು ಅಪ್ರತಿಮ ವೀರನಾಗಿದ್ದನು. ಮರಾಠ ರಾಜ್ಯವನ್ನು ಉತ್ತರ ಭಾರತದಲ್ಲಿ ವಿಸ್ತರಿಸಬೇಕೆಂಬ ಉದ್ದೇಶದಿಂದ ಗುಜರಾತ, ಮಾಳ್ವಾಗಳನ್ನು ವಶಪಡಿಸಿಕೊಂಡು ಚೌತ್ ಮತ್ತು ಸರದೇಶಮುಖಿಗಳನ್ನು ಸಂಗ್ರಹಿಸುವ ಅಧಿಕಾರ ಪಡೆದನು. ಕರ್ನಾಟಕದ ಚಿತ್ರದುರ್ಗ, ಶ್ರೀರಂಗಪಟ್ಟಣದ ಮೇಲೆ ದಾಳಿಮಾಡಿದನು. ಬಾಜಿರಾವ್ ಮೊಘಲ ದೊರೆ ವಿರುದ್ಧ ಯುದ್ಧ ಸಾರಿದಾಗ ನಿಜಾಮ–ಉಲ್ ಮುಲ್ಕ ಮೊಘಲರಿಗೆ ನೆರವು ನೀಡುವ ಉದ್ದೇಶದಿಂದ ತನ್ನ ಸೈನ್ಯದೊಂದಿಗೆ ದೆಹಲಿಗೆ ತೆರಳುವ ಸಂದರ್ಭದಲ್ಲಿ ಭೂಪಾಲ ಬಳಿ ನಡೆದ ಯುದ್ಧದಲ್ಲಿ ಮರಾಠರಿಂದ ಪರಾಭವಗೊಂಡನು. ಇದರಿಂದ ನರ್ಮದ, ಚಂಬಲ್ ನದಿಗಳ ನಡುವಿನ ವಿಶಾಲ ಪ್ರದೇಶ ಹಾಗೂ ಐವತ್ತು ಲಕ್ಷ ರೂಪಾಯಿಗಳು ಯುದ್ಧ ಪರಿಹಾರವಾಗಿ ಬಾಜಿರಾವ್‌ನಿಗೆ ದೊರಕಿತು. ಅಲ್ಲದೆ ಪೋರ್ಚಗೀಸರಿಂದ ಸಾಲಸೆಟ್, ಬೇಸಿನ್ ಮತ್ತು ಸಿದ್ಧಿಗಳಿಂದ ಜಂಜಿರಾ ವಶಪಡಿಸಿಕೊಂಡನು. ಪುಣೆ ಇವನ ಆಡಳಿತದ ಕೇಂದ್ರವಾಯಿತು. ಇದೇ ವೇಳೆಗೆ ಮರಾಠರ ಒಕ್ಕೂಟದಲ್ಲಿದ್ದ ಗ್ವಾಲಿಯರ್‌ನ ಸಿಂಧಿಯಾ, ಇಂಧೋರಿನ ಹೋಳ್ಕರ್, ನಾಗಪುರದ ಭೋನ್ಸ್ಲೆ ಬರೋಡಾದ ಗಾಯಕ್‌ವಾಡ್ ಇವರು ಪರಸ್ಪರ ಸ್ವತಂತ್ರಗೊಳ್ಳಲು ತಿರ್ಮಾನಿಸಿದರು. ಒಂದನೆಯ ಬಾಜಿರಾವ್ ದಕ್ಷತೆಯಿಂದ ಆಡಳಿತ ನಡೆಸಿದನಲ್ಲದೆ ಮರಾಠ ರಾಜ್ಯದ ಕೀರ್ತಿಯನ್ನು ಪುನಃ ಸ್ಥಾಪಿಸುವಲ್ಲಿ ಯಶಸ್ವಿಯಾದನು. ಇದರಿಂದ ಇವನಿಗೆ ಎರಡನೆಯ ಶಿವಾಜಿಯೆಂದು ಹೆಸರು ಬಂದಿತು.

**ಬಾಲಾಜಿ ಬಾಜೀರಾವ್ (ಸಾ.ಶ. 1740–1761):** ಇವನು ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದಿದ್ದರಿಂದ ಆಡಳಿತದ ಮಾರ್ಗದರ್ಶನಕ್ಕಾಗಿ ಹತ್ತಿರ ಸಂಬಂಧಿ ಸದಾಶಿವ ಬಾವುನನ್ನು ನೇಮಕ ಮಾಡಿಕೊಂಡಿದ್ದನು. ಈತನು ಮರಾಠರ ಘನತೆಯನ್ನು ಹೆಚ್ಚಿಸಲು ಶ್ರಮಿಸಿದನು. ರಾಜ್ಯದ ಆರ್ಥಿಕ ಸ್ಥಿತಿ ಸುಧಾರಿಸಲು ಕ್ರಮ ಕೈಗೊಂಡನು. ಬುಂದೇಲಖಂಡದ ಮೇಲೆ ಮರಾಠರ ಸಾರ್ವಭೌಮತ್ವ ಸ್ಥಾಪಿಸಲು ಸಾ.ಶ. 1742ರಲ್ಲಿ ಹೋಳ್ಕರ್ ಮತ್ತು ಸಿಂಧಿಯಾರ ಸೈನ್ಯದೊಂದಿಗೆ ಪ್ರಯಾಣ ಬೆಳಸಿದನು. ಅಫ್ಘಾನಿಸ್ತಾನದಿಂದ ಅಹ್ಮದಷಾ ಅಬ್ದಾಲಿ ಮೊಘಲ ಪ್ರದೇಶದ ಮೇಲೆ ಆಕ್ರಮಣ ಮಾಡಿ ಲಾಹೋರ್, ಮುಲ್ತಾನ, ಕಾಶ್ಮೀರಗಳನ್ನು ವಶಪಡಿಸಿಕೊಂಡನು. ಆಗ ಮೊಘಲದೊರೆ ಸಪ್ದರಜಂಗ್ ಆಂತರಿಕ ಮತ್ತು ಬಾಹ್ಯದಾಳಿಗೆ ಸಂಬಂಧಿಸಿದಂತೆ ಮರಾಠರೊಂದಿಗೆ ಒಪ್ಪಂದ ಮಾಡಿಕೊಂಡನು. ನಿರೀಕ್ಷಿಸಿದಂತೆ ಅಹ್ಮದಷಾ ಅಬ್ದಾಲಿ ಭಾರತದ ಮೇಲೆ ಆಕ್ರಮಣ ಮಾಡಿದನು. ಬಾಲಾಜಿ ಬಾಜಿರಾವ್ ತನ್ನ ಸೈನ್ಯದೊಂದಿಗೆ ಪಾಣಿಪತ್‌ನಲ್ಲಿ ವೈರಿಗಳೊಂದಿಗೆ ಹೋರಾಡಿ ಪರಾಭವಗೊಂಡನು.

**ಒಂದನೆಯ ಮಾಧವ ರಾವ್ :** ಬಾಲಾಜಿ ಬಾಜೀರಾವ್‌ನ ಎರಡನೆಯ ಪುತ್ರನಾದ ಇವನು ತಂದೆಯ ಮರಣದ ನಂತರ ಪೇಶ್ವೆಯಾದನು. ಅಪ್ರಾಪ್ತ ಯುವಕನಾಗಿದ್ದರಿಂದ ತನ್ನ ಚಿಕ್ಕಪ್ಪನನ್ನು ರಾಜಪ್ರತಿನಿಧಿಯಾಗಿ

Not to be republished ©KTBS

ನೇಮಕ ಮಾಡಿಕೊಂಡನು. ಮೂರನೆಯ ಪಾಣಿಪತ್ ಅಪಜಯದ ನಂತರ ಆಶ್ಚರ್ಯಕರ ರೀತಿಯಲ್ಲಿ ಚೇತರಿಸಿಕೊಂಡು ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಪ್ರಬಲ ಶಕ್ತಿ ಸ್ಥಾಪಿಸಿದನು. ಪಾಣಿಪತ್ ಸೋಲಿನ ಲಾಭ ಪಡೆದುಕೊಳ್ಳಲು ನಿಜಾಮ ಪ್ರಯತ್ನಿಸಲು ತೀರ್ಮಾನಿಸಿದಾಗ ಅವನನ್ನು ಅಹಮ್ಮದ್‌ನಗರ ಬಳಿ ನಡೆದ ಯುದ್ಧದಲ್ಲಿ ಸೋಲಿಸಿದನು. ಮೈಸೂರಿನ ಹೈದರಾಲಿಯನ್ನು ಸಹ ಸೋಲಿಸಿದನು. ಎರಡನೆಯ ಸಲ ಮೈಸೂರಿನ ಮೇಲೆ ಯುದ್ಧ ಮಾಡಿ ಶ್ರೀರಂಗಪಟ್ಟಣದ ಮೇಲೆ ವಿಜಯ ಸಾಧಿಸಿ ಶಿವಾಜಿ ವಶಪಡಿಸಿಕೊಂಡಿದ್ದ ಪ್ರದೇಶಗಳನ್ನು ಹೈದರ್ ಅಲಿಯಿಂದ ಪಡೆದುಕೊಂಡಿದ್ದಲ್ಲದೆ ಅಪಾರ ಯುದ್ಧ ಪರಿಹಾರ ಹಣವನ್ನು ಪಡೆದನು. ಉತ್ತರಭಾರತದಲ್ಲಿ ರಜಪೂತ, ಜಾಟ ಮತ್ತು ರೋಹಿಲರನ್ನು ಸೋಲಿಸಿದನು. ರಾಜಭ್ರಷ್ಟನಾಗಿ ಅಲೆಯುತ್ತಿದ್ದ ಮೊಘಲ ಚಕ್ರವರ್ತಿ ಎರಡನೆಯ ಷಾ ಆಲಂನನ್ನು ದೆಹಲಿ ಸಿಂಹಾಸನದ ಮೇಲೆ ಕುಳ್ಳಿರಿಸಲು ನೆರವು ನೀಡಿದನು. ಹೀಗೆ ಅಲ್ಪಾವಧಿಯಲ್ಲಿ ಮರಾಠರ ಕೀರ್ತಿಯನ್ನು ಪುನಃ ಸ್ಥಾಪಿಸಿದನು. ಮೂರನೆಯ ಆಂಗ್ಲೋ–ಮರಾಠ ಯುದ್ಧದಲ್ಲಿ ಬ್ರಿಟಿಷರು ಮರಾಠರನ್ನು ನಿರ್ಣಾಯಕವಾಗಿ ಸೋಲಿಸಿದ ನಂತರ ಮರಾಠ ಆಡಳಿತ ಬಹುತೇಕ ಅಂತ್ಯಗೊಂಡಿತು.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮೊಘಲ್ ಸಾಮ್ರಾಜ್ಯ ಸ್ಥಾಪಕ ______________ .
2. ಮೊಘಲರಲ್ಲಿ ಪ್ರಸಿದ್ಧ ಸುಲ್ತಾನ ______________ .
3. ಆಗ್ರಾದಲ್ಲಿ ತಾಜಮಹಲ್ ಕಟ್ಟಿಸಿದವನು ______________ .
4. ದಿನ್–ಇ–ಇಲಾಹಿ ಹೊಸ ಪಂಥ ಸ್ಥಾಪಿಸಿದ ಮೊಘಲ್ ಸುಲ್ತಾನ ______________ .
5. ಶಿವಾಜಿಯ ತಾಯಿ ಹೆಸರು ______________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಬಾಬರನ ಸೈನಿಕ ಸಾಧನೆ ವಿವರಿಸಿರಿ.
2. ಶೇರಷಾನ ಆಡಳಿತ ಪದ್ಧತಿಯ ಮುಖ್ಯ ಗುಣಲಕ್ಷಣಗಳನ್ನು ವಿವರಿಸಿ.
3. ಅಕ್ಬರನು ಗೆದ್ದ ರಾಜ್ಯಗಳಾವುವು ?
4. ಷಾಜಹಾನನು ಕಲೆ ಮತ್ತು ವಾಸ್ತು ಶಿಲ್ಪಕ್ಕೆ ನೀಡಿದ ಕೊಡುಗೆ ವಿವರಿಸಿರಿ.
5. ಶಿವಾಜಿಯ ಆಡಳಿತ ವ್ಯವಸ್ಥೆ ವಿವರಿಸಿರಿ.
6. ಒಂದನೇ ಬಾಜಿರಾಯನ ಸಾಧನೆಗಳನ್ನು ವಿವರಿಸಿರಿ.

**III. ಚಟುವಟಿಕೆಗಳು**

1. ಭಾರತದ ನಕ್ಷೆಯಲ್ಲಿ ಅಕ್ಬರ್ ಗೆದ್ದ ರಾಜ್ಯಗಳನ್ನು ಗುರುತಿಸಿರಿ.
2. ಶಿವಾಜಿಯಲ್ಲಿ ಸ್ವರಾಜ್ಯ ಸ್ಥಾಪನೆಯ ಬಯಕೆ ಬೆಳೆಯುವಲ್ಲಿ ತಾಯಿ ಜೀಜಾಬಾಯಿ ಹೇಗೆ ಸಹಾಯಕಳಾದಳು ಎಂಬ ಬಗ್ಗೆ ಪ್ರಬಂಧ ಬರೆಯಿರಿ.

**IV. ನಿಯೋಜಿತ ಕಾರ್ಯ :**

ತಮ್ಮ ಸ್ಥಳೀಯ ಆಡಳಿತ ಘಟಕ ವ್ಯವಸ್ಥೆ ಕುರಿತು ವರದಿ ಬರೆಯಿರಿ.

◈ ◈ ◈

Not to be re published ©KTBS

# ಅಧ್ಯಾಯ–6

# ಭಕ್ತಿಪಂಥ

## ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- *ರಮಾನಂದ, ಚೈತನ್ಯ, ಗುರುನಾನಕ್‌ರ ಬಗ್ಗೆ.*
- *ಕರ್ನಾಟಕದಲ್ಲಿ ಭಕ್ತಿ ಪಂಥ.*
- *ಭಕ್ತಿ ಪಂಥದ ಪರಿಣಾಮಗಳು.*
- *ಭಕ್ತಿ ಪಂಥದ ಪ್ರಮುಖ ಲಕ್ಷಣಗಳು.*

ಭಕ್ತಿಚಳವಳಿಯ ಬೆಳವಣಿಗೆಯು ಮಧ್ಯಕಾಲೀನ ಭಾರತದ ಒಂದು ಪ್ರಮುಖ ಲಕ್ಷಣವಾಗಿದೆ. ಮುಕ್ತಿ ಕಲ್ಪನೆಯು ಭಾರತೀಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪರಂಪರೆಗಳಲ್ಲಿ ಬಹಳ ಪ್ರಮುಖ ಸ್ಥಾನ ಪಡೆದಿದೆ. ಭಾರತದ ಆಧ್ಯಾತ್ಮಿಕ ಪರಂಪರೆಯಲ್ಲಿ ಮುಕ್ತಿಯನ್ನು ಪಡೆಯಲು ವಿವಿಧ ಬಗೆಯ ಅನುಸಂಧಾನಗಳನ್ನು ನಡೆಸಲಾಗಿದೆ. ಇದರ ಪರಿಣಾಮ ಜ್ಞಾನ ಮಾರ್ಗ, ಭಕ್ತಿ ಮಾರ್ಗ, ಕರ್ಮ ಮಾರ್ಗ, ಯಜ್ಞ ಯಾಗ ಮುಂತಾದ ಧಾರ್ಮಿಕ ಆಚರಣೆಗಳು ಬಹುಮುಖ್ಯ ಮಾರ್ಗಗಳೆಂದು ಹೆಚ್ಚು ಪ್ರಸಿದ್ಧಿಯನ್ನು ಪಡೆದವು. ಇದರಲ್ಲಿ ಭಕ್ತಿಮಾರ್ಗಕ್ಕೆ ವಿಶಿಷ್ಠ ಸ್ಥಾನವಿದೆ. ವಿವಿಧ ಧರ್ಮ ಸುಧಾರಕರು ಮತ್ತು ದಾರ್ಶನಿಕರು ಉದಾರವಾದ ಭಕ್ತಿಪಂಥವನ್ನು ಪ್ರತಿಪಾದಿಸಿದರು. ಭಕ್ತಿ ಎಂದರೆ ದೇವರಲ್ಲಿ ಶುದ್ಧ ನಂಬಿಕೆಯನ್ನಿಡುವುದು. ದೇವರಲ್ಲಿ ಭಕ್ತಿ ಮತ್ತು ಶರಣಾಗತಿಯನ್ನು ಒತ್ತಿ ಹೇಳಿದರು. ಜನರಲ್ಲಿ ಭ್ರಾತೃತ್ವದ ಭಾವನೆ ಬೆಳೆಸಲು ಪ್ರಯತ್ನಿಸಿದರು ಮತ್ತು ಸರ್ವಧರ್ಮ ಸಮಾನತೆಯ ತತ್ವವನ್ನು ಪ್ರತಿಪಾದಿಸಿದರು. ಅವರು ಯಾವ ವಿಧಿ–ವಿಧಾನಗಳನ್ನು ಆಚರಿಸುತ್ತಿರಲಿಲ್ಲ. ರಾಮ, ಕೃಷ್ಣ ಹಾಗೂ ಅಲ್ಲಾ ಎಂಬುದಾಗಿ ಹಲವು ನಾಮಗಳಿಂದ ಗುರುತಿಸಲ್ಪಟ್ಟ ಭಗವಂತನನ್ನು ಆರಾಧಿಸಿದರು. ಅವರು ಮುಕ್ತಿಯನ್ನು ಪಡೆದುಕೊಳ್ಳಲು ಭಕ್ತಿಮಾರ್ಗ ಸೂಚಿಸಿದರು. ಪರಿಶುದ್ಧ ಮನಸ್ಸು ಮತ್ತು ದೇವರಿಗೆ ಪೂರ್ಣ ಶರಣಾಗತಿಯೇ ಭಕ್ತಿ ಪಂಥದ ಮೂಲ ತತ್ವವಾಗಿತ್ತು. ಸಾ.ಶ. 13ನೆಯ ಶತಮಾನದ ತರುವಾಯ ಉತ್ತರ ಭಾರತದಲ್ಲಿ ಹರಡಿತು. ಭಕ್ತಿ ಪಂಥಕ್ಕೆ ಸಮಾನಾಂತರವಾಗಿಯೆ ಇಸ್ಲಾಂ ಮತದಲ್ಲಿ ಸೂಫಿ ಸಂಪ್ರದಾಯ ಬೆಳೆಯಿತು. ಇವುಗಳಲ್ಲಿ ಪರಸ್ಪರ ಪ್ರಭಾವಗಳನ್ನು ಗುರುತಿಸಬಹುದು.


ಭಕ್ತಿ ಮಾರ್ಗ, ಸಮಾಜದ ಎಲ್ಲ ಸ್ತರದ ಜನತೆಯನ್ನು ತಲುಪಿ ಹೆಚ್ಚು ಸಮಾಜಮುಖಿಯಾಗುತ್ತಲೇ ಸಾರ್ವತ್ರಿಕಗೊಂಡಿತು. ಈ ಅವಧಿಯಲ್ಲಿ ಸಮಾಜದ ವಿವಿಧ ಸಮುದಾಯಗಳಿಂದ ಬಂದ ಭಕ್ತಿ ಸಂತರು ತಮ್ಮ ಸ್ಥಳೀಯ ಭಾಷೆಯಲ್ಲಿಯೇ ಭಕ್ತಿ ಪರವಶತೆಯನ್ನು ವ್ಯಕ್ತಪಡಿಸುತ್ತಾ, ಭಕ್ತಿ ಪರಿಕಲ್ಪನೆಯನ್ನು ಹೆಚ್ಚು ಸಮಾಜಮುಖಿಯಾಗಿ ಪರಿಚಯಿಸಿದರು. ಇವರಲ್ಲಿ ಉತ್ತರ ಭಾರತದ ರಮಾನಂದ, ಕಬೀರ, ಗುರುನಾನಕ್, ಮೀರಬಾಯಿ, ಚೈತನ್ಯ, ನಾಮದೇವ, ರವಿದಾಸ್, ಸೂರ್‌ದಾಸ್, ಮುಖ್ಯರಾಗಿದ್ದಾರೆ. ಕರ್ನಾಟಕದಲ್ಲಿ ಸಮಾಜದ ವಿವಿಧ ಸ್ತರಗಳಿಂದ ಬಂದ ಪುರಂದರದಾಸ, ಕನಕದಾಸ, ಶಿಶುನಾಳ ಶರೀಫ ಮುಂತಾದ ಅನೇಕ ಭಕ್ತಿಸಂತರನ್ನು ಕಾಣಬಹುದು.

### ರಮಾನಂದ

ರಮಾನಂದರು ಅಲಹಾಬಾದ್‌ನ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ವಾರಣಾಸಿಯಲ್ಲಿ ಹಿಂದೂ ಧಾರ್ಮಿಕ ತತ್ವಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮಾಡಿ ರಾಮಾನುಜರ ತತ್ವದ ಅನುಯಾಯಿಗಳಾದರು.

©KTBS Not to be republished


> **ನಿಮಗಿದು ತಿಳಿದಿರಲಿ:**
>
> ರಮಾನಂದರು ಜನರಿಗೆ ವಿಶೇಷವಾದ ಸಂದೇಶವನ್ನು ಈ ರೀತಿ ನೀಡಿದರು.
>
> ಹರಿಯನ್ನು ಸ್ಮರಿಸಿ, ಹರಿಯಲ್ಲಿ ಒಂದಾಗಿ.
>
> ಯಾರು ಯಾವ ಜಾತಿಯವನೆಂದು ಪ್ರಶ್ನಿಸುವುದಲ್ಲ. ಯಾರು ದೇವರನ್ನು ನೆನೆಯುವರೋ, ಅವರನ್ನು ದೇವರು ಆಶೀರ್ವದಿಸುವನು.



**ರಮಾನಂದ**

ಅವರು ಭಕ್ತಿ, ಪ್ರೀತಿಗಳ ಆಧಾರದ ಮೇಲೆ ವೈಷ್ಣವ ಧರ್ಮದ ಶಾಲೆಯೊಂದನ್ನು ಪ್ರಾರಂಭಿಸಿದರು. ಉತ್ತರ ಭಾರತದ ಕೆಲವಡೆ ಸಂಚರಿಸಿ ರಾಮ–ಸೀತೆಯರ ಪೂಜೆಯ ಭಕ್ತಿ ಆರಾಧನ ಸಿದ್ಧಾಂತದ ಪ್ರತ್ಯೇಕ ಪಂಥವನ್ನು ಜನಪ್ರಿಯಗೊಳಿಸಿದರು. ವಾರಣಾಸಿಯು ಅವರ ಕಾರ್ಯಸ್ಥಾನದ ಕೇಂದ್ರವಾಗಿತ್ತು. ಅವರು ಜಾತಿ ಪದ್ಧತಿಯನ್ನು ಖಂಡಿಸಿ ಎಲ್ಲಾ ಜಾತಿಯವರನ್ನೂ ತಮ್ಮ ಪಂಥಕ್ಕೆ ಸೇರಿಸಿಕೊಂಡರು. ಅವರಲ್ಲಿ ಪ್ರಸಿದ್ಧನಾದವನು ಕಬೀರ್. ಅವರು ಹಿಂದಿಯಲ್ಲಿ ಪ್ರವಚನ ನೀಡಿದರು.

**ಕಬೀರ್ (ಸುಮಾರು 1440–1510) :** ಉತ್ತರ ಭಾರತದ ಈ ಕಾಲದ ಮತ್ತೊಬ್ಬ ಪ್ರಸಿದ್ಧ ಸಂತ ಕಬೀರ್. ಕಬೀರರು ವಾರಣಾಸಿಯ 'ಜುಲಾಸ್' ಎಂದು ಕರೆಯುವ ನೇಕಾರ ಕಸುಬಿನ ಮುಸಲ್ಮಾನ ಕುಟುಂಬದಲ್ಲಿ ಬೆಳೆದರು. ರಮಾನಂದರ ಶಿಷ್ಯರಾಗಿದ್ದ ಇವರು ಹೆಚ್ಚು ಕಾಲವನ್ನು ವಾರಣಾಸಿಯಲ್ಲಿ ಕಳೆದರು. ತಮ್ಮದೇ ಹೊಸ ತತ್ವವನ್ನು ಬೋಧಿಸಲು ಪ್ರಾರಂಭಿಸಿದರು. ಜಾತಿ ವ್ಯವಸ್ಥೆ ಮತ್ತು ಬಹುಮೂರ್ತಿಗಳ ಪೂಜೆಯನ್ನು ಖಂಡಿಸಿದ ಅವರು ದೇವರು ಒಬ್ಬನೇ, ಹಿಂದೂ ಮತ್ತು ಮುಸಲ್ಮಾನರಿಗೆ ಆ ಒಬ್ಬ ದೇವರೇ ಹೊರತು ಬೇರೆ ಬೇರೆ ಇಲ್ಲವೆಂದು ಸಾರಿದರು. ಈ ಎರಡು ಮತೀಯರಲ್ಲಿಯೂ ಸೌಹಾರ್ದ ಮತ್ತು ಸಹಿಷ್ಣುತೆಯನ್ನು ಬೆಳೆಸಲು ಯತ್ನಿಸಿದರು. ತಮ್ಮ ಗುರುವಿನಂತೆಯೆ ಇವರೂ ಸಹ ಜನರ ಆಡು ಭಾಷೆಯಾದ ಹಿಂದಿಯಲ್ಲಿಯೆ ಮಾತನಾಡಿ, ಬರೆದು ಹೆಚ್ಚು ಜನರನ್ನು ತಲುಪಿದರು.



**ಕಬೀರ್**

ಕಬೀರರು ದೋಹೆಗಳೆಂಬ ಪದ್ಯಗಳನ್ನು ರಚಿಸಿದರು. ಅವುಗಳನ್ನು ಹಿಂದೂ–ಮುಸಲ್ಮಾನರುಗಳು ಉತ್ತರ ಭಾರತದಲ್ಲಿ ಈಗಲೂ ಹಾಡುತ್ತಾರೆ. ಕಬೀರರ ಅನುಯಾಯಿಗಳನ್ನು "ಕಬೀರ್–ಪಂಥಿ"ಗಳೆಂದು ಕರೆಯುತ್ತಾರೆ. ಅಂದರೆ ಕಬೀರ್ ಮಾರ್ಗದಲ್ಲಿನ ಪ್ರವಾಸಿಗರು ಎಂದರ್ಥ. ಕಬೀರ್ ಜಾತಿ ಮತ್ತು ಧರ್ಮಗಳ ಗಡಿಗಳನ್ನು ದಾಟಿ ಮಾನವೀಯ ನೆಲೆಯಲ್ಲಿ ಬೋಧಿಸಿದರು. ಭಾರತದ ಪ್ರಮುಖ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಕರಾಗಿದ್ದರು.




**ಚೈತನ್ಯ**


**ಚೈತನ್ಯ (ಸುಮಾರು 1486–1533) :** ಭಕ್ತಿ ಚಳವಳಿಯ ಪ್ರಸಿದ್ಧ ಸಂತರಲ್ಲಿ ಚೈತನ್ಯ ಒಬ್ಬರು. ಇವರು ಬಂಗಾಳದ ನಾಡಿಯಾದಲ್ಲಿ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದರು. ತಮ್ಮ 25ನೇ ವಯಸ್ಸಿನಲ್ಲಿ ಸನ್ಯಾಸ ದೀಕ್ಷೆಯನ್ನು ಪಡೆದು ಶ್ರೀಕೃಷ್ಣ ಪಂಥದ ಅನುಯಾಯಿಗಳಾದರು. ಅನೇಕ ವರ್ಷಗಳ ಕಾಲ ಮಥುರಾ ಮತ್ತು ಬೃಂದಾವನಗಳಲ್ಲಿ ತಂಗಿದ್ದರು. ಶ್ರದ್ಧೆಯಿಂದ ಜಾತಿ ಮೊದಲಾದ ಬೇಧಗಳು ತೊಡೆದು ಹೋಗುತ್ತವೆ ಎಂದೂ, ಭಕ್ತಿಯಿಂದ

©KTBS Not to be republished

ಮನುಷ್ಯನು ಪರಿಶುದ್ಧನಾಗುವನೆಂದು ಉಪದೇಶ ನೀಡಿದರು. ಕೃಷ್ಣನ ಆರಾಧನೆಯನ್ನು ಜನಾದರಣೀಯವಾಗುವಂತೆ ಮಾಡಿದರು. ಕೃಷ್ಣನನ್ನು ಕುರಿತು ಅನೇಕ ಭಕ್ತಿಗೀತೆಗಳನ್ನು ರಚಿಸಿದರು. ಇವರು ಜನರಲ್ಲಿ ಜಾತಿ ಪದ್ಧತಿಯನ್ನು ವಿರೋಧಿಸಿ, ಭ್ರಾತೃತ್ವ ಭಾವವನ್ನು ಹೆಚ್ಚಿಸಲು ಪ್ರಯತ್ನಿಸಿದರು. ಅವರ ಆಧ್ಯಾತ್ಮಿಕ ಚಿಂತನೆಯ ಬೋಧನೆಗಳನ್ನು "ಚೈತನ್ಯ ಚರಿತಾಮೃತ" ಎಂಬುದರಲ್ಲಿ ಸಂಗ್ರಹಿಸಲಾಗಿದೆ.


ಗುರುನಾನಕ್

**ಗುರುನಾನಕ್ (ಸುಮಾರು 1469–1539) :** ಈ ಕಾಲದ ಮತ್ತೊಬ್ಬ ಭಕ್ತಿ ಪಂಥದ ಪ್ರತಿಪಾದಕ ಗುರುನಾನಕ್ ಚಿಕ್ಕ ವಯಸ್ಸಿನಿಂದಲೇ ಧಾರ್ಮಿಕ ಪ್ರವೃತ್ತಿಯುಳ್ಳವರಾಗಿದ್ದರು. ಗುರುನಾನಕರು ಹಿಂದಿನ ಪಾಕಿಸ್ತಾನದ 'ತಳವಂಡಿ' ಗ್ರಾಮದಲ್ಲಿ ಜನಿಸಿದರು. ಧೀರ್ಘಕಾಲ ದೇಶ ಪರ್ಯಟನೆ ನಡೆಸಿದ ನಂತರ ರಾವಿ ನದಿ ದಂಡೆಯ ಕರ್ತರಾ ಪುರದಲ್ಲಿ ಭಕ್ತಿಕೇಂದ್ರವನ್ನು ಸ್ಥಾಪಿಸಿದರು. ಅವರ ಅನುಯಾಯಿಗಳು ಎಲ್ಲ ಜಾತಿ ಮತಗಳ ಗಡಿಗಳನ್ನು ಮೀರಿ, ಲಿಂಗ ತಾರತಮ್ಯವಿಲ್ಲದೆ ಸಹಪಂಕ್ತಿ ಭೋಜನ ಮಾಡುತ್ತಿದ್ದರು. ನಾನಕರು ಸಹ ಪಂಕ್ತಿ ಪೋಷಿಸುವ 'ಲಂಗರ್' ಎನ್ನುವ ಭೋಜನ ಶಾಲೆ ಆರಂಭಿಸಿದ್ದರು. ಹೀಗೆ ಭಕ್ತಿ ಸಂತರಿಂದ ಕೂಡಿದ ಈ ಪವಿತ್ರ ಸ್ಥಳ ಧರ್ಮಶಾಲೆ ಎಂದು ಹೆಸರಾಯಿತು. ಇದನ್ನು ಈಗ ಗುರುದ್ವಾರ ಎಂದು ಕರೆಯಲಾಗುತ್ತಿದೆ. ದೇವರು ಒಬ್ಬನೇ ಎಂದು ಬೋಧಿಸಿದರಲ್ಲದೇ ಮೂರ್ತಿ ಪೂಜೆಯನ್ನು ಖಂಡಿಸಿದರು. ಸತ್ಕಾರ್ಯ ಮತ್ತು ಪರಿಶುದ್ಧ ಹಾಗೂ ನೀತಿಯುಕ್ತವಾದ ಜೀವನಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರು. ಅವರಿಗೆ ಹಿಂದೂ ಹಾಗೂ ಮುಸಲ್ಮಾನ ಶಿಷ್ಯರುಗಳಿದ್ದರು. ಇವರ ಶಿಷ್ಯರನ್ನು "ಸಿಖ್ಖರು" ಎಂದು ಕರೆಯಲಾಗಿದೆ. ಇವರ ಬೋಧನೆಗಳನ್ನು "ಗುರು ಗ್ರಂಥ ಸಾಹಿಬ್"ನಲ್ಲಿ ಸಂಗ್ರಹಿಸಲಾಗಿದ್ದು ಇದು ಸಿಖ್ಖರ ಪವಿತ್ರ ಗ್ರಂಥವಾಗಿದೆ. ಇದನ್ನು ಸಿಖ್ಖರ ಆದಿ ಗ್ರಂಥ ಎಂದೂ ಕರೆಯುತ್ತಾರೆ. ಇದನ್ನು ಗುರುದ್ವಾರದಲ್ಲಿಟ್ಟು ಪೂಜಿಸುತ್ತಾರೆ.


ಮೀರಾಬಾಯಿ


**ಮೀರಾಬಾಯಿ:** ಭಕ್ತಿಪಂಥಕ್ಕೆ ಹೆಸರಾದ ಮೀರಾಬಾಯಿ ಮೇವಾಡದ ರಜಪೂತ ರಾಜಕುಮಾರಿ. ಮೇವಾರದ ರಾಜಕುಮಾರನನ್ನು ವರಿಸಿದ್ದಳು. ಅನಂತರದಲ್ಲಿ ಲೌಕಿಕ ಬದುಕಿನಿಂದ ದೂರ ಸರಿದಳು. ಅಂದು ಅಸ್ಪೃಶ್ಯ ಕುಲವೆಂದು ಪರಿಗಣಿಸಿದ ಸಮುದಾಯದಲ್ಲಿ ಹುಟ್ಟಿ ಭಕ್ತಿಸಂತನಾದ ರವಿದಾಸ (ರಾಯ್‌ದಾಸ್) ಎಂಬುವರ ಶಿಷ್ಯೆಯಾದಳು. ಮೀರಾಬಾಯಿ ತನ್ನ ಬದುಕನ್ನೆಲ್ಲಾ ಶ್ರೀಕೃಷ್ಣನ ಆರಾಧನೆಗೆ ಮೀಸಲಿಟ್ಟು ಕೃಷ್ಣನನ್ನು ಕುರಿತು ಭಕ್ತಿಪೂರಿತವಾದ ಕೀರ್ತನೆಗಳನ್ನು ಬರೆದಳು. ಜಾತಿ ಶ್ರೇಷ್ಠತೆಯ ಮನೋಧರ್ಮವನ್ನು ತನ್ನ ಕೀರ್ತನೆಗಳಲ್ಲಿ ವಿಡಂಬಿಸಿದಳು. ಈ ಕೀರ್ತನೆಗಳು "ಭಜನೆಗಳು" ಎಂದು ಜನಪ್ರಿಯವಾದವು. ಇಡೀ ಭಾರತದಲ್ಲಿ ಈಗಲೂ ಈ ಭಜನೆಗಳನ್ನು ಹಾಡಲಾಗುತ್ತಿದೆ ಹಾಗೂ ಹೆಚ್ಚು ಖ್ಯಾತಿ ಗಳಿಸಿರುವುದು ರಾಜಸ್ತಾನ ಮತ್ತು ಗುಜರಾತ್ ರಾಜ್ಯಗಳಲ್ಲಿ. ಹೀಗೆ ಭಾರತದ ಹಲವಾರು ಭಾಗಗಳಲ್ಲಿ ಧರ್ಮ ಮತ್ತು ಜಾತಿಗಳ ನಡುವಣ ಅಂತರವನ್ನು ತೊಡೆಯಲು ಅನೇಕ ಸುಧಾರಕರು ಪ್ರಯತ್ನಿಸಿದರು.

ಮಹಾರಾಷ್ಟ್ರದ ಭೀಮಾ ನದಿಯ ದಡದಲ್ಲಿ ಪಂಡರಾಪುರದ ವಿಠೋಬನ ದೇವಾಲಯವು ಭಕ್ತಿ ಪಂಥದ ಕೇಂದ್ರವಾಗಿತ್ತು. ಜ್ಞಾನೇಶ್ವರ ಮತ್ತು ನಾಮದೇವ, ಏಕನಾಥ, ತುಕಾರಾಮ್ ಮತ್ತು ರಾಮದಾಸರು ಹೊಸ ಪಂಥದ ಸಂತರಲ್ಲಿ ಪ್ರಖ್ಯಾತರಾಗಿದ್ದರು. ಪುರಂದರದಾಸರು ಮತ್ತು ಕನಕದಾಸರು ಕರ್ನಾಟಕದ ಭಕ್ತಿ ಚಳವಳಿಯ ಪ್ರಮುಖರಾಗಿದ್ದರು. ಇವರದು ದಾಸ ಪರಂಪರೆ ಎಂದು ಪ್ರಸಿದ್ಧಿಯನ್ನು ಪಡೆದಿದೆ.

©KTBS Not to be republished

**ಸೂಫಿ ಸಂತರು:** ಸೂಫಿ ಸಂತರು ಪರ್ಷಿಯಾದಿಂದ ಬಂದು ಭಾರತದ ವಿವಿಧ ಭಾಗಗಳಲ್ಲಿ ನೆಲೆಸಿದರು. ಅವರನ್ನು ಪೀರ (ಗುರು) ಎಂದು ಕರೆಯುತ್ತಾರೆ. "ಸೂಫ್" ಎಂಬ ಸಾದಾ ಉಣ್ಣೆಯ ಅಂಗಿ ತೊಡುತ್ತಿದ್ದುದರಿಂದ ಮುಸ್ಲಿಂ ಸಂತರುಗಳನ್ನು "ಸೂಫೀ" ಎಂದು ಕರೆದರು. ಪ್ರೇಮ ಮತ್ತು ಭಕ್ತಿಯಿಂದ ಪರಮಾತ್ಮನನ್ನು ಅಥವಾ ಅಲ್ಲಾನನ್ನು ಸೇರಲು ಸಾಧ್ಯವೆಂದು ಬೋಧಿಸಿದರು. ಎಲ್ಲಾ ವರ್ಗದ ಜನರನ್ನು ಗೌರವಿಸಿ ಬಾಳುವುದರ ಮಹತ್ವವನ್ನು ಒತ್ತಿ ಹೇಳಿದರು. ಭಕ್ತಿಯಿಂದ ಕೂಡಿದ ನರ್ತನ ಮತ್ತು ಸಂಗೀತವು ನಮ್ಮನ್ನು ದೇವರ ಕಡೆ ಕೊಂಡೊಯ್ಯುತ್ತವೆ ಎಂದು ಸೂಫಿಗಳು ನಂಬಿದ್ದರು. ಅವರು ಉರ್ದು ಮತ್ತು ಹಿಂದಿ ಭಾಷೆಯಲ್ಲಿ ಭಕ್ತಿಯ ಮಹತ್ವವನ್ನು ಸಾರಲು ಅನೇಕ ಕೃತಿಗಳನ್ನು ರಚಿಸಿದರು. ಕುತುಬನ್ ಎಂಬಾತನ "ಮೃಗಾವತಿ" ಹಾಗೂ ಮಲ್ಲಿಕ್ ಮಹಮದ್ ಜಯ್ಸಿಯ "ಪದ್ಮಾವತ್" ಎಂಬ ಕಾವ್ಯಗಳು ಸೂಫಿ ಕವಿ ಪರಂಪರೆ ಉತ್ತಮ ಉದಾಹರಣೆಗಳಾಗಿವೆ. ಸೂಫಿ ಪರಂಪರೆಗೂ ಅಖಿಲ ಭಾರತ ವ್ಯಾಪ್ತಿ ಇದೆ. ಸೂಫಿ ಪಂಥದಲ್ಲಿ ಸುಮಾರು 12 ವಿವಿಧ ಪಂಗಡಗಳಿದ್ದು, ಅವುಗಳಲ್ಲಿ ನಾಲ್ಕು ಅತ್ಯಂತ ಪ್ರಮುಖವಾದವುಗಳಾಗಿವೆ. ಉತ್ತರ ಕರ್ನಾಟಕದ ಬೀದರ್, ಕಲಬುರಗಿ, ವಿಜಯಪುರ ಮುಂತಾದವು ಈ ಪರಂಪರೆಯ ಪ್ರಮುಖ ಕೇಂದ್ರಗಳು. ಉರುಸ್ ಆಚರಣೆಗಳಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳು ಭಕ್ತಿಯಿಂದ ಪಾಲ್ಗೊಳ್ಳುತ್ತಾರೆ. ಇಂದಿಗೂ ಈ ಆಚರಣೆ ಜೀವಂತವಾಗಿವೆ.

### ಶಿಶುನಾಳ ಶರೀಫ (ಸುಮಾರು 1819–1889)


**ಶಿಶುನಾಳ ಶರೀಫ್**

ಇಮಾಮ್–ಹಜೂಮಾ– ಇವರ ತಂದೆ–ತಾಯಿಗಳು ಇಂದಿನ ಗದಗ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಶಿಶುನಾಳದಲ್ಲಿ ಶರೀಫ್‌ರು 1819ರಲ್ಲಿ ಜನ್ಮ ತಳೆದರು ಖಾಜ್ಜಿಯ ಸಲಹೆಯ ಮೇರೆಗೆ ತಂದೆ ಇಮಾಮ್ ಸಾಹೇಬ ಮಗುವಿಗೆ 'ಮಹಮ್ಮದ್ ಶರೀಫ' ಎಂದು ನಾಮಕರಣ ಮಾಡಿದರು.

'ಶರೀಫ' ಪಾರ್ಸಿ ಶಬ್ಧ. ಉದಾತ್ತ ಧ್ಯೇಯಗಳ ಅಥವಾ ಉತ್ತಮ ಶೀಲ ಸ್ವಭಾವ ಹೊಂದಿ ಇತರರಿಂದ ಗೌರವಿಸಲ್ಪಡುವ ವ್ಯಕ್ತಿ ಎಂದರ್ಥ ಹೆಸರಿಗೆ ತಕ್ಕಂತೆಯೇ ಶರೀಫ ರೂಪುಗೊಂಡರು.

ಶಿಶುನಾಳ ಶರೀಫರು ಚಿಕ್ಕಂದಿನಿಂದಲೇ ಇಸ್ಲಾಂ, ವೀರಶೈವ ಹಾಗೂ ವೈದಿಕ ತತ್ವ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದರು. ತ್ರಿಕಾಲ ಜ್ಞಾನಿಯಾಗಿದ್ದ ಗೋವಿಂದಭಟ್ಟರು ಇವರ ಗುರುಗಳು. ಶಿಶುನಾಳದ ಮಕ್ಕಳಿಗಾಗಿ ಶರೀಫ ಸ್ಥಳೀಯ ಚಂದ್ರೇಶ್ವರ ದೇವಾಲಯದಲ್ಲಿ ಶಾಲೆ ತೆರೆಯುವ ಮೂಲಕ ಅವರಲ್ಲಿ ಧಾರ್ಮಿಕ ವಿಶಾಲ ಮನೋಭಾವ ಬೆಳೆಯಲು ಕಾರಣರಾದರು.

ಸಂಘ ಜೀವಿಯಾಗಿದ್ದು, ಶರೀಫರು ಶಿಶುನಾಳ ಪ್ರದೇಶದಲ್ಲಿ ನಡೆಯುತ್ತಿದ್ದ ಜಾತ್ರೆ, ಉತ್ಸವ, ಬಯಲಾಟ, ಮೊಹರಂ ಉತ್ಸವಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನತೆಗೆ ಸ್ಫೂರ್ತಿಯ ಸೆಲೆಯಾಗುತ್ತಿದ್ದರು. ಮೊಹರಂ ಹಿನ್ನೆಲೆಯ ಚಾರಿತ್ರಿಕ ಸಂಗತಿಗಳನ್ನು ಅನುಸರಿಸಿ ರಿವಾಯತ್ ನಡೆಸುವ ಮೂಲಕ ರಿವಾಯತ್ ಸಾಹಿತ್ಯದ ಹರಿಕಾರರಾದರು.

### ಪುರಂದರದಾಸರು (ಸುಮಾರು 1484–1564)

ದಾಸರೆಂದರೆ ಪುರಂದರದಾಸರಯ್ಯ–ಎಂದು ಗುರುಗಳಾದ ವ್ಯಾಸರಾಯರಿಂದ ಪ್ರಶಂಸೆಗೆ ಪಾತ್ರವಾಗಿರುವ ಪುರಂದರದಾಸರು ವೈಷ್ಣವ ಭಕ್ತಿ ಪಾರಮ್ಯದ ಹರಿ ಸಂಕೀರ್ತನಗಳ ಮುಖಾಂತರ ಕನ್ನಡ ಸಾಹಿತ್ಯ, ಕರ್ನಾಟಕ ಸಂಗೀತಕ್ಕೆ ಮೌಖಿಕ ಕೊಡುಗೆ ನೀಡಿ, 'ಕರ್ನಾಟಕ ಸಂಗೀತ ಪಿತಾಮಹ' ಎಂದೇ ಹೆಸರಾಗಿದ್ದಾರೆ

©KTBS Not to be re published

ಪುರಂದರರು ಇಂದು ಮಹಾರಾಷ್ಟ್ರದಲ್ಲಿರುವ ಪುರಂದರಘಡ ಆಗರ್ಭ ಶ್ರೀಮಂತ ವರ್ತಕ ಕುಟುಂಬದಲ್ಲಿ ಜನಿಸಿದರು. ವರದಪ್ಪನಾಯಕ ಮತ್ತು ಲಕ್ಷ್ಮಿದೇವಿ ಇವರ ತಂದೆ ತಾಯಿಗಳು. ಇವರ ಪೂರ್ವಾಶ್ರಮದ ಹೆಸರು ಸೀನಪ್ಪನಾಯಕ, ಚಿನ್ನದ ವ್ಯಾಪಾರ ಮಾಡುತ್ತಿದ್ದ ಸೀನಪ್ಪನಾಯಕ ಕಟ್ಟು ನಿಟ್ಟಿನ ವ್ಯವಹಾರಸ್ಥರಾಗಿದ್ದರು ಮುಂದೆ ತಮ್ಮ ಸತಿ ಸರಸ್ವತಿಭಾಯಿಯ ಒತ್ತಾಸೆಯಿಂದ ಮನಪರಿವರ್ತನೆಗೊಂಡು ಪುರಂದರದಾಸರಾಗಿ ಆಧ್ಯಾತ್ಮದತ್ತ ಸಾಗಿದರು.


**ಪುರಂದರದಾಸರು**

ಮಾಧ್ವಮತದ ಪ್ರಚಾರವನ್ನು ತಮ್ಮ ಕೀರ್ತನೆಗಳ ಮೂಲಕ ಕೈಗೊಂಡ ಪುರಂದರದಾಸರು ಅನೇಕ ಪವಿತ್ರ ಕ್ಷೇತ್ರಗಳನ್ನು ಸುತ್ತಿದರು. ತಿರುಪತಿ, ಶ್ರೀರಂಗಪಟ್ಟಣ, ಅರುಣಗಿರಿ, ಉಡುಪಿ, ಕಂಚಿ, ಕನಕಾಚಲ, ಕಾಶಿ, ಕುಂಭಕೋಣ, ಕೂಡಲಿಪುರ, ಹಸ್ತಿಗಿರಿ, ಕಾಳಹಸ್ತಿ, ಶ್ರೀಶೈಲ, ಘಟಿಕಾಚಲ, ಗದಗ, ಪಂಢರಪುರ, ಬೇಲೂರು, ಮನ್ನೂರು, ಮಳೂರು, ಮೇಲುಕೋಟೆ, ಹಂಪಿ, ಹರಿಹರ, ಮುಂತಾದ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿ ಪುರಂದರದಾಸರು ಜನಸಾಮಾನ್ಯರಿಗೆ ಭಕ್ತಿ ಮಾರ್ಗವನ್ನು ಬೋಧಿಸಿದರು.

ಪುರಂದರದಾಸರು ತಮ್ಮ ಸಂಕೀರ್ತನಗಳಲ್ಲಿ ಮುಖ್ಯವಾಗಿ ವೈಷ್ಣವ ಭಕ್ತಿ ಪಾರಮ್ಯ–ಪ್ರಪಕ್ತಿಯ ಜೊತೆಗೆ ಸಾಮಾಜಿಕ ಕಳಕಳಿ, ಡಾಂಭಿಕ ಭಕ್ತಿಯ ವಿಡಂಬನೆ, ಜೀವನ ತತ್ವಗಳ ಕುರಿತಾಗಿ ಅಭಿವ್ಯಕ್ತಿಪಡಿಸಿರುವುದನ್ನು ಕಾಣಬಹುದು. ಅವರು ಜಾತಿ ಮತಗಳನ್ನು ಖಂಡಿಸಿದರು. ಯಾಗ ಯಜ್ಞಗಳನ್ನು ತಿರಸ್ಕರಿಸಿ, ಮೂಢ ನಂಬಿಕೆಗಳನ್ನು ಅಲ್ಲಗಳೆದರು. ತೋರಿಕೆಯ ಭಕ್ತಿಯನ್ನು ತಿರಸ್ಕರಿಸಿದ ಅವರು ಆಂತರಿಕ ಹುಡುಕಾಟಕ್ಕೆ, ಆತ್ಮಶೋದನೆಗೆ ಪ್ರಾಮುಖ್ಯತೆಯನ್ನು ಕೊಟ್ಟರು. ಅಂತರಂಗ ಶುದ್ಧಿಯಾಗದೆ ಬಹಿರಂಗ ಶುದ್ಧಿ ವ್ಯರ್ಥವೆಂದು ತಿಳಿಸಿದರು. ಮನವ ತೊಳೆಯದೆ ಮಲವ ತೊಳೆಯುವುದರಿಂದೇನು ಪ್ರಯೋಜನವೆಂದು ಪ್ರಶ್ನಿಸಿದರು. ನೀರಿನಲ್ಲಿ ಕುಳಿತು ಧ್ಯಾನ ಮಾಡುವ ಡಾಂಭಿಕರನ್ನು ಬಕಪಕ್ಷಿಗಳಿಗೆ ಹೋಲಿಸಿದರು. ಮನದಲ್ಲಿ ದೃಢಭಕ್ತಿಯಿಲ್ಲದೆ ತನುವ ನೀರೊಳಗದ್ದುವುದು ವ್ಯರ್ಥವೆಂದು ಸ್ಪಷ್ಟಪಡಿಸಿದರು.

"ಈಸಬೇಕು ಇದ್ದು ಜೈಸಬೇಕು; ಮಾನವ ಜನ್ಮ ದೊಡ್ಡದು. ಇದನ್ನು ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ" ಎಂಬಂತಹ ಜೀವನ ತತ್ವಜ್ಞಾನವನ್ನು ನೀಡಿ ಪೌರುಷವಾದವನ್ನು ಹಾಸುಹೊಕ್ಕಾಗಿಸಿ, ಎಲ್ಲರ ಮನಮನಗಳಲ್ಲಿ ಭಿತ್ತಿ–ಬೆಳಸಿದರು. ಪುರಂದರ ಒಂದೊಂದು ಸಂಕೀರ್ತನೆಯೂ ಮನುಜ ಕುಲಕ್ಕೆ ಜ್ಞಾನ ದೀವಿಗೆಗಳಾಗಿ ಮನುಷ್ಯ ಬದುಕನ್ನು ಸಾರ್ಥಕವಾಗಿಸುವ ಬತ್ತದ ಸೆಲೆಯಾಯಿತು. ಅವರ ಜ್ಞಾನದ ಈ ಭಂಡಾರವೆಲ್ಲ ಕನ್ನಡದ ಪುರಂದರೋಪನಿಷತ್ತಾಗಿ "ದಾಸರೆಂದರೆ ಪುರಂದರ ದಾಸರಯ್ಯ" ಎಂಬಂತಹ ಖ್ಯಾತಿಗೆ ಕಾರಣವೂ ಆಯಿತು.

**ಕನಕದಾಸರು :**

ಬೀರಪ್ಪ ಮತ್ತು ಬಚ್ಚಮ್ಮ ಕನಕರ ತಂದೆ ತಾಯಿಗಳು ಶ್ರೀ ವೈಷ್ಣವ ಮತಾನುಯಾಯಿಗಳಾಗಿದ್ದರು ತನಗೆ ಜನಿಸಿದ ಓರ್ವನೇ ಪುತ್ರನಿಗೆ ತನ್ನ ಕುಲದೈವ ವೆಂಕಟಪತಿಯ ಹೆಸರಿಡಬೇಕೆಂದು ತಿಮ್ಮಪ್ಪನೆಂಬುದಾಗಿ ನಾಮಕರಣ ಮಾಡಿದರು.

ಒಮ್ಮೆ ತಿಮ್ಮಪ್ಪನಿಗೆ, ಭೂಗತವಾಗಿದ್ದ ಅಪಾರ ಧನರಾಶಿಯು ಕರಗತವಾದುದ್ದನ್ನು ನೋಡಿ ಅದೃಷ್ಟವಂತ ನೆಂದು ಅವನನ್ನು ಜನರು ಕನಕನೆಂದೇ ಕರೆದರು! ಕನಕರು ತಮಗೆ ದೊರೆತ ದ್ರವ್ಯವನ್ನು ದುರ್ವಿನಿಯೋಗ ಮಾಡದೆ ಕಾಗಿನೆಲೆಯಲ್ಲಿ ಪ್ರಸಿದ್ಧ ಆದಿಕೇಶವ ದೇವಾಲಯವನ್ನು ನಿರ್ಮಿಸಿದರೆಂದು ಹೇಳಲಾಗಿದೆ.

©KTBS Not to be republished

ಬಾಡ ಮತ್ತು ಬಂಕಾಪುರದ ಸ್ಥಳೀಯ ನಾಯಕನಾಗಿದ್ದ ಕನಕರು ಚಿಕ್ಕಂದಿನಿಂದಲೂ ಯುದ್ಧ ಪ್ರವೀಣನಾಗಿದ್ದರು. ಒಮ್ಮೆ ಯುದ್ಧ ರಂಗದಲ್ಲಿ ತೀವ್ರವಾಗಿ ಗಾಯಗೊಂಡ ಕನಕರು ಅಧಿಕಾರದ ಹಾಗೂ ಒಟ್ಟಾರೆ ಬದುಕಿನ ಅನಿಶ್ಚತತೆಯ ಬಗೆಗೆ ಜಿಗುಪ್ಸೆಯನ್ನು ತಳೆದು, ಲೌಕಿಕ ಸುಖವನ್ನು ತ್ಯಜಿಸಿ ದಾಸಮಾರ್ಗವನ್ನು ಅನುಸರಿಸಿ ಕನಕದಾಸರಾದರೆಂದು ಪ್ರತೀತಿಯೊಂದು ಹೇಳುತ್ತದೆ.


ಕನಕದಾಸ

ಒಬ್ಬ ಭಕ್ತಿ ಸಂತರಾಗಿ ಕನಕದಾಸರು ಅಂದಿನ ಸಮಾಜದಲ್ಲಿದ್ದ ಮೇಲು-ಕೀಳು, ಉಚ್ಚ-ನೀಚ ಪರಿಭಾವನೆಯನ್ನು ಹೋಗಲಾಡಿಸಲು ಹೋರಾಡಿದ್ದಾರೆ. ಡಾಂಭಿಕ ಭಕ್ತಿಯನ್ನು ತೆಗಳಿದ್ದಾರೆ. ನೈಜ ಭಕ್ತಿಮಾರ್ಗದಿಂದ ಜನರು ದೈವಸಾನಿಧ್ಯವನ್ನು ಪಡೆಯಬಹುದೆಂದು ಬೋಧಿಸಿದ್ದಾರೆ. ಭಕ್ತಿ ಮಾರ್ಗದ ಸರಳತೆಯನ್ನು ತೋರಿಸಿದ್ದಾರೆ. ಮುಖ್ಯವಾಗಿ ದೈವಸಾಕ್ಷಾತ್ಕಾರಕ್ಕೆ ಉತ್ತಮ ಜಾತಿಯಲ್ಲೇ ಹುಟ್ಟಿರಬೇಕೆನ್ನುವ ಅರ್ಹತೆಯನ್ನು ಪ್ರತಿಪಾದಿಸುತ್ತಿದ್ದ ಪುರೋಹಿತ ವರ್ಗಗಳನ್ನು ತಮ್ಮ ಕೀರ್ತನೆಗಳ ಮೂಲಕ ಒಡೆದುಹಾಕಿದ್ದಾರೆ.

ಕನಕದಾಸರು ಒಬ್ಬ ಭಕ್ತಿ ಕವಿಯೂ ಆಗಿದ್ದು ಅಸಂಖ್ಯ ಸಂಕೀರ್ತನೆಗಳ ಜೊತೆಗೆ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ ಅವುಗಳು-ಮೋಹನತರಂಗಿಣಿ, 'ನಳಚರಿತ್ರೆ', 'ರಾಮಧಾನ್ಯ ಚರಿತೆ' ಮತ್ತು 'ಹರಿಭಕ್ತಿಸಾರ' ಮುಖ್ಯವಾದವುಗಳಾಗಿವೆ.

**ಭಕ್ತಿಚಳವಳಿಯ ಪರಿಣಾಮಗಳು**

ಹಿಂದೂಗಳು ಮತ್ತು ಮುಸ್ಲಿಂ ಸಮುದಾಯಗಳಲ್ಲಿದ್ದ ಮೌಢ್ಯಾಚರಣೆಗಳ ಅರ್ಥಹೀನತೆಯನ್ನು ಸಾರುವುದು ಹಿಂದೂ ಮತ್ತು ಮುಸಲ್ಮಾನರಲ್ಲಿ ಮಧುರ ಬಾಂಧವ್ಯವನ್ನು ಉಂಟು ಮಾಡುವುದು ಭಕ್ತಿ ಪಂಥದ ಎರಡು ಮುಖ್ಯ ಉದ್ದೇಶಗಳಾಗಿದ್ದವು. ಹಿಂದೂ ಸಮಾಜದಲ್ಲಿನ ಅನೇಕ ನ್ಯೂನತೆಗಳನ್ನು ಸುಧಾರಕರು ನಿವಾರಿಸಿದರು. ಭಾರತದ ಪ್ರಾದೇಶಿಕ ಭಾಷೆಗಳು ವಿಕಾಸಗೊಂಡವು. ಅವರು ದೇಶಿ ಭಾಷೆಗಳಲ್ಲಿ ಬರೆದು ಅವುಗಳ ಬೆಳವಣಿಗೆಗೆ ಸಹಾಯ ಮಾಡಿದರು. ಈ ಚಳವಳಿಯು ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾಗಿ ಬಹುಸಂಸ್ಕೃತಿಗಳ ಸಂಗಮ ಎಂಬ ಹೆಗ್ಗಳಿಕೆಯನ್ನು ಭಾರತಕ್ಕೆ ತಂದುಕೊಟ್ಟಿದೆ.

**ನಿಮಗಿದು ತಿಳಿದಿರಲಿ :**

ಭಕ್ತಿ ಪಂಥದಲ್ಲಿ ಸಂತರು ತಾವಾಡುವ ಭಾಷೆಯಲ್ಲಿಯೇ ಕೀರ್ತನೆಗಳನ್ನು ಹಾಗೂ ಭಜನೆಗಳನ್ನು ರಚಿಸಿದರು. ಇದರಿಂದಾಗಿ ಭಾರತೀಯ ಭಾಷೆಗಳಲ್ಲಿ ದೇಸೀ ಸಾಹಿತ್ಯ ಅಭಿವೃದ್ಧಿಗೊಂಡಿತು. ಹಿಂದಿಯಲ್ಲಿ ಸೂರದಾಸರು "ಸೂರ್ ಸಾಗರ್"ನ್ನು, ತುಳಸೀದಾಸರು "ರಾಮಚರಿತ ಮಾನಸ"ವನ್ನು ರಚಿಸಿದರೆ, ಮರಾಠಿಯಲ್ಲಿ ಅಭಂಗಗಳೆಂಬ ಕೀರ್ತನೆಗಳ ಜೊತೆಗೆ ಜ್ಞಾನದೇವರ "ಜ್ಞಾನೇಶ್ವರಿ" ಕಾವ್ಯವು ರಚನೆಯಾದವು.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.**

1. ಭಕ್ತಿ ಎಂದರೆ ದೇವರಲ್ಲಿ ಶುದ್ಧ ____________ .

©KTBS Not to be republished

2. ರಮಾನಂದರ ಶಿಷ್ಯರಲ್ಲಿ ಪ್ರಸಿದ್ಧರಾದವರು ____________ .

3. ಕಬೀರರ ಅನುಯಾಯಿಗಳನ್ನು ____________ ಎಂದು ಕರೆಯುತ್ತಾರೆ.

4. ಚೈತನ್ಯರ ಆಧ್ಯಾತ್ಮಿಕ ಚಿಂತನೆಯ ಸಂಗ್ರಹ ________ .

**II. ಕೆಳಕಂಡ ಪ್ರಶ್ನೆಗಳಿಗೆ ಮಿತ್ರರೊಂದಿಗೆ ಚರ್ಚಿಸಿ ಉತ್ತರಿಸಿರಿ.**

1. ಕಬೀರರ ಬೋಧನೆ ಯಾವುವು?
2. ಸಿಖ್ಖರು ಯಾರು ? ಅವರ ಗ್ರಂಥ ಯಾವುದು?
3. ಪುರಂದರದಾಸರ ಭಕ್ತಿಯನ್ನು ಕುರಿತು ಪ್ರಸ್ತಾಪಿಸಿರುವ ಅಂಶವನ್ನು ವಿವರಿಸಿ.
4. ಭಕ್ತಿ ಚಳುವಳಿಯಿಂದಾದ ಪರಿಣಾಮಗಳಾವುವು?

**III. ಚಟುವಟಿಕೆಗಳು:**

1. ಭಕ್ತಿ ಸುಧಾರಕರ ಜೀವನ ಚರಿತ್ರೆಯನ್ನು ತಿಳಿದುಕೊಳ್ಳಿ.
2. ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ ಸುಧಾರಕರುಗಳ ಪೂರ್ಣ ಮಾಹಿತಿ ಪಡೆದುಕೊಳ್ಳಿ.

**IV. ಯೋಜನೆಗಳು :**

1. ಭಕ್ತಿ ಪಂಥದ ಸುಧಾರಕರುಗಳಲ್ಲಿ ಒಬ್ಬರ ಬಗ್ಗೆ ಒಂದು ವಿಸ್ತಾರವಾದ ಯೋಜನೆ ತಯಾರಿಸಿ.
2. ಕನಕದಾಸರ, ಪುರಂದರದಾಸರ ಕೀರ್ತನೆಗಳಲ್ಲಿ ಅಡಕವಾಗಿರುವ ಮೌಲ್ಯಗಳ ಬಗ್ಗೆ ಶಿಕ್ಷಕರ ನೆರವಿನೊಂದಿಗೆ ಚರ್ಚಿಸಿ.
3. ಕನಕದಾಸರ ಮತ್ತು ಪುರಂದರದಾಸರ ಕೀರ್ತನೆಗಳನ್ನು ಹಾಡಿ ಮತ್ತು ತಿಳಿದುಕೊಳ್ಳಿ.

◈ ◈ ◈

| | |
|---|---|
| ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರೂ<br>ಪುಲ್ಲಲೋಚನ ಶ್ರೀಕೃಷ್ಣನ ದಿವ್ಯ ನಾಮವೆಂಬ<br>ಎತ್ತು ಹೊರುವುದಲ್ಲ – ಹೊತ್ತು ಮಾರುವುದಲ್ಲಾ<br>ಒತ್ತೊತ್ತಿ ಗೋಣಿಯೊಳ್ ತುಂಬುವುದಲ್ಲಾ<br>ಎತ್ತ ಹೋದರೂ ಬಾಡಿಗೆ ಸುಂಕವಿದಕಿಲ್ಲಾ<br>ಹತ್ತೆಂಟು ಸಾವಿರಕ್ಕೆ ಬೆಲೆಯಿಲ್ಲದಂತಹ.<br><br>***ದೇವಾಲಯ ಸಂಸ್ಕೃತಿಯನ್ನು ಪ್ರಶ್ನಿಸಿದ ಪುರಂದರದಾಸರ ಕೀರ್ತನೆಯ ಒಂದು ಭಾಗ.*** | ಕುಲ ಕುಲ ಕುಲವೆನ್ನುತಿಹರೊ...<br>ಕೆಸರೊಳು ತಾವರೆ ಪುಟ್ಟಲು ಆದ ತಂದು<br>ಕುಸುಮನಾಭನಿಗೆ ಅರ್ಪಿಸರೇನಯ್ಯ<br>ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ<br>ವಸುಧೆಯೊಳಗೆ ಭೂಸುರರುಣ್ಣರೇನಯ್ಯ.<br><br>***ಕುಲದ ಶ್ರೇಷ್ಠತೆಯನ್ನು ವಿರೋಧಿಸಿದ ಕನಕದಾಸರ ಕೀರ್ತನೆಯ ಒಂದು ಭಾಗ.*** |

Not to be re published ©KTBS

### ಅಧ್ಯಾಯ–7

# ಮಧ್ಯಯುಗದ ಯುರೋಪ್

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಮಧ್ಯಯುಗದ ಯುರೋಪಿನ ಸ್ಥಿತಿಗತಿಗಳು
- ಊಳಿಗಮಾನ್ಯ ವ್ಯವಸ್ಥೆಯ ಅರ್ಥ
- ಊಳಿಗಮಾನ್ಯ ವ್ಯವಸ್ಥೆಯ ವಿವಿಧ ರೂಪಗಳು
- ಊಳಿಗಮಾನ್ಯ ವ್ಯವಸ್ಥೆಯ ಗುಣ ದೋಷಗಳು
- ಊಳಿಗಮಾನ್ಯ ವ್ಯವಸ್ಥೆಯ ಪತನ

## ರೋಮನ್ ಸಾಮ್ರಾಜ್ಯದ ಪತನ

ಸಾ.ಶ.ಪೂ. 395ರವರೆಗೆ ಏಕೀಕೃತವಾಗಿದ್ದ ರೋಮನ್ ಸಾಮ್ರಾಜ್ಯವು, ನಂತರ ಎರಡು ಸಾಮ್ರಾಜ್ಯಗಳಾದವು. ಸಾ.ಶ.ಪೂ. 395ರಿಂದ 476ರಲ್ಲಿ ರೋಮ್ಯುಲಸ್ ಆಗಸ್ಟ್ಯುಲಸ್‌ನ ಪದಚ್ಯುತಿಯವರೆಗೆ ಪಶ್ಚಿಮ ಸಾಮ್ರಾಜ್ಯವು ಅಸ್ತಿತ್ವದಲ್ಲಿತ್ತು. ಸಾ.ಶ.ಪೂ. 395ರಿಂದ 1453ವರೆಗೆ ಪೂರ್ವರೋಮನ್ ಸಾಮ್ರಾಜ್ಯವು ಅಸ್ತಿತ್ವದಲ್ಲಿತ್ತು. ಪೂರ್ವರೋಮನ್ ಸಾಮ್ರಾಜ್ಯವನ್ನು 'ಬೈಜಾಂಟೈನ್ ಸಾಮ್ರಾಜ್ಯ'ವೆಂದೂ ಕರೆಯಲಾಗುತ್ತದೆ. ಸಾ.ಶ.ಪೂ. 5ನೇ ಶತಮಾನದಿಂದ 15ನೆಯ ಶತಮಾನದವರೆಗೆ ಯೂರೋಪಿನ ಮಧ್ಯಯುಗವೆಂದು ಗುರುತಿಸಲಾಗಿದೆ. ಪಶ್ಚಿಮ ರೋಮನ್ ಸಾಮ್ರಾಜ್ಯದ ಪತನದೊಂದಿಗೆ ಮಧ್ಯಯುಗದ ಪ್ರಾರಂಭವನ್ನು ಗುರುತಿಸಲಾಗುತ್ತದೆ. ಸಾಮಾನ್ಯವಾಗಿ ಟರ್ಕರು ಕಾನ್‌ಸ್ಟೆಂಟಿನೋಪಲ್‌ನ್ನು ಸಾ.ಶ.ಪೂ. 1453ರಲ್ಲಿ ವಶಪಡಿಸಿಕೊಂಡ ವರ್ಷವನ್ನು ಮಧ್ಯಯುಗದ ಕೊನೆಯೆಂದು ಭಾವಿಸಲಾಗಿದೆ.

ಮೊದಲಿಗೆ ಇಡೀ ಮಧ್ಯಯುಗವನ್ನು 'ಅಂಧಕಾರ ಯುಗ'ವೆಂದು ಕರೆಯಲಾಗುತ್ತಿತ್ತು. ಮಧ್ಯಯುಗವನ್ನು ಮೂರು – ಆರಂಭಿಕ, ಮಧ್ಯ ಮತ್ತು ಕೊನೆ – ಕಾಲಘಟ್ಟಗಳೆಂದು ವಿಭಜಿಸಿದ ನಂತರ 'ಆರಂಭಿಕ ಕಾಲಘಟ್ಟ'ವನ್ನು ಮಾತ್ರ ಈ ರೀತಿ ಗುರುತಿಸಲಾಗುತ್ತಿದೆ.

ಗ್ರೀಸ್‌ನ ನಗರ ರಾಜ್ಯಗಳ ರೀತಿಯಲ್ಲೇ ರೋಮ್ ಸಹ 'ಪೆಟ್ರಿಷಿಯನ್'ರೆಂಬ ಜಮೀನ್ದಾರಿ ಆಳುವ ವರ್ಗದ ಹಿಡಿತದಲ್ಲಿತ್ತು. ಎಲ್ಲಾ ರಾಜಕೀಯ ಹಕ್ಕುಗಳನ್ನು 'ಸೆನೆಟ್' ಹೆಸರಿನಲ್ಲಿ ಇವರು ಕೇಂದ್ರೀಕರಿಸಿಕೊಂಡಿದ್ದರು. ರೋಮ್‌ನ ಬಡವರನ್ನು 'ಪ್ಲೆಬಿಯನ್'ರೆಂದು ಕರೆಯಲಾಗುತ್ತಿತ್ತು. ಇವರಿಗೆ ಯಾವುದೇ ರಾಜಕೀಯ ಹಕ್ಕುಗಳಿರಲಿಲ್ಲ. ಇವರು ಗುಲಾಮರಾಗಿದ್ದರು.

'ಗುಲಾಮಗಿರಿ'ಯ ಹೆಸರಲ್ಲಿ ಆಳುವ 'ಗುಲಾಮ ಒಡೆಯರು' ಗುಲಾಮರನ್ನು ತಮ್ಮ ಖಾಸಗಿ ಆಸ್ತಿಯನ್ನಾಗಿ ಮಾಡಿಕೊಂಡಿದ್ದರು. ಗುಲಾಮರ ಶ್ರಮವನ್ನು ಈ ಒಡೆಯರು ದೋಚುತ್ತಿದ್ದರು.ಪ್ರತಿ ಗುಲಾಮನೂ ಸಹ ಒಬ್ಬ ನಿರ್ದಿಷ್ಟ ಒಡೆಯನ ಆಸ್ತಿಯಾಗಿದ್ದನು. ಗುಲಾಮರ ಕೆಲಸವು ಅತ್ಯಂತ ನಿಕೃಷ್ಟವಾಗಿತ್ತು. ಚಾಟಿಯ ಭೀತಿಯಲ್ಲೇ ಕೆಲಸ ಮಾಡಬೇಕಿತ್ತು. ಕಲೆ, ಸಂಸ್ಕೃತಿ ಮತ್ತು ತತ್ವಶಾಸ್ತ್ರದಂತಹ ಎಲ್ಲವೂ ಗುಲಾಮರ ದುಡಿಮೆಯಿಂದಲೇ ಸಾಧ್ಯವಾದದ್ದು ಏಕೆಂದರೆ, ಗುಲಾಮರು ದುಡಿಯತ್ತಿದ್ದರು ಮತ್ತು ಗುಲಾಮ ಒಡೆಯರು ಬಿಡುವಾಗಿದ್ದರು.

ರೋಮನ್ ಸಾಮ್ರಾಜ್ಯದ ಪತನದ ನಂತರ ಯುರೋಪಿನಲ್ಲಿ ಮಧ್ಯಯುಗ ಆರಂಭವಾಯಿತು. ಗ್ರೀಸ್, ರೋಮ್‌ಗಳ ಸತ್ವಯುತ ಸಾಂಸ್ಕೃತಿಕ ಸಾಧನೆಗಳ ನಂತರ ಒಂದು ಸಾವಿರ ವರ್ಷದ ಐರೋಪ್ಯ

©KTBS Not to be republished

ಇತಿಹಾಸದಲ್ಲಿ ಸಾಂಸ್ಕೃತಿಕವಾಗಿ ಬರಡುತನ ಕಾಣಿಸಿತು. ಇದನ್ನು ಅಂಧಕಾರಯುಗ (Dark Ages) ಎಂದೂ ಕರೆಯುತ್ತಾರೆ. ಇದು ಜಗತ್ತಿನ ಇತಿಹಾಸದಲ್ಲಿ ಮಹತ್ವದ ಸ್ಥಿತ್ಯಂತರದ ಕಾಲ. ಈ ಕಾಲದಲ್ಲಿ ಬರ್ಬರ ಜನಾಂಗಗಳ ಉದಯದೊಂದಿಗೆ ಊಳಿಗಮಾನ್ಯ ಪದ್ಧತಿಯು ಜನ್ಮ ಪಡೆಯಿತು.

**ಊಳಿಗಮಾನ್ಯ ಪದ್ಧತಿ**

> **ಚಟುವಟಿಕೆ :**
> ನಿಮ್ಮ ಗ್ರಾಮದ ಗ್ರಾಮಲೆಕ್ಕಿಗರನ್ನು ಭೇಟಿ ಮಾಡಿ ಭೂ ಒಡೆತನ ಪಡೆಯುವ ಬಗ್ಗೆ ಮಾಹಿತಿ ಸಂಗ್ರಹಿಸಿ.

ರೋಮನ್ ಸಾಮ್ರಾಜ್ಯದ ಪತನಾನಂತರ ಯುರೋಪಿನ ಹಲವಾರು ದೇಶಗಳ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಗಳು ಅಸ್ತವ್ಯಸ್ತವಾದವು. ರೋಮ್‌ನ ಚಕ್ರವರ್ತಿಯಾದ ಚಾರ್ಲ್‌ಮನ್‌ನ ಮರಣಾನಂತರ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಅರಾಜಕತೆಯ ಅವ್ಯವಸ್ಥೆ ತಾಂಡವಾಡತೊಡಗಿ ಪ್ರಾಣ, ಆಸ್ತಿಪಾಸ್ತಿಗಳಿಗೆ ರಕ್ಷಣೆ ಇಲ್ಲದಂತಾಯಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಹೊಸ ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆ ಪಶ್ಚಿಮ ಯುರೋಪಿನಲ್ಲಿ ಉದಯವಾಯಿತು.

ಉಳುಮೆಗೆ ಯೋಗ್ಯವಾದ ಭೂಮಿಯನ್ನು ಕೃಷಿ ಮಾಡುವ ರೈತರನ್ನು ಜೀತ ವ್ಯವಸ್ಥೆಗೆ ಒಳಪಡಿಸಲಾಯಿತು. ಇವರ ಮೇಲೆ ಅನೇಕ ಬಗೆಯ ನಿಯಂತ್ರಣಗಳನ್ನು ಹೇರಲಾಗಿತ್ತು. ಅವರ ಶ್ರಮಕ್ಕೆ, ಉತ್ಪಾದನೆಗೆ ಸರಿಯಾದ ಪ್ರತಿಫಲ ಸಿಗುತ್ತಿರಲಿಲ್ಲ. ಬಾಡಿಗೆಯನ್ನು ಇವರಿಗೆ ಹಣದ ರೂಪದಲ್ಲಿ ನೀಡುವಾಗಲೂ ಆಳುವವರು ಅಧಿಕಾರದ ಧರ್ಪವನ್ನು ತೋರುತ್ತಿದ್ದರು. ಇದು ಊಳಿಗಮಾನ್ಯ ವ್ಯವಸ್ಥೆ.

ಊಳಿಗಮಾನ್ಯ ವ್ಯವಸ್ಥೆಯು ರಾಜಕೀಯ ಹಾಗೂ ಆರ್ಥಿಕ ತಳಹದಿಯಲ್ಲಿ ರೂಪಿತವಾದ ಭೂಮಿಯ ಒಡೆತನದ ವ್ಯವಸ್ಥೆಯಾಗಿತ್ತು. ಮಧ್ಯಯುಗದಲ್ಲಿ ಯುರೋಪಿನ ಒಬ್ಬ ವ್ಯಕ್ತಿಯ ಸ್ಥಾನಮಾನಗಳು ಅವನು ಹೊಂದಿರುವ ಭೂಮಿಯ ಪ್ರಮಾಣದಿಂದ ನಿರ್ಧಾರವಾಗುತ್ತಿತ್ತು. ಅದಕ್ಕೆ ಕೇವಲ ಭೂಮಿಯೊಂದೇ ಆದಾಯದ ಮೂಲವಾಗಿತ್ತು. ಸಹಜವಾಗಿ ಆ ಸಮಯದಲ್ಲಿ ರಾಜನು ತನ್ನ ವ್ಯಾಪ್ತಿಗೆ ಬರುವ ಭೂಮಿಯ ಒಡೆಯನಾಗಿದ್ದನು. ರಾಜನು ನೋಬಲರಿಗೆ ಭೂಮಿಯನ್ನು ಹಂಚುತ್ತಿದ್ದನು. ನೋಬಲರು ಕೆಳಹಂತದ ವ್ಯಕ್ತಿಗಳಿಗೆ ಭೂಮಿಯನ್ನು ಹಂಚುತ್ತಿದ್ದರು. ಒಟ್ಟಾರೆ ಹೇಳುವುದಾದರೆ ಊಳಿಗಮಾನ್ಯ ಪದ್ಧತಿಯು ನಿರ್ದಿಷ್ಟ ಸೇವೆಗಳನ್ನು ಹೊಂದುವುದರ ಸಲುವಾಗಿ ಹುಟ್ಟಿಕೊಂಡ ವ್ಯವಸ್ಥೆಯಾಗಿತ್ತು.

ಊಳಿಗಮಾನ್ಯ ಪದ್ಧತಿಯು ಬಲಿಷ್ಠ ಹಾಗೂ ಅಶಕ್ತರ ನಡುವೆ ಇದ್ದಂತಹ ಒಪ್ಪಂದ ಎನ್ನಬಹುದು. ಯಾವ ಬಲಿಷ್ಠನಾದ ವ್ಯಕ್ತಿ ಭೂಮಿಯ ಒಡೆತನವನ್ನು ಹೊಂದಿದ್ದನೋ ಅವನನ್ನು 'ಧಣಿ' (Nobel) ಎಂದೂ, ಭೂಮಿಯನ್ನು ಹಿಡುವಳಿಯಾಗಿ ಪಡೆದಂತಹ ಅಶಕ್ತ ವ್ಯಕ್ತಿಯನ್ನು 'ಹಿಡುವಳಿದಾರ' (Vassal) ಎಂದೂ ಕರೆಯುವ ರೂಢಿಯಿತ್ತು. ಬಲಿಷ್ಠನಾದ ಧಣಿಯು ಅಶಕ್ತನನ್ನು ರಕ್ಷಿಸುವ ಹೊಣೆಯನ್ನು ಹೊಂದಿದ್ದರ ಜೊತೆಗೆ ಹಿಡುವಳಿದಾರರಿಂದ ನಿರ್ದಿಷ್ಟವಾದ ಸೇವೆಗಳನ್ನು ಪಡೆಯುತ್ತಿದ್ದನು.

ಪ್ರಮುಖವಾಗಿ ಊಳಿಗಮಾನ್ಯ ವ್ಯವಸ್ಥೆಯು ಪರಸ್ಪರ ಕೊಟ್ಟು ತೆಗೆದುಕೊಳ್ಳುವ ವ್ಯವಸ್ಥೆಯಾಗಿತ್ತು. ಮಧ್ಯಯುಗದಲ್ಲಿ ಯುರೋಪಿನ ಎಲ್ಲ ವರ್ಗಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಈ ವ್ಯವಸ್ಥೆಯ ಪಾದಾರ್ಪಣವಾಯಿತು. ಆದರೆ ವಿಪರ್ಯಾಸವೆಂದರೆ ಈ ವ್ಯವಸ್ಥೆಯ ಸ್ವರೂಪ, ಪ್ರಕಾರಗಳು ಒಂದೇ ರೀತಿಯಾಗಿ ಕಂಡುಬರಲಿಲ್ಲ.

ಯೂರೋಪಿನ ಊಳಿಗಮಾನ್ಯ ವ್ಯವಸ್ಥೆಯ ಆರಂಭಿಕ ಶತಮಾನಗಳಲ್ಲಿ ಭೂ ಮಂಜೂರಾತಿಯು, ಜೀವನಪೂರ್ತಿ ಅನುಭವಿಸಬಹುದಾದ ಪೂರ್ಣ ಹಕ್ಕುಗಳುಳ್ಳ ಉಂಬಳಿಗಳಾಗಿದ್ದವು. ಆದರೆ 8ನೆಯ ಶತಮಾನದ ಉತ್ತರಾರ್ಧದ ಹೊತ್ತಿಗೆ ರಾಜರು ಭೂಮಿಯ ಮಾಲೀಕತ್ವದ ಹಕ್ಕುಗಳನ್ನು ತಮ್ಮಲ್ಲಿಯೇ ಉಳಿಸಿಕೊಂಡು ಅದನ್ನು ಬಳಸುವ ಹಕ್ಕನ್ನು ಸಾಮಂತ ಅಥವಾ ಊಳಿಗದವರಿಗೆ ನೀಡುವಂತಹ ಪದ್ಧತಿ ಬಂತು. ಇದೇ ರೀತಿ ಚರ್ಚಿನ ಭೂಮಿಗಳನ್ನೂ ನೀಡಲಾಯ್ತು. ಇದೇ ಮಾದರಿಯನ್ನು ಸಣ್ಣ ರಾಜರುಗಳೂ

ಅನುಸರಿಸಲು ಆರಂಭಿಸಿದರು. 9ನೆಯ ಶತಮಾನದ ನಂತರ ಉಂಬಳಿಗಳು ವಂಶಪಾರಂಪರ್ಯವಾದವು. ಚರ್ಚ್ ಬಹುತೇಕ ಊಳಿಗಮಾನ್ಯವಾಯಿತು.

ದೇಣಿಗೆ (ಉಂಬಳಿ)ಗಳ ಮೇಲೆ ಸಾಮಂತರ ಹಕ್ಕುಗಳು ಕ್ರಮೇಣ ಹೆಚ್ಚುತ್ತಾ ಹೋದವು ಮತ್ತು ಇವು ಅನುವಂಶೀಯವಾದವು. ಅವಿಭಜಿತ ಉಂಬಳಿಗಳನ್ನು ರಕ್ಷಿಸಿಕೊಳ್ಳುವ ಹಿನ್ನೆಲೆಯಲ್ಲಿ ಹಿರಿಯ ಮಗನ ಪ್ರಧಾನತೆ (primogeniture) ಜಾರಿಗೆ ಬಂತು. ಇದರಲ್ಲಿ ಸಾಕಷ್ಟು ಬದಲಾವಣೆಗಳಾಗಿ ಒಳ-ಉಂಬಳಿಗಳ ವ್ಯವಸ್ಥೆ ಬೆಳೆಯಿತು. ಅಂದರೆ ರಾಜರಿಂದ ಉಂಬಳಿ ಪಡೆಯುತ್ತಿದ್ದ ಸಾಮಂತರು ತಾವೇ ಸ್ವತಃ ಬೇರೆಯವರಿಗೆ ಉಂಬಳಿಗಳನ್ನು ನೀಡುವ ಅಥವಾ ಸಾಮಂತರನ್ನು ನೇಮಕ ಮಾಡುವ ಹಂತಕ್ಕೆ ಬದಲಾದರು. ಇಂತಹ ಆರ್ಥಿಕತೆಗೆ ಪೂರ್ಣ ಆಧಾರವಾಗಿದ್ದವರು ಜೀತದಾಳುಗಳ ಹಾಗಿದ್ದ ರೈತರು.

**ಊಳಿಗಮಾನ್ಯ ಪದ್ಧತಿಯ ಸ್ವರೂಪ ಮತ್ತು ಪ್ರಕಾರಗಳು (ಪ್ರಭು ನಿಷ್ಠಾ ಪ್ರತಿಜ್ಞೆ)**

ಹಿಡುವಳಿದಾರನು ಹೊಂದಿದ್ದ ಭೂಮಿಯನ್ನು 'ಉಂಬಳಿ' ಎನ್ನುತ್ತಿದ್ದರು. ಈ ವ್ಯವಸ್ಥೆಯು ಎರಡು ಪ್ರಮುಖವಾದ ಸಾಂಪ್ರದಾಯಿಕ ವಿಧಿ-ವಿಧಾನಗಳನ್ನು ಒಳಗೊಂಡಿತ್ತು. ಮೊದಲನೆಯದು ಪದಗ್ರಹಣ (Investiture). ಈ ವಿಧಿಯಲ್ಲಿ ಧಣಿಯು ಹಿಡುವಳಿದಾರನಿಗೆ ಭೂಮಿಯನ್ನು ಒಪ್ಪಿಸುವಾಗ ನ್ಯಾಯ ಹಾಗೂ ರಕ್ಷಣೆಯ ಭರವಸೆ ಕೊಡುತ್ತಿದ್ದನು. ಎರಡನೆಯ ವಿಧಿ ಗೌರವಾರ್ಪಣೆ (Homage), ಇದರಲ್ಲಿ ಹಿಡುವಳಿದಾರನು ಸ್ವಾಮಿನಿಷ್ಠೆಯ ಹಾಗೂ ಸ್ವಾಮಿಸೇವೆಯ ಪ್ರಮಾಣವನ್ನು ಮಾಡುತ್ತಿದ್ದನು. 'ಧಣಿ' ವರ್ಗದಲ್ಲಿ ಅನೇಕ ದರ್ಜೆಗಳಿದ್ದವು. ಅವುಗಳಲ್ಲಿ ಪ್ರಮುಖವಾದವು ಡ್ಯೂಕ್, ಅರ್ಲ್, ಬ್ಯಾರನ್ಸ್ ಮತ್ತು ನೈಟ್ಸ್ ಮುಂತಾದವು. ಹಿಡುವಳಿದಾರರು ಊಳಿಗದವರ ಸಹಾಯದಿಂದ ಕೃಷಿಯನ್ನು ನಡೆಸುತ್ತಿದ್ದರು. ಈ ಊಳಿಗದವರಿಗೆ ಅವರ ಜೀವನಾಧಾರಕ್ಕೆ ಬೇಕಾದಷ್ಟೇ ಭೂಮಿಯನ್ನು ಅವರು ಕೆಲಸ ಮಾಡುತ್ತಿದ್ದಷ್ಟು ಕಾಲ ನೀಡಲಾಗುತ್ತಿತ್ತು. ಅವರಿಗೆ ಹಣದ ರೂಪದಲ್ಲಿ ವೇತನ ನೀಡುತ್ತಿರಲಿಲ್ಲ.

**ಊಳಿಗಮಾನ್ಯ ವ್ಯವಸ್ಥೆಯ ಪರಿಣಾಮಗಳು**

ಸ್ವತಂತ್ರವಾಗಿದ್ದ ರೈತರು ಉಳಲು ಅಲ್ಪ ಭೂಮಿಯನ್ನು ಹೊಂದಿದ್ದರು ಮತ್ತು ವಸ್ತು ರೂಪದಲ್ಲಿ ಬಾಡಿಗೆಯನ್ನು ಕೊಡುತ್ತಿದ್ದರು. ಉಳಿದವರು ತಮ್ಮ ಜೀವನವನ್ನು ನಡೆಸಲು ಸಣ್ಣ ಪ್ರಮಾಣದ ಭೂಮಿಯಲ್ಲಿ ಕೆಲಸ ಮಾಡುತ್ತಲೇ ಜಮೀನ್ದಾರನ ಭೂಮಿಯಲ್ಲಿ ಬಿಟ್ಟಿ ಚಾಕರಿ ಮಾಡಬೇಕಿತ್ತು. ಪ್ರಭುತ್ವದ ಭಾಗವಾಗಿದ್ದ ಶಸ್ತ್ರಸಜ್ಜಿತ ಜನರು ಆಳುವ ವರ್ಗಗಳಿಂದ ಬರುತ್ತಿದ್ದರು. ಸೈನ್ಯ ಶಕ್ತಿಯಲ್ಲಿ ಅವರಿಗೆ ಏಕಸ್ವಾಮ್ಯವಿರುತ್ತಿತ್ತು. ಹೀಗಾಗಿ ರಾಜಕೀಯ ಮತ್ತು ಆರ್ಥಿಕ ಶಕ್ತಿ ಒಂದೇ ವರ್ಗದ ಕೈಯಲ್ಲೇ ಇತ್ತು. ಹಳ್ಳಿಗಳಲ್ಲಿ ನ್ಯಾಯ ಬಹುತೇಕ ಲಾರ್ಡ್ಸ್‌ಗಳ ಜಹಗೀರು (ಮೆನೋರಿಯಲ್) ಕೋರ್ಟ್‌ಗಳಲ್ಲಿತ್ತು.

ಭೂಮಾಲೀಕರು ಮಿಲಿಟರಿ ಸೇವೆಯ ವಿಚಾರದಲ್ಲಿ ಹಿಡುವಳಿದಾರರ ಮೇಲೆ ಅವಲಂಬಿತರಾಗಿದ್ದರು. ಇದರಿಂದ ಆಳುವ ವರ್ಗ ಮನಬಂದಂತೆ ಅಧಿಕಾರ ನಡೆಸುವುದಕ್ಕೆ ತೆರೆ ಬಿದ್ದಿತು. ಆರ್ಥಿಕ ವ್ಯವಸ್ಥೆಯಲ್ಲೂ ಗಮನಾರ್ಹವಾದ ಪ್ರಗತಿಪರ ಬದಲಾವಣೆಗಳು ಕಂಡುಬಂದವು. ಬಾರ್ಬೇರಿಯನ್ನರ ಅಟ್ಟಹಾಸಗಳನ್ನು ಮಟ್ಟಹಾಕಿತು. ಪ್ರಮುಖವಾಗಿ ಮನುಷ್ಯನು ತನ್ನ ಹಕ್ಕುಬಾಧ್ಯತೆಗಳ ಹಾಗೂ ಕರ್ತವ್ಯಗಳನ್ನು ಈ ವ್ಯವಸ್ಥೆಯಿಂದ ಮನಗಂಡನು. ಇದಲ್ಲದೆ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಸಾಹಿತ್ಯದ ಬೆಳವಣಿಗೆಗೆ ಈ ವ್ಯವಸ್ಥೆ ಪ್ರೋತ್ಸಾಹ ನೀಡಿತು. ವಿಶೇಷವಾದ ಕೊಡುಗೆಯೆಂದರೆ ನಿಯಮಾವಳಿಗಳ ರಚನೆ. ಈ ನಿಯಮಾವಳಿಗಳ ಮೂಲಕ ನೋಬಲರು ತರಬೇತಿ ಪಡೆದರು. ಇದರಿಂದಾಗಿ ನೋಬಲರು, ಮಹಿಳೆಯರ, ಅಶಕ್ತರ ಮತ್ತು ಕ್ರೈಸ್ತಮತದ ರಕ್ಷಕರಾದರು. ಊಳಿಗಮಾನ್ಯ ವ್ಯವಸ್ಥೆಯು ಹೊಸ ನಗರಗಳ ವ್ಯವಸ್ಥೆಯನ್ನು ಕ್ರಮೇಣ ಸೃಷ್ಟಿಸಿತು. ಇವು ವ್ಯಾಪಾರ ಮತ್ತು ಕರಕುಶಲತೆಯ ಕೇಂದ್ರಗಳಾದವು. ಹೊಸ ವ್ಯಾಪಾರಿ ಸಂಘಗಳು ಅಸ್ತಿತ್ವಕ್ಕೆ ಬಂದವು. 14ನೆಯ ಶತಮಾನದ ವೇಳೆಗೆ ಹೆಚ್ಚೆಚ್ಚು ಬಡ ರೈತರು ಕೃಷಿಯಿಂದ ಹೊರನೂಕಲ್ಪಟ್ಟರು.

©KTBS Not to be republished

ಈ ವ್ಯವಸ್ಥೆಯ ಪರಿಣಾಮದಿಂದ ಉನ್ನತ ಪ್ರಭುವರ್ಗಗಳು ಹುಟ್ಟಿದವು. ಪ್ರಭುವರ್ಗ ಹಿಡುವಳಿದಾರರು ಹಾಗೂ ನೋಬಲರ ನಡುವೆ ವಾದ–ವಿವಾದಗಳು ಆರಂಭವಾದವು. ಈ ಬಿಕ್ಕಟ್ಟಿನಿಂದ ಊಳಿಗಮಾನ್ಯ ಒಪ್ಪಂದಗಳು ಮುರಿದು ಬಿದ್ದವು. ಕೆಲವೊಮ್ಮೆ ಧಣಿಗಳು ಆಳುವ ದೊರೆಗಳಿಗೇ ಪೈಪೋಟಿ ನೀಡಲು ಪ್ರಾರಂಭಿಸಿದರು. ಹಲವರು ರಾಷ್ಟ್ರದ್ರೋಹಿಗಳಾಗುವುದರ ಮೂಲಕ ತಮ್ಮ ಪ್ರಾಂತ್ಯದ ಒಗ್ಗಟ್ಟಿಗೇ ಮುಳುವಾದರು. ನ್ಯಾಯದ ವ್ಯವಸ್ಥೆಯೂ ಸಮಾನತೆ ಇರದೆ ದೋಷಯುಕ್ತವಾಗಿತ್ತು. ಇವೆಲ್ಲಕ್ಕೂ ಮಿಗಿಲಾಗಿ ಚರ್ಚ್ ಮತ್ತು ರಾಜ್ಯಗಳ ನಡುವೆ ಕಲಹಗಳು ಏರ್ಪಟ್ಟವು.

### ಊಳಿಗಮಾನ್ಯ ವ್ಯವಸ್ಥೆಯ ಅವನತಿ

14ನೆಯ ಶತಮಾನದ ಮಧ್ಯಭಾಗದಲ್ಲಿ ಯೂರೋಪಿನಾದ್ಯಂತ ಸಂಭವಿಸಿದ ವ್ಯಾಧಿಯಿಂದ ಸುಮಾರು 3.5 ಕೋಟಿ ಅಥವಾ ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಜನರು ಸಾವಿನ ಕೂಪಕ್ಕೆ ತಳ್ಳಲ್ಪಟ್ಟರು. ಇದನ್ನು ಚರಿತ್ರೆಯಲ್ಲಿ 'ಬ್ಲಾಕ್ ಡೆತ್' ಎಂದು ಕರೆಯಲಾಗಿದೆ. ನಂತರ ಪ್ಲೇಗ್ ರೋಗವು ಪದೇ ಪದೇ ಸಂಭವಿಸಿ ಪರಿಸ್ಥಿತಿಯನ್ನು ತೀವ್ರವಾಗಿ ಬಿಗಡಾಯಿಸಿತು. ಇದರಿಂದ ಗೇಣಿಗಳು ಕಡಿಮೆಯಾದವು. ಆದಾಯ ಕುಸಿಯಿತು. ಆಹಾರಕ್ಕೆ ಬೇಡಿಕೆ ಕಡಿಮೆಯಾಗಿ ಕೃಷಿ ಆದಾಯ ಕುಸಿಯಿತು. 'ಬ್ಲಾಕ್‌ಡೆತ್'ನ ನಂತರ ಶ್ರಮಿಕರ ಕೊರತೆಯಿಂದಾಗಿ ರೈತರು ಪ್ರಬಲರಾದರು. ಇದಕ್ಕೆ ಪ್ರತಿಯಾಗಿ ಜಮೀನ್ದಾರರು ಸಾಂಪ್ರದಾಯಿಕ ಕರ್ತವ್ಯಗಳನ್ನು ಇನ್ನಷ್ಟು ಕಠಿಣಗೊಳಿಸಿ ರೈತರ ಮೇಲೆ ಹೇರಲು ಪ್ರಯತ್ನಿಸಿದರು. ಇದರಿಂದ ಸಾಮಾಜಿಕ ಸ್ಫೋಟಕ ಪರಿಸ್ಥಿತಿ ನಿರ್ಮಾಣವಾಯಿತು. ಯೂರೋಪಿನಾದ್ಯಂತ ದಂಗೆಗಳು ವ್ಯಾಪಕವಾಗಿ ಬೆಳೆದವು. ಊಳಿಗಮಾನ್ಯ ವ್ಯವಸ್ಥೆಯ ಪತನವು ಬಂಡವಾಳಶಾಹಿ ವ್ಯವಸ್ಥೆಯ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಯುರೋಪ್‌ನ ಸಾಂಸ್ಕೃತಿಕ ಬರಡುತನವನ್ನು ____________ ಯುಗ ಎಂದು ಕರೆಯತ್ತಾರೆ.
2. ಭೂಮಿಯ ಒಡೆತನವನ್ನು ಹೊಂದಿದ್ದವನನ್ನು ____________ ಎಂದು ಕರೆಯುತ್ತಿದ್ದರು.
3. ಹಿಡುವಳಿದಾರನು ಹೊಂದಿದ್ದ ಭೂಮಿಯನ್ನು ____________ ಎನ್ನುತ್ತಿದ್ದರು.
4. ಭೂಮಿಯನ್ನು ಹಿಡುವಳಿಗಾಗಿ ಪಡೆದ ಅಶಕ್ತ ವ್ಯಕ್ತಿಯನ್ನು _________ ಎಂದು ಕರೆಯುತ್ತಿದ್ದರು.

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಊಳಿಗಮಾನ್ಯ ವ್ಯವಸ್ಥೆ ಎಂದರೇನು ?
2. ಊಳಿಗಮಾನ್ಯ ವ್ಯವಸ್ಥೆಯ ಗುಣ, ದೋಷಗಳ ಪಟ್ಟಿ ಮಾಡಿ.
3. ಊಳಿಗಮಾನ್ಯ ವ್ಯವಸ್ಥೆಯ ಪರಿಣಾಮಗಳನ್ನು ವಿವರಿಸಿ.
4. ಊಳಿಗಮಾನ್ಯ ವ್ಯವಸ್ಥೆಯ ಪತನಕ್ಕೆ ಕಾರಣಗಳನ್ನು ಬರೆಯಿರಿ.

**III.** ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಿ.

◈ ◈ ◈

©KTBS Not to be republished

## ಅಧ್ಯಾಯ–8

# ಆಧುನಿಕ ಯುರೋಪ್

### ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ಪುನರುಜ್ಜೀವನಕ್ಕೆ ಕಾರಣಗಳು ಮತ್ತು ಪರಿಣಾಮಗಳು
- ಭೌಗೋಳಿಕ ಅನ್ವೇಷಣೆ ಮತ್ತು ಪರಿಣಾಮಗಳು
- ಮತ ಸುಧಾರಣೆಗೆ ಕಾರಣ ಮತ್ತು ಪರಿಣಾಮಗಳು
- ಕೈಗಾರಿಕಾ ಕ್ರಾಂತಿ ಮತ್ತು ಪರಿಣಾಮಗಳು

### ಪುನರುಜ್ಜೀವನ (The Renaissance)

ಪ್ರಾಚೀನ ಯುರೋಪಿನಲ್ಲಿದ್ದ ಪಶ್ಚಿಮ ರೋಮನ್ ಸಾಮ್ರಾಜ್ಯವು ಸಾ.ಶ. 5ನೆಯ ಶತಮಾನದಲ್ಲಿ ಅನಾಗರಿಕರ ದಾಳಿಗಳಿಂದ ನಾಶವಾಯಿತು. ಇಂತಹ ದಾಳಿಗಳಿಂದ ಕ್ರೈಸ್ತ ಧರ್ಮವನ್ನು ರಕ್ಷಿಸಿಕೊಳ್ಳಲು ರೋಮನ್ನಿನ ಕ್ಯಾಥೋಲಿಕರು ಪೋಪ್‌ನ ನಾಯಕತ್ವದಲ್ಲಿ ಸಂಘಟಿತರಾದರು. ಇದರ ಜೊತೆಗೆ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಚರ್ಚ್‌ಗಳು ಜನರಲ್ಲಿ ಮೌಢ್ಯವನ್ನು ತುಂಬುವ ಕೆಲಸವನ್ನು ಮಾಡಿದವು. ಇವುಗಳ ಒಟ್ಟಾರೆ ಪರಿಣಾಮವೆಂದರೆ ಎಲ್ಲಾ ಕ್ಷೇತ್ರಗಳ ಪ್ರಗತಿ ಕುಂಠಿತಗೊಂಡಿತು. ಈ ಹಿನ್ನೆಲೆಯಲ್ಲಿ ಇಡೀ ಕಾಲಘಟ್ಟವನ್ನು ಕತ್ತಲೆ ಯುಗವೆಂದು ಕರೆಯಲಾಗಿದೆ. ದುರ್ಬಲ ರಾಜಪ್ರಭುತ್ವದ ಫಲವಾಗಿ ಊಳಿಗಮಾನ್ಯ ದೊರೆಗಳು ಪ್ರವರ್ಧಮಾನಕ್ಕೆ ಬಂದರು. ಯುರೋಪಿನ ಮಧ್ಯಮ ಮತ್ತು ಕೆಳವರ್ಗದ ಸಮಾಜ ತತ್ತರಿಸಿತು. 15ನೆಯ ಶತಮಾನದ ಮಧ್ಯಭಾಗದಲ್ಲಿ ಹೊಸ ಯುಗ ಆರಂಭಗೊಂಡಿತು.

**ಅರ್ಥ:** ಲ್ಯಾಟಿನ್ ಭಾಷೆಯ 'ರಿನೆಸೆರೆ' ಎಂಬ ಪದದಿಂದ ರಿನೈಸಾನ್ಸ್ ಎಂಬ ಇಂಗ್ಲೀಷ್ ಪದ ರೂಪುಗೊಂಡಿದೆ. ರಿನೈಸಾನ್ಸ್ ಎಂದರೆ ಪುನರ್‌ಜನ್ಮ ಅಥವಾ ಪುನರುಜ್ಜೀವನ ಅಥವಾ ನವೋದಯ ಎಂದರ್ಥ. ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯದ ಮರು ಓದಿನಿಂದ ಉಂಟಾದ ಬೌದ್ಧಿಕ ವಿಕಾಸವನ್ನು ಪುನರುಜ್ಜೀವನ ಎನ್ನುತ್ತೇವೆ. ಈ ವಿಕಾಸದಿಂದ ಯೂರೋಪಿನ ಜನ ಸರಳ, ವಿಚಾರಶೀಲ, ಮಾನವೀಯ ಮತ್ತು ವಿಜ್ಞಾನದ ಚಿಂತನೆಗಳಲ್ಲಿ ಪ್ರಗತಿಯನ್ನು ಸಾಧಿಸಿ ಕತ್ತಲೆ ಯುಗವನ್ನು ಅಂತ್ಯಗೊಳಿಸಿ ಆಧುನಿಕ ಯುಗವನ್ನು ಆರಂಭಿಸಿದರು.

**ಉದಯ :** ಮಧ್ಯಯುಗದ ಇಟಲಿಗೆ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ವೈಭವವಿತ್ತು. ಇಟಲಿಯ ಶ್ರೀಮಂತ ನಗರಗಳಾದ ರೋಮ್, ವೆನಿಸ್, ಜಿನೆವಾಗಳಲ್ಲಿ ಲ್ಯಾಟಿನ್ ಸಾಹಿತ್ಯದ ಅಧ್ಯಯನಕ್ಕೆ ಅನುಕೂಲಕರವಾದ ವಾತಾವರಣವಿತ್ತು. ಯುರೋಪಿನ್ನಲ್ಲಾದ ಕ್ರಾಂತಿ ಮತ್ತು ಆಕ್ರಮಣಗಳಿಂದ ಯುರೋಪಿನ ಇತರೇ ಭಾಗಗಳಲ್ಲಿ ಬುದ್ಧಿ ಜೀವಿಗಳು ಅಂದರೆ ಕವಿಗಳು. ವಿಜ್ಞಾನಿಗಳು, ಚಿತ್ರಕಾರರು, ಮಾನವತಾವಾದಿಗಳು, ವಿಚಾರಶೀಲರು ಇಟಲಿಯ ಶೀಮಂತ ನಗರವನ್ನು ಸೇರಿಕೊಂಡರು. ಆದ್ದರಿಂದ ಪುನರುಜ್ಜೀವನವು ಪ್ರಥಮ ಬಾರಿಗೆ ಇಟಲಿಯಲ್ಲಿ ಆರಂಭಗೊಂಡು ನಂತರದ ದಿನಗಳಲ್ಲಿ ಯುರೋಪಿನ ಇತರೇ ಭಾಗಗಳಿಗೆ ವಿಸ್ತರಿಸಿತು.

### ಕಾರಣಗಳು

1. ಯುರೋಪಿನ ಮಧ್ಯಯುಗದ ಅಂತ್ಯದ ವೇಳೆಗೆ ಪೀಟರ್ ಅಬಲಾರ್ಡ್, ರೋಜರ್ ಬೇಕನ್, ಜಾನ್ ವೈಕ್ಲಿಪ್, ಮೊದಲಾದ ವಿಚಾರಶೀಲರು ಕ್ಯಾಥೋಲಿಕ್ ಚರ್ಚ್‌ನ ಮೂಢ ನಂಬಿಕೆ ಮತ್ತು ದಬ್ಬಾಳಿಕೆಯನ್ನು ಪ್ರಶ್ನಿಸುವುದರ ಮೂಲಕ ಮುಂದಿನ ಚಳವಳಿಗೆ ದಾರಿಯಾದರು.

©KTBS Not to be republished

2. ಸಾ.ಶ. 1453ರಲ್ಲಿ ಆಟೋಮನ್ ಟರ್ಕರು ರೋಮನ್ ಸಾಮ್ರಾಜ್ಯದ ವ್ಯಾಪಾರ ಮಹಾದ್ವಾರವಾಗಿದ್ದ ಕಾನ್‌ಸ್ಟಾಂಟಿನೋಪಲ್ ನಗರವನ್ನು ಆಕ್ರಮಿಸಿದರು. ಟರ್ಕರ ಕಿರುಕುಳ ಸಹಿಸದೆ ಅಲ್ಲಿದ್ದ ಬುದ್ಧಿಜೀವಿಗಳು ತಮ್ಮ ಗ್ರಂಥಗಳೊಡನೆ ಇಟಲಿಯಂತಹ ದೇಶಗಳಲ್ಲಿ ನೆಲಸಿ ಪುನರುಜ್ಜೀವನಕ್ಕೆ ಕಾರಣರಾದರು.

3. ಸಾ.ಶ. 1455ರಲ್ಲಿ ಜರ್ಮನಿಯ ಗುಟನ್‌ಬರ್ಗ್ ಎಂಬುವರು ಮುದ್ರಣಯಂತ್ರವನ್ನು ಶೋಧಿಸಿದರು. ಇದರಿಂದ ಯುರೋಪಿನಾದ್ಯಂತ ಜ್ಞಾನ ಪ್ರಸಾರದ ವೇಗವು ಹೆಚ್ಚಿತು.

4. ಯುರೋಪಿನಲ್ಲಿದ್ದ ಬುದ್ಧಿ ಜೀವಿಗಳಿಗೆ ರಾಜರು, ಪೋಪ್‌ರು, ಶೀಮಂತರು ಆಶ್ರಯ ನೀಡಿದರು. ಪೋಪ್ 3ನೇ ನಿಕೋಲಸ್, ಪೋಪ್ 10ನೇ ಲಿಯೋ, ಫ್ಲೋರೆನ್ಸ್‌ನ ಮೆಡಿಸಿ ಕುಟುಂಬ, ರಾಣಿ 1ನೇ ಎಲಿಜಬೆತ್ ಮುಂತಾದವರು ಜ್ಞಾನದ ವೃದ್ಧಿಗೆ ಅವಕಾಶ ಕಲ್ಪಿಸಿದರು.

5. ಯೂರೋಪಿನಲ್ಲಿ ಪ್ರಾರಂಭವಾದ ಭೌಗೋಳಿಕ ಅನ್ವೇಷಣೆಗಳು ಮತ್ತು ಧರ್ಮಯುದ್ಧಗಳಿಂದ ಯುರೋಪಿಯನ್ನರಿಗೆ ಪೂರ್ವ ದೇಶಗಳ ಪರಿಚಯವಾಯಿತು. ಈ ಹೊಸ ಪ್ರದೇಶಗಳಿಂದ ಜ್ಞಾನ ಮತ್ತು ಸಂಪತ್ತನ್ನು ಪಡೆದು ಅವುಗಳನ್ನು ಪುನರುಜ್ಜೀವನಕ್ಕೆ ಬಳಸಿದರು.

ಪುನರುಜ್ಜೀವನ ಪದದ ಅರ್ಥವು ಪುನರ್ಜನ್ಮ ಅಥವಾ ಪುನರ್‌ಜಾಗೃತಿ. ಇದು ಯುರೋಪ್‌ನ ಮಧ್ಯಯುಗದ ಅಂತ್ಯದಲ್ಲಿ ಉಂಟಾದ ಎಲ್ಲಾ ಬೌದ್ಧಿಕ ಬದಲಾವಣೆಗಳನ್ನು ಒಟ್ಟಾಗಿ ಸೂಚಿಸುವ ಪದ ಎನ್ನಬಹುದು. 14 ಮತ್ತು 15ನೆಯ ಶತಮಾನಗಳಲ್ಲಿ ಪಶ್ಚಿಮ ಯುರೋಪಿನ ಬಣ್ಣದ ಕಲೆ, ವಾಸ್ತುಶಿಲ್ಪ, ಧರ್ಮ, ತತ್ವಶಾಸ್ತ್ರ, ವಿಜ್ಞಾನ ಮತ್ತು ರಾಜಕೀಯ ವಿಷಯಗಳ ಬೆಳವಣಿಗೆಯನ್ನು ಪುನರುಜ್ಜೀವನ ಪದವು ಸೂಚಿಸುತ್ತವೆ. ಜ್ಞಾನ ಪುನರುಜ್ಜೀವನ ಚಳುವಳಿಯು ಮೊದಲು ಪ್ರಾರಂಭವಾದದ್ದು ಇಟಲಿಯಲ್ಲಿ. ಆನಂತರ ಅದು ಯುರೋಪಿನ ಇತರೆ ಭಾಗಗಳಿಗೆ ಹರಡಿತು. ಆದ್ದರಿಂದ ಇಟಲಿಯನ್ನು "ಪುನರುಜ್ಜೀವನ"ದ ತವರು ಎಂಬುದಾಗಿ ಕರೆಯುತ್ತಾರೆ.

**ಪುನರುಜ್ಜೀವನದ ಲಕ್ಷಣಗಳು**

1. ಪುನರುಜ್ಜೀವನ ಕಾಲದ ಜನರ ದೃಷ್ಟಿಕೋನ ಮಧ್ಯಯುಗಕ್ಕಿಂತಲೂ ಭಿನ್ನವಾಗಿತ್ತು. ಜಗತ್ತು ಮತ್ತು ಮಾನವನನ್ನು ಕುರಿತು ಜನರ ಅಭಿಪ್ರಾಯ ಬದಲಾಯಿತು. ಇದನ್ನು "ಮಾನವತಾವಾದ" ಎಂದು ಕರೆಯಲಾಯಿತು. ಮಾನವತಾವಾದಿಗಳು ಉತ್ಕೃಷ್ಟ ಸಾಹಿತ್ಯದ ಬಗ್ಗೆ ಆಸಕ್ತಿ ತಳೆದರು. ಮಾನವ ಜೀವನಕ್ಕೆ ಸಂಬಂಧಿಸಿದ ಕ್ರಮಗಳಿಗೆ ಒತ್ತು ನೀಡುವ ಪ್ರಯತ್ನ ನಡೆದವು.
2. ಪುನರುಜ್ಜೀವನ ಕಾಲದ ಬರಹಗಾರರಿಂದ ಇಂಗ್ಲೀಷ್, ಇಟಾಲಿಯನ್ ಮತ್ತು ಜರ್ಮನ್ ಭಾಷೆಗಳಲ್ಲಿ ಸಾಹಿತ್ಯ ಶ್ರೀಮಂತವಾಯಿತು.
3. ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಬದಲಾವಣೆಯಾಯಿತು. ಕೃಷಿಕ ಜೀವನವು ವಾಣಿಜ್ಯ ಮತ್ತು ಕೈಗಾರಿಕಾ ಜೀವನ ವಿಧಾನಗಳಿಗೆ ಸ್ಥಿತ್ಯಂತರಗೊಂಡಿತು. ಸಾಮಾಜಿಕ ಸಂಬಂಧಗಳಲ್ಲೂ ಮೂಲಭೂತವಾಗಿ ಬದಲಾವಣೆಯಾದವು.
4. ಪುನರುಜ್ಜೀವನದ ಮುಖ್ಯ ಲಕ್ಷಣವೆಂದರೆ ಜನರು ಸಾಂಸ್ಕೃತಿಕ ಶ್ರೇಷ್ಠತೆಯ ಬಗ್ಗೆ ತಳೆದ ಆಸಕ್ತಿ, ಯಾವುದು ಶ್ರೇಷ್ಠವೆನಿಸುವುದೋ ಅದನ್ನು ಅನುಕರಿಸುವ ಪ್ರವೃತ್ತಿ. ಇದನ್ನು "ಶ್ರೇಷ್ಠಾನುಕರಣೆ" ಎಂದು ಕರೆಯುತ್ತಾರೆ.
5. ಪುನರುಜ್ಜೀವನದ ಲಕ್ಷಣಗಳು ಮೊಟ್ಟಮೊದಲು ಇಟಲಿಯಲ್ಲಿ ಕಾಣಿಸಿಕೊಂಡವು. ಕಾರಣ ಗ್ರೀಕ್ ಮತ್ತು ರೋಮ್‌ನ ವಿದ್ವಾಂಸರು ಇಟಲಿಗೆ ವಲಸೆ ಬಂದು ನೆಲೆಸಿದರು.

©KTBS Not to be re published

## ಪುನರುಜ್ಜೀವನದ ಸಾಹಿತ್ಯ

ಇಟಲಿ ಅನೇಕ ಸಾಹಿತ್ಯ ದಿಗ್ಗಜರ ತವರೂರಾಗಿತ್ತು. ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಮತ್ತು ಸ್ಪೈನ್ ದೇಶಗಳೂ ಕೂಡ ಸಾಕಷ್ಟು ಸಾಹಿತ್ಯ ಪ್ರತಿಭೆಗಳನ್ನು ಸೃಷ್ಟಿಸಿದವು. ಈ ಕಾಲದ ಸಾಹಿತ್ಯದ ತಿರುಳು ಧರ್ಮವಾಗಿರದೆ ಪ್ರಾಪಂಚಿಕ ವಿಷಯವಾಗಿತ್ತು. ಮಾನವನ ದೇಹ, ಅಂಗಸೌಷ್ಠವ ಮುಂತಾದ ವಿಷಯಗಳ ಬಗ್ಗೆ ಬರೆದರು. ಲ್ಯಾಟಿನ್ ಬದಲು ಯುರೋಪಿನ ಪ್ರಾದೇಶಿಕ ಭಾಷೆಗಳು ಬಳಕೆಗೆ ಬಂದವು.

### ಪೆಟ್ರಾರ್ಕ್ : (ಸಾ.ಶ. 1304 – 1374)


ಪೆಟ್ರಾರ್ಕ್

ಪೆಟ್ರಾರ್ಕ್‌ನನ್ನು "ಪುನರುಜ್ಜೀವನದ ಜನಕ" ಎಂದು ಕರೆಯಲಾಗಿದೆ. ಇವನು ಸುಮಾರು 200 ಲ್ಯಾಟಿನ್ ಮತ್ತು ಗ್ರೀಕ್ ಹಸ್ತಪ್ರತಿಗಳನ್ನು ಸಂಗ್ರಹಿಸಿದನು. "ಆಫ್ರಿಕಾ" ಇವನ ಪ್ರಸಿದ್ಧ ಕಾವ್ಯ. ಇದು ಲ್ಯಾಟಿನ್ ಭಾಷೆಯಲ್ಲಿದೆ. ಅನೇಕ ಗೀತೆಗಳು ಹಾಗೂ ಸಾನೆಟ್‌ಗಳ ರಚನೆಗೆ ಪ್ರಖ್ಯಾತನಾಗಿದ್ದನು. ಮಾನವನು ಇಹಲೋಕದಲ್ಲಿ ಕಾಣುವ ಸುಖ–ದುಃಖಗಳ ಅಗಾಧ ಚಿಂತನೆಯನ್ನು ಪೆಟ್ರಾರ್ಕ್‌ನ ಕವಿತೆಗಳಲ್ಲಿ ಕಾಣಬಹುದು.

ಬೊಕಾಷಿಯೋ ಇಟಾಲಿಯನ್ ಭಾಷೆಯಲ್ಲಿ ರಚಿಸಿದ ನೂರು ಕಥೆಗಳ ಸಂಗ್ರಹ "ಡೆಕಾಮೆರಾನ್", ಡಾಂಟೆ ರಚಿಸಿದ ಪ್ರಸಿದ್ಧ ಕೃತಿ "ಡಿವೈನ್ ಕಾಮಿಡಿ", ಇಂಗ್ಲೆಂಡಿನ ಛಾಸರ್ ಬರೆದ "ಕ್ಯಾಂಟರ್‌ಬರಿ ಟೇಲ್ಸ್", ಸ್ಪೈನಿನ ಸರ್ವಾಂಟಿಸ್ ಬರೆದ "ಡಾನ್ ಕ್ವಿಕ್ಸಾಟ್", ಇಂಗ್ಲೆಂಡ್‌ನ ಥಾಮಸ್ ಮೋರ್ ರಚಿಸಿದ "ಯುಟೋಪಿಯಾ" ಇವು ಪ್ರಸಿದ್ಧ ಕೃತಿಗಳು. ಇಂಗ್ಲೆಂಡಿನ ಶೇಕ್ಸ್‌ಪಿಯರ್ ಒಬ್ಬ ಶ್ರೇಷ್ಠ ಕವಿ ಮತ್ತು ನಾಟಕಕಾರ. ಅವನು ಅನೇಕ ಪ್ರಸಿದ್ಧ ದುಃಖಾಂತ–ಸುಖಾಂತ ನಾಟಕಗಳನ್ನು ಬರೆದಿದ್ದಾನೆ. ಲಂಡನ್‌ನಲ್ಲಿ ಸ್ಥಾಪಿತವಾದ ಸೈಂಟ್ ಪಾಲ್ ಶಾಲೆಯು ಈ ನೂತನ ಜ್ಞಾನದ ಕಲಿಕೆಗಾಗಿಯೇ ಮೀಸಲಾಗಿದ್ದಿತು.

## ಪುನರುಜ್ಜೀವನದಲ್ಲಿ ಕಲೆ (ವಾಸ್ತುಶಿಲ್ಪ ಮತ್ತು ಶಿಲ್ಪಕಲೆ)


ಪುನರುಜ್ಜೀವನದಲ್ಲಿ ಕಾಲದ ಚಿತ್ರ

ಈ ಕಾಲದಲ್ಲಿ ಕಲೆಯು ಅತ್ಯಂತ ಸರಳವಾಗಿಯೂ, ಸ್ವಾಭಾವಿಕವಾಗಿಯೂ ಇದ್ದಿತು. ಪೌರಾಣಿಕ ವ್ಯಕ್ತಿಗಳು, ದೇವಪುತ್ರ ಏಸುಕ್ರಿಸ್ತ ಮತ್ತು ಅವನ ಶಿಷ್ಯರನ್ನು ಮಾನವ ಸಹಜ ಭಾವನೆಗಳೊಂದಿಗೆ ಶಿಲ್ಪ ಚಿತ್ರಗಳಲ್ಲಿ ಕಲಾವಿದರು ಮೂಡಿಸಿದರು.

16ನೇ ಶತಮಾನದಲ್ಲಿ ಇಟಲಿಯಲ್ಲಿ ಅನೇಕ ಕಲಾಕಾರರಿದ್ದರು. ಮೈಖಲ್ ಆಂಜೆಲೋ, ರಾಫೇಲ್, ಲಿಯೋನಾರ್ಡ್–ಡ–ವಿಂಚಿ ಮತ್ತು ಟಿಟಿಯಾನ್ ಪ್ರಮುಖ ಕಲಾಕಾರರಾಗಿದ್ದವರು. ಮೈಖಲ್ ಆಂಜೆಲೋವಿನ "ಆ್ಯಡಂ" ಮತ್ತು "ಕೊನೆಯ ತೀರ್ಮಾನ", ಲಿಯೋನಾರ್ಡ್–ಡ–ವಿಂಚಿಯ "ಲಾಸ್ಟ್ ಸಪ್ಪರ್" ಮತ್ತು "ಮೊನಾಲಿಸಾ", ರಾಫೇಲ್‌ನ "ಸಿಸ್ಟೈನ್ ಮಡೋನ್ನ" ಮತ್ತು ಟಿಟಿಯನ್‌ನ "ಅಸಂಪ್ಷನ್ ಆಫ್ ದಿ ವರ್ಜಿನ್" ಮುಖ್ಯವಾದ ವರ್ಣಚಿತ್ರಗಳಾಗಿದ್ದವು.

©KTBS Not to be republished


## ಪುನರುಜ್ಜೀವನದ ಕಾಲದಲ್ಲಿ ವಿಜ್ಞಾನ : (ಆಧುನಿಕ ವಿಜ್ಞಾನದ ಜನನ)

ಪುನರುಜ್ಜೀವನದ ಕಾಲದಿಂದಲೇ ಆಧುನಿಕ ವಿಜ್ಞಾನವು ಜನ್ಮ ತಾಳಿತು. ವಿಜ್ಞಾನವು ಧಾರ್ಮಿಕ ನಂಬಿಕೆಗಳನ್ನು ಬದಿಗೊತ್ತಿ ಹೊಸ ಶೋಧಗಳನ್ನು ಪ್ರಕಟಿಸಿತು. ಮಾನವನ ಬಗ್ಗೆ ತಿಳಿಯುವ ಆಸಕ್ತಿಯು ಈ ಕಾಲದಲ್ಲಿ ಹೊಸ ಆವಿಷ್ಕಾರಗಳಿಗೆ ನಾಂದಿಯಾಯಿತು. ಮಧ್ಯಕಾಲದಲ್ಲಿ ಜನರು ಯಾವುದೇ ರೀತಿ ಪ್ರಶ್ನಿಸದೆ ಎಲ್ಲವನ್ನೂ ಒಪ್ಪಿಕೊಳ್ಳುತ್ತಿದ್ದರು. ಅವಶ್ಯಕತೆ ಮತ್ತು ಪ್ರಶ್ನಿಸುವ ಮನೋಭಾವ ಬೆಳೆದಂತೆ ವೈಜ್ಞಾನಿಕ ಸಂಶೋಧನೆಗಳು ಹೆಚ್ಚಿದವು. ಫ್ರಾನ್ಸಿಸ್ ಬೇಕನ್ ಪ್ರಾಚೀನ ವೈಜ್ಞಾನಿಕ ತೀರ್ಮಾನಗಳು ಪರಿಣತ ಜ್ಞಾನವನ್ನು ಪ್ರತಿನಿಧಿಸುವುದಿಲ್ಲವೆಂದು ಘೋಷಿಸಿದನು. ಡೆಸ್ಕಾರ್ಟಿಸ್‌ನು ಸಂದೇಹ ಮಾರ್ಗಕ್ಕೆ ಕೊಡುಗೆ ನೀಡಿ ಯಾವುದನ್ನೇ ಆದರೂ ಒಪ್ಪಿಕೊಳ್ಳುವ ಮೊದಲು ಪ್ರಶ್ನಿಸುವ ವಿಷಯವನ್ನು ಮಂಡಿಸಿದನು. ಪೋಲೆಂಡಿನ ಕೊಪರ್ನಿಕಸ್‌ನು ಗ್ರೀಸ್‌ನ ಟಾಲೆಮಿಯ ಭೂಕೇಂದ್ರದ ವಾದವು ಸುಳ್ಳೆಂದು ತೋರಿಸಿ ಗ್ರಹಗಳ ಸೂರ್ಯ ಕೇಂದ್ರೀತ ಸಿದ್ಧಾಂತವನ್ನು ಪ್ರತಿಪಾದಿಸಿದನು.

### ಕೆಪ್ಲರ್


ಕೆಪರ್


ಕೆಪ್ಲರ್‌ನು ಒಬ್ಬ ಜರ್ಮನಿಯ ವಿಜ್ಞಾನಿ. ಗ್ರಹಗಳು ಸೂರ್ಯನನ್ನು ಅಂಡಾಕೃತಿಯಲ್ಲಿ ಸುತ್ತುತ್ತವೆ ಎಂದು ತಿಳಿಸಿದನು.


ಗೆಲಿಲಿಯೋ

### ಗೆಲಿಲಿಯೋ

ಗೆಲಿಲಿಯೋ ದೂರದರ್ಶಕ ಯಂತ್ರವನ್ನು ಕಂಡುಹಿಡಿದನು. ಕೊಪರ್ನಿಕಸ್‌ನ ಸೂರ್ಯಕೇಂದ್ರಿತ ಪರಿಕಲ್ಪನೆಯನ್ನು ಬೆಂಬಲಿಸಿದನು. ಚರ್ಚ್‌ನ ಒತ್ತಡಕ್ಕೆ ಮಣಿದು ತನ್ನ ಹೇಳಿಕೆಯನ್ನು ಹಿಂತೆಗೆದುಕೊಂಡನು.

### ನ್ಯೂಟನ್


ನ್ಯೂಟನ್

ನ್ಯೂಟನ್ನನು ಗುರುತ್ವಾಕರ್ಷಣೆಯ ನಿಯಮಗಳನ್ನು ಕಂಡುಹಿಡಿದನು ಹಾಗೂ ಎಲ್ಲಾ ಆಕಾಶಕಾಯಗಳ ಚಲನೆಗಳು ಗುರುತ್ವಾಕರ್ಷಣೆಯ ನಿಯಂತ್ರಣಕ್ಕೆ ಒಳಪಟ್ಟಿವೆ ಎಂದು ಪ್ರತಿಪಾದಿಸಿದನು.

ರಸಾಯನಶಾಸ್ತ್ರ, ವೈದ್ಯಶಾಸ್ತ್ರ ಮತ್ತು ಶರೀರ ಶಾಸ್ತ್ರಗಳ ಅಭ್ಯಾಸದಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಲಾಯಿತು. ಆಂಡ್ರ್ಯೂ ವಸಾಲಿಯಸ್ ಶರೀರದ ಶಸ್ತ್ರಚಿಕಿತ್ಸೆಯನ್ನು ಮಾಡಿ ಅಸ್ತಿಪಂಜರ, ಮಾಂಸ ಖಂಡಗಳು, ಮೆದುಳು, ಜೀರ್ಣಾಂಗ ಮತ್ತು ಜನನೇಂದ್ರಿಯಗಳಿಗೆ ಪರಿಣಾಮಕಾರಿ ಚಿಕಿತ್ಸೆಯನ್ನು ಮಾಡಬಹುದೆಂಬುದರ ಬಗ್ಗೆ ಶರೀರ ಶಾಸ್ತ್ರದ ಮೇಲೆ ವೈಜ್ಞಾನಿಕ ಗ್ರಂಥವನ್ನು ಬರೆದನು.

### ಪುನರುಜ್ಜೀವನದ ಪರಿಣಾಮಗಳು

1. ಪುನರುಜ್ಜೀವನವು ಯುರೋಪಿನ ಮಧ್ಯಯುಗದ ಅಜ್ಞಾನದ ಕತ್ತಲೆಯನ್ನು ಅಂತ್ಯಗೊಳಿಸಿ ಆಧುನಿಕ ಜ್ಞಾನವನ್ನು ಪರಿಚಯಿಸಿತು.
2. ಪುನರುಜ್ಜೀವನವು ಮತಸುಧಾರಣೆಗೆ ನಾಂದಿಯಾಯಿತು. ಕ್ಯಾಥೋಲಿಕ್ ಚರ್ಚ್‌ನ ಮೂಢನಂಬಿಕೆ ಮತ್ತು ದಬ್ಬಾಳಿಕೆಯನ್ನು ಕೊನೆಗಾಣಿಸಿ ಮಾನವೀಯ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ಒತ್ತು ನೀಡಿತು.

©KTBS Not to be republished

3. ಪುನರುಜ್ಜೀವನದ ಕಾಲದ ಕಲೆ, ಸಾಹಿತ್ಯ ಮತ್ತು ವಿಜ್ಞಾನದ ಪ್ರಗತಿಯು ವಿಶಾಲವಾದ ಚಿಂತನೆಗಳ ಬೆಳವಣಿಗೆಗೆ ದಾರಿಯಾಯಿತು.

4. ಪುನರುಜ್ಜೀವನ ಮಾನವನ ಸಹಜ ಕುತೂಹಲ ಮತ್ತು ಜ್ಞಾನದಾಹವನ್ನು ಹೆಚ್ಚಿಸಿ ಭೌಗೋಳಿಕ ಅನ್ವೇಷಣೆಗಳಿಗೆ ಕಾರಣವಾಯಿತು.

5. ಯುರೋಪಿನ ದೇಶಿಯ ಭಾಷೆಗಳಾದ ಇಂಗ್ಲೀಷ್, ಜರ್ಮನ್, ಸ್ಪಾನಿಷ್, ಫ್ರೆಂಚ್, ಇಟಾಲಿಯನ್ ಮತ್ತು ಇತರ ಭಾಷೆಗಳು ಅಪಾರ ಬೆಳವಣಿಗೆಗಳನ್ನು ಕಂಡವು.

## ಭೌಗೋಳಿಕ ಅನ್ವೇಷಣೆಗಳು

ಸಾ.ಶ. 16ನೇ ಶತಮಾನವನ್ನು "ಭೌಗೋಳಿಕ ಅನ್ವೇಷಣೆಗಳ ಯುಗ" ಎಂದು ಕರೆಯಲಾಗಿದೆ. ಮಧ್ಯಕಾಲದ ಅಂತ್ಯದವರೆಗೂ ಯುರೋಪಿಯನ್ನರಿಗೆ ಭೌಗೋಳಿಕ ಜ್ಞಾನವು ಅಷ್ಟಾಗಿ ತಿಳಿದಿರಲಿಲ್ಲ. ಆನಂತರದ ಬೆಳವಣಿಗೆಗಳಲ್ಲಿ ಯುರೋಪಿಯನ್ನರು ಪ್ರಪಂಚದ ಅನೇಕ ಭಾಗಗಳಿಗೆ ಸಮುದ್ರ ಮಾರ್ಗ ಕಂಡುಹಿಡಿದರು. ಹೊಸ ಖಂಡಗಳಾದ ಉತ್ತರ ಅಮೆರಿಕ, ದಕ್ಷಿಣ ಅಮೆರಿಕ ಹಾಗೂ ಆಸ್ಟ್ರೇಲಿಯಗಳು ಬೆಳಕಿಗೆ ಬಂದವು.

## ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳು

1. ಸಾ.ಶ. 1453ರಲ್ಲಿ ಟರ್ಕರು ಕಾನ್ಸ್‌ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡಾಗ, ಪೂರ್ವ ಮತ್ತು ಪಶ್ಚಿಮ ವ್ಯಾಪಾರದ ಬಾಗಿಲು ಮುಚ್ಚಿಕೊಂಡಂತಾಯ್ತು. ಇದರಿಂದಾಗಿ, ಭಾರತದಿಂದ ಆಮದು ಮಾಡಿಕೊಳ್ಳುತ್ತಿದ್ದ ಸಾಂಬಾರ ಪದಾರ್ಥಗಳಿಂದ ಹೆಚ್ಚಿನ ಲಾಭವು ಟರ್ಕರ ಪಾಲಾಯಿತು. ಪರಿಣಾಮವಾಗಿ ಯುರೋಪಿಯನ್ನರು ಭಾರತಕ್ಕೆ ಹೊಸ ಸಮುದ್ರ ಮಾರ್ಗವನ್ನು ಕಂಡುಹಿಡಿಯಲೇಬೇಕಾದ ಪರಿಸ್ಥಿತಿ ಒದಗಿತು.

2. ಸ್ಪೈನ್ ಮತ್ತು ಪೋರ್ಚ್‌ಗಲ್ ದೇಶಗಳು ಸಾಗರ ವ್ಯಾಪಾರಿಗಳಾದ ಅರಬ್ಬರ ವಿರುದ್ಧ ಸ್ಪರ್ಧಿಸಲು ಇಚ್ಛೆ ಹೊಂದಿದ್ದವು. ಇದರಿಂದ ಸಾಹಸಿ ನಾವಿಕರಿಗೆ ಸ್ಥಳೀಯ ಜನರು, ಶ್ರೀಮಂತರು ಪ್ರೋತ್ಸಾಹಿಸಿದರು.

3. ಹೊಸದೇಶಗಳನ್ನು ಕಂಡುಹಿಡಿದರೆ ಕ್ರೈಸ್ತಮತವನ್ನು ಹರಡಬಹುದೆಂಬ ಆಶಯವೂ ಇತ್ತು.

4. ಪೂರ್ವ ದೇಶಗಳ ಕಡೆ ಸಮುದ್ರ ಪ್ರಯಾಣದ ಸಾಹಸಕ್ಕೆ ಕೈಹಾಕಿದ್ದು ಯುರೋಪಿಯನ್ನರಲ್ಲಿ ಕುತೂಹಲ ಕೆರಳಿಸಿತು. ಸಾಂಬಾರು ಪದಾರ್ಥಗಳು, ರೇಷ್ಮೆ, ಹತ್ತಿ, ಮಸ್ಲಿನ್ ಬಟ್ಟೆ ಮುಂತಾದ ವಸ್ತುಗಳನ್ನು ತಂದು ಲಾಭ ಪಡೆಯಲು ಮುಂದಾದರು.

5. ಪುನರುಜ್ಜೀವನ ಕಾಲದ ವೈಜ್ಞಾನಿಕ ಪ್ರಯೋಗಗಳಿಂದ ಭೂಮಿ ಗುಂಡಾಗಿದೆ ಎಂದು ಸಾಭೀತಾಯಿತು. ನಾವಿಕರ ದಿಕ್ಸೂಚಿ ಮತ್ತು ಅಸ್ಟ್ರೋಲೋಬ್ ಉಪಕರಣಗಳು ನಾವಿಕರಿಗೆ ಸಮುದ್ರದಲ್ಲಿ ಸಂಚರಿಸಲು ಸಹಾಯಕವಾದುವು. ನಕ್ಷೆಗಳು ಮತ್ತು ಭೂಪಟಗಳು ನಾವಿಕರಿಗೆ ಸಿಗುವಂತಾಯಿತು.

6. ಪ್ರಖ್ಯಾತ ಪ್ರವಾಸಿಯಾದ ಮಾರ್ಕೊ ಪೋಲೊ ಪೂರ್ವ ದೇಶಗಳಾದ ಚೀನಾ ಮತ್ತು ಭಾರತಕ್ಕೆ ಬೇಟಿ ನೀಡಿ ಅಲ್ಲಿನ ಸಂಪತ್ತಿನ ವಿವರಣೆಯನ್ನು ತನ್ನ ಕೃತಿಯಾದ 'ಟ್ರಾವಲ್ಸ್ ಆಪ್ ಮಾರ್ಕೊ ಪೋಲೊ'ನಲ್ಲಿ ವಿವರಿಸಿದನು. ಈ ವಿವರಣೆಯು ಸಂಪತ್ತಿನ ವ್ಯಾಮೋಹವಿದ್ದ ಯುರೋಪಿಯನ್ನರನ್ನು ಈ ದೇಶಗಳಿಗೆ ಬರಲು ಪ್ರೋತ್ಸಾಹಿಸಿತು.

©KTBS Not to be re published




## ದಿಕ್ಸೂಚಿ

ನಾವಿಕರು ತಲುಪಬೇಕಾದ ಪ್ರದೇಶದ ದೂರ ಮತ್ತು ಮಾರ್ಗಗಳನ್ನು ತಿಳಿಯಲು ಉಪಯೋಗಿಸುವ ಸಾಧನ.




## ಅಸ್ಟ್ರೋಲೋಬ್

ಸೂರ್ಯ, ಗ್ರಹಗಳು ಮತ್ತು ನಕ್ಷತ್ರಗಳಿಗೆ ಭೂಮಟ್ಟದಿಂದಿರುವ ದೂರ ಹಾಗೂ ಕಾಲವನ್ನು ತಿಳಿಸುವ ಸಾಧನ.

**ಭೂಶೋಧನೆಗಳು**

ಮಧ್ಯಯುಗದ ನಂತರ ಭೂ ಅನ್ವೇಷಣೆ ಕಾರ್ಯದಲ್ಲಿ ತೊಡಗಿದ ಮುಖ್ಯ ರಾಷ್ಟ್ರಗಳೆಂದರೆ ಪೋರ್ಚ್‌ಗಲ್ ಮತ್ತು ಸ್ಪೈನ್. ನಾವಿಕ ಹೆನ್ರಿಯು ಕಳುಹಿಸಿದ್ದ ನಾವಿಕರು ದೀರ್ಘಕಾಲ ಓಡಾಡಿ, ಆಫ್ರಿಕಾ ಖಂಡದ ಪಶ್ಚಿಮ ಕರಾವಳಿಯನ್ನು ಸಾಕಷ್ಟು ದಕ್ಷಿಣದವರೆಗೆ ಶೋಧಿಸಿದ್ದರು. ಬಾರ್ಥಲೋಮ್ಯೂ ಡಯಾಸ್ ಎಂಬ ನಾವಿಕನು ಆಫ್ರಿಕಾದ ದಕ್ಷಿಣ ಭಾಗವನ್ನು ತಲುಪಿ ಅದನ್ನು ಗುಡ್‌ಹೋಪ್ ಭೂಶಿರ ಎಂದು ಕರೆದನು. ಸಾ.ಶ. 1498ರಲ್ಲಿ ವಾಸ್ಕೋ-ಡ-ಗಾಮನು ಆಫ್ರಿಕಾದ ಗುಡ್‌ಹೋಪ್ ಭೂಶಿರವನ್ನು ಸುತ್ತುಹಾಕಿ ಹಿಂದೂ ಮಹಾಸಾಗರವನ್ನು ದಾಟಿ ಭಾರತದ ಕಲ್ಲಿಕೋಟೆಯನ್ನು ತಲುಪಿದನು. ಸಾಗರಮಾರ್ಗದಿಂದ ಭಾರತವನ್ನು ತಲುಪುವ ಯುರೋಪಿಯನ್ನರ ಕನಸು ನನಸಾಯಿತು.




ಪ್ರಪಂಚ ನಕ್ಷೆ (ಹೊಸ ಸಮುದ್ರ ಮಾರ್ಗ)

Not to be re published ©KTBS

ಜಿನೋವಾ ನಗರದ ನಾವಿಕ ಕ್ರಿಸ್ಟೋಫರ್ ಕೊಲಂಬಸ್ ಸ್ಪೈನ್‌ನ ದೊರೆಯ ನೆರವಿನಿಂದ ಸಾ.ಶ. 1492ರಲ್ಲಿ ಅಟ್ಲಾಂಟಿಕ್ ಸಾಗರವನ್ನು ದಾಟಿ ವೆಸ್ಟ್ ಇಂಡಿಸ್‌ನ (ಕೆರಿಬಿಯನ್ಸ್) ಬಹಾಮ ದ್ವೀಪವನ್ನು ತಲುಪಿದನು. ಅಮೆರಿಗೊ ವೆಸ್‌ಪುಸ್ಸಿ ಇಟಲಿಯವನು. ಯುರೋಪಿನಿಂದ ಪಶ್ಚಿಮಕ್ಕೆ ಸಂಚರಿಸಿ ಅಮೆರಿಕವನ್ನು ಕಂಡುಹಿಡಿದನು.

ಪೋರ್ಚ್‌ಗೀಸರ ಕಬ್ರಾಲ್ ಸಾ.ಶ. 1500ರಲ್ಲಿ ಬ್ರೆಝಿಲ್ ತಲುಪಿದರೆ, ಬಲ್ಬೋವ ಪನಾಮ ಜಲಸಂಧಿ ಬಳಿ ಬೆಟ್ಟವೊಂದನ್ನು ಏರಿ ಪಶ್ಚಿಮಕ್ಕೆ ವಿಶಾಲ ಸಾಗರವನ್ನು ಕಂಡನು. ಇದೇ ಪೆಸಿಫಿಕ್ ಸಾಗರ. ಇನ್ನೊಬ್ಬ ಪೋರ್ಚ್‌ಗೀಸ್ ನಾವಿಕ ಫರ್ಡಿನಾಂಡ್ ಮೆಗಲನ್ ಭೂಶಿರವನ್ನು ಸುತ್ತುವರಿದ ಮೊದಲನೆಯವನು. ಸುಮಾರು ಐದು ತಿಂಗಳ ಕಾಲ ಪ್ರಯಾಣಿಸಿ, ಸಾ.ಶ. 1520ರಲ್ಲಿ ದಕ್ಷಿಣ ಅಮೇರಿಕಾವನ್ನು ತಲುಪಿದನು. ಅಲ್ಲಿಂದ ಹಿಂದೂ ಮಹಾಸಾಗರದ ಮೂಲಕ ಫಿಲಿಫೈನ್ಸ್‌ನ್ನು ತಲುಪಿದನು. ಅವನ ಒಂದು ಹಡಗು ಇಂದಿನ ಇಂಡೋನೇಷ್ಯ ದ್ವೀಪಗಳ ಮಧ್ಯದಲ್ಲಿ ಸಾಗಿ, ಭೂಮಿಯ ಪ್ರಥಮ ಪ್ರದಕ್ಷಿಣೆ ಹಾಕಿ ಕೇಪ್ ಆಫ್ ಗುಡ್‌ಹೋಪ್ ಮಾರ್ಗವಾಗಿ ಸ್ಪೈನ್‌ಗೆ ತಲುಪಿತು.

**ಭೂಶೋಧನೆಯ ಪರಿಣಾಮಗಳು**

1. ಯುರೋಪಿಯನ್ನರು ಅಮೇರಿಕಾ, ಆಫ್ರಿಕಾ ಮತ್ತು ಏಷ್ಯಾ ದೊಂದಿಗೆ ನೇರ ಸಂಪರ್ಕ ಸಾಧಿಸಿ ಅಪಾರ ಸಂಪತ್ತು ಗಳಿಸಿದ್ದಲ್ಲದೇ ಜ್ಞಾನವನ್ನು ಸಂಪಾದಿಸಿದರು.
2. ಯುರೋಪಿನ ಆರ್ಥಿಕ ವ್ಯವಸ್ಥೆಯ ಚಹರೆ ಬದಲಾಗಿ ಇಟಲಿ ಮತ್ತು ಜರ್ಮನಿ ಶ್ರೀಮಂತಿಕೆ ಕುಸಿದು ಇಂಗ್ಲೆಂಡ್ ಮತ್ತು ಫ್ರಾನ್ಸ್ ನಂತಹ ದೇಶಗಳು ಪ್ರಬಲ ಸಾಮ್ರಾಜ್ಯಗಳನ್ನು ಕಟ್ಟಿಕೊಂಡವು.
3. ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಅಮೇರಿಕಾ ಮತ್ತು ಭಾರತಗಳಲ್ಲಿ ಮಾರುಕಟ್ಟೆಗಳನ್ನು ವಿಸ್ತರಿಸುವ ಮೂಲಕ ವಸಾಹತುಗಳನ್ನು ಸ್ಥಾಪಿಸಿ ಆರ್ಥಿಕವಾಗಿ ಅಪಾರ ಲಾಭಗಳಿಸಿದರು.
4. ಹೊಸ ಭೂ ಪ್ರದೇಶಗಳಿಗೆ ತೆರಳಿದ ಕ್ರೈಸ್ತ ಧರ್ಮ ಪ್ರಚಾರಕರು ತಮ್ಮ ಧರ್ಮವನ್ನು ಇತರೇ ದೇಶಗಳಿಗೆ ಪರಿಚಯಿಸಿದರು.
5. ಈ ಅನ್ವೇಷಣೆಗಳಿಂದ ಪೂರ್ವ ಮತ್ತು ಪಶ್ಚಿಮ ದೇಶಗಳ ನಡುವೆ ಸಂಸ್ಕೃತೀಯ ವಿನಿಮಯವಾಗಿ ಹೊಸ ಜ್ಞಾನವನ್ನು ಪಡೆದರು.
6. ಮೆಗಲ್ಲಾನ್‌ನ ಯಾನದಿಂದ ಭೂಮಿಯು ಚಪ್ಪಟೆಯಾಗಿಲ್ಲ ದುಂಡಾಗಿದೆ ಎಂದು ಪ್ರಾಯೋಗಿಕವಾಗಿ ಸಾಬೀತಾಯಿತು.
7. ಉತ್ತರ ಅಮೇರಿಕಾದ ಆರ್ಥಿಕ ಅಭಿವೃದ್ಧಿಗೆ ಆಫ್ರಿಕಾದ ನಿಗ್ರೋ ಜನರನ್ನು ಬಳಸಲು ಪ್ರಾರಂಭಿಸಿದ್ದರಿಂದ ಗುಲಾಮರ ವ್ಯಾಪಾರ ಅಸ್ತಿತ್ವಕ್ಕೆ ಬಂದಿತು.

## ಮತಸುಧಾರಣೆ

ಯುರೋಪಿನಲ್ಲಿ ಅಧುನಿಕ ಯುಗ ಗೋಚರಿಸುತ್ತಿದ್ದಂತೆ ಕ್ಯಾಥೋಲಿಕ್ ಚರ್ಚಿನ ಮತ್ತು ಪೋಪ್‌ನ ಅಧಿಕಾರವನ್ನು ಪ್ರಶ್ನಿಸಿ ನೆಡೆಸಿದ ಧಾರ್ಮಿಕ ಚಳವಳಿಯನ್ನು ಮತಸುಧಾರಣೆ ಎನ್ನುತ್ತೇವೆ. ಕ್ರೈಸ್ತ ಧರ್ಮದ ಮೂಲಮಂತ್ರ ಸರಳತೆಯನ್ನು ಬದಿಗೊತ್ತಿದ್ದ ಪರಿಣಾಮವಾಗಿ ಪೋಪರು ಆಡಂಬರ ಮತ್ತು ಚರ್ಚ್‌ನ ದಬ್ಬಾಳಿಕೆಯ ವಿರೋಧವಾಗಿ ಮಾರ್ಟಿನ್ ಲೂಥರ್ ಜರ್ಮನಿಯಲ್ಲಿ ಬೃಹತ್ ಚಳವಳಿಯನ್ನು ಪ್ರಾರಂಬಿಸಿದನು. ಈ ಚಳವಳಿ ಮುಂದೆ ಕ್ರೈಸ್ತ ಧರ್ಮದಲ್ಲಿ ಒಡಕು ಉಂಟುಮಾಡಿದ್ದಲ್ಲದೆ ಕ್ಯಾಥೋಲಿಕ್ಕರನ್ನು ತಾವೇ ವಿಮರ್ಶಿಸಿಕೊಳ್ಳುವ ಪ್ರತಿಸುಧಾರಣೆ ಹಂತಕ್ಕೆ ತಲುಪಿಸಿತು.

©KTBS Not to be republished

**ಕಾರಣಗಳು**

1. ಅನೇಕ ಕ್ರೈಸ್ತ ಸನ್ಯಾಸಿಗಳು ಮತ್ತು ಪೋಪರು ತ್ಯಾಗ ಜೀವನವನ್ನು ನಡೆಸುವ ಬದಲಿಗೆ ಲೌಕಿಕ ಸುಖದಲ್ಲಿ ಮುಳುಗಿದರು. ಅನೇಕರು ನೀತಿಬಾಹಿರ ಕೃತ್ಯಗಳನ್ನು ನಡೆಸಿದರು. ಪೋಪರು ಧಾರ್ಮಿಕತೆಯನ್ನು ಸುಧಾರಿಸುವುದನ್ನು ಬಿಟ್ಟು ರಾಜಕೀಯದಲ್ಲಿ ಆಸಕ್ತಿ ವಹಿಸಿದರು. ಇಟಲಿಯ ಬೊಕಾಶಿಯೋ, ಹಾಲೆಂಡ್‌ನ ಇರಾಸ್‌ಮಸ್ ಮತ್ತು ಇಂಗ್ಲೆಂಡ್‌ನ ಜಾನ್ ವೈಕ್ಲಿಫ್ ಇಂಥಹ ಕೃತ್ಯಗಳನ್ನು ಖಂಡಿಸಿದರು.
2. ಪುರೋಹಿತ ವರ್ಗದವರಲ್ಲಿ ಎಲ್ಲರೂ ವಿದ್ವಾಂಸರಾಗಿರಲಿಲ್ಲ. ಬೈಬಲ್‌ನ ಅಭ್ಯಾಸದಿಂದ ದೂರಸರಿದರು. ಚರ್ಚನಲ್ಲಿ ನಡೆಯುತ್ತಿದ್ದ ವಿದ್ಯಮಾನಗಳಲ್ಲಿ ಇವರೂ ಪಾಲುದಾರರಾಗಿದ್ದರು.
3. ಮಧ್ಯಯುಗದಲ್ಲಿ ಪೋಪರ ಮತ್ತು ರಾಜರ ನಡುವೆ ನಡೆದ ಕಲಹಗಳು ರಾಜರ ಸ್ವಾಭಿಮಾನ ಮತ್ತು ಗೌರವವನ್ನು ಕೆಣಕಿದವು ಇದರಿಂದ ರಾಜರು ಮತಸುಧಾರಕರನ್ನು ಬೆಂಬಲಿಸಿದರು.
4. ರಾಷ್ಟ್ರೀಯ ಪ್ರಭುತ್ವಗಳು ಬೆಳೆದು ಬಲವಾದುವು. ತಮ್ಮ ರಾಜ್ಯದ ಆಂತರಿಕ ವ್ಯವಹಾರದಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚ್ ಅಥವಾ ಪೋಪ್‌ರ ಹಸ್ತಕ್ಷೇಪವನ್ನು ಇಷ್ಟಪಡಲಿಲ್ಲ.
5. ನವೋದಯದಿಂದ ಮೂಡಿದ ವೈಜ್ಞಾನಿಕ ದೃಷ್ಟಿ ಮತ್ತು ಕುತೂಹಲಗಳು ಯುರೋಪಿನ ಜನರಲ್ಲಿ ಇದನ್ನು ಧಾರ್ಮಿಕ ಸಮಸ್ಯೆಗಳಿಗೂ ಅನ್ವಯಿಸಬಹುದೆಂಬ ತೀರ್ಮಾನಕ್ಕೆ ಬರುವಂತೆ ಮಾಡಿದವು.
6. ಮೂಲ ಭಾಷೆಯಾದ ಲ್ಯಾಟಿನ್‌ನಿಂದ ಬೈಬಲ್‌ನ್ನು ಇತರೆ ಭಾಷೆಗಳಿಗೆ ಭಾಷಾಂತರಿಸಿದ್ದುದನ್ನು ಚರ್ಚ್ ವಿರೋಧಿಸಿತು. ಭಾಷಾಂತರಗಳು ಸಾಮಾನ್ಯ ಜನರಿಗೆ ತಲುಪುವ ಮೂಲಕ ಮತಸುಧಾರಣೆ ಚಳವಳಿ ತನ್ನ ಶಕ್ತಿಯನ್ನು ಬೆಳೆಸಿಕೊಂಡಿತು.

**ಮಾರ್ಟಿನ್ ಲೂಥರ್ (1483–1546)**


ಮಾರ್ಟಿನ್ ಲೂಥರ್

ಮಾರ್ಟಿನ್ ಲೂಥರ್ ಮತಸುಧಾರಣೆಯ ಮೂಲ ಪುರುಷ. 1483ರ ನವಂಬರ್‌ನಲ್ಲಿ ಹಾನ್ಸ್ ಮತ್ತು ಮಾರ್ಗೇಟ್ ದಂಪತಿಗಳ ಮಗನಾಗಿ ಇಸಲ್‌ಬೇನ್ ಎಂಬಲ್ಲಿ ಜನಿಸಿದ ಲೂಥರ್ ಮುಂದಿನ ದಿನಗಳಲ್ಲಿ ಸಂತನಾಗಿ ಅಗಸ್ಟಸ್ ಚರ್ಚಿನಲ್ಲಿ ಬೈಬಲ್‌ನನ್ನು ಅಭ್ಯಾಸಿಸಿದನು. ನಂತರ ಜರ್ಮನಿಯ ವಿಟ್ಟನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಧರ್ಮಶಾಸ್ತ್ರದ ಪ್ರಾಧ್ಯಾಪಕನಾದನು. ರೋಂ ನಲ್ಲಿ ಭವ್ಯ ಪರಂಪರೆ ಹೊಂದಿದ್ದ ಚರ್ಚ್ ಮತ್ತು ಪೋಪ್‌ರನ್ನು ಪ್ರತ್ಯಕ್ಷವಾಗಿ ನೋಡುವ ಹಂಬಲವಿದ್ದ ಲೂಥರನು ರೋಂ ಗೆ ಬೇಟಿ ನೀಡಿದನು. ರೋಂ ನ ವೈಭವ, ಪೋಪರ ವೈಭೋಗ ಜೀವನ ಮತ್ತು ಅನೈತಿಕತೆಯನ್ನು ಕಂಡು ಲೂಥರ್ ಅಸಮಧಾನಗೊಂಡನು. ಕ್ರೈಸ್ತ ಧರ್ಮದ ಸರಳ ಬೋಧನೆಗಳಿಗೂ ಪೋಪ್‌ರ ನಡವಳಿಕೆಗಳಿಗೂ ತುಂಬಾ ವ್ಯತ್ಯಾಸಗಳಿದ್ದವು.

ಮಾರ್ಟಿನ್ ಲೂಥರನು ಆರಂಭಿಸಿದ ಧಾರ್ಮಿಕ ಚಳುವಳಿಯು "ಮತ ಸುಧಾರಣೆ" ಎಂಬ ಹೆಸರನ್ನು ಪಡೆಯಿತು. ಮಾರ್ಟಿನ್ ಲೂಥರನು ಕ್ಯಾಥೋಲಿಕ್ ಚರ್ಚ್‌ನವರ ಬೋಧನೆಗಳನ್ನು ತಿರಸ್ಕರಿಸಿದನು. 1517ರಲ್ಲಿ ಅವನು ಪಾಪಕ್ಷಮೆಯ ಪತ್ರಗಳನ್ನು ಮಾರುವುದರ ವಿರುದ್ಧ ಚರ್ಚಿನೊಡನೆ ವಿರೋಧವನ್ನು ಪ್ರಕಟಪಡಿಸಿದನು. ಜನತೆಯು ಮಾಡಿದ ಪಾಪಗಳಿಗೆ ಶಿಕ್ಷೆಯನ್ನು ಕಡಿಮೆ ಮಾಡುವ ಅಧಿಕಾರವು ಪೋಪರಿಗೆ ದೇವರಿಂದ ಕೊಡಲ್ಪಟ್ಟಿದೆ. ಏಸುಕ್ರಿಸ್ತ ಮತ್ತು ಪಾದ್ರಿಗಳು ಮಾಡಿದ ಒಳ್ಳೆಯ ಕಾರ್ಯಗಳಿಂದ ಇಂತಹ ಅಧಿಕಾರವನ್ನು ಅವರಿಗೆ ಕೊಡಲಾಗಿದೆ ಎಂಬುವುದು ಕ್ಯಾಥೋಲಿಕ್ ಚರ್ಚ್‌ನವರ ಅಭಿಪ್ರಾಯವಾಗಿತ್ತು. ಈ

©KTBS Not to be re published

ಬಗೆಯ ಪಾಪಕ್ಷಮೆಯನ್ನು ಪಡೆಯಲು ವ್ಯಕ್ತಿಯು ತಾನಾಗಿಯೇ ಒಳ್ಳೆಯ ಕಾರ್ಯವನ್ನು ಮಾಡಬೇಕಾಗಿತ್ತು. ಆದರೆ ಅನೇಕ ಸಂದರ್ಭಗಳಲ್ಲಿ ಹೀಗೆ ಮಾಡದೆ ಚರ್ಚಿಗೆ ಹಣ ಕೊಡುವ ದಾರಿಯನ್ನು ಹಿಡಿದು ಈ ಕ್ಷಮಾಪಣೆಯನ್ನು ಪಡೆಯುತ್ತಿದ್ದರು. ಪಾಪಕ್ಷಮೆಯ ಪತ್ರಗಳನ್ನು ಚರ್ಚ್‌ನವರು ಮಾರಾಟವನ್ನು ಪ್ರಬಲವಾಗಿ ವಿರೋಧಿಸಿದನು. ಮಾರ್ಟಿನ್ ಲೂಥರನ ಅನುಯಾಯಿಗಳಿಗೆ "ಪ್ರಾಟೆಸ್ಟೆಂಟ್"ರೆಂದು ಹೆಸರಾಯಿತು. ಜರ್ಮನಿಯ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಜನರು ಪ್ರಾಟೆಸ್ಟೆಂಟರಾದರು.

ಮತ ಸುಧಾರಣೆಯು ಯುರೋಪಿನಲ್ಲಿ ಆಂತರಿಕವಾಗಿ ಧಾರ್ಮಿಕ ಸಂಘರ್ಷಗಳನ್ನು ಸೃಷ್ಟಿಸಿತು. ಪರಿಣಾಮವಾಗಿ ಧಾರ್ಮಿಕ ವಾತಾವರಣವು ಕಲುಷಿತವಾಯಿತು. ಯುರೋಪಿನ ಅಧಿಕ ಸಂಖ್ಯೆಯ ಜನರು ಧಾರ್ಮಿಕ ನಂಬಿಕೆಗಳಿಗಾಗಿ ಪ್ರಾಣ ತೆತ್ತರು. ಅನೇಕರನ್ನು ಸೆರೆಮನೆಗೆ ಹಾಕಲಾಯಿತು ಅಥವಾ ಆಸ್ತಿಯ ಹಕ್ಕನ್ನು ಕಸಿದುಕೊಳ್ಳಲಾಯಿತು. ರೋಮನ್ ಕ್ಯಾಥೋಲಿಕ್‌ರು ತಮ್ಮ ಪ್ರಭಾವ ಹೆಚ್ಚಾಗಿದ್ದ ಕಡೆಗಳಲ್ಲಿ ಪ್ರಾಟೆಸ್ಟೆಂಟರಿಗೆ ಕಿರುಕುಳ ಕೊಡುತ್ತಿದ್ದರು. ಪ್ರತಿಯಾಗಿ ಧಾರ್ಮಿಕ ಸುಧಾರಣೆಗೆ ಸರ್ಕಾರದ ಸಹಾಯ ದೊರೆತ ಕಡೆಗಳಲ್ಲಿ ಪ್ರಾಟೆಸ್ಟೆಂಟರು ಕ್ಯಾಥೋಲಿಕ್‌ರಿಗೆ ಕಿರುಕುಳ ಕೊಡುತ್ತಿದ್ದರು. ಪ್ರಸಿದ್ಧ ಮೂವತ್ತು ವರ್ಷಗಳ ಯುದ್ಧವೂ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟರ ದ್ವೇಷ ಮತ್ತು ಹೋರಾಟಗಳ ಫಲವೇ ಆಗಿದೆ.

**ಮತಸುಧಾರಣೆಯ ಪರಿಣಾಮಗಳು :**

1. ಮತಸುಧಾರಣೆಯ ಪರಿಣಾಮವಾಗಿ ಕ್ರೈಸ್ತ ಮತದ ಅಖಂಡತೆಗೆ ಪೆಟ್ಟು ಬಿದ್ದಿತು. ಕ್ರೈಸ್ತ ಮತವು ಮುಖ್ಯವಾಗಿ ಮೂರು ಶಾಖೆಗಳಾಗಿ ಒಡೆಯಿತು. ಅವು ಕ್ಯಾಥೋಲಿಕ್ ಚರ್ಚ್, ಆರ್ಥೋಡಾಕ್ಸ್ ಚರ್ಚ್ ಮತ್ತು ಪ್ರಾಟೆಸ್ಟಂಟ್ ಚರ್ಚ್.
2. ಯುರೋಪಿನ ಅನೇಕ ದೇಶಗಳ ರಾಜರುಗಳು ಪೋಪ್‌ನ ಹಿಡಿತದಿಂದ ಸ್ವತಂತ್ರರಾದರು.
3. ಮತಸುಧಾರಣೆಯು ರಾಷ್ಟ್ರೀಯ ಪ್ರಭುತ್ವಗಳ ಉದಯಕ್ಕೆ ಕಾರಣವಾಯಿತು.
4. ಮುಟ್ಟುಗೋಲು ಹಾಕಿಕೊಂಡ ಚರ್ಚಿನ ಸಂಪತ್ತನ್ನು ಆರ್ಥಿಕ ಅಭಿವೃದ್ಧಿಗಾಗಿ ವಿನಿಯೋಗಿಸಲಾಯಿತು.
5. ರಾಷ್ಟ್ರೀಯ ಭಾವನೆಗಳು ಇನ್ನಷ್ಟು ಬಲವಾದವು ಹಾಗೂ ಯುರೋಪಿನ ರಾಜರುಗಳು ಧಾರ್ಮಿಕ ಸಹಿಷ್ಣುತೆಯನ್ನು ಅಳವಡಿಸಿಕೊಂಡರು.
6. ಈ ಚಳುವಳಿಯಿಂದಾಗಿ ಸಾಹಿತ್ಯ ಕ್ಷೇತ್ರ ಬೆಳೆಯಿತು. ಪ್ರಾದೇಶಿಕ ಭಾಷೆಗಳು ಐರೋಪ್ಯರ ಮನಸ್ಸಿನ ಮೇಲೆ ಪ್ರಭಾವ ಬೀರಿದವು.
7. ಕ್ಯಾಥೋಲಿಕ್ ಚರ್ಚ್‌ನಲ್ಲೇ ಸುಧಾರಣೆಯಾಗಿ, ಅದೇ ಮುಂದೆ "ಪ್ರತಿಸುಧಾರಣೆ" ಚಳುವಳಿಯಾಯಿತು.

**ಪ್ರತಿಸುಧಾರಣಾ ಚಳವಳಿ**

ಪ್ರಾಟೆಸ್ಟೆಂಟರ ಪಂಥವು ಹೊಸ ಧಾರ್ಮಿಕ ಪ್ರಭಾವಿ ಚಳವಳಿಯಾಗಿ ಎಲ್ಲಾ ಕಡೆ ಹರಡಲಾರಂಭಿಸಿತು. ಇದರಿಂದ ಎಚ್ಚೆತ್ತ ಕ್ಯಾಥೋಲಿಕರು ತಮ್ಮ ಪಾರಮ್ಯವನ್ನು ಕಾಪಾಡಿಕೊಳ್ಳಲು ಸುಧಾರಣೆಯ ಅಗತ್ಯವನ್ನು ತಮ್ಮಲ್ಲಿಯೇ ಕಂಡುಕೊಂಡರು. ಪ್ರಾಟೆಸ್ಟಂಟರ ವಾದವು ಜನರ ಗಮನವನ್ನು ಪರಿಣಾಮಕಾರಿಯಾಗಿ ಸೆಳೆಯಿತು. ಈ ಘಟನೆಯು ರೋಮನ್ ಚರ್ಚ್‌ನ ಅಸ್ತಿತ್ವಕ್ಕೂ, ಉಳಿಯುವಿಕೆಗೂ ದೊಡ್ಡ ಆಘಾತವನ್ನುಂಟುಮಾಡಿತು. ಚರ್ಚ್‌ಗಳ ಹಿತರಕ್ಷಣೆಗಾಗಿ ಏನನ್ನಾದರೂ ಅವಶ್ಯಕವಾಗಿ ಮಾಡಲೇಬೇಕಾಯಿತು. ಅಂತಹ ಅವಶ್ಯಕತೆಯೇ ಪ್ರತಿಸುಧಾರಣೆ ಎಂಬ ಚಳುವಳಿಗೆ ಜನ್ಮ ನೀಡಿತು. ಪ್ರಾಟೆಸ್ಟೆಂಟರ ಅಭಿವೃದ್ಧಿಯನ್ನು ತಡೆದು ರೋಮ್‌ನ ಚರ್ಚ್‌ಗಳಿಗಾಗಿದ್ದ ಹಾನಿಯನ್ನು ಸಾಕಷ್ಟು ಸರಿಪಡಿಸಬೇಕೆಂಬುದೇ ಈ ಚಳುವಳಿಯ ಉದ್ದೇಶವಾಗಿತ್ತು.

©KTBS Not to be republished


ಆದುದರಿಂದ ಚರ್ಚ್‌ಗಳಲ್ಲಿ ಆಂತರಿಕವಾದ ಸುಧಾರಣೆಗಳನ್ನು ಮಾಡಿ ಎಲ್ಲಾ ತೊಂದರೆಗಳಿಗೂ ಪರಿಹಾರವನ್ನು ಹುಡುಕುವ ಪ್ರಯತ್ನ ನಡೆಯಿತು. ಅಧಿಕಾರದ ದುರುಪಯೋಗವನ್ನು ತಡೆಗಟ್ಟಲಾಯಿತು. ಚರ್ಚ್‌ಗಳ ಆಡಳಿತ ಕ್ರಮವನ್ನು ಸರಿಪಡಿಸಲಾಯಿತು.

ಈ ಪ್ರತಿ ಸುಧಾರಣಾ ಚಳುವಳಿಯ ನಾಯಕ ಒಬ್ಬ ಸ್ಪ್ಯಾನಿಷ್ ಶ್ರೀಮಂತ, ಇಗ್ನೇಷಿಯಸ್ ಲಯೋಲ. ಇವನು ಸಾ.ಶ.ಪೂ. 1540ರಲ್ಲಿ ಜೀಸಸ್ ಸೊಸೈಟಿಯನ್ನು ಹುಟ್ಟುಹಾಕಿದನು. ಇವರ ಪ್ರಮುಖ ಗುರಿ ರೋಮನ್ ಕ್ಯಾಥೋಲಿಕ್ ಚರ್ಚಿಗೆ ಅಧಿಕಾರವನ್ನು ಹಾಗೂ ಕಳೆದುಹೋಗಿದ್ದ ಅದರ ವೈಭವವನ್ನು ಪುನಃ ಸ್ಥಾಪಿಸುವುದಾಗಿತ್ತು. ಈ ಸಂಘದ ಅನುಯಾಯಿಗಳಿಗೆ ಒಳ್ಳೆಯ ಶಿಕ್ಷಣ ಹಾಗೂ ತರಬೇತಿ ನೀಡಿ ಸಮಾಜದ ಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಸುವುದೇ ಉದ್ದೇಶವಾಗಿತ್ತು.

ಚರ್ಚ್‌ನ ನಿಯಮ ಉಲ್ಲಂಘಿಸುವವರನ್ನು ವಿಚಾರಣೆ ನಡೆಸುವ ಹಾಗೂ ಶಿಕ್ಷಿಸುವ ಉದ್ದೇಶದ "ಇಂಕ್ವಿಜಿಶನ್" ಎಂಬ ಧಾರ್ಮಿಕ ವಿಚಾರಣಾ ಪದ್ಧತಿ ಸಾ.ಶ. 1542 ರಿಂದ ಜಾರಿಗೆ ಬಂದಿತು. ಅಲ್ಲದೆ ಇದು ಕ್ಯಾಥೋಲಿಕರು ಪ್ರೊಟೆಸ್ಟೆಂಟ್ ಮತ ಸ್ವೀಕರಿಸುವುದನ್ನು ತಪ್ಪಿಸಿತು.

## ಕೈಗಾರಿಕಾ ಕ್ರಾಂತಿ

ವಸ್ತುಗಳನ್ನು ಉತ್ಪಾದಿಸುವ ಕ್ರಿಯೆಯಲ್ಲಿ ಮಾನವ ಶಕ್ತಿಯ ಬದಲು ಯಂತ್ರಗಳ ಶಕ್ತಿಯನ್ನು ಬಳಸಿದ ಪ್ರಕ್ರಿಯೆಗೆ ಕೈಗಾರಿಕ ಕ್ರಾಂತಿ ಎನ್ನುತ್ತೇವೆ. ಈ ಪ್ರಪಂಚದ ಜನಜೀವನ ಕಂಡ ಅತ್ಯಂತ ಪರಿಣಾಮಕಾರಿ ಕ್ರಾಂತಿಯಿದು. ಇದು 18ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪ್ರಾರಂಭವಾಗಿ ನಂತರ ಯುರೋಪಿನ ಇತರೇ ದೇಶಗಳಿಗೆ ಹರಡಿ ಪ್ರಪಂಚಾದದ್ಯಾಂತ ವಿಸ್ತರಿಸಿತು.


ಸ್ಪಿನ್ನಿಂಗ್‌ಜೆನ್ನಿ ಎಂಬ ಯಂತ್ರ

ವಸಾಹತುಗಳ ಸ್ಥಾಪನೆಯಿಂದ ವ್ಯಾಪಾರ ಹೆಚ್ಚಿ, ಸಿದ್ಧಪಡಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಾಯಿತು. ಹಿಂದಿನಿಂದ ನಡೆದು ಬಂದ ಉತ್ಪಾದನಾ ಕ್ರಮಗಳು ಹೆಚ್ಚಿನ ಬೇಡಿಕೆಯನ್ನು ಈಡೇರಿಸಲು ಶಕ್ತವಾಗಿರಲಿಲ್ಲ. ಇದೇ ವೇಳೆಗೆ ಬೌದ್ಧಿಕ ಜಾಗೃತಿ ಉಂಟಾಯಿತಲ್ಲದೆ, ಲಾಭಗಳಿಕೆಯ ನಿರೀಕ್ಷೆಯೂ ಹೆಚ್ಚಾಯಿತು. ಈ ಅಂಶಗಳಿಂದ ಕೈಗಾರಿಕೆಯಲ್ಲಿ ನಿರತರಾಗಿದ್ದ ಅನೇಕರನ್ನು ಉತ್ಪಾದನಾ ವಿಧಾನಗಳನ್ನು ಉತ್ತಮ ಪಡಿಸಲು ಪ್ರೇರೇಪಿಸಿದರು. 18ನೇ ಶತಮಾನದ ಉತ್ತರಾರ್ಧದಲ್ಲಿ ಹೊಸ ಹೊಸ ಅನ್ವೇಷಣೆಗಳು ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಗಳನ್ನು ಉಂಟು ಮಾಡಿದವು.

### ಕಾರಣಗಳು

1. ಪುನರುಜ್ಜೀವನದ ಪ್ರಭಾವದಿಂದ ಇಂಗ್ಲೆಂಡಿನಲ್ಲಿ ವೈಜ್ಞಾನಿಕ ಆವಿಷ್ಕಾರಗಳಾಗಿ ಕೈಗಾರಿಕ ಕ್ರಾಂತಿಗೆ ಕಾರಣವಾಯಿತು.
2. ಭೌಗೋಳಿಕ ಅನ್ವೇಷಣೆಗಳಿಂದ ಯುರೋಪಿನ ಪ್ರಬಲ ರಾಷ್ಟ್ರಗಳು ತಮ್ಮ ವಸಾಹತುಗಳಿಂದ ಪಡೆದ ಅಧಿಕ ಲಾಭವನ್ನು ಕೈಗಾರಿಕೆಗಳಲ್ಲಿ ಹೂಡಿ ಕ್ರಾಂತಿಗೆ ಕಾರಣರಾದರು.
3. ಯುರೋಪಿನಲ್ಲಿ ಜನಸಂಖ್ಯೆ ಮತ್ತು ಗ್ರಾಹಕ ಅಭಿರುಚಿಗಳು ಹೆಚ್ಚಾದಂತೆ ಅವಶ್ಯಕ ವಸ್ತುಗಳ ಬೇಡಿಕೆ ಹೆಚ್ಚಾಗಿ ವೈಜ್ಞಾನಿಕ ಸಂಶೋದನೆಗಳು ಅನಿವಾರ್ಯವಾದವು.

©KTBS Not to be republished

4. ಇಂಗ್ಲೆಂಡಿನಲ್ಲಿದ್ದ ರಾಜಕೀಯ ಸ್ಥಿರತೆ ಉತ್ತಮ ಜಲಸಾರಿಗೆ ಸಂಪರ್ಕ, ನೈಸರ್ಗಿಕ ಸಂಪನ್ಮೂಲಗಳು ಕೈಗಾರಿಕಾ ಕ್ರಾಂತಿಗೆ ಕಾರಣವಾದವು.

5. ಯುರೋಪಿನಲ್ಲಿ ಧರ್ಮಯುದ್ಧಗಳಿಂದ ಬೇಸತ್ತಿದ್ದ ವಿಜ್ಞಾನಿಗಳು ತಂತ್ರಜ್ಞರು ಮತ್ತು ಕುಶಲಕರ್ಮಿಗಳು ಇಂಗ್ಲೆಂಡಿನಲ್ಲಿ ನೆಲಸಿ ಕೈಗಾರಿಕಾ ಕ್ರಾಂತಿಯಲ್ಲಿ ಭಾಗಿಯಾದರು.

ಇದು ಪ್ರಾರಂಭವಾದದ್ದು ಇಂಗ್ಲೆಂಡಿನಲ್ಲಿ, ಅನಂತರ ಅದು ಪ್ರಪಂಚದ ಇತರೆ ದೇಶಗಳಿಗೆ ಹರಡಿತು. ಕ್ರಾಂತಿ ಎಂದರೆ ಸಾಮಾನ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಆಗುವಂತಹ ಶೀಘ್ರಗತಿಯ ಮತ್ತು ಹಿಂಸಾತ್ಮಕವಾದ ಭಾರಿ ಬದಲಾವಣೆ. ಆದರೆ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಲ್ಲಿ ಆ ರೀತಿಯ ಶೀಘ್ರಗತಿಯ ಮತ್ತು ಹಿಂಸಾತ್ಮಕ ಬದಲಾವಣೆಗಳೇನೂ ಇರಲಿಲ್ಲ. ಬದಲಾವಣೆಗಳು ಮಂದಗತಿಯು, ಅನುಕ್ರಮವಾದವೂ ಮತ್ತು ಅವಿಚ್ಛಿನ್ನವಾದವೂ ಆಗಿದ್ದವು. ಆದರೆ ಅವು ವ್ಯಾಪಕವಾದುವೂ, ದೂರಗಾಮಿಯು ಆಗಿದ್ದವು.

ಸಾ.ಶ. 1760ಕ್ಕೆ ಮುಂಚೆ ಇಂಗ್ಲೆಂಡ್ ಕೃಷಿ ಪ್ರಧಾನವಾದ ದೇಶವಾಗಿದ್ದರೂ ಉಣ್ಣೆ ಬಟ್ಟೆಗಳು ಮತ್ತು ಹತ್ತಿ ಬಟ್ಟೆಗಳ ಕೈಗಾರಿಕೆಗಳು ಅಭಿವೃದ್ಧಿ ಹೊಂದಿದ್ದವು. ವ್ಯಾಪಾರ ಹೆಚ್ಚಿದಂತೆಲ್ಲ ಸಿದ್ಧಪಡಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಿತು. ಆದರೆ ಬೇಡಿಕೆಗೆ ಸರಿಹೊಂದುವಂತಹ ಉತ್ಪಾದನೆ ಆಗುತ್ತಿರಲಿಲ್ಲ. ಕುಶಲ ಕರ್ಮಿಗಳು ಕಚ್ಚಾ ವಸ್ತುಗಳ ಮೇಲೆ ಹೆಚ್ಚು ಬಂಡವಾಳ ಹೂಡಿ ಉತ್ಪಾದನಾ ವಿಧಾನವನ್ನು ತ್ವರಿತಗೊಳಿಸುವಂತಿರಲಿಲ್ಲ. ಆದ್ದರಿಂದ ಕೆಲವು ಶ್ರೀಮಂತರು ಈ ಕುಶಲ ಕರ್ಮಿಗಳನ್ನು ಕೂಲಿಗೆ ನೇಮಿಸಿಕೊಂಡು ಅವರಿಗೆ ಕಚ್ಚಾವಸ್ತುಗಳನ್ನು ಒದಗಿಸಿ ಅವರು ಕಾರ್ಖಾನೆಗಳೆಂಬ ದೊಡ್ಡ ಕಟ್ಟಡಗಳಲ್ಲಿ ಕೆಲಸ ಮಾಡುವಂತೆ ಮಾಡಿದರು. ಇದೇ ಮುಂದೆ ಕಾರ್ಖಾನೆ ಪದ್ಧತಿಗೆ ನಾಂದಿಯಾಯಿತು. ಕಾರ್ಖಾನೆ ಮಾಲೀಕರು ಇಲ್ಲಿ ತಯಾರಾದ ವಸ್ತುಗಳನ್ನು ಮಾರಾಟ ಮಾಡಿ ಅಧಿಕ ಲಾಭ ಗಳಿಸಿದರೂ ಕುಶಲ ಕರ್ಮಿಗಳು ಹಾಗೂ ಇತರೆ ಕಾರ್ಮಿಕರು ಬಡವರಾಗಿಯೇ ಮುಂದುವರಿದರು.

ಸಾ.ಶ. 1760 ರಿಂದ 1830ರ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ಬಟ್ಟೆ ತಯಾರಿಕಾ ಕೈಗಾರಿಕೆಯಲ್ಲಿ ಮಹತ್ತರ ಬದಲಾವಣೆ ಉಂಟಾಯಿತು. ಸಾ.ಶ.1764ರಲ್ಲಿ ಜೇಮ್ಸ್ ಹಾರ್‌ಗ್ರೀವ್ಸ್ ಎಂಬುವನು ಸ್ಪಿನ್ನಿಂಗ್ ಜೆನ್ನಿ ಎಂಬ ನೂಲುವ ಯಂತ್ರವನ್ನು ಕಂಡುಹಿಡಿದನು. ಕೆಲವು ವರ್ಷಗಳ ನಂತರ ರಿಚರ್ಡ್ ಆರ್ಕ್‌ರೈಟ್ ಎಂಬುವನು ಸ್ಪಿನ್ನಿಂಗ್ ಜೆನ್ನಿಯನ್ನು ಉತ್ತಮಪಡಿಸಿದನು ಹಾಗೂ ಸಾ.ಶ.1769ರಲ್ಲಿ ಅವನು ನೀರಿನ ಚೌಕಟ್ಟನ್ನು ಕಂಡು ಹಿಡಿದನು.

ಸಾ.ಶ. 1779ರಲ್ಲಿ ಸ್ಯಾಮ್ಯುಯಲ್ ಕ್ಯಾಂಪ್ಟನ್ ಎಂಬುವನು 'ಮ್ಯೂಲ್' ಯಂತ್ರವನ್ನು ಕಂಡುಹಿಡಿದನು. ಜಾನ್‌ಕೇ ಎಂಬುವನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುವ ಲಾಳವನ್ನು ಕಂಡು ಹಿಡಿದನು. ಸಾ.ಶ.1785ರಲ್ಲಿ ಎಡ್ಮಂಡ್ ಕಾರ್ಟ್‌ರೈಟ್ ಎಂಬುವನು ಪವರ್‌ಲೂಮ್ ಎಂಬ ನೇಯ್ಗೆ ಯಂತ್ರವನ್ನು ಕಂಡುಹಿಡಿದನು. ಇದರಿಂದ ಹೆಚ್ಚು ಬಟ್ಟೆಯನ್ನು ಅಲ್ಪ ಕಾಲದಲ್ಲಿ ಉತ್ಪಾದಿಸುವುದು ಸಾಧ್ಯವಾಯಿತು.

ಸಾ.ಶ. 1793ರಲ್ಲಿ ಎಲಿ ವಿಟ್ನಿ ಎಂಬುವನು ಕಾಟನ್‌ಜಿನ್ ಎಂಬ ಯಂತ್ರವನ್ನು ಕಂಡುಹಿಡಿದನು. ಈ ಎಲ್ಲ ಆವಿಷ್ಕಾರಗಳು ನೂಲುವ, ನೇಯುವ ಮತ್ತು ಹತ್ತಿಯಿಂದ ಬೀಜವನ್ನು ಬೇರ್ಪಡಿಸುವುದಲ್ಲದೇ ತೀವ್ರಗತಿಯ ಉತ್ಪಾದನೆಗೆ ಕಾರಣವಾದವು.

ಆವಿಯ ಯಂತ್ರದ ಆವಿಷ್ಕಾರ ಕೈಗಾರಿಕಾ ಕ್ರಾಂತಿಯಲ್ಲಿ ಮಹತ್ತರವಾದ ಮೈಲಿಗಲ್ಲಾಯಿತು ಸಾ.ಶ. 1705ರಲ್ಲಿ ಥಾಮಸ್ ಮ್ಯಾಕೋಮೆಸ್‌ನು ಒಂದು ಆವಿಯ ಯಂತ್ರವನ್ನು ಕಂಡುಹಿಡಿದನು ಸಾ.ಶ. 1774ರಲ್ಲಿ ಜೇಮ್ಸ್‌ವ್ಯಾಟ್ ಎಂಬುವನು ಈ ಆವಿಯ ಯಂತ್ರವನ್ನು ಉತ್ತಮಪಡಿಸಿದನು. ಸಾ.ಶ. 1801ರಲ್ಲಿ ರಿಚರ್ಡ್ ಟ್ರೆವೆಥಿಕ್ ಎಂಬುವನು ವ್ಯಾಟ್‌ನ ಹಬೆ ಯಂತ್ರವನ್ನು ರೈಲು ಬಂಡಿಗೆ ಜೋಡಿಸಿ ರಸ್ತೆಯ ಮೇಲೆ ಚಲಿಸುವಂತೆ

©KTBS Not to be republished

ಮಾಡಿದನು. ಆನಂತರ ಹಳಿಗಳ ಮೇಲೆ ಚಲಿಸುವ ಒಂದು ಸ್ವಯಂಚಾಲಿತ ಆವಿ ಎಂಜಿನನ್ನು ಕಂಡುಹಿಡಿದನು. ಜಾರ್ಜ್ ಸ್ಟೀವನ್‌ಸನ್‌ನು ಸಾ.ಶ. 1815ರಲ್ಲಿ. ಸಾಮಾನು ಸಾಗಣೆಯ ರೈಲು ಬಂಡಿಗಳನ್ನು ಕಂಡುಹಿಡಿದನು. ಇಂಗ್ಲೆಂಡಿನ ಸ್ಟಾಕ್‌ಟನ್ ಮತ್ತು ಡಾರ್ಲಿಂಗ್‌ಟನ್ ಪಟ್ಟಣಗಳ ನಡುವೆ ಪ್ರಯಾಣಿಕರನ್ನು ಸಾಗಿಸುವ ಒಂದು ರೈಲನ್ನು ಮತ್ತು ಲಿವರ್‌ಪೂಲ್ ಮತ್ತು ಮ್ಯಾಂಚೆಸ್ಟರ್‌ಗಳ ನಡುವೆ ಕೈಗಾರಿಕಾ ಉತ್ಪನ್ನಗಳ ಸಾಗಾಣಿಕೆಗಾಗಿಯೇ ರೈಲು ಮಾರ್ಗವನ್ನು ನಿರ್ಮಿಸಲಾಯಿತು.

ಸಾ.ಶ. 1801 ರಲ್ಲಿ ವಿಲಿಯಂ ಸಿಮಿಂಗ್ಟನ್ ಎಂಬ ಅಮೇರಿಕನ್ನನು ವ್ಯಾಟ್ಸ್‌ನ ಒಂದು ಎಂಜಿನನ್ನು ಒಂದು ದೋಣಿಗೆ ಜೋಡಿಸಿ ಅದು ಚಲಿಸುವಂತೆ ಮಾಡಿದನು. ರಾಬರ್ಟ್‌ಫುಲ್ಟನ್ ಎಂಬ ಮತ್ತೊಬ್ಬ ಅಮೇರಿಕದವನು ಮತ್ತೊಂದು ಆವಿಯ ಹಡಗನ್ನು ಕಂಡುಹಿಡಿದನು.

**ಪರಿಣಾಮಗಳು**

1. ಕೈಗಾರಿಕಾ ಕ್ರಾಂತಿಯಿಂದ ಇಂಗ್ಲೇಂಡಿನ ಆರ್ಥಿಕತೆ ಸದೃಡವಾಗಿ ಅತ್ಯಂತ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿತು.
2. ಬೃಹತ್ ಕೈಗಾರಿಕೆಗಳು ಹೆಚ್ಚಾದಂತೆ ಕಾರ್ಮಿಕರ ಶೋಷಣೆಗಳು ಹೆಚ್ಚಾಗಿ ಸಮಾಜವಾದವು ಉದಯಿಸಿತು.
3. ಆಧುನಿಕತೆಯು ವೇಗವಾಗಿ ವಿಸ್ತರಿಸಿ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನ ಮಟ್ಟವು ಅಭಿವೃದ್ದಿಯಾಯಿತು.
4. ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಸಾರಿಗೆ ಸಂಪರ್ಕದ ಕ್ಷೇತ್ರದಲ್ಲಾದ ಸಂಶೋದನೆಗಳಿಂದ ಇಡೀ ವಿಶ್ವವೇ ಒಂದು ಹಳ್ಳಿಯಂತೆ ಕಾಣಿಸಿತು.
5. ಕೈಗಾರಿಕಾ ಕ್ರಾಂತಿಯಿಂದ ಹೆಚ್ಚಿನ ಅಭಿವೃದ್ಧಿಯಾದರೂ ಜನಸಂಖ್ಯೆಯ ಹೆಚ್ಚಳದಿಂದ ಬಡತನ, ನಿರುದ್ಯೋಗ ಮತ್ತು ಆಹಾರ ಸಮಸ್ಯೆಗಳು ಗೋಚರಿಸಿದವು.
6. ಕೈಗಾರಿಕಾ ಕ್ರಾಂತಿಯಿಂದ ಶ್ರೀಮಂತ ಮತ್ತು ಬಡವರ ನಡುವಿನ ಅಂತರ ಹೆಚ್ಚಾಗಿ ವರ್ಗ ಸಂಘರ್ಷವು ಉದಯಿಸಿತು.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.**

1. ರಿನೈಸಾನ್ಸ್ ಎಂದರೆ ________ .
2. ಪುನರುಜ್ಜೀವನ ಜನಕ ಎಂದು ________ ನನ್ನು ಕರೆಯಲಾಗಿದೆ.
3. ಮಾರ್ಟಿನ್ ಲೂಥರ್‌ನ ಅನುಯಾಯಿಗಳು ________ .
4. ಪ್ರತಿ ಸುಧಾರಣಾ ಚಳುವಳಿಯ ನಾಯಕ ________ .
5. ಸ್ಪಿನ್ನಿಂಗ್‌ಜೆನ್ನಿ ಯಂತ್ರವನ್ನು ಕಂಡು ಹಿಡಿದವನು ________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಮತ ಸುಧಾರಣೆಯ ಪರಿಣಾಮಗಳಾವುವು?

©KTBS Not to be re published

2. ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳನ್ನು ಬರೆಯಿರಿ.

3. ಲಿಯೋನಾರ್ಡ – ಡ– ವಿಂಚಿಯ ಮುಖ್ಯ ವರ್ಣ ಚಿತ್ರಗಳಾವುವು?

4. ಪುನರುಜ್ಜೀವನ ಕಾಲದಲ್ಲಿ ಸಾಹಿತ್ಯ ಬೆಳವಣಿಗೆಯನ್ನು ಉದಾಹರಣೆ ಸಹಿತ ವಿವರಿಸಿ.

5. ಕೈಗಾರಿಕಾ ಕ್ರಾಂತಿಯ ಪರಿಣಾಮಗಳನ್ನು ತಿಳಿಸಿ.

**III. ಚಟುವಟಿಕೆಗಳು :**

1. ಪುನರುಜ್ಜೀವನ ಕಾಲದ ವಿಜ್ಞಾನಿಗಳ ಬಗ್ಗೆ ನಿಮ್ಮ ಶಿಕ್ಷಕರಿಂದ ತಿಳಿದುಕೊಳ್ಳಿ.

2. ಕೈಗಾರಿಕಾ ಕ್ರಾಂತಿಯಲ್ಲಿ ಕಂಡು ಹಿಡಿದ ಯಂತ್ರಗಳ ಚಿತ್ರಗಳನ್ನು ಸಂಗ್ರಹಿಸಿ.

**IV. ಯೋಜನೆಗಳು :**

1. ಪುನರುಜ್ಜೀವನ ಕಾಲದ ಕಲಾಕಾರರು – ಅವರುಗಳ ರಚನೆಗಳನ್ನು ಸಂಗ್ರಹಿಸಿ ಒಂದು ಯೋಜನೆ ತಯಾರಿಸಿ.

2. ವಿಜ್ಞಾನಿಗಳು ಮತ್ತು ಅವರ ಸಂಶೋಧನೆಗಳನ್ನು ಪಟ್ಟಿ ಮಾಡಿ.

3. ನಿಮ್ಮ ಶಾಲಾ ಕಲಾ ಶಿಕ್ಷಕರೊಂದಿಗೆ ಚರ್ಚಿಸಿ ಈಗಿನ ವಿವಿಧ ಕಲಾಕಾರರ ಜೀವನ ಚರಿತ್ರೆಯನ್ನು ಸಂಗ್ರಹಿಸಿ.

4. ಪ್ರಾಚೀನ ಮತ್ತು ಭಾರತದಲ್ಲಿದ್ದ ಮಧ್ಯಕಾಲದ ವಿಜ್ಞಾನಿಗಳ ಹೆಸರುಗಳು ಮತ್ತು ಅವರ ಸಂಶೋಧನೆಗಳನ್ನು ಪಟ್ಟಿಮಾಡಿ.

◈ ◈ ◈

©KTBS Not to be re published

## ಅಧ್ಯಾಯ–9

# ಕ್ರಾಂತಿಗಳು ಮತ್ತು ರಾಷ್ಟ್ರಗಳ ಏಕೀಕರಣ

### ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ರಾಷ್ಟ್ರೀಯ ಪ್ರಭುತ್ವಗಳ ಉದಯ ಮತ್ತು ಬೆಳವಣಿಗೆ
- ಅಮೆರಿಕ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣಗಳು ಮತ್ತು ಪರಿಣಾಮಗಳು
- ಫ್ರಾನ್ಸಿನ ಮಹಾಕ್ರಾಂತಿಗೆ ಕಾರಣಗಳು
- ಇಟಲಿ ಮತ್ತು ಜರ್ಮನಿಯ ಏಕೀಕರಣ

ಆಧುನಿಕ ಯುಗದ ಆರಂಭವನ್ನು ಸೂಚಿಸುವ ಬಹುಮುಖ್ಯ ಅಂಶವೆಂದರೆ ರಾಷ್ಟ್ರೀಯ ಪ್ರಭುತ್ವಗಳ ಉದಯ. 15, 16 ಮತ್ತು 17ನೆಯ ಶತಮಾನಗಳಲ್ಲಿ ತಲೆಯೆತ್ತಿದ ಫ್ರಾನ್ಸ್, ಇಟಲಿ, ಜರ್ಮನಿ ಮುಂತಾದ ರಾಜ್ಯಗಳ ರಚನೆಗೆ ತರ್ಕಬದ್ಧವಾದ ಆಧಾರವಿರಲಿಲ್ಲ. ಅವು ಚಕ್ರಾಧಿಪತ್ಯದಿಂದ ಹಿಡಿದು ನಗರ ರಾಜ್ಯಗಳವರೆಗೆ ವೈವಿಧ್ಯತೆಯನ್ನು ಹೊಂದಿದ್ದವು. ಆ ರಾಜ್ಯಗಳಲ್ಲಿ ವಾಸಿಸುತ್ತಿದ್ದ ಜನರು ಒಂದೇ ಬಗೆಯವರಾಗಿರಲಿಲ್ಲ. ಬೇರೆ ಬೇರೆ ಭಾಷೆಗಳನ್ನಾಡುತ್ತಿದ್ದರು ಮತ್ತು ಭಿನ್ನ ಭಿನ್ನವಾದ ಸಂಸ್ಕೃತಿಗಳನ್ನು ಹೊಂದಿದ್ದರು.

ಊಳಿಗಮಾನ್ಯ ಪದ್ಧತಿಯ ಅವನತಿಯಿಂದ ಉಂಬಳಿ ಜಮೀನುದಾರರ ರಾಜಕೀಯ ಶಕ್ತಿಯೂ ಕುಂದಿತು. ಇದರಿಂದ ಯುರೋಪಿನ ಅನೇಕ ರಾಜರು ಉಂಬಳಿ ಜಮೀನುದಾರರ ಮೇಲಿದ್ದ ತಮ್ಮ ಅವಲಂಬನೆಯನ್ನು ಕಡಿಮೆ ಮಾಡಿಕೊಂಡು ಎಲ್ಲಾ ಅಧಿಕಾರವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಅನೇಕ ರಾಜರುಗಳು ದೈವದತ್ತಾಧಿಕಾರ (Divine Kingship)ದಲ್ಲಿ ನಂಬಿಕೆ ಇಟ್ಟಿದ್ದು ಪ್ರಜೆಗಳಿಗೆ ಉತ್ತರಿಸಬೇಕಿಲ್ಲವೆಂದು ತಿಳಿದಿದ್ದರು.

ಮಧ್ಯಮ ವರ್ಗವು ತನ್ನ ಹಿತದೃಷ್ಟಿಯಿಂದ ರಾಜರುಗಳಿಗೆ ಬೆಂಬಲ ನೀಡಿತು ಮತ್ತು ರಾಷ್ಟ್ರೀಯ ಪ್ರಭುತ್ವಗಳ ಉದಯ ಮತ್ತು ಬೆಳವಣಿಗೆಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಅತಿ ಪ್ರಬಲವಾದ ರಾಷ್ಟ್ರೀಯ ಭಾವನೆ ಅಥವಾ ದೇಶಪ್ರೇಮ ತನ್ನದೇ ಆದ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳನ್ನು ಹೊಂದಿದ್ದಿತು. ಈ ರಾಷ್ಟ್ರಗಳು ಊಳಿಗಮಾನ್ಯ ಕಾಲದ ಅನಾಯಕತ್ವವನ್ನು ಅಂತ್ಯಗೊಳಿಸಿದವು. ಅವು ಒಂದೇ ಬಗೆಯ ಸಂಸ್ಕೃತಿಯನ್ನು ಹೊಂದಿದ್ದ ಜನರನ್ನು ಒಬ್ಬ ದೊರೆಯ ಆಳ್ವಿಕೆಯಲ್ಲಿ ಒಟ್ಟುಗೂಡುವಂತೆ ಮಾಡಿದವು.

ರಾಷ್ಟ್ರ–ರಾಷ್ಟ್ರಗಳ ನಡುವೆ ಘರ್ಷಣೆ ಮತ್ತು ಪೈಪೋಟಿ ಪ್ರಾರಂಭವಾಯಿತು. ಅಮೆರಿಕ ಮತ್ತು ಏಷ್ಯಾ ಖಂಡಗಳಲ್ಲಿ ವ್ಯಾಪಾರ ಮತ್ತು ವಸಾಹತುಗಳ ಹತೋಟಿಗಾಗಿ ಘರ್ಷಣೆ ಮತ್ತು ಯುದ್ಧಗಳಿಗೆ ಅವಕಾಶ ಮಾಡಿಕೊಟ್ಟಿತು.

### ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮ

ಅಮೆರಿಕ ಖಂಡವನ್ನು ಕಂಡುಹಿಡಿದ ನಂತರ ಯುರೋಪಿನ ಅನೇಕ ದೇಶಗಳು ಅಲ್ಲಿ ವಸಾಹತುಗಳನ್ನು ಸ್ಥಾಪಿಸಲು ಪ್ರಾರಂಭಿಸಿದವು. ಉತ್ತರ ಅಮೆರಿಕದಲ್ಲಿ ವಸಾಹತುಗಳನ್ನು ಸ್ಥಾಪಿಸಿದ ದೇಶಗಳಲ್ಲಿ ಫ್ರಾನ್ಸ್, ಸ್ಪೈನ್, ಹಾಲೆಂಡ್ ಮತ್ತು ಇಂಗ್ಲೆಂಡ್ ಮುಖ್ಯವಾದವು. ಉತ್ತರ ಅಮೆರಿಕದ ಅಟ್ಲಾಂಟಿಕ್ ತೀರದ ಉದ್ದಕ್ಕೂ ಇಂಗ್ಲೆಂಡಿನ ಹದಿಮೂರು ವಸಾಹತುಗಳು ಸ್ಥಾಪನೆಗೊಂಡವು. ಇವುಗಳನ್ನು "ಹೊಸ ಇಂಗ್ಲಿಷ್ ವಸಾಹತುಗಳು"

©KTBS Not to be re published

ಎಂದು ಕರೆಯಲಾಗಿತ್ತು. ಉತ್ತರ ಅಮೆರಿಕಾದಲ್ಲಿ ವಸಾಹತುಗಳ ಸ್ಥಾಪನೆಗೆ ಫ್ರಾನ್ಸ್ ಮತ್ತು ಇಂಗ್ಲೆಂಡ್ ದೇಶಗಳು ಮುಖ್ಯ ಸ್ಪರ್ಧಿಗಳಾಗಿದ್ದವು. ಸಂಪೂರ್ಣ ಸ್ವಾತಂತ್ರ್ಯದ ಹೆಬ್ಬಯಕೆಯು ಅಮೆರಿಕಾದ ವಸಾಹತುಗಳು ಇಂಗ್ಲೆಂಡಿನ ವಿರುದ್ಧ ದಂಗೆ ಏಳುವಂತೆ ಮಾಡಿತು.

**ಉತ್ತರ ಅಮೇರಿಕಾದ 13 ಇಂಗ್ಲೀಷ್ ವಸಾಹತುಗಳು**

1) ನ್ಯೂ ಹ್ಯಾಂಪ್‌ಷೈರ್
2) ನ್ಯೂಯಾರ್ಕ್
3) ಪೆನ್ಸಿಲ್ವೇನಿಯಾ
4) ಮಸ್ಸಾಚುಸೆಟ್ಸ್
5) ರೋಡ್ಸ್ ಐಲಂಡ್
6) ಕನೇಕ್ಟಿಕಟ್
7) ನ್ಯೂಜೆರ್ಸಿ
8) ದಿಲಾವೇರ್
9) ಮೇರಿಲ್ಯಾಂಡ್
10) ವರ್ಜೀನಿಯ
11) ಉತ್ತರ ಕೆರೋಲಿನ
12) ದಕ್ಷಿಣ ಕೆರೋಲಿನ
13) ಜಾರ್ಜಿಯ

**ನಿಮಗಿದು ತಿಳಿದಿರಲಿ:**

ಸಪ್ತ ವಾರ್ಷಿಕ ಯುದ್ಧ (ಸಾ.ಶ. 1756 – 63) ವು ಫ್ರಾನ್ಸ್ ಮತ್ತು ಇಂಗ್ಲೆಂಡ್ ನಡುವೆ ನಡೆಯಿತು. ನೌಕಾ ಕಾಯಿದೆಯು 1760ರಲ್ಲಿ ಜಾರಿಗೊಂಡಿತು. ಇಂಗ್ಲೆಂಡ್ ವಸಾಹತು ಸಮುದ್ರ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಅನುಭವಿಸಿತು. 1764ರಲ್ಲಿ ಜಾರಿಗೆ ತಂದ ಮೊಲಾಸಿಸ್ (ಕಾಕಂಬಿ) ಕಾಯಿದೆಯು ಅಮೆರಿಕಾದ ಮದ್ಯ ತಯಾರಿಕರಿಗೆ ಕಾಕಂಬಿ ಸಾಗಿಸಲು ಅನುಕೂಲವೊದಗಿಸಿತು. ಸಾ.ಶ. 1774ರ ಕ್ವಿಬೆಕ್ ಕಾಯಿದೆಯು ವಸಾಹತುಗಳ ಅಸಹನೆಗೆ ಕಾರಣವಾಯಿತು. 1765ರಲ್ಲಿ ಸ್ಟಾಂಪ್ ಕಾಯಿದೆ ಜಾರಿಗೆ ಬಂದು, ಸಾ.ಶ. 1767ರಲ್ಲಿ ಚಹಾ, ಕಾಗದ, ಗಾಜು ಮುಂತಾದ ವಸ್ತುಗಳ ಮೇಲೆ ತೆರಿಗೆ ಹಾಕಲು ಸಾಧ್ಯವಾಯಿತು.

**ಕಾರಣಗಳು :** ವಸಾಹತುಗಳ ಬಗ್ಗೆ ಇಂಗ್ಲೆಂಡಿನ ಧೋರಣೆ ಮತ್ತು ವಸಾಹತುಗಳಲ್ಲಿ ಬೆಳೆಯಲು ಆರಂಭಗೊಂಡ ಸ್ವಾತಂತ್ರ್ಯ ಪ್ರೇಮ, ಸಪ್ತವಾರ್ಷಿಕ ಯುದ್ಧದ ಪರಿಣಾಮಗಳು, ನೌಕಾ ಕಾಯಿದೆಗಳು, ಥಾಮಸ್ ಪೈನ್, ಜಾನ್ ಆಡಮ್ಸ್, ಸ್ಯಾಮುಯಲ್ ಆಡಮ್ಸ್, ಜಾನ್ ಎಡ್ವರ್ಡ್ ಕೋಕ್ ಮತ್ತು ಬೆಂಜಮಿನ್ ಫ್ರಾಂಕ್‌ಲಿನ್ ಮುಂತಾದ ಬರಹಗಾರರ ಪ್ರಭಾವ, ಕ್ವಿಬೆಕ್ ಕಾಯಿದೆ, ಟೌನ್‌ಶೆಂಡ್ ತೆರಿಗೆಗಳು ಮತ್ತು ಬಾಸ್ಟನ್ ಚಹಾಕೂಟ ಮುಂತಾದ ಕಾರಣಗಳಿಂದಾಗಿ ಅಮೆರಿಕದಲ್ಲಿ ಕ್ರಾಂತಿ ಉಂಟಾಯಿತು. ಇಂಗ್ಲೇಂಡಿನಿಂದ ಬಂದವರು ಅಮೇರಿಕಾದಲ್ಲಿ ವಸಾಹತುಗಳನ್ನು ಸ್ಥಾಪಿಸಿಕೊಂಡರು.

ಬಾಸ್ಟನ್ ಚಹಾಕೂಟ (ಕ್ರಿ.ಶ. 1773): ವಿರೋಧ ಇದ್ದರೂ ಬ್ರಿಟನ್ ಚಹಾ ಪುಡಿ ತುಂಬಿದ ಹಡಗೊಂದನ್ನು ಬಾಸ್ಟನ್ ಬಂದರಿಗೆ ಕಳುಹಿಸಿತು ಇದು ವಸಾಹತುಗಾರರನ್ನು ಕೆರಳಿಸಿತು. 50ಜನರ ಗುಂಪೊಂದು ರೆಡ್ ಇಂಡಿಯನ್‌ರ ವೇಷ ಧರಿಸಿಕೊಂಡು ಚಹ ತುಂಬಿದ ಹಡಗನ್ನು ಪ್ರವೇಶಿಸಿ ಅದರಲ್ಲಿದ್ದ 340 ಚಹಾ ಪೆಟ್ಟಿಗೆಗಳನ್ನು ಸಮುದ್ರಕ್ಕೆ ಎಸೆದರು.

**ಸ್ವಾತಂತ್ರ್ಯ ಘೋಷಣೆ:** ಪರಿಸ್ಥಿತಿಯನ್ನು ವಿಮರ್ಶಿಸಲು ಸಾ.ಶ. 1774ರಲ್ಲಿ ಅಮೆರಿಕಾದ ಹದಿಮೂರು ಇಂಗ್ಲಿಷ್ ವಸಾಹತುಗಳ ಪ್ರತಿನಿಧಿಗಳು ಫಿಲಿಡೆಲ್ಫಿಯಾ ನಗರದಲ್ಲಿ ಸಭೆ ಸೇರಿದರು. ಅವರು ತಮ್ಮ ಸ್ವಾತಂತ್ರವನ್ನು ಮೊಟಕುಗೊಳಿಸುವ ತಮ್ಮ ತಾಯ್ನಾಡಿನ (ಇಂಗ್ಲೇಂಡಿನ) ಪ್ರಯತ್ನಗಳನ್ನು ಸಶಸ್ತ್ರ ಬಲದಿಂದ ಪ್ರತಿಭಟಿಸುವುದಾಗಿ ನಿರ್ಧರಿಸಿದರು. ಬ್ರಿಟನ್ನಿನ ರಾಜ ಅವರ ಕ್ರಮವನ್ನು ದಂಗೆ ಎಂದು ಘೋಷಿಸಿದನು ಮತ್ತು ವಸಾಹತುಗಾರರ ಪ್ರತಿಭಟನೆಯನ್ನು ಅಡಗಿಸಲು ಸೈನ್ಯ–ತುಕಡಿಗಳನ್ನು ಕಳುಹಿಸಿದನು. ವಸಾಹತುಗಾರರಿಗೆ ಈಗ ತಮ್ಮ ಸ್ಥಳೀಯ ಸೈನ್ಯದೊಡನೆ ಬ್ರಿಟೀಷರನ್ನು ಎದುರಿಸುವುದರ ಹೊರತು ಬೇರೆ ಮಾರ್ಗವೇ ಇರಲಿಲ್ಲ. ಈ ರೀತಿಯಲ್ಲಿ ಸಾ.ಶ. 1775, ಏಪ್ರಿಲ್ 19ರಂದು "ಲೆಕ್ಸಿಂಗ್‌ಟನ್" ಎಂಬಲ್ಲಿ ವಸಾಹತುಗಾರರ ಒಂದು ಸೈನ್ಯದ ತುಕುಡಿಯು ಬ್ರಿಟೀಷರ ಮೇಲೆ ದಾಳಿ ಮಾಡಿದಾಗ, ಅಮೆರಿಕಾದ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಯಿತು. ಫಿಲಿಡೆಲ್ಫಿಯಾ ಸಭೆಯು ಆಗ ಜಾರ್ಜ್ ವಾಷಿಂಗ್ಟನ್‌ನನ್ನು ವಸಾಹತುಗಾರರ ಸೈನ್ಯದ ದಂಡನಾಯಕನನ್ನಾಗಿ ನೇಮಿಸಿತು.

© KTBS Not to be re published

**ಜಾರ್ಜ್‌ವಾಷಿಂಗ್ಟನ್ :** ಜಾರ್ಜ್ ವಾಷಿಂಗ್ಟನ್ ವರ್ಜೀನಿಯಾದ ಒಬ್ಬ ತೋಟಗಾರ. ಇವನು ಫ್ರೆಂಚರ ವಿರುದ್ಧ ನಡೆದ ಸಪ್ತ ವಾರ್ಷಿಕ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿ, ಸೈನ್ಯಾಧಿಕಾರಿಯಾಗಿ ಕೀರ್ತಿ ಗಳಿಸಿದ್ದ. ಅವನು ಅಶಿಕ್ಷಿತ ಮತ್ತು ಅವ್ಯವಸ್ಥಿತ ವಸಾಹತು ಸೈನಿಕರನ್ನು ಸ್ಥೈರ್ಯ ಮತ್ತು ಉತ್ಸಾಹಗಳಿಂದ ಹುರಿದುಂಬಿಸಿದ. ಅವರುಗಳು ಬ್ರಿಟೀಷರೊಡನೆ ಧೈರ್ಯದಿಂದ ಹೋರಾಡುವಂತೆ ಮಾಡಿದ. ಸಾ.ಶ. 1776, ಜುಲೈ 4ರಂದು ಫಿಲಿಡೆಲ್ಫಿಯಾದ ರಾಷ್ಟ್ರೀಯ ಸಭೆಯು ಪ್ರಖ್ಯಾತವಾದ 'ಸ್ವಾತಂತ್ರ ಘೋಷಣೆ'ಯನ್ನು ಅಂಗೀಕರಿಸಿತು ಹಾಗೂ ಎಲ್ಲಾ ಹದಿಮೂರು ವಸಾಹತುಗಳೂ ತಾಯ್ನಾಡಿನಿಂದ ಎಲ್ಲಾ ರಾಜಕೀಯ ಸಂಬಂಧವನ್ನು ಕಡಿದುಕೊಂಡು ಸ್ವತಂತ್ರವಾಗಿವೆ ಎಂದು ಘೋಷಿಸಿತು.


ಜಾರ್ಜ್‌ವಾಷಿಂಗ್ಟನ್

**ಯುದ್ಧ :** ಇಂಗ್ಲೆಂಡ್ ಮತ್ತು ವಸಾಹತುಗಳ ನಡುವಿನ ಯುದ್ಧ ಐದು ವರ್ಷಗಳ ಕಾಲ ಸಾಗಿತು. ಆರಂಭದಲ್ಲಿ ವಸಾಹತುಗಳಿಗೆ ಹಿನ್ನಡೆಯಾಯಿತು. ಜಾರ್ಜ್‌ವಾಷಿಂಗ್ಟನ್ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದರೆ 'ಸಾರಟೋಗ' ಯುದ್ಧದಲ್ಲಿ ಬ್ರಿಟೀಷ್ ಸೇನೆಯು ಸೋತಿತು. ಫ್ರೆಂಚರ ಸೇನೆಯ ಸಹಾಯದಿಂದ ಜಾರ್ಜ್ ವಾಷಿಂಗ್ಟನ್ನನು ಯಾರ್ಕ್‌ಟೌನ್ ಕದನದಲ್ಲಿ ಬ್ರಿಟೀಷರ ಸೇನೆಯನ್ನು ಸಂಪೂರ್ಣವಾಗಿ ಸೋಲಿಸಿದನು. ಬ್ರಿಟೀಷ್ ಸೇನಾನಿ ಕಾರ್ನ್‌ವಾಲೀಸನು ತನ್ನ ಪಡೆಗಳೊಂದಿಗೆ ಶರಣಾದನು. ಕ್ರಿ. ಶ. 1783ರ ಪ್ಯಾರಿಸ್ ಒಪ್ಪಂದದಂತೆ ಹದಿಮೂರು ವಸಾಹತುಗಳನ್ನು ಬ್ರಿಟನ್ ಸ್ವತಂತ್ರವೆಂದು ಅಂಗೀಕರಿಸಿತು. ಜುಲೈ 4 ರಂದು ಸ್ವಾತಂತ್ರ್ಯ ಘೋಷಣೆ ಮಾಡಿದ್ದರಿಂದ ಅಮೆರಿಕನ್ನರಿಗೆ ಅದು ಮಹತ್ವದ ದಿನವಾಯಿತು. ಇಂದಿಗೂ ಸಹ ಜುಲೈ 4ನ್ನು ಅಮೆರಿಕನ್ನರು ಸ್ವಾತಂತ್ರ್ಯದಿನವನ್ನಾಗಿ ಆಚರಿಸುತ್ತಾರೆ.

ಸಾ.ಶ. 1787ರಲ್ಲಿ ಫಿಲಿಡೆಲ್ಫಿಯಾದಲ್ಲಿ ಸ್ವಾತಂತ್ರ ಪಡೆದ ಎಲ್ಲಾ ವಸಾಹತುಗಳ ಪ್ರತಿನಿಧಿಗಳು ಸಭೆ ಸೇರಿ, ಜಾರ್ಜ್ ವಾಷಿಂಗ್ಟನ್‌ನನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷನನ್ನಾಗಿ ಆರಿಸಿದರು. ಅವರುಗಳು ಒಂದು ಸಂವಿಧಾನವನ್ನು ರಚಿಸಿದರು. ಅದೇ ಜಗತ್ತಿನ ಪ್ರಥಮ ಲಿಖಿತ ಸಂವಿಧಾನವಾಯಿತು.

**ಅಮೆರಿಕ ಸ್ವತಂತ್ರ ಸಂಗ್ರಾಮದ ಪರಿಣಾಮಗಳು :** ಇದು ಫ್ರಾನ್ಸ್ ಮಹಾಕ್ರಾಂತಿಗೆ ಪ್ರಚೋದನೆ ನೀಡಿತು. ವಸಾಹತುಗಾರರ ಪಕ್ಷ ವಹಿಸಿ ಹೋರಾಡಿದ ಅನೇಕ ಫ್ರೆಂಚರು ಫ್ರಾನ್ಸಿನ ಮಹಾಕ್ರಾಂತಿಯ ನಾಯಕರಾದರು. ಅಮೆರಿಕದಲ್ಲಿನ ಅನೇಕ ಸ್ಪೈನ್ ಮತ್ತು ಪೋರ್ಚ್‌ಗಲ್‌ನ ವಸಾಹತುಗಳು ತಮ್ಮ ತಾಯ್ನಾಡಿನ ವಿರುದ್ಧ ದಂಗೆ ಎದ್ದು ಸ್ವತಂತ್ರ್ಯರಾಗಲು ಉತ್ತೇಜನ ಪಡೆದವು. ಅಮೆರಿಕಾ ಸಂಯುಕ್ತ ಸಂಸ್ಥಾನ ಎಂಬ ಹೊಸ ರಾಷ್ಟ್ರದ ಉದಯವಾಯಿತು.

> **ನಿಮಗಿದು ತಿಳಿದಿರಲಿ :**
> *ಅಮೇರಿಕಾದ 3ನೇ ಅಧ್ಯಕ್ಷನಾದ ಥಾಮಸ್ ಜೇಪರ್‌ಸನ್ನನು 'ಪ್ರತಿ ತಲೆಮಾರು ಒಂದು ಹೊಸ ರಾಷ್ಟ್ರವೆಂದು ಹೇಳಿದ್ದಾನೆ.*

## ಫ್ರಾನ್ಸಿನ ಮಹಾಕ್ರಾಂತಿ

ತಮ್ಮ ದೊರೆಗಳ ನಿರಂಕುಶ ಪ್ರಭುತ್ವವನ್ನು ಕೊನೆಗಾಣಿಸಿ, ಸಮಾನತೆ ಮತ್ತು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಹೊಸ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸುವುದೇ ಫ್ರೆಂಚ್ ಕ್ರಾಂತಿಯ ಪ್ರಮುಖ ಉದ್ದೇಶವಾಗಿತ್ತು. ಇದು ಜಗತ್ತಿನ ಇತರ ದೇಶಗಳ ರಾಜಕೀಯ ಚಳುವಳಿಗಳ ಮೇಲೂ ಅಗಾಧವಾದ ಪ್ರಭಾವವನ್ನು ಬೀರಿತು. ಫ್ರಾನ್ಸಿನ ಕ್ರಾಂತಿಗೆ ಈ ಕೆಳಕಂಡ ಅಂಶಗಳು ಕಾರಣವಾದವು.

**ಸಾಮಾಜಿಕ ಕಾರಣಗಳು :** ಫ್ರೆಂಚ್ ಸಮಾಜದಲ್ಲಿ ಅಸಮಾನತೆ ಎಲ್ಲಾ ರಂಗದಲ್ಲೂ ತಾಂಡವವಾಡುತ್ತಿತ್ತು.

©KTBS Not to be re published

ಅದು ದುಸ್ಸಹನೀಯ ಮತ್ತು ಅಮಾನವೀಯವಾಗಿತ್ತು. ಈ ಅಸಮಾನತೆಯ ನೋವು ಜನತೆಯ ಹೃದಯದಲ್ಲಿ ಕ್ರಾಂತಿಯ ಭಾವನೆಯನ್ನು ಬೆಳೆಸಿತು. ಕ್ರಾಂತಿಗೆ ಮುನ್ನ ಫ್ರಾನ್ಸ್‌ನ ಸಮಾಜದಲ್ಲಿ ಮೂರು ವರ್ಗಗಳಿದ್ದವು. ಮೊದಲ ವರ್ಗದಲ್ಲಿ ಪಾದ್ರಿಗಳು, ಎರಡನೇ ವರ್ಗದಲ್ಲಿ ಶ್ರೀಮಂತರು ಮತ್ತು ಉಳಿದೆಲ್ಲ ಸಾಮಾನ್ಯರು ಮೂರನೇ ವರ್ಗದಲ್ಲಿದ್ದರು.

ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದ ಮೊದಲ ಎರಡು ವರ್ಗದವರು ಎಲ್ಲಾ ರೀತಿಯ ಅನುಕೂಲಗಳನ್ನು ಪಡೆಯುತ್ತಿದ್ದರು ಹಾಗೂ ಅವರು ಎಲ್ಲಾ ರೀತಿಯ ತೆರಿಗೆಗಳಿಂದ ವಿನಾಯತಿ ಪಡೆದಿದ್ದು, ಐಷಾರಾಮಿ ಜೀವನವನ್ನು ನಡೆಸುತ್ತಿದ್ದರು.

> **ನಿಮಗಿದು ತಿಳಿದಿರಲಿ:**
>
> ಇತಿಹಾಸಕಾರನೊಬ್ಬನ ಅಭಿಪ್ರಾಯದಲ್ಲಿ ಫ್ರಾನ್ಸಿನಲ್ಲಿ ಕ್ರಾಂತಿ ಘಟಿಸುವುದರೊಂದಿಗೆ ಯುರೋಪಿನ ಇತಿಹಾಸವು, ಒಂದು ರಾಷ್ಟ್ರ, ಒಂದು ಘಟನೆ ಮತ್ತು ಒಬ್ಬ ವ್ಯಕ್ತಿಯಲ್ಲಿ ಲೀನವಾಯಿತು. ಆ ರಾಷ್ಟ್ರವೇ ಫ್ರಾನ್ಸ್, ಘಟನೆಯೇ ಫ್ರೆಂಚ್ ಕ್ರಾಂತಿ ಮತ್ತು ಆ ವ್ಯಕ್ತಿಯೇ ನೆಪೋಲಿಯನ್.

ಮೂರನೇ ವರ್ಗದವರು ಸೌಲಭ್ಯ ವಂಚಿತರಾಗಿದ್ದರು. ಬುದ್ಧಿಜೀವಿಗಳು, ಕೃಷಿಕರು, ಕಾರ್ಮಿಕರು ಮತ್ತು ವೃತ್ತಿಪರರು ಇದರಲ್ಲಿ ಸೇರಿದ್ದರು. ಅವರ ಆದಾಯ ತೀರ ಕಡಿಮೆ. ತೆರಿಗೆಗಳು ವಿಪರೀತ. ಅವರ ಜೀವನ ದುಃಸ್ಥಿತಿಯಲ್ಲಿತ್ತು. ಈ ಎಲ್ಲ ಜನರಿಗೆ ಸಮಾಜದಲ್ಲಿ ಗೌರವದ ಸ್ಥಾನವಿರಲಿಲ್ಲ, ರಾಜಕೀಯ ಹಕ್ಕುಗಳಿರಲಿಲ್ಲ ಹಾಗೂ ಅವರು ಅವಮಾನಗಳನ್ನು ಅನುಭವಿಸಬೇಕಾಗಿತ್ತು. ಅವರಿಗೆ ಮತೀಯವಾಗಿಯಾಗಲಿ ಅಥವಾ ರಾಜಕೀಯವಾಗಿಯಾಗಲಿ ಯಾವುದೇ ವಿಧವಾದ ಸ್ವಾತಂತ್ರ್ಯ ಇರಲಿಲ್ಲ. ಫ್ರಾನ್ಸಿನಲ್ಲಿ ಅವರೇ ಅತ್ಯಂತ ಅಸಮಾಧಾನಗೊಂಡಿದ್ದ ಜನಸಮೂಹವಾಗಿದ್ದರು. ಅವರು ಹಳೆಯ ವ್ಯವಸ್ಥೆಗಳನ್ನು ತೊಡೆದು ಹಾಕಲು ಸಮಯ ಕಾಯುತ್ತಿದ್ದರು.

**ಆರ್ಥಿಕ ಕಾರಣಗಳು :** ಫ್ರಾನ್ಸ್ ಕೃಷಿ ಪ್ರಧಾನವಾದ ದೇಶವಾಗಿತ್ತು. ಕೃಷಿ ಪದ್ಧತಿಯಲ್ಲಿ ಅಭಿವೃದ್ಧಿಗಳು ಆಗಿದ್ದರೂ ಸಹ, ಕೃಷಿ ಬಹಳ ಹಿಂದುಳಿದಿತ್ತು. ಭೂಮಿಯ ಉತ್ಪತ್ತಿ ಬಹಳ ಕಡಿಮೆ ಇತ್ತು. ರೈತ-ರೇ ಹೆಚ್ಚಿನ ತೊಂದರೆಗೊಳಗಾಗಿದ್ದವರು. ಬರಗಾಲಗಳು ಸಾಮಾನ್ಯವಾಗಿದ್ದವು. ಇದರಿಂದ ಆಹಾರಕ್ಕಾಗಿ ದಂಗೆಗಳಾಗುತ್ತಿದ್ದವು. ಕೈಗಾರಿಕೆಗಳು ವೃತ್ತಿಸಂಘಗಳ ಅಧೀನದಲ್ಲಿದ್ದವು. ಆಂತರಿಕ ಅಡ್ಡಿಗಳಿಂದಲೂ ಮತ್ತು ಅಧಿಕಾರಿಗಳ ಅತಿಯಾದ ಮಧ್ಯ ಪ್ರವೇಶದಿಂದಲೂ ಅವುಗಳ ಬೆಳವಣಿಗೆ ಕುಂಠಿತಗೊಂಡಿತ್ತು. ಇದರ ಫಲವಾಗಿ ಉತ್ಪಾದನೆ ಕೆಳಮಟ್ಟದಲ್ಲಿತ್ತು.

**ರಾಜಕೀಯ ಕಾರಣಗಳು:** ಫ್ರಾನ್ಸನ್ನು ಬೂರ್‌ಬನ್ ಮನೆತನದವರು ಆಳುತ್ತಿದ್ದರು. ಈ ಸಂತತಿಯ 16ನೇ ಲೂಯಿ ಭವ್ಯ ಅರಮನೆಯಲ್ಲಿ ರಾಜಮನೆತನದವರೊಂದಿಗೆ ಆರಾಮವಾದ ಮತ್ತು ಸುಖಲೋಲುಪತೆಯಿಂದ ಕೂಡಿದ ದುಂದುಗಾರಿಕೆಯ ಜೀವನವನ್ನು ನಡೆಸುತ್ತಿದ್ದ. ಆಡಳಿತ ಸರ್ಕಾರಿ ಕೆಲಸಗಳ ಬಗ್ಗೆ ಅಸಡ್ಡೆಯಿಂದಿದ್ದ. ಅವನಿಗೆ ಮೇರಿ ಅಂಟಾಯಿನೆಟ್ ಎಂಬ ರಾಣಿ ಇದ್ದಳು. ಅವಳು ಆಸ್ಟ್ರಿಯನ್ ದೇಶದ ರಾಜಕುಮಾರಿ. ತನ್ನ ಸುಖ ಭೋಗಗಳಿಗೆ, ಹಬ್ಬಗಳಿಗೆ ದುಂದು ವೆಚ್ಚ ಮಾಡುತ್ತಿದ್ದಳು. ಜನಗಳ ಸಂಕಟದ ಕಡೆಗೆ ಅವಳಿಗೆ ಚಿಂತೆ ಇರಲಿಲ್ಲ. ಅವಳು ದೇಶದ ಆಡಳಿತ ವ್ಯವಹಾರಗಳಲ್ಲಿ ತಲೆ ಹಾಕುತ್ತಿದ್ದಳು. ವಿದೇಶಿಯಳು ಮತ್ತು ತಮ್ಮ ವಿಷಯದಲ್ಲಿ ಪ್ರೀತಿಯಿಲ್ಲವೆಂಬ ಕಾರಣದಿಂದ ಜನರು ಅವಳನ್ನು ದ್ವೇಷಿಸುತ್ತಿದ್ದರು. ರಾಜನು ಅವಳನ್ನು ನಿಯಂತ್ರಿಸಲಾಗಲಿಲ್ಲ. ಕ್ರಮೇಣ ಪರಿಸ್ಥಿತಿ ಅವನ ಕೈಮೀರಿ ಹೋಗಿ ಕ್ರಾಂತಿಯಾಗಿ ಪರಿಣಮಿಸಿತು.

**ಫ್ರೆಂಚ್ ಚಿಂತಕರ ಪ್ರಭಾವ:** ಪ್ರಸಿದ್ಧ ತತ್ವಜ್ಞಾನಿಗಳು ಹಾಗೂ ವಿದ್ವಾಂಸರುಗಳಾದ ಮಾಂಟೆಸ್ಕ್ಯೂ, ರೂಸೋ ಮತ್ತು ವಾಲ್ಟೈರ್ ತಮ್ಮ ಕ್ರಾಂತಿಕಾರಿ ಬರಹಗಳಿಂದ ಕ್ರಾಂತಿಕಾರಿಗಳಿಗೆ ಉತ್ತೇಜನ ನೀಡಿದರು.

**ಮಾಂಟೆಸ್ಕ್ಯೂ:** ಮಾಂಟೆಸ್ಕ್ಯೂ ತನ್ನ "Spirit of Laws" ಕೃತಿಯಲ್ಲಿ ರಾಜರ ದೈವದತ್ತ ಅಧಿಕಾರ (Divine Right of Kings) ನಿರಾಧಾರವೆಂದು ಟೀಕಿಸಿ, ಸಂವಿಧಾನಿಕ ರಾಜ ಪ್ರಭುತ್ವಕ್ಕೆ ಬೆಂಬಲ





©KTBS Not to be republished


ನೀಡಿದನು.

**ರೂಸೊ:** ರೂಸೋ ತನ್ನ ಕೃತಿ "ಸಾಮಾಜಿಕ ಒಪ್ಪಂದ"ದಲ್ಲಿ (Social Contract) "ಮಾನವ ಸ್ವತಂತ್ರವಾಗಿ ಜನಿಸಿದ ಆದರೆ ಎಲ್ಲೆಲ್ಲೂ ಸರಪಳಿಯಿಂದ ಬಂಧಿಸಲ್ಪಟ್ಟಿದ್ದಾನೆ" ಎಂದು ಹೇಳಿದ್ದಾನೆ.

**ವಾಲ್ಟೈರ್ :** ವಾಲ್ಟೈರ್ ಫ್ರಾನ್ಸಿನಲ್ಲಿ ಪ್ರಚಲಿತವಿದ್ದ ಸಂಪ್ರದಾಯ, ಏಕಾಚರಣೆ ಹಾಗೂ ಅಂಧಶ್ರದ್ಧೆಯನ್ನು ಖಂಡಿಸಿದನು. ಅಲ್ಲದೆ ರೋಮನ್ ಕ್ಯಾಥೋಲಿಕ್ ಚರ್ಚನ್ನು ಖಂಡಿಸಿದನು.


ಮಾಂಟೆಸ್ಕ್ಯೂ


ರೂಸೊ


ವಾಲ್ಟೈರ್

**ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವ :** ಅಮೆರಿಕ ಸ್ವಾತಂತ್ರ್ಯ ಸಂಗ್ರಾಮ ಕೂಡ ಫ್ರೆಂಚರ ಮೇಲೆ ಅಗಾಧ ಪ್ರಭಾವವನ್ನುಂಟುಮಾಡಿತು. ಅಮೆರಿಕಾದಲ್ಲಿ ಇಂಗ್ಲೀಷರ ವಿರುದ್ಧ ಹೋರಾಡಿದ್ದ ಅನೇಕ ಫ್ರೆಂಚ್ ಸೈನಿಕರು ತಾಯ್ನಾಡಿಗೆ ಹಿಂತಿರುಗಿದರು. ಅವರು ಕ್ರಾಂತಿಕಾರಿಗಳಿಗೆ ಅವಶ್ಯಕವಾದ ಬಲ ಮತ್ತು ಉತ್ಸಾಹಗಳನ್ನು ಒದಗಿಸಿ ಕ್ರಾಂತಿಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದರು.

ಈ ಎಲ್ಲಾ ಘಟನೆಗಳಿಂದಾಗಿ ಫ್ರೆಂಚ್ ರಾಜನಾದ ಲೂಯಿ ಹದಿನಾರನೆಯವನು 175 ವರ್ಷಗಳಿಂದ ಕರೆಯದಿದ್ದ "ಸ್ಟೇಟ್ಸ್ ಜನರಲ್" ಎಂಬ ಫ್ರಾನ್ಸಿನ ಶಾಸಕಾಂಗ ಸಭೆಯನ್ನು ಅನಿವಾರ್ಯವಾಗಿ ಕರೆಯಬೇಕಾಯಿತು. ಈ ಸಭೆಯಲ್ಲಿ ಮೂರನೆಯ ವರ್ಗದ ಸದಸ್ಯರು ತಾವೇ ರಾಷ್ಟ್ರೀಯ ಸಭೆ ಎಂದು ಘೋಷಿಸಿಕೊಂಡರು. ಉಳಿದೆರಡು ವರ್ಗಗಳ ಸದಸ್ಯರೂ ತಮ್ಮೊಡನೆ ಸೇರುವಂತೆ ಆಹ್ವಾನಿಸಿದರು.

ಸಾ.ಶ. 1789ನೇ ಇಸವಿ ಜುಲೈ 14ರಂದು "ಬ್ಯಾಸ್ಟೈಲ್" ಎಂಬ ರಾಜ್ಯ ಬಂದೀಖಾನೆಯ ಮೇಲೆ ದಾಳಿ ಮಾಡಿ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಿ, ನಿರಂಕುಶ ಪ್ರಭುತ್ವಕ್ಕೆ ಅಂತ್ಯ ಹಾಡಿದರು. ಕ್ರಮೇಣ ಈ ಕ್ರಾಂತಿಯು ದೇಶದ ಇತರ ಭಾಗಗಳಿಗೆ ಹರಡಿತು. ರಾಜನು ಹೆಸರಿಗೆ ಮಾತ್ರ ರಾಜನಾಗಿದ್ದನು. ರಾಷ್ಟ್ರೀಯ ಸಭೆಯೇ ಎಲ್ಲಾ ಕಾನೂನುಗಳನ್ನು ರಚಿಸುತ್ತ ಮತ್ತು ಆಜ್ಞೆಗಳನ್ನು ಹೊರಡಿಸಿತು. ಕ್ರಿ. ಶ. 1789ನೇ ಆಗಸ್ಟ್ 27ರಂದು ಮಾನವನ ಮತ್ತು ಪೌರನ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿತು. ರಾಜತ್ವವನ್ನು ತೆಗೆದುಹಾಕಿ ಗಣರಾಜ್ಯವನ್ನು ಸ್ಥಾಪಿಸಿತು.

ಈ ಕ್ರಾಂತಿಯು ಹಿಂಸಾತ್ಮಕ ರೂಪವನ್ನು ತಾಳಿತು. ತೀವ್ರವಾದ ಸುಧಾರಣೆಗಳನ್ನು ಬಯಸುವ "ಜಾಕೋಬಿಯನ್ನರು" ಎಂಬ ಒಂದು ಗುಂಪು ಅಧಿಕಾರಕ್ಕೆ ಬಂದಿತು. ಕ್ರಾಂತಿ ಅಪಾಯಕಾರಿ ಸ್ಥಿತಿಯಲ್ಲಿದೆ ಎನ್ನುವ ಭೀತಿಯು ಈ ಆಳ್ವಿಕೆಯಲ್ಲಿ ಕಾಣಿಸಿಕೊಂಡಿತು. ಇದರ ನಾಯಕ ರೊಬಿಸ್ಪಿಯರ್ ಪ್ರಭುತ್ವದ ಪರ ಇದ್ದ ಮತ್ತು ಶಂಕಿತ ವ್ಯಕ್ತಿಗಳನ್ನು ಹತ್ಯೆಗಾಗಿಯೇ ಅವಿಷ್ಕರಿಸಿದ್ದ ಗಿಲೊಟಿನ್ ಯಂತ್ರಕ್ಕೆ ಬಲಿ ನೀಡಿದನು.

**ಪರಿಣಾಮಗಳು**

©KTBS Not to be republished

ಫ್ರೆಂಚ್ ಕ್ರಾಂತಿಯು ಪ್ರಮುಖ ಘಟನೆಗಳಿಗೆ ನಾಂದಿಯಾಯಿತು. ಊಳಿಗಮಾನ್ಯ ಪದ್ಧತಿಯು ನಾಶವಾಯಿತು. ಪಾದ್ರಿಗಳು ಮತ್ತು ಶ್ರೀಮಂತರು ಹೊಂದಿದ್ದ ವಿಶೇಷ ಅಧಿಕಾರ, ಸವಲತ್ತುಗಳು ರದ್ದಾದವು. ಶ್ರೀಮಂತರ ಭೂಮಿಯನ್ನು ಕಸಿದುಕೊಳ್ಳಲಾಯಿತು. ಚರ್ಚ್ ರಾಜ್ಯಕ್ಕೆ ಅಧೀನವಾಯಿತು. ದೇಶದಾದ್ಯಂತ ಒಂದೇ ರೀತಿಯ ಆಡಳಿತ ಕ್ರಮವು ಜಾರಿಗೆ ಬಂದಿತು. ಜನರಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ತತ್ವಗಳ ಪ್ರೇರಿತ ಹಕ್ಕುಗಳು ದೊರೆತವು.

## ಏಕೀಕರಣ ಚಳವಳಿಗಳು

### ಇಟಲಿಯ ಏಕೀಕರಣ

ಪ್ರಾಚೀನ ರೋಮನ್ ಸಾಮ್ರಾಜ್ಯದ ವೈಭವ ಕಂಡಿದ್ದ ಇಟಲಿ ದೇಶ ಒಂದೇ ಭಾಷೆ ಆಡುತ್ತಿದ್ದರೂ ಒಡೆದು ಚೂರಾಗಿತ್ತು. ರೋಮನ್ ಕ್ಯಾಥೋಲಿಕ್ ಮತವೇ ಇಟಲಿಯಲ್ಲಿ ಸಾರ್ವತ್ರಿಕವಾಗಿತ್ತು. ಒಂದೇ ರಾಷ್ಟ್ರೀಯ ಪ್ರಭುತ್ವ ಪಡೆಯಲು ಅರ್ಹವಾಗಿದ್ದರೂ ಇಂಥ ಏಕೀಕರಣ ಅಸಾಧ್ಯವಾಗಿತ್ತು.





©KTBS Not to be re-published

ಹತ್ತೊಂಭತ್ತನೆಯ ಶತಮಾನದ ಆದಿಭಾಗದಲ್ಲಿ ಇಟಲಿಯು ಅನೇಕ ಸಣ್ಣ ಸಣ್ಣ ರಾಜ್ಯಗಳಾಗಿ ಒಡೆದು ಹೋಗಿತ್ತು. ಅವುಗಳಲ್ಲಿ ಲೊಂಬಾರ್ಡಿ, ವೆನೀಷಿಯಾ, ಸಿಸಿಲಿ, ನೇಪಲ್ಸ್ (ಎರಡು ಸಿಸಿಲಿಗಳ ರಾಜ್ಯ) ಪೋಪರ ರಾಜ್ಯಗಳು, ಟಸ್ಕನಿ, ಪಾರ್ಮ ಮತ್ತು ಮೊಡೇನ ಪ್ರಮುಖವಾದುವು. ಫಿಡ್ಮಂಟ್ ರಾಜ್ಯವು ಸಾರ್ಡೀನಿಯ,

ಪಿಡ್ಮಂಟ್ ಮತ್ತು ಜಿನೋವಗಳನ್ನು ಒಳಗೊಂಡಿತ್ತು.

ಸಾ.ಶ. 1815 ಮತ್ತು ಸಾ.ಶ. 1848ರ ನಡುವೆ ಇಟಲಿ ದೇಶದ ಅನೇಕ ರಾಜ್ಯಗಳಲ್ಲಿ ದಂಗೆಗಳುಂಟಾದವು. ಈ ಎಲ್ಲಾ ದಂಗೆಗಳ ಮುಖ್ಯ ಗುರಿ ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಏಕೀಕರಣ. ಜೊಸೆಫ್ ಮ್ಯಾಜಿನಿ, ಕೌಂಟ್ ಕವೂರ್ ಮತ್ತು ಗ್ಯಾರಿಬಾಲ್ಡಿ ಇಟಲಿಯ ಏಕೀಕರಣದ ಶಿಲ್ಪಿಗಳಾಗಿದ್ದರು.


ಮ್ಯಾಜಿನಿ

ಮ್ಯಾಜಿನಿ ಹೆಸರಾಂತ ಕ್ರಾಂತಿಕಾರಿ ಚಿಂತಕ ಮತ್ತು ಬರಹಗಾರ. ಅವನು ತನ್ನ ಗ್ರಂಥ "ಇಟಲಿ, ಆಸ್ಟ್ರೀಯ, ಪ್ಯಾಪಸಿ"ಯಲ್ಲಿನ ಲೇಖನಗಳಿಂದ ಇಟಲಿ ದೇಶದ ಯುವಕರನ್ನು ಪ್ರಚೋದಿಸಿದನು. ಅವನು ರಾಷ್ಟ್ರದ ಏಕೀಕರಣ, ಸ್ವಾತಂತ್ರ್ಯ ಮುಂತಾದ ಕ್ರಾಂತಿಕಾರಕ ಅಭಿಪ್ರಾಯಗಳಿಂದ ಅವರನ್ನು ಹುರಿದುಂಬಿಸಿ ಅಂದಿನ ರಾಜಕೀಯ ವ್ಯವಸ್ಥೆಯ ವಿರುದ್ಧ ದಂಗೆ ಏಳುವಂತೆ ಪ್ರೇರೇಪಿಸಿದನು. "ತರುಣ ಇಟಲಿ" (Young Italy) ಎಂಬ ಒಂದು ಪಕ್ಷವನ್ನು ಕಟ್ಟಿದ್ದಲ್ಲದೇ ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಇಟಲಿಯ ಏಕೀಕರಣದ ಗುರಿಗಳನ್ನು ಹೊಂದಿದ್ದನು.

ಗ್ಯಾರಿಬಾಲ್ಡಿ ಒಬ್ಬ ಯೋಧ, ಹೋರಾಟಗಾರ. ಇವನು "ತರುಣ ಇಟಲಿ" ಪಕ್ಷವನ್ನು ಸೇರಿ ಅನೇಕ ಸಾರಿ ಅದರ ಕ್ರಾಂತಿಯ ನಾಯಕತ್ವವನ್ನು ವಹಿಸಿದ್ದನು. ಆನಂತರ "ಕೆಂಪಂಗಿ ದಳ" ಎಂಬ ಸೈನ್ಯವನ್ನು ವ್ಯವಸ್ಥೆಗೊಳಿಸಿ ಸಾರ್ಡೀನಿಯ ಜೊತೆಗೂಡಿ ಆಸ್ಟ್ರೀಯಾದೊಡನೆ ಹೋರಾಡಿದ. 1860ರಲ್ಲಿ ಎರಡು ಸಿಸಿಲಿಗಳ ರಾಜ್ಯದ ಮೇಲೆ ತನ್ನ "ಕೆಂಪಂಗಿ ದಳ"ದೊಡನೆ ದಾಳಿ ಮಾಡಿ ಅದನ್ನು ಆಕ್ರಮಿಸಿ ಇಟಲಿ ದೇಶದ ಏಕೀಕರಣವನ್ನು ತ್ವರಿತಗೊಳಿಸಿದನು ಹಾಗೂ ಪ್ರಜಾಪ್ರಭುತ್ವ ಸುಧಾರಣೆಗಳಿಗಾಗಿ ಆಗ್ರಹಿಸಿದನು.


ಗ್ಯಾರಿಬಾಲ್ಡಿ

ಇಟಲಿ ದೇಶದ ಏಕೀಕರಣದಲ್ಲಿ ಸಾರ್ಡೀನಿಯಾದ ಮುಖ್ಯಮಂತ್ರಿ ಕೌಂಟ್ ಕೆವೂರ್ ಪ್ರಧಾನ ವ್ಯಕ್ತಿಯಾಗಿದ್ದ. ಅವನು ಪತ್ರಿಕೋದ್ಯಮಿಯಾಗಿದ್ದು, ಇಟಲಿ ದೇಶದ ಸಾಹಿತ್ಯದ ಪುನರುಜ್ಜೀವನಕ್ಕಾಗಿ ಮೀಸಲಾಗಿದ್ದ "ರಿಸಾರ್ಜಿಮೆಂಟೋ" ಪತ್ರಿಕೆಯನ್ನು ಆರಂಭಿಸಿದನು. ತನ್ನ ಪ್ರಭಾವಶಾಲಿ ಬರವಣಿಗೆಗಳಿಂದ ಜನರ ಮನಸ್ಸಿನ ಮೇಲೆ ಮತ್ತು ರಾಜರುಗಳ ಮನಸ್ಸಿನ ಮೇಲೆ ಅತೀವ ಪ್ರಭಾವವನ್ನು ಬೀರಿದನು.

ಕೆವೂರ್ ಇಟಲಿಯಿಂದ ಆಸ್ಟ್ರಿಯಾವನ್ನು ಹೊರದೂಡಿ ಸಾರ್ಡೀನಿಯಾವನ್ನು ಇಟಲಿಯ ಅತಿ–ದೊಡ್ಡ ಮತ್ತು ಅತ್ಯಂತ ಬಲಶಾಲಿಯಾದ ರಾಜ್ಯವನ್ನಾಗಿ ಮಾಡಲು ತೀರ್ಮಾನಿಸಿದನು. ಸಾರ್ಡೀನಿಯಾದ ಪ್ರಧಾನಿಯಾಗಿ ಅಧಿಕಾರವನ್ನು ಸ್ವೀಕರಿಸಿದ ಕೂಡಲೇ ತನ್ನ ಗುರಿಯನ್ನು ಸಾಧಿಸಲು ಕೆಲಸವನ್ನು ಆರಂಭಿಸಿದನು. ರಾಜ್ಯದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ಇಟಲಿಯನ್ನು ಪ್ರಗತಿಪರ ರಾಜ್ಯವನ್ನಾಗಿ ಮಾಡಿದನು.

ಕೌಂಟ್ ಕೆವೂರ್ ಫ್ರಾನ್ಸ್‌ನೊಡನೆ ರಹಸ್ಯ ಒಪ್ಪಂದ ಮಾಡಿಕೊಂಡನು. ಆಸ್ಟ್ರಿಯಾವನ್ನು ಯುದ್ಧಕ್ಕೆ ಬರುವಂತೆ ಕೆರಳಿಸಿ, ಫ್ರಾನ್ಸ್‌ನ ಜೊತೆಗೂಡಿ ಆಸ್ಟ್ರಿಯಾವನ್ನು ಸೋಲಿಸಿ, ಲಾಂಬಾರ್ಡಿಯಿಂದ ಹೊರಗಟ್ಟಿದ್ದಲ್ಲದೇ, ಸಾರ್ಡೀನಿಯಾ ಹಾಗೂ ಲಾಂಬಾರ್ಡಿಯಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಟಸ್ಕನಿ, ಮೊಡೆನ, ಪಾರ್ಮ ಮತ್ತು ಉತ್ತರದ ಪೋಪರ


ಕೌಂಟ್ ಕೆವೂರ್



©KTBS Not to be republished

ರಾಜ್ಯಗಳಲ್ಲಿ ಕ್ರಾಂತಿಗಳುಂಟಾಗಿ ಅವು ಸಾರ್ಡಿನಿಯಾದ ಜೊತೆಗೆ ವಿಲೀನವಾದವು.

ಕೌಂಟ್ ಕೆವೂರ್ ರಹಸ್ಯವಾಗಿ ಸಿಸಿಲಿಯ ಮೇಲೆ ದಂಡೆತ್ತಿ ಹೋಗುವಂತೆ ಗ್ಯಾರಿಬಾಲ್ಡಿಗೆ ಪ್ರೋತ್ಸಾಹ ನೀಡಿದನು. ಸಾ.ಶ. 1861ರಲ್ಲಿ ವಿಕ್ಟರ್ ಎಮ್ಯಾನುಯಲ್ ದೊರೆಯನ್ನು ಇಟಲಿಯ ರಾಜನನ್ನಾಗಿ ಘೋಷಿಸಲಾಯಿತು. ಇಟಲಿಗೆ ಆಸ್ಟ್ರಿಯಾದಿಂದ ವೆನಿಷಿಯ ದೊರೆಯಿತು. ಈಗ ರೋಮ್ ಮಾತ್ರ ಇಟಲಿ ದೇಶದಿಂದ ಹೊರಗುಳಿದಿತ್ತು. 1870ರಲ್ಲಿ ಫ್ರಾನ್ಸ್ ಮತ್ತು ಪ್ರಷ್ಯಾಗಳ ನಡುವೆ ಯುದ್ಧ ಪ್ರಾರಂಭವಾದಾಗ, ಫ್ರಾನ್ಸ್ ತನ್ನ ಸೈನ್ಯವನ್ನು ರೋಮ್‌ನಿಂದ ಹಿಂದಕ್ಕೆ ಕರೆಯಿಸಿಕೊಳ್ಳಬೇಕಾಯಿತು. ಈ ಅವಕಾಶವನ್ನು ಉಪಯೋಗಿಸಿಕೊಂಡು ವಿಕ್ಟರ್ ಎಮ್ಯಾನುಯಲ್ ರೋಮ್ ಮೇಲೆ ನುಗ್ಗಿ ಅದನ್ನು ಆಕ್ರಮಿಸಿಕೊಂಡನು. ರೋಮ್ ಇಟಲಿಯ ರಾಜಧಾನಿಯಾಯಿತು. ಇಟಲಿಯ ಏಕೀಕರಣ ಪೂರ್ಣಗೊಂಡಿತು.

## ಜರ್ಮನಿಯ ಏಕೀಕರಣ

ಹತ್ತೊಂಭತ್ತನೆಯ ಶತಮಾನದ ಆದಿಭಾಗದಲ್ಲಿ ಜರ್ಮನಿ ಅನೇಕ ಸ್ವತಂತ್ರ ರಾಜ್ಯಗಳಾಗಿ ವಿಭಾಗವಾಗಿತ್ತು. ವುರ್ಟೆಂಬರ್ಗ್ ಅವುಗಳಲ್ಲಿ ಅತಿ ದೊಡ್ಡದೂ, ಅತ್ಯಂತ ಬಲಶಾಲಿಯಾದುದೂ ಆಗಿದ್ದಿತು. ಬವೇರಿಯ, ಬೇಡನ್ ಮತ್ತು ಹೇಸ್ ಇತರ ಮುಖ್ಯ ರಾಜ್ಯಗಳು. ಉಳಿದವು ಚಿಕ್ಕವು. ಅನೇಕ ವೇಳೆ ಅವು ಪರಸ್ಪರ ಕಾದಾಡುತ್ತಿದ್ದವು. ಆ ರಾಜ್ಯಗಳು ರಾಜಕೀಯವಾಗಿ ಬಲಹೀನವಾಗಿದ್ದವು ಮತ್ತು ಆರ್ಥಿಕವಾಗಿ ಹಿಂದುಳಿದಿದ್ದವು. ಈ ಪರಿಸ್ಥಿತಿಯಿಂದ ಜನರು ಅಸಮಾಧಾನಗೊಂಡಿದ್ದು ಸುಧಾರಣೆಗಳಿಗಾಗಿ ಹಾತೊರೆಯುತ್ತಿದ್ದರು.

ಫ್ರಾನ್ಸ್‌ನ ಮಹಾಕ್ರಾಂತಿಯು ಜರ್ಮನ್‌ರ ರಾಷ್ಟ್ರಪ್ರಜ್ಞೆಯನ್ನು ಕೆರಳಿಸಿತ್ತು. ಇದರಿಂದ ರಾಜ್ಯಗಳಲ್ಲಿನ ಜನರು ರಾಷ್ಟ್ರೀಯ ಏಕತೆಗಾಗಿ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸುಧಾರಣೆಗಳಿಗಾಗಿ ಆಗ್ರಹಿಸಿದರು. ಆಸ್ಟ್ರಿಯ ದೇಶದ ನಾಯಕತ್ವದಲ್ಲಿ ಜರ್ಮನ್ ರಾಜ್ಯಗಳ ಒಂದು ಸಂಘ ಏರ್ಪಟ್ಟಿತ್ತು. ಆದರೆ ರಾಜ್ಯಗಳಲ್ಲಿನ ಆಳರಸರು ತಮ್ಮ ಸ್ವಾತಂತ್ರ್ಯವನ್ನು ಮತ್ತು ಅಸ್ತಿತ್ವದಲ್ಲಿದ್ದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಜರ್ಮನಿಯ ದೇಶಪ್ರೇಮಿಗಳು ಮತ್ತು ರಾಷ್ಟ್ರವಾದಿಗಳು ಪ್ರಜಾಸತ್ತೆ ಸಂಸ್ಥೆಗಳಿಗಾಗಿ ಮತ್ತು ಜರ್ಮನಿಯ ಏಕೀಕರಣಕ್ಕಾಗಿ ಚಳುವಳಿಗಳನ್ನು ಪ್ರಾರಂಭಿಸಿದರು. ಆದರೆ ಆ ಚಳುವಳಿಗಳನ್ನು ಅಡಗಿಸಲಾಯಿತು ಇದರ ಪರಿಣಾಮವಾಗಿ ಕ್ರಾಂತಿಕಾರಿಗಳು ದೇಶಬಿಟ್ಟು ಓಡಿಹೋದರು. ಪ್ರಷ್ಯಾ ಈ ಚಟುವಟಿಕೆಗಳಲ್ಲಿ ಒಂದು ಮಹತ್ತರ ಪಾತ್ರವನ್ನು ವಹಿಸಿದ ಮೇಲೆ ಆರ್ಥಿಕ ಪ್ರಗತಿ ಮತ್ತು ಕೈಗಾರಿಕೀಕರಣ ಅಭಿವೃದ್ಧಿಗೊಂಡಿತು.


ಬಿಸ್ಮಾರ್ಕ್

**ಬಿಸ್ಮಾರ್ಕ್:** ಜರ್ಮನಿ ಏಕೀಕರಣದ ಪ್ರಧಾನ ಶಿಲ್ಪಿ, ಆಟ್ಟೋವಾನ್ ಬಿಸ್ಮಾರ್ಕ್. ಇವನು ಪ್ರಷ್ಯಾ ರಾಜ್ಯದ ದೊರೆ ಒಂದನೇ ವಿಲಿಯಂನ ಮುಖ್ಯಮಂತ್ರಿಯಾಗಿದ್ದನು. ಅವನು ಸರ್ಕಾರಿ ನೌಕರನಾಗಿ, ಜರ್ಮನಿಯ ಶಾಸನ ಸಭೆ 'ಡಯಟ್'ನ ಸದಸ್ಯನಾಗಿ, ವಿದೇಶಗಳಲ್ಲಿ ರಾಯಭಾರಿಯಾಗಿ ವೃತ್ತಿಯನ್ನು ಆರಂಭಿಸಿ ಪ್ರಾಮುಖ್ಯತೆಗೆ ಬಂದಿದ್ದನು. ಇವನು ಆಸ್ಟ್ರಿಯ ನಾಯಕತ್ವದಲ್ಲಿನ ಜರ್ಮನ್ ರಾಜ್ಯಗಳ ಸಂಘದ ಕಾರ್ಯವೈಖರಿಗಳ ಬಗ್ಗೆ ಸೂಕ್ಷ್ಮ ಪರಿಚಯ ಹೊಂದಿದ್ದು, ಅದರ ದೌರ್ಬಲ್ಯಗಳೇನು ಎಂಬುದನ್ನು ತಿಳಿದಿದ್ದ. ಆಸ್ಟ್ರಿಯ, ಫ್ರಾನ್ಸ್ ಮತ್ತು ರಷ್ಯಾಗಳಲ್ಲಿ ರಾಯಭಾರಿಯಾಗಿ ಕೆಲಸ ಮಾಡಿ, ಅವುಗಳ ಬಲಾಬಲಗಳನ್ನು ತಿಳಿದಿದ್ದ. ಜರ್ಮನ್ ಏಕೀಕರಣವನ್ನು ಸಾಧಿಸಲು ಪ್ರಷ್ಯಾ ಒಂದೇ ಸಮರ್ಥಶಾಲಿ ಎಂಬುದನ್ನು ಮನಗಂಡಿದ್ದ ಹಾಗೂ ಪ್ರಷ್ಯಾವನ್ನು ಜರ್ಮನಿಯಲ್ಲಿ ಅಗ್ರರಾಜ್ಯವನ್ನಾಗಿ ಮಾಡಬೇಕೆಂದು ಅಪೇಕ್ಷಿಸಿದ. ಈ ಉದ್ದೇಶದ ಸಾಧನೆಗಾಗಿ ಅವನ ಗುರಿಗಳು ಎರಡು

©KTBS Not to be re published

ಬಗೆಯಾಗಿದ್ದವು. ಒಂದು ಆಸ್ಟ್ರಿಯಾವನ್ನು ಜರ್ಮನ್ ರಾಜ್ಯಗಳ ಸಂಘದಿಂದ ಹೊರಗಟ್ಟುವುದು, ಮತ್ತೊಂದು ಜರ್ಮನಿಯಲ್ಲಿ ಲೀನವಾಗಿ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದಕ್ಕಿಂತ ಜರ್ಮನಿಯನ್ನೇ ಪ್ರಷ್ಯಾಮಯವಾಗಿ ಮಾಡುವುದು. ಅಂದರೆ ಪ್ರಷ್ಯಾದ ಸಂಸ್ಕೃತಿ, ಸಂಪ್ರದಾಯ, ಆಡಳಿತ ಯಂತ್ರ ಮತ್ತು ಸೈನಿಕ ಬಲವನ್ನು ಜರ್ಮನಿ ದೇಶಕ್ಕೆಲ್ಲ ವಿಸ್ತರಿಸುವುದು.

ಬಿಸ್ಮಾರ್ಕ್ ಜರ್ಮನಿಯ ಸಮಸ್ಯೆಯನ್ನು ಬಗೆಹರಿಸಲು "ರಕ್ತ ಮತ್ತು ಕಬ್ಬಿಣ" ತತ್ವದಿಂದ ಮಾತ್ರ ಸಾಧ್ಯವೆಂದು ಮನಗಂಡಿದ್ದನು. ರಕ್ತ ಮತ್ತು ಕಬ್ಬಿಣ ತತ್ವ ಎಂದರೆ ಯುದ್ಧ ನೀತಿ. ಇದರಿಂದ ಅವನು ಒಂದು ಬಲವಾದ ಸೈನ್ಯವನ್ನು ಕಟ್ಟಿದನು. ಅವನ ಮುಂದಿನ ಗುರಿ ಆಸ್ಟ್ರಿಯಾವನ್ನು ಜರ್ಮನ್ ರಾಜ್ಯಗಳ ಸಂಘದಿಂದ ಹೊರಗಟ್ಟುವುದು.

ಡೆನ್ಮಾರ್ಕ್‌ನ ಆಳ್ವಿಕೆಗೆ ಒಳಪಟ್ಟಿದ್ದ ಎರಡು ಸಣ್ಣ ರಾಜ್ಯಗಳಾದ ಷೇಲ್ಸ್‌ವಿಗ್ ಮತ್ತು ಹಾಲ್‌ಸ್ಟೈನ್‌ನನ್ನು ಬಿಸ್ಮಾರ್ಕ್‌ನು ಸೇರಿಸಿಕೊಳ್ಳಬೇಕೆಂದು ಅಪೇಕ್ಷಿಸಿದನು. ಆಸ್ಟ್ರಿಯಾ ಜೊತೆಗೂಡಿ ಡೆನ್ಮಾರ್ಕಿನ ಮೇಲೆ ಯುದ್ಧ ಮಾಡಿ ಅವುಗಳನ್ನು ವಶಪಡಿಸಿಕೊಂಡನು.

ಆನಂತರ ಬಿಸ್ಮಾರ್ಕ್ ಇಟಲಿಯೊಡನೆ ಒಪ್ಪಂದ ಮಾಡಿಕೊಂಡು ಆಸ್ಟ್ರಿಯಾದೊಡನೆ ಯುದ್ಧವಾದರೆ ಅದರ ಬೆಂಬಲವನ್ನು ಬಯಸಿದನು. ಸುಸಜ್ಜಿತ ಜರ್ಮನಿಯ ಸೈನ್ಯಗಳು ಆಸ್ಟ್ರಿಯಾವನ್ನು ಸೋಲಿಸಿದ ನಂತರ ಸಾ.ಶ. 1866ರಲ್ಲಿ "ಉತ್ತರ ಜರ್ಮನ್ ರಾಜ್ಯಗಳ ಸಂಘ"ವನ್ನು ರಚಿಸಿದನು. ಪ್ರಷ್ಯಾದ ದೊರೆಯನ್ನು ವಂಶಪಾರಂಪರ್ಯವಾಗಿ ಈ ರಾಜ್ಯ ಸಂಘದ ಮುಖ್ಯಸ್ಥನನ್ನಾಗಿ ಮಾಡಲಾಯಿತು.

ಆಸ್ಟ್ರಿಯಾವನ್ನು ಜರ್ಮನಿಯ ನೆಲದಿಂದ ಹೊರದೂಡಿದ ನಂತರವೂ ಜರ್ಮನಿಯ ಏಕೀಕರಣ ಇನ್ನೂ ಪೂರ್ಣಗೊಂಡಿರಲಿಲ್ಲ. ಫ್ರಾನ್ಸ್‌ಗೆ ಹೊಂದಿಕೊಂಡಂತೆ ದಕ್ಷಿಣದಲ್ಲಿದ್ದ ಹದಿನಾರು ಜರ್ಮನ್ ರಾಜ್ಯಗಳು ರಾಜ್ಯ ಸಂಘದಿಂದ ಹೊರಗುಳಿದಿದ್ದವು. ಜರ್ಮನಿಯನ್ನು ಬಲಹೀನವಾಗಿಡುವುದೇ ಫ್ರಾನ್ಸ್‌ನ ಚಕ್ರವರ್ತಿ ಮೂರನೇ ನೆಪೋಲಿಯನ್ನನ ಅಪೇಕ್ಷೆಯಾಗಿತ್ತು. ಜರ್ಮನಿಯ ಏಕೀಕರಣ ಪೂರ್ಣಗೊಳ್ಳಬೇಕಾದರೆ ಫ್ರಾನ್ಸ್‌ನೊಡನೆ ಯುದ್ಧ ಅನಿವಾರ್ಯ ಎಂದು ಕಂಡುಕೊಂಡನು. ಬಿಸ್ಮಾರ್ಕ್ ಯುದ್ಧ ಸಿದ್ಧತೆ ಮಾಡಿಕೊಳ್ಳತೊಡಗಿದ. ನೆಪೋಲಿಯನ್ ಪ್ರಷ್ಯಾದ ಮೇಲೆ ಯುದ್ಧ ಸಾರಿದಾಗ ದಕ್ಷಿಣ ಜರ್ಮನ್ ರಾಜ್ಯಗಳು ಅವನನ್ನು ಸೋಲಿಸಿದವು. ಇದರಿಂದಾಗಿ ಬಿಸ್ಮಾರ್ಕ್‌ನು ಉಳಿದ ರಾಜ್ಯಗಳನ್ನು ಜರ್ಮನ್ ಒಕ್ಕೂಟದಲ್ಲಿ ಲೀನವಾಗುವಂತೆ ಮಾಡಿದನು. ಜರ್ಮನ್ ಏಕೀಕರಣ ಸಂಪೂರ್ಣಗೊಂಡಿತು. ಪ್ರಷ್ಯಾದ ಒಂದನೇ ವಿಲಿಯಮ್ ಜರ್ಮನ್ ಚಕ್ರವರ್ತಿ ಎಂಬ ಬಿರುದನ್ನು ಧರಿಸಿದ. ಅಲ್ಸೇಸ್ ಮತ್ತು ಲೋರೇನ್ ಪ್ರಾಂತ್ಯಗಳು ಫ್ರಾನ್ಸ್‌ನಿಂದ ಜರ್ಮನಿಗೆ ದೊರೆತವು. ಇದರಿಂದ ಜರ್ಮನಿಯು ಏಕೀಕೃತ ರಾಷ್ಟ್ರವಾಗಿ ರೂಪುಗೊಂಡಿತು.

## ಅಭ್ಯಾಸಗಳು

**I. ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಸೂಕ್ತ ಪದಗಳಿಂದ ಪೂರ್ಣಗೊಳಿಸಿ.**

1. ಇಂಗ್ಲೆಂಡ್ ಅಟ್ಲಾಂಟಿಕ್ ತೀರದಲ್ಲಿ ಸ್ಥಾಪಿಸಿದ ಹದಿಮೂರು ವಸಾಹತುಗಳನ್ನು ________ ಎಂದು ಕರೆಯಲಾಗಿತ್ತು.
2. 1774 ರಲ್ಲಿ ಹದಿಮೂರು ವಸಾಹತುಗಳ ಪ್ರತಿನಿಧಿಗಳು ಸಭೆ ಸೇರಿದ್ದು ________ ದಲ್ಲಿ
3. ಅಮೆರಿಕ ಸ್ವಾತಂತ್ರ ಘೋಷಣೆ ಆದದ್ದು ________ ರಂದು .

©KTBS Not to be republished

4. ಸ್ಪಿರಿಟ್ ಆಫ್ ಲಾಸ್‌ನ ಕರ್ತೃ ______ .

5. 'ತರುಣ ಇಟಲಿ' ಎಂಬ ಪಕ್ಷವನ್ನು ಇಟಲಿಯಲ್ಲಿ ಕಟ್ಟಿದವನು ______ .

6. 'ರಕ್ತ ಮತ್ತು ಕಬ್ಬಿಣ' ತತ್ವವನ್ನು ಪ್ರತಿಪಾದಿಸಿದವನು ______ .

**II. ಕೆಳಕಂಡ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಅಮೆರಿಕದ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣಗಳನ್ನು ಹೆಸರಿಸಿ.
2. ಅಮೆರಿಕ ಸ್ವಾತಂತ್ರ ಸಂಗ್ರಾಮದ ಮಹತ್ವವನ್ನು ತಿಳಿಸಿ.
3. ಫ್ರಾನ್ಸಿನ ಕ್ರಾಂತಿಗೆ ಆರ್ಥಿಕ ಅಂಶಗಳು ಹೇಗೆ ಕಾರಣವಾದವು.?
4. ಇಟಲಿಯ ಏಕೀಕರಣದಲ್ಲಿ ಗ್ಯಾರಿಬಾಲ್ಡಿಯ ಪಾತ್ರವೇನು?
5. ಜರ್ಮನಿಯ ಏಕೀಕರಣ ಶಿಲ್ಪಿ ಯಾರು? ಅವನ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**III. ಚಟುವಟಿಕೆಗಳು**

1. ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿದ್ದ ಚಿಂತಕರ ಬಗ್ಗೆ ವಿವರವಾಗಿ ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ.
2. ಇಟಲಿಯ ಏಕೀಕರಣಕ್ಕೆ ಕಾರಣವಾದ ಅಂಶಗಳನ್ನು ಶಿಕ್ಷಕರ ಮುಖಾಂತರ ಗುಂಪಿನಲ್ಲಿ ಚರ್ಚಿಸಿ.

**IV. ಯೋಜನೆಗಳು :**

1. ಫ್ರಾನ್ಸಿನ ಕ್ರಾಂತಿಯ ಸಂದರ್ಭದಲ್ಲಿದ್ದ ಚಿಂತಕರ ಬಗ್ಗೆ ಒಂದು ಛಾಯಚಿತ್ರ ಸಹಿತ ಯೋಜನೆ ತಯಾರಿಸಿ.
2. ಇಟಲಿಯ ಏಕೀಕರಣದಲ್ಲಿ ಪಾತ್ರವಹಿಸಿದ ಕ್ರಾಂತಿಕಾರಿಗಳ ಬಗ್ಗೆ ಒಂದು ಯೋಜನೆ ತಯಾರಿಸಿ.

◈ ◈ ◈

©KTBS Not to be re published

## ಅಧ್ಯಾಯ-4

# ನ್ಯಾಯಾಂಗ ವ್ಯವಸ್ಥೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಸರ್ವೋಚ್ಚ ನ್ಯಾಯಾಲಯದ ರಚನೆ ಮತ್ತು ಅಧಿಕಾರ ವ್ಯಾಪ್ತಿ.
- ಉಚ್ಚ ನ್ಯಾಯಾಲಯದ ರಚನೆ ಮತ್ತು ಅಧಿಕಾರ ವ್ಯಾಪ್ತಿ.
- ಅಧೀನ ನ್ಯಾಯಾಲಯಗಳು.
- ಕಂದಾಯ ನ್ಯಾಯಾಲಯಗಳು.

ನಮ್ಮ ನ್ಯಾಯಾಂಗ ವ್ಯವಸ್ಥೆಯು ಏಕೀಕೃತವಾಗಿದ್ದು, ಹೆಚ್ಚು ಮಹತ್ವದ ಸ್ಥಾನ ಪಡೆದುಕೊಂಡಿದೆ. ಅಂದರೆ ಅಮೆರಿಕಾದಂತೆ ಕೇಂದ್ರ ಹಾಗೂ ಪ್ರಾಂತ್ಯಗಳಿಗೆ ಪ್ರತ್ಯೇಕ ನ್ಯಾಯಾಲಯಗಳಿರದೆ ಸಮಸ್ತ ರಾಷ್ಟ್ರಕ್ಕೆ ಒಂದೇ ನ್ಯಾಯಾಂಗ ವ್ಯವಸ್ಥೆ ಜಾರಿಯಲ್ಲಿದೆ. ನಮ್ಮ ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ಸ್ವತಂತ್ರವಾಗಿದೆ. ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳು, ಸರ್ವೋಚ್ಚ ನ್ಯಾಯಾಲಯದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತವೆ. ಈ ಎಲ್ಲಕ್ಕೂ ಸರ್ವೋಚ್ಚ ನ್ಯಾಯಾಲಯವೇ ರಾಷ್ಟ್ರದ ಅತ್ಯುನ್ನತ ನ್ಯಾಯಾಲಯವಾಗಿದೆ. ಇದರ ತೀರ್ಪೇ ಅಂತಿಮವಾದುದು.

### ಸರ್ವೋಚ್ಚ ನ್ಯಾಯಾಲಯ

ಸಂವಿಧಾನದಲ್ಲಿ ಹೇಳಿರುವಂತೆ ಸಂಸತ್ತಿನ ಶಾಸನದಿಂದ ರಚಿಸಲಾದ ಸರ್ವೋಚ್ಚ ನ್ಯಾಯಾಲಯವು ಜನವರಿ 28, 1950 ರಂದು ಅಸ್ತಿತ್ವಕ್ಕೆ ಬಂದಿದ್ದು, ಕೇಂದ್ರ ಕಛೇರಿ ದೆಹಲಿಯಲ್ಲಿದೆ. ಈ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಇತರೆ ನ್ಯಾಯಾಧೀಶರನ್ನು ರಾಷ್ಟ್ರಪತಿಯವರು ನೇಮಿಸುತ್ತಾರೆ. ಪ್ರಸ್ತುತ ಮುಖ್ಯ ನ್ಯಾಯಾಧೀಶರನ್ನೊಳಗೊಂಡು 31 ಮಂದಿ ನ್ಯಾಯಾಧೀಶರಿದ್ದಾರೆ.

### ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅರ್ಹತೆಗಳು:

1. ಭಾರತದ ಪ್ರಜೆಯಾಗಿರಬೇಕು,
2. ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಕನಿಷ್ಠ 5 ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು ಅಥವಾ ಯಾವುದೇ ಉಚ್ಚ ನ್ಯಾಯಾಲಯದಲ್ಲಿ 10 ವರ್ಷಗಳ ಕಾಲ ವಕೀಲರಾಗಿ ಸೇವೆ ಸಲ್ಲಿಸಿರಬೇಕು ಅಥವಾ ರಾಷ್ಟ್ರ.ಪತಿಯವರ ಅಭಿಪ್ರಾಯದಲ್ಲಿ ನ್ಯಾಯ ನಿಪುಣರಾಗಿರಬೇಕು.

ಈ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸು 65 ವರ್ಷ ಮತ್ತು ಅದಕ್ಕೂ ಮುಂಚೆಯೇ ರಾಷ್ಟ್ರಪತಿಗಳಿಗೆ ರಾಜೀನಾಮೆ ನೀಡಬಹುದು. ಅವರು ಕರ್ತವ್ಯಲೋಪ ಎಸಗಿದಲ್ಲಿ ಸಂಸತ್ತಿನ ಎರಡೂ ಸದನಗಳ ನಿರ್ದಿಷ್ಟ ಬಹುಮತದ ಕೋರಿಕೆಯಂತೆ ರಾಷ್ಟ್ರಪತಿಗಳು ಅವರನ್ನು ಪದಚ್ಯುತಗೊಳಿಸಬಹುದು. ನಿವೃತ್ತಿಯಾದ ಅಥವಾ ಪದಚ್ಯುತಗೊಂಡ ನಂತರ ದೇಶದ ಯಾವುದೇ ನ್ಯಾಯಾಲಯದಲ್ಲಿ ಇವರು ವಾದ ಮಾಡುವಂತಿಲ್ಲ. ಇವರ ವೇತನ ಭತ್ಯೆಗಳನ್ನು ಸಂಸತ್ತು ಕಾನೂನು ಮಾಡುವುದರ ಮೂಲಕ ನಿರ್ಧರಿಸುತ್ತದೆ.

©KTBS Not to be published

**ಅಧಿಕಾರ ಕಾರ್ಯಗಳು**


**ಮೂಲ ಅಧಿಕಾರ ವ್ಯಾಪ್ತಿ :** ಸರ್ವೋಚ್ಚ ನ್ಯಾಯಾಲಯದಲ್ಲಿ ನೇರವಾಗಿ ಮೊಕದ್ದಮೆ ಹೂಡುವುದೇ ಮೂಲ ಅಧಿಕಾರ ವ್ಯಾಪ್ತಿ. ಕೇಂದ್ರ–ರಾಜ್ಯಗಳ ನಡುವೆ, ರಾಜ್ಯ–ರಾಜ್ಯಗಳ ನಡುವೆ ಉಂಟಾಗುವ ವಿವಾದಗಳನ್ನು ಬಗೆಹರಿಸುವ ಅಧಿಕಾರ ಸರ್ವೋಚ್ಚ ನ್ಯಾಯಾಲಯಕ್ಕಿದೆ. ಮೂಲಭೂತ ಹಕ್ಕುಗಳನ್ನು ರಕ್ಷಿಸುವುದು, ಸಂವಿಧಾನಕ್ಕೆ ಅರ್ಥ ವಿವರಣೆ ನೀಡುವ ಅಧಿಕಾರ, ಆಜ್ಞೆ (ರಿಟ್) ಗಳನ್ನು ನೀಡುವುದು.

**ಮೇಲ್ಮನವಿ ಅಧಿಕಾರ ವ್ಯಾಪ್ತಿ:** ಕೆಳ ನ್ಯಾಯಾಲಯಗಳು ನೀಡುವ ತೀರ್ಪುಗಳ ವಿರುದ್ಧ ಕಕ್ಷಿದಾರರು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಇಂತಹ ಮೇಲ್ಮನವಿ ಸ್ವೀಕರಿಸಿ ವಿಚಾರಣೆ ನಡೆಸುವ ಅಧಿಕಾರ ಈ ನ್ಯಾಯಾಲಯಕ್ಕಿದೆ ಮತ್ತು ಮೇಲ್ಮನವಿ ಸಲ್ಲಿಸುವಂತೆ ವಿಶೇಷ ಅನುಮತಿ ನೀಡುವ ಅಧಿಕಾರವೂ ಈ ನ್ಯಾಯಾಲಯಕ್ಕೆ ಇದೆ.

**ಸಲಹಾ ಅಧಿಕಾರ ವ್ಯಾಪ್ತಿ:** ಸಾರ್ವಜನಿಕವಾಗಿ ಪ್ರಮುಖವಾಗಿರುವ ವಿಷಯದ ಬಗ್ಗೆ ರಾಷ್ಟ್ರಪತಿಗಳು ಸಲಹೆ ಕೇಳಿದಾಗ ಸರ್ವೋಚ್ಚ ನ್ಯಾಯಾಲಯ ಸಲಹೆ ನೀಡುವ ಅಧಿಕಾರವಿದೆ. ಸಂವಿಧಾನ ಜಾರಿಗೆ ಬರುವುದಕ್ಕಿಂತ ಮುಂಚೆ ಸರ್ಕಾರ ಮಾಡಿಕೊಂಡಿರುವ ಒಪ್ಪಂದ, ಕರಾರು ಮುಂತಾದ ವಿಷಯಗಳ ಬಗ್ಗೆ ವಿವಾದ ಉಂಟಾದರೆ ರಾಷ್ಟ್ರಪತಿಗಳು ಈ ನ್ಯಾಯಾಲಯದ ಸಲಹೆ ಕೇಳಬಹುದು.

ಈ ಮೇಲ್ಕಂಡ ಅಧಿಕಾರ ಕಾರ್ಯಗಳ ಜೊತೆಗೆ ಸರ್ವೋಚ್ಚ ನ್ಯಾಯಾಲಯವು ದಾಖಲೆಗಳ ನ್ಯಾಯಾಲಯವಾಗಿ, ಕೇಂದ್ರ ಮತ್ತು ರಾಜ್ಯಗಳಿಗೆ ಮುಖ್ಯ ಸಲಹೆಗಾರನಾಗಿ, ವಿಶೇಷ ರಿಟ್ ಅರ್ಜಿಗಳನ್ನು ಹೊರಡಿಸುವ ಅಧಿಕಾರ ಪಡೆದಿದೆ.

©KTBS not to be republished



**ಸರ್ವೋಚ್ಚ ನ್ಯಾಯಾಲಯ**

## ಉಚ್ಚ ನ್ಯಾಯಾಲಯ

ಪ್ರತಿಯೊಂದು ರಾಜ್ಯದಲ್ಲೂ ಒಂದು ಉಚ್ಚ ನ್ಯಾಯಾಲಯ ಇರಬೇಕೆಂದು ಸಂವಿಧಾನದಲ್ಲಿ ತಿಳಿಸಲಾಗಿದೆ. ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ನ್ಯಾಯಾಲಯವಿರಬಹುದು. ಉಚ್ಚ ನ್ಯಾಯಾಲಯವು ಒಬ್ಬ ಮುಖ್ಯ ನ್ಯಾಯಾಧೀಶರು ಮತ್ತು ರಾಷ್ಟ್ರಪತಿಗಳು ನಿಗದಿಪಡಿಸಬಹುದಾದಷ್ಟು ಇತರೆ ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ. ನ್ಯಾಯಾಧೀಶರ ಸಂಖ್ಯೆ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ.

**ನಿಮಗಿದು ತಿಳಿದಿರಲಿ:**

*1) 1862ರಲ್ಲಿ ಬ್ರಿಟೀಷರು ಭಾರತದಲ್ಲಿ ಮೊಟ್ಟಮೊದಲು ಕಲ್ಕತ್ತಾ, ಬಾಂಬೆ, ಮದ್ರಾಸ್‌ಗಳಲ್ಲಿ 3 ಹೈಕೋರ್ಟ್‌ಗಳನ್ನು ಸ್ಥಾಪಿಸಿದರು. ಪ್ರಸ್ತುತ ರಾಷ್ಟ್ರದಲ್ಲಿ ಒಟ್ಟು 24 ಉಚ್ಚ ನ್ಯಾಯಾಲಯಗಳಿವೆ.*

*2) ಪಂಜಾಬ್, ಹರಿಯಾಣ ರಾಜ್ಯಗಳಿಗೆ ಚಂಡಿಗಢದಲ್ಲಿ ಒಂದೇ ಉಚ್ಚ ನ್ಯಾಯಾಲಯವಿದೆ. ಅಸ್ಸಾಂ, ನಾಗಾಲ್ಯಾಂಡ್, ಮೀಜೋರಂ ಮತ್ತು ಅರುಣಾಚಲ ಪ್ರದೇಶಗಳಿಗೆ ಅಸ್ಸಾಂನ ಗೌಹಾತಿಯಲ್ಲಿ ಒಂದೇ ಉಚ್ಚ ನ್ಯಾಯಾಲಯವಿದೆ.*

*3. 1884ರಲ್ಲಿ ಮೈಸೂರು ಉಚ್ಚನ್ಯಾಯಾಲಯ ಸ್ಥಾಪನೆಯಾಯಿತು. 1973ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಎಂದು ಮರುನಾಮಕರಣ ಮಾಡಲಾಯಿತು. ಕರ್ನಾಟಕದಲ್ಲಿ ಇತ್ತೀಚೆಗೆ ಬೆಂಗಳೂರು ಉಚ್ಚನ್ಯಾಯಾಲಯದ ಜೊತೆಗೆ ಧಾರವಾಡ ಮತ್ತು ಕಲಬುರಗಿಗಳಲ್ಲಿ ಪೀಠ ಸ್ಥಾಪಿಸಲಾಗಿದೆ.*

### ಉಚ್ಚ ಅಥವಾ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಲು ಇರುವ ಅರ್ಹತೆಗಳೆಂದರೆ

1) ಭಾರತದ ಪ್ರಜೆಯಾಗಿರಬೇಕು.

2) ಕನಿಷ್ಠ 10 ವರ್ಷಗಳು ನ್ಯಾಯಾಧಿಕಾರಿಯಾಗಿ ಸೇವೆ ಸಲ್ಲಿಸಿರಬೇಕು ಅಥವಾ 10 ವರ್ಷಗಳ ಕಾಲ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿರಬೇಕು. ಅಥವಾ

3) ರಾಷ್ಟ್ರಪತಿಯವರ ಅಭಿಪ್ರಾಯದಲ್ಲಿ ನ್ಯಾಯನಿಪುಣರಾಗಿರಬೇಕು.

ನ್ಯಾಯಾಧೀಶರು ತಮ್ಮ 62ನೇ ವಯಸ್ಸಿನವರೆಗೆ ಅಧಿಕಾರದಲ್ಲಿರುತ್ತಾರೆ. ದುರ್ನಡತೆ ಅಥವಾ ಅಸಮರ್ಥತೆ ಆಧಾರದ ಮೇಲೆ ಅಥವಾ ಸಂವಿಧಾನ ಉಲ್ಲಂಘಿಸಿದಾಗ ಸಂಸತ್ತು ಪದಚ್ಯುತಗೊಳಿಸಬಹುದಾಗಿದೆ.

**ಅಧಿಕಾರ ಕಾರ್ಯಗಳು :** ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ರಾಜ್ಯಾದ್ಯಂತ ವಿಸ್ತರಿಸಿದೆ. ಅದು ನಿರ್ವಹಿಸುವ ಕಾರ್ಯಗಳು ಈ ಕೆಳಕಂಡಂತಿದೆ.

1) ನಾಗರಿಕ (Civil) ಮತ್ತು ಅಪರಾಧ (Criminal) ವಿವಾದಗಳು, ನೌಕಾಯಾನ, ವೈವಾಹಿಕ ಸಂಬಂಧಗಳು, ನ್ಯಾಯಾಂಗ ನಿಂದನೆ ಮುಂತಾದ ವಿವಾದಗಳನ್ನು ಇತ್ಯರ್ಥಪಡಿಸುವ ಮೂಲ ಅಧಿಕಾರ ಕಾರ್ಯ.

2) ಅಧೀನ ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಶ್ರೇಷ್ಠ ನ್ಯಾಯಾಲಯ ಮೇಲ್ಮನವಿ ಸ್ವೀಕರಿಸಿ ಇತ್ಯರ್ಥಪಡಿಸುವ ಮನವಿ ಅಧಿಕಾರ ಕಾರ್ಯ.

3) ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಅಧೀನ ನ್ಯಾಯಾಲಯಗಳಲ್ಲಿನ ಮೊಕದ್ದಮೆಗಳನ್ನು ತನ್ನಲ್ಲಿಗೆ ವರ್ಗಾಯಿಸುವಂತೆ, ಕೆಲವು ನಿಯಮಗಳನ್ನು ಅಧೀನ ನ್ಯಾಯಾಲಯಗಳು ಪಾಲಿಸುವಂತೆ ಮತ್ತು ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿಕೊಳ್ಳುವಂತೆ ನಿರ್ದೇಶನ ನೀಡಿ ಅವುಗಳ ಮೇಲ್ವಿಚಾರಣೆ ಮಾಡುವ ಅಧಿಕಾರ ಕಾರ್ಯವನ್ನು ಹೊಂದಿದೆ. ಇವುಗಳಲ್ಲದೆ ಸಿಬ್ಬಂದಿ ನೇಮಕ ಮತ್ತು ನಿಯಂತ್ರಣ, ಮೂಲಭೂತ ಹಕ್ಕುಗಳ ರಕ್ಷಣೆ, ವಿವಿಧ ರಿಟ್ ಅರ್ಜಿಗಳನ್ನು ಸ್ವೀಕರಿಸಿ ನ್ಯಾಯ ಒದಗಿಸುವ ಕಾರ್ಯ ನಿರ್ವಹಿಸುತ್ತದೆ.

©KTBS Not to be republished




**ಉಚ್ಚ ನ್ಯಾಯಾಲಯ**

ಸರ್ವೋಚ್ಚ ನ್ಯಾಯಾಲಯ

↓

ಉಚ್ಚ ನ್ಯಾಯಾಲಯ

↓

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ

↓ ↓

| | |
|---|---|
| ಹಿರಿಯ ಶ್ರೇಣಿ ನ್ಯಾಯಾಲಯ (ಸಿವಿಲ್ ವ್ಯಾಜ್ಯಗಳು) | ಚೀಫ್ ಜುಡೀಷಿಯಲ್ ಮ್ಯಾಜಿಸ್ಟ್ರೇಟ್ (ಕ್ರಿಮಿನಲ್ ವ್ಯಾಜ್ಯಗಳು) |

### ಅಧೀನ ನ್ಯಾಯಾಲಯಗಳು

1948ರಲ್ಲಿ ನಡೆದ ನ್ಯಾಯಾಲಯಗಳ ಸಮ್ಮೇಳನವು ಅಧೀನ ನ್ಯಾಯಾಲಯಗಳಿಗೆ ಸ್ವಾಯತ್ತತೆ ಇರಬೇಕೆಂದು ಬಲವಾಗಿ ಆಗ್ರಹಿಸಿದವು. ಪರಿಣಾಮವಾಗಿ ಸಂವಿಧಾನದಲ್ಲಿ ಅಧೀನ ನ್ಯಾಯಾಲಯಗಳು, ಅವುಗಳ ರಚನೆ ಹಾಗೂ ಕಾರ್ಯವ್ಯಾಪ್ತಿಯನ್ನು ಅಳವಡಿಸಲಾಗಿದೆ. ಈ ನ್ಯಾಯಾಲಯಗಳು ರಾಜ್ಯದಿಂದ ರಾಜ್ಯಕ್ಕೆ ಸ್ವಲ್ಪ ಭಿನ್ನವಾಗಿದ್ದರೂ ಅವುಗಳ ಮುಖ್ಯ ಲಕ್ಷಣಗಳು ಸಾಮಾನ್ಯವಾಗಿ ಒಂದೇ ರೀತಿಯಲ್ಲಿವೆ. ನ್ಯಾಯಾಲಯಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,

©KTBS Not to be re published

1) ನಾಗರಿಕ ನ್ಯಾಯಾಲಯಗಳು (ಸಿವಿಲ್ ಕೋರ್ಟ್)

2) ಅಪರಾಧ ನ್ಯಾಯಾಲಯಗಳು (ಕ್ರಿಮಿನಲ್ ಕೋರ್ಟ್)

**ನಾಗರಿಕ ನ್ಯಾಯಾಲಯ (Civil Court):** ಇದು ಪ್ರತಿಯೊಂದು ಜಿಲ್ಲೆಯಲ್ಲೂ ಇದ್ದು, ಜಿಲ್ಲಾ ನ್ಯಾಯಾಧೀಶರು ಇದರ ಮುಖ್ಯ ನ್ಯಾಯಾಧೀಶರಾಗಿರುತ್ತಾರೆ. ಈ ನ್ಯಾಯಾಧೀಶರನ್ನು ರಾಜ್ಯ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರೊಡನೆ ಸಮಾಲೋಚಿಸಿ ರಾಜ್ಯಪಾಲರು ನೇಮಿಸುತ್ತಾರೆ. ಈ ನ್ಯಾಯಾಧೀಶರು ರಾಷ್ಟ್ರದ ಅಥವಾ ರಾಜ್ಯದ ಯಾವುದೇ ನ್ಯಾಯಾಂಗ ಸೇವೆಯಲ್ಲಿ 7 ವರ್ಷಗಳ ಕಾಲ ವಕೀಲರಾಗಿ ಸೇವೆ ಸಲ್ಲಿಸಿರಬೇಕು. ಇತರ ನ್ಯಾಯಾಧೀಶರು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಿಸಲ್ಪಟ್ಟಿರುತ್ತಾರೆ.

ಈ ನ್ಯಾಯಾಲಯವು ನಾಗರಿಕ ವಿವಾದಗಳಾದ ಆಸ್ತಿ, ಭೂಮಿ, ಹಣಕಾಸು ವ್ಯವಹಾರ, ಮದುವೆ, ವಿವಾಹ ವಿಚ್ಛೇದನ ಹಾಗೂ ಇನ್ನಿತರೆ ಮೊಕದ್ದಮೆಗಳ ವಿವಾದ ಬಗೆಹರಿಸುತ್ತವೆ. ಅಲ್ಲದೆ ಮೇಲ್ಮನವಿ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದು ಕೆಳಹಂತದ ನ್ಯಾಯಾಲಯಗಳು ನೀಡುವ ತೀರ್ಪುಗಳ ವಿರುದ್ಧ ಮೇಲ್ಮನವಿ ಸ್ವೀಕರಿಸಿ ತೀರ್ಪುಗಳನ್ನು ಪರಿಶೀಲಿಸುವ ಅಧಿಕಾರ ಹೊಂದಿದೆ. ಜಿಲ್ಲಾ ನ್ಯಾಯಾಧೀಶರು ಜಿಲ್ಲೆಯಲ್ಲಿರುವ ಎಲ್ಲಾ ಸಿವಿಲ್ ನ್ಯಾಯಾಲಯಗಳ ಮೇಲೆ ನಿಯಂತ್ರಣ ಹೊಂದಿರುತ್ತಾರೆ.

**ಈ ನ್ಯಾಯಾಲಯಗಳ ಅಡಿಯಲ್ಲಿ ಕೆಳಕಂಡ ಅಧೀನ ನ್ಯಾಯಾಲಯಗಳಿವೆ.**

(1) ಅಧೀನ ನ್ಯಾಯಾಧೀಶರ ನ್ಯಾಯಾಲಯ (Court of Subordinate Judges)

(2) ಹೆಚ್ಚುವರಿ ಅಧೀನ ನ್ಯಾಯಾಧೀಶರ ನ್ಯಾಯಾಲಯ (Court of Additional Subordinate Judges)

(3) ಮುನ್ಸಿಫ್ ನ್ಯಾಯಾಲಯ (Court of Muncif)

(4) ಹೆಚ್ಚುವರಿ ಮುನ್ಸಿಫ್ ನ್ಯಾಯಾಲಯ. (Court of Additional Muncif)

**ಅಪರಾಧ ನ್ಯಾಯಾಲಯ ಅಥವಾ ದಂಡಾಧಿಕಾರ ನ್ಯಾಯಾಲಯ (Criminal Court):** ಅಪರಾಧ ನ್ಯಾಯಾಲಯವು ಏಪ್ರಿಲ್ 1, 1974 ರಂದು ಅಸ್ತಿತ್ವಕ್ಕೆ ಬಂದಿತು. ಇದನ್ನು ಜಿಲ್ಲಾ ದಂಡಾಧಿಕಾರಿ ನ್ಯಾಯಾಲಯ ಎಂದು ಕರೆಯಲಾಗುತ್ತದೆ. ಇವು ರಾಜ್ಯ ಶ್ರೇಷ್ಠ ನ್ಯಾಯಾಲಯದ ನಿಯಂತ್ರಣದಲ್ಲಿರುತ್ತವೆ. ಅಪರಾಧ ನ್ಯಾಯಾಲಯಗಳಲ್ಲಿ ಜಿಲ್ಲಾ ಮಟ್ಟದ ಉನ್ನತ ನ್ಯಾಯಾಲಯವೆಂದರೆ ಸೆಷನ್ಸ್ ನ್ಯಾಯಾಲಯ. ಜಿಲ್ಲಾ ನ್ಯಾಯಾಧೀಶರೆ ಇದರ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಾರೆ. ಕೊಲೆ, ದರೋಡೆ, ಡಕಾಯಿತಿ ಮುಂತಾದ ಅಪರಾಧಗಳಿಗೆ ಸಂಬಂಧಿಸಿದ ಮೊಕದ್ದಮೆಗಳ ವಿಚಾರಣೆ ನಡೆಸುತ್ತದೆ. ಈ ನ್ಯಾಯಾಲಯವು ಮರಣ ದಂಡನೆಯನ್ನೊಳಗೊಂಡು ಜೀವಾವಧಿ ಶಿಕ್ಷೆ ನೀಡುವ ಅಧಿಕಾರ ಪಡೆದಿದೆ. ಆದರೆ ತಾನು ನೀಡುವ ಮರಣ ದಂಡನೆಯಂತಹ ಶಿಕ್ಷೆಗೆ ಶ್ರೇಷ್ಠ ನ್ಯಾಯಾಲಯ ದೃಢೀಕರಿಸಬೇಕಾಗುತ್ತದೆ. ಹಾಗೆಯೇ ಈ ನ್ಯಾಯಾಲಯದ ತೀರ್ಪಿನ ವಿರುದ್ಧ ಶ್ರೇಷ್ಠ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬಹುದು. ಈ ನ್ಯಾಯಾಲಯದ ಅಡಿಯಲ್ಲಿ ಇತರೆ ಅಪರಾಧ ನ್ಯಾಯಾಲಯಗಳಿವೆ.

**ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ:** ಈ ನ್ಯಾಯಾಲಯಕ್ಕೆ ಮರಣ ದಂಡನೆ ಮತ್ತು ಜೀವಾವಧಿ ಶಿಕ್ಷೆಯನ್ನು ವಿಧಿಸುವ ಅಧಿಕಾರವಿಲ್ಲ. ಆದರೆ 7 ವರ್ಷಗಳವರೆಗೆ ಶಿಕ್ಷೆ ವಿಧಿಸುವ ಅಧಿಕಾರವಿದೆ.

**ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :** ಈ ನ್ಯಾಯಾಲಯವು ಮೇಲ್ದರ್ಜೆ ಅಧಿಕಾರ ಪಡೆದಿದ್ದು, 3 ವರ್ಷಗಳವರೆಗೆ ಶಿಕ್ಷೆ ವಿಧಿಸುವ ಅಥವಾ 5,000/– ರೂ. ದಂಡ ವಿಧಿಸುವ ಅಥವಾ ಎರಡನ್ನೂ ವಿಧಿಸುವ

©KTBS Not to be republished

ಅಧಿಕಾರ ಪಡೆದಿದೆ. ಅಲ್ಲದೆ ಇದರ ಕೆಳಗಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಮೇಲ್ಮನವಿ ವಿಚಾರಣೆ ನಡೆಸುತ್ತದೆ.

**ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ:** ಈ ನ್ಯಾಯಾಲಯವು 2 ವರ್ಷಗಳವರೆಗೆ ಶಿಕ್ಷೆ ವಿಧಿಸುವ ಮತ್ತು 1000/– ರೂ.ಗಳಿಗಿಂತ ಹೆಚ್ಚಿಲ್ಲದ ದಂಡ ವಿಧಿಸುವ ಅಥವಾ ಎರಡನ್ನೂ ವಿಧಿಸುವ ಅಧಿಕಾರ ಪಡೆದಿದೆ.

**ತೃತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :** ಈ ನ್ಯಾಯಾಲಯವು ಕಡಿಮೆ ಅಧಿಕಾರವನ್ನು ಹೊಂದಿದ್ದು, ಒಂದು ತಿಂಗಳ ಸೆರೆವಾಸ ಅಥವಾ 50/– ರೂ. ದಂಡ ಅಥವಾ ಎರಡನ್ನೂ ವಿಧಿಸುವ ಅಧಿಕಾರ ಹೊಂದಿದೆ. ಆದರೆ ದ್ವಿತೀಯ ದರ್ಜೆ ಮತ್ತು ತೃತೀಯ ದರ್ಜೆ ನ್ಯಾಯಾಲಯಗಳು ಮೇಲ್ಮನವಿ ಸ್ವೀಕರಿಸುವ ಅಧಿಕಾರವಿಲ್ಲ.

> **ನಿಮಗಿದು ತಿಳಿದಿರಲಿ :**
> ನಿಮ್ಮ ಹತ್ತಿರದಲ್ಲಿರುವ ನ್ಯಾಯಾಲಯವನ್ನು ಭೇಟಿ ನೀಡಿ, ಅಲ್ಲಿ ನಡೆಯುವ ವಾದ–ಪ್ರತಿವಾದಗಳನ್ನು ಗಮನಿಸಿ, ಶಿಕ್ಷಕರೊಂದಿಗೆ ಚರ್ಚಿಸಿ.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳು ಬೇರೆ ಬೇರೆಯಾಗಿರದೆ ಒಂದೇ ಆಗಿದ್ದು, ಒಬ್ಬರೇ ನ್ಯಾಯಾಧೀಶರು ಈ ಎರಡೂ ನ್ಯಾಯಾಲಯಗಳ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಾರೆ. ಸಿವಿಲ್ ವಿವಾದಗಳ ವಿಚಾರಣೆ ನಡೆಸುವ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯವಾಗಿ, ಅಪರಾಧ ಮೊಕದ್ದಮೆಗಳ ವಿಚಾರಣೆ ನಡೆಸುವಾಗ ಸೆಷನ್ಸ್ ನ್ಯಾಯಾಲಯವೆಂತಲೂ ಕರೆಯುತ್ತಾರೆ.

## ಕಂದಾಯ ನ್ಯಾಯಾಲಯಗಳು

ಪ್ರತಿಯೊಂದು ಜಿಲ್ಲೆಯು ಕಂದಾಯ ನ್ಯಾಯಾಲಯಗಳನ್ನು ಹೊಂದಿರುತ್ತವೆ. ಇವು ಕಂದಾಯಕ್ಕೆ ಸಂಬಂಧಿಸಿದ ಮೊಕದ್ದಮೆಗಳ ವಿಚಾರಣೆ, ಭೂ ದಾಖಲೆಗಳು, ಭೂ ಕಂದಾಯ ಮುಂತಾದವುಗಳ ವಿಚಾರಣೆ ನಡೆಸುತ್ತವೆ. ಕಂದಾಯ ನ್ಯಾಯಾಲಯವು ಈ ಕೆಳಕಂಡ ನ್ಯಾಯಾಲಯಗಳನ್ನು ಒಳಗೊಂಡಿದೆ.

**ತಹಸೀಲ್ದಾರ್ ನ್ಯಾಯಾಲಯ :** ಕಂದಾಯ ನ್ಯಾಯಾಲಯಗಳಲ್ಲಿ ಅತಿ ಕೆಳಗಿನ ನ್ಯಾಯಾಲಯವೆಂದರೆ ತಹಶೀಲ್ದಾರ್ ನ್ಯಾಯಾಲಯವಾಗಿದ್ದು, ತಹಶೀಲ್ದಾರ್ ನ್ಯಾಯಾಧೀಶರಾಗಿರುತ್ತಾರೆ. ಈ ನ್ಯಾಯಾಲಯವನ್ನು ತಾಲ್ಲೂಕು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಎಂಬುದಾಗಿಯೂ ಕರೆಯುತ್ತಾರೆ.

**ಜಿಲ್ಲಾ ಉಪವಿಭಾಗಾಧಿಕಾರಿಗಳ ನ್ಯಾಯಾಲಯ :** ತಹಸೀಲ್ದಾರ್ ನ್ಯಾಯಾಲಯಗಳ ನಿರ್ಣಯಗಳು ಮತ್ತು ತೀರ್ಪುಗಳ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯವು ಸ್ವೀಕರಿಸಿ ವಿಚಾರಣೆ ನಡೆಸುತ್ತದೆ. ಸಹಾಯಕ ಆಯುಕ್ತರು (Assistant Commissioner) ಈ ನ್ಯಾಯಾಲಯದ ನ್ಯಾಯಾಧೀಶರಾಗಿರುತ್ತಾರೆ.

**ಜಿಲ್ಲಾ ಕಂದಾಯ ನ್ಯಾಯಾಲಯ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ :** ಈ ನ್ಯಾಯಾಲಯವು ಜಿಲ್ಲಾ ಕೇಂದ್ರದಲ್ಲಿದ್ದು, ತಹಸೀಲ್ದಾರ್ ಮತ್ತು ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳು ನೀಡಲಾದ ತೀರ್ಪುಗಳ ವಿರುದ್ಧ ಸಲ್ಲಿಸುವ ಮೇಲ್ಮನವಿಯನ್ನು ಸ್ವೀಕರಿಸಿ ವಿಚಾರಣೆ ನಡೆಸುತ್ತದೆ. ಜಿಲ್ಲಾಧಿಕಾರಿಗಳು (Deputy Commissioner) ಈ ನ್ಯಾಯಾಲಯದ ನ್ಯಾಯಾಧೀಶರಾಗಿರುತ್ತಾರೆ.

**ಆಯುಕ್ತರ ನ್ಯಾಯಾಲಯ :** ಆಯುಕ್ತರ ನ್ಯಾಯಾಲಯವು ಕೊಡುವ ತೀರ್ಪಿನ ವಿರುದ್ಧ ಮೇಲ್ಮನವಿ ಸ್ವೀಕರಿಸಿ ವಿಚಾರ ನ್ಯಾಯಾಧೀಶರು ರಾಜ್ಯ ಮಟ್ಟದ ವಿಭಾಗಾಧಿಕಾರಿಗಳಾಗಿರುತ್ತಾರೆ.

**ಕಂದಾಯ ಮಂಡಳಿ :** ಇದು ಕಂದಾಯ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಅತ್ಯುನ್ನತ ನ್ಯಾಯಾಲಯವಾಗಿದೆ. ಈ

> **ನಿಮಗಿದು ತಿಳಿದಿರಲಿ :**
> ಆಡಳಿತ ದೃಷ್ಟಿಯಿಂದ ಕರ್ನಾಟಕವು ನಾಲ್ಕು ವಿಭಾಗಗಳನ್ನು ಹೊಂದಿದೆ.
> 1) ಬೆಂಗಳೂರು 2) ಮೈಸೂರು,
> 3) ಕಲಬುರಗಿ 4) ಬೆಳಗಾವಿ

©KTBS Not to be republished

ನ್ಯಾಯಾಲಯವು ಅಧೀನ ಕಂದಾಯ ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಸಲ್ಲಿಸಲಾದ ಮೇಲ್ಮನವಿ ಸ್ವೀಕರಿಸಿ ವಿಚಾರಣೆ ಮಾಡುವ ಅಧಿಕಾರವಿದೆ. ಕಂದಾಯ ಕಾರ್ಯದರ್ಶಿಗಳು ಇದರ ಮುಖ್ಯಸ್ಥರಾಗಿದ್ದು, ಶ್ರೇಷ್ಠ ನ್ಯಾಯಾಲಯದ ಮೇಲ್ವಿಚಾರಣೆಯಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.

**ಜನತಾ ನ್ಯಾಯಾಲಯಗಳು (ಲೋಕ್ ಅದಾಲತ್)**

ಭಾರತದಲ್ಲಿ ನ್ಯಾಯ ವಿತರಣೆಯು ವಿಳಂಬವೂ ಹಾಗೂ ವೆಚ್ಚದಾಯಕವೂ (ದುಬಾರಿ) ಆಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮೊಕದ್ದಮೆಗಳನ್ನು ಶೀಘ್ರಗತಿಯಲ್ಲಿ ಮತ್ತು ಕಡಿಮೆ ವೆಚ್ಚದಲ್ಲಿ ಇತ್ಯರ್ಥಪಡಿಸಲು ಜನತಾ ನ್ಯಾಯಾಲಯಗಳು 1985 ರ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದವು. ಒಂದು ನಿರ್ದಿಷ್ಟ ಪ್ರಕರಣದಲ್ಲಿ ಭಾಗಿಯಾದ ಇಬ್ಬರು ವ್ಯಕ್ತಿಗಳ ನಡುವಿನ ವಿವಾದಗಳನ್ನು ರಾಜಿ ಸಂಧಾನ ಮಾಡಿಸುವುದು ಅಥವಾ ಇತ್ಯರ್ಥ ಪಡಿಸುವ ಉದ್ದೇಶವನ್ನು ಹೊಂದಿದೆ.

ಈ ನ್ಯಾಯಾಲಯವು ಗುಜರಾತ್, ದೆಹಲಿ, ಕರ್ನಾಟಕ ಮುಂತಾದ ಕೆಲವು ರಾಜ್ಯಗಳಲ್ಲಿದ್ದು, ಕಾರ್ಯನಿರ್ವಹಿಸುತ್ತಿವೆ. ಸರ್ವೋಚ್ಚ ನ್ಯಾಯಾಲಯದ ಕೆಲವು ನ್ಯಾಯಾಧೀಶರು, ಸಾಮಾಜಿಕ ಕಾರ್ಯಕರ್ತರು ಮತ್ತು ಯುವ ಕಾನೂನು ಪದವೀಧರರು ಈ ನ್ಯಾಯಾಲಯಗಳ ಸ್ಥಾಪನೆಯ ರೂವಾರಿಗಳು. ರಾಜ್ಯ ಶ್ರೇಷ್ಠ ನ್ಯಾಯಾಲಯ ಮತ್ತು ಬೇರೆ ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಬಾಕಿ ಇರುವ ಮೊಕದ್ದಮೆಗಳನ್ನು ಈ ನ್ಯಾಯಾಲಯದ ಮೂಲಕ ಇತ್ಯರ್ಥಗೊಳಿಸಿಕೊಳ್ಳಬಹುದು. ಇದು ಪ್ರಮುಖ ಮೂರು ಗುಣಗಳನ್ನು ಹೊಂದಿದೆ.

1) ರಾಜೀ ಸಂಧಾನಕ್ಕೆ ಹೆಚ್ಚು ಉತ್ಸುಕವಾಗಿದೆ.
2) ಇದು ಶೀಘ್ರ ಹಾಗೂ ಮಿತವ್ಯಯದ್ದಾಗಿರುತ್ತದೆ.
3) ಇತರೆ ನ್ಯಾಯಾಲಯಗಳ ಕಾರ್ಯದ ಹೊರೆ ಕಡಿಮೆ ಮಾಡುತ್ತದೆ.

ಈ ನ್ಯಾಯಾಲಯವು ಕೆಲವು ಪ್ರಕರಣಗಳಾದ ವಾಹನ ಅಪಘಾತಗಳು, ಭೂ ಸ್ವಾಧೀನ, ಬ್ಯಾಂಕಿಂಗ್‌ಗೆ ಸಂಬಂಧಿಸಿದ ಪ್ರಕರಣ, ವೈವಾಹಿಕ ಹಾಗೂ ಜೀವನಾಂಶ, ಕಾರ್ಮಿಕರ ಸಮಸ್ಯೆಗಳು ಇವೇ ಮೊದಲಾದವುಗಳ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತದೆ. ಈ ನ್ಯಾಯಾಲಯವು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಅಥವಾ ತಾಲ್ಲೂಕು ಕಾನೂನು ಸೇವಾ ಸಮಿತಿಯಿಂದ ರಚಿತವಾದ ನ್ಯಾಯಾಲಯವಾಗಿದೆ. ಇದರಲ್ಲಿ ಇಬ್ಬರು ಸಂಧಾನಕಾರರಿರುತ್ತಾರೆ.

ಇಂತಹ ಲೋಕಅದಾಲತ್ ನೀಡಿದ ತೀರ್ಪು ಅಂತಿಮವಾಗಿದ್ದು, ಅದರ ವಿರುದ್ಧ ಮೇಲ್ಮನವಿಗೆ ಅವಕಾಶವಿರುವುದಿಲ್ಲ. ಈ ತೀರ್ಪಿಗೆ ಎರಡೂ ಕಡೆಯವರು (ಕಕ್ಷಿದಾರರು) ಬದ್ಧರಾಗಿರಬೇಕಾಗುತ್ತದೆ. ಇದು ನೀಡಿದ ತೀರ್ಪು ಸಿವಿಲ್ ನ್ಯಾಯಾಲಯ ನೀಡಿದ ತೀರ್ಪಿನಷ್ಟೇ ಮಾನ್ಯತೆ ಪಡೆದಿರುತ್ತದೆ.

## ಅಭ್ಯಾಸಗಳು

**I. ಖಾಲಿಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಸರ್ವೋಚ್ಚ ನ್ಯಾಯಾಲಯ ______________ ರಂದು ಅಸ್ತಿತ್ವಕ್ಕೆ ಬಂದಿತು.
2. ನ್ಯಾಯಾಧೀಶರ ನಿವೃತ್ತಿ ವಯಸ್ಸು______________
3. ನ್ಯಾಯಾಧೀಶರನ್ನು ______________ ನೇಮಕ ಮಾಡುತ್ತಾರೆ.

©KTBS Not to be re published

4. ಕಂದಾಯ ಮಂಡಳಿ ಮುಖ್ಯಸ್ಥರು____________

5. ಜನತಾ ನ್ಯಾಯಾಲಯಗಳು ____________ ರಲ್ಲಿ ಅಸ್ತಿತ್ವಕ್ಕೆ ಬಂದವು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಕಾರ್ಯಗಳ ಕುರಿತು ವಿವರಿಸಿ.
2. ಉಚ್ಚ ನ್ಯಾಯಾಲಯದ ಅಧಿಕಾರ ಮತ್ತು ಕಾರ್ಯಗಳ ಕುರಿತು ವಿವರಿಸಿ.
3. ನಾಗರಿಕ ನ್ಯಾಯಾಲಯದ ಅಡಿಯಲ್ಲಿ ಇರುವ ಅಧೀನ ನ್ಯಾಯಾಲಯಗಳಾವುವು ?
4. ಅಪರಾಧ ನ್ಯಾಯಾಲಯದ ಕುರಿತು ಬರೆಯಿರಿ.
5. ಕಂದಾಯ ನ್ಯಾಯಾಲಯಗಳ ಕುರಿತು ಟಿಪ್ಪಣಿ ಬರೆಯಿರಿ.
6. ಜನತಾ ನ್ಯಾಯಾಲಯ (ಲೋಕ್ ಅದಾಲತ್) ಸ್ಥಾಪಿಸುವ ಉದ್ದೇಶಗಳೇನು ?

**III. ಚಟುವಟಿಕೆಗಳು**

1. ನಿಮ್ಮ ಹತ್ತಿರ ವಕೀಲರನ್ನು ಭೇಟಿ ಮಾಡಿ ನ್ಯಾಯಾಲಯದ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.
2. ಸರ್ವೋಚ್ಚ ನ್ಯಾಯಾಲಯದಲ್ಲಿ ಕರ್ನಾಟಕದಿಂದ ಮುಖ್ಯ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದವರ ಪಟ್ಟಿ ತಯಾರಿಸಿ.
3. ನಿಮಗೆ ಹತ್ತಿರವಿರುವ ನ್ಯಾಯಾಲಯಗಳಿಗೆ ಭೇಟಿ ನೀಡಿ ನ್ಯಾಯಾಲಯದ ಕಲಾಪಗಳನ್ನು ಗಮನಿಸಿ ವರದಿ ತಯಾರಿಸಿ.
4. ವೃತ್ತ ಪತ್ರಿಕೆಗಳಲ್ಲಿ ಬರುವ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಬರುವ ಲೇಖನಗಳನ್ನು ಓದಿರಿ ಮತ್ತು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

© KTBS Not to be re published

# ಅಧ್ಯಾಯ – 5

# ಭಾರತದ ಚುನಾವಣಾ ವ್ಯವಸ್ಥೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಚುನಾವಣಾ ಆಯೋಗ
- ಚುನಾವಣಾ ವ್ಯವಸ್ಥೆಯ ಪ್ರಕ್ರಿಯೆ
- ರಾಜಕೀಯ ಪಕ್ಷಗಳು
- ಸಮ್ಮಿಶ್ರ ಸರ್ಕಾರಗಳು
- ಮಾಧ್ಯಮ ಮತ್ತು ಪ್ರಜಾಪ್ರಭುತ್ವ

ಭಾರತವು ಜಗತ್ತಿನ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಲು ನಿಷ್ಪಕ್ಷಪಾತವಾದ ನಿರ್ಭಯವಾದ ಚುನಾವಣೆಗಳು ನಡೆಯುವುದು ಅಗತ್ಯವಾಗಿರುತ್ತದೆ. ಚುನಾವಣೆಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣ ಮಾಡಲು ನಮ್ಮ ಸಂವಿಧಾನದ XV ನೇ ಭಾಗದಲ್ಲಿ 324 ರಿಂದ 329ರ ವರೆಗಿನ ವಿಧಿಗಳಡಿಯಲ್ಲಿ ಸ್ವತಂತ್ರವಾದ ಚುನಾವಣಾ ಆಯೋಗದ ವ್ಯವಸ್ಥೆ ಕುರಿತು ತಿಳಿಸಲಾಗಿದೆ. ಈ ಚುನಾವಣಾ ಆಯೋಗ ಅಖಿಲ ಭಾರತ ಸಂಸ್ಥೆಯಾಗಿದೆ. ಅಂದರೆ ಕೇಂದ್ರ ಮತ್ತು ರಾಜ್ಯಗಳ ಚುನಾವಣೆಗಳ ಜವಾಬ್ದಾರಿಯನ್ನು ಹೊಂದಿರುತ್ತದೆ. ವಿಧಿ 324 K ಮತ್ತು ZA ಅನ್ವಯ ರಾಜ್ಯ ಚುನಾವಣಾ ಆಯೋಗವು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುತ್ತದೆ.

### ಚುನಾವಣಾ ಆಯೋಗದ ರಚನೆ (Structure of Election Commision)

ಸಂವಿಧಾನದ ವಿಧಿ 324 ಚುನಾವಣಾ ಆಯೋಗದ ರಚನೆ ಕುರಿತು ತಿಳಿಸುತ್ತದೆ. ಭಾರತ ಚುನಾವಣಾ ಆಯೋಗ 1950 ಜನವರಿ 25ರಂದು ಸ್ಥಾಪಿತವಾಯಿತು. ಪ್ರಾರಂಭದಲ್ಲಿ ಒಬ್ಬ ಮುಖ್ಯಚುನಾವಣಾ ಆಯುಕ್ತರನ್ನು ಮಾತ್ರ ಒಳಗೊಂಡಿತ್ತು. 1989ರಲ್ಲಿ ಸಂವಿಧಾನದ 61ನೆಯ ತಿದ್ದುಪಡಿ ಅನ್ವಯ ಸಾರ್ವತ್ರಿಕ ವಯಸ್ಕ ಮತದಾನದ ವಯಸ್ಸನ್ನು 21 ವರ್ಷದಿಂದ 18ನೇ ವರ್ಷಕ್ಕೆ ಕಡಿಮೆಗೊಳಿಸಲಾಯಿತು. ಇದರಿಂದಾಗಿ ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಹೆಚ್ಚಳವಾಯಿತು. ಹಾಗಾಗಿ ಮುಖ್ಯ ಚುನಾವಣಾ ಆಯುಕ್ತರ ಜೊತೆಗೆ ಇತರೆ ಇಬ್ಬರು ಚುನಾವಣಾ ಆಯುಕ್ತರನ್ನು ನೇಮಕ ಮಾಡಲಾಯಿತು. 1990ರಲ್ಲಿ ಇಬ್ಬರು ಚುನಾವಣಾ ಆಯುಕ್ತರನ್ನು ತೆಗೆದು ಹಾಕಲಾಯಿತು. 1993ರಿಂದ ಚುನಾವಣಾ ಆಯೋಗವು ಒಬ್ಬ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರೆ ಇಬ್ಬರು ಚುನಾವಣಾ ಆಯುಕ್ತರನ್ನು ಒಳಗೊಂಡಿರುತ್ತದೆ. ಮೂವರು ಚುನಾವಣಾ ಆಯುಕ್ತರು ಸಮಾನವಾದ ಅಧಿಕಾರವನ್ನು ಹೊಂದಿರುತ್ತಾರೆ. ಚುನಾವಣಾ ಆಯುಕ್ತರಲ್ಲಿ ಭಿನ್ನಾಭಿಪ್ರಾಯಗಳುಂಟಾದರೆ ಬಹುಮತದ ಮೂಲಕ ನಿರ್ಣಯ ಕೈಗೊಳ್ಳಲಾಗುತ್ತದೆ.

ರಾಷ್ಟ್ರಪತಿಯವರು ಚುನಾವಣಾ ಆಯುಕ್ತರನ್ನು ನೇಮಕ ಮಾಡುತ್ತಾರೆ. ಅವರ ಅಧಿಕಾರವಧಿ 6 ವರ್ಷಗಳು ಅಥವಾ ತಮ್ಮ ಅರವತ್ತೈದನೆಯ ವಯಸ್ಸನ್ನು ಹೊಂದುವವರೆಗೆ, ಇವುಗಳಲ್ಲಿ ಪ್ರಥಮವಾಗುವುದನ್ನು ಪರಿಗಣಿಸಲಾಗುತ್ತದೆ. ಇವರು ಯಾವುದೇ ಸಮಯದಲ್ಲಿ ರಾಷ್ಟ್ರಪತಿಗೆ ರಾಜೀನಾಮೆ ನೀಡಬಹುದಾಗಿದೆ. ಸಂಸತ್ತು ಅಸಮರ್ಥತೆ ಮತ್ತು ದುರ್ನಡತೆ ಆಧಾರದ ಮೇಲೆ ಪದಚ್ಯುತಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.

ಚುನಾವಣಾ ಆಯೋಗವು ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಜ್ಯಸಭೆ, ಲೋಕಸಭೆ, ವಿಧಾನ ಪರಿಷತ್ತು ಮತ್ತು ವಿಧಾನಸಭೆಗಳ ಚುನಾವಣೆಗಳನ್ನು ನಡೆಸುತ್ತದೆ. ಚುನಾವಣಾ ದಿನಾಂಕ ನಿಗದಿಪಡಿಸುವುದರಿಂದ ಫಲಿತಾಂಶವನ್ನು ಪ್ರಕಟಣೆಗೊಳಿಸುವವರೆಗಿನ ಅವಧಿಯಲ್ಲಿ ಸಂಪೂರ್ಣ ಅವಧಿಯನ್ನು ಹೊಂದಿರುತ್ತದೆ. ಈ

©KTBS Not to be republished

ಅವಧಿಯನ್ನು ನೀತಿ ಸಂಹಿತೆಯ ಅವಧಿ ಎಂದು ಕರೆಯಲಾತ್ತದೆ. ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗಕ್ಕೆ ತನ್ನದೇ ಆದ ಸಿಬ್ಬಂದಿಯನ್ನು ಹೊಂದಿರುವುದಿಲ್ಲ. ಚುನಾವಣಾ ಆಯೋಗವು ರಾಷ್ಟ್ರಪತಿಯ ಅನುಮತಿಯನ್ನು ಪಡೆದು ರಾಜ್ಯ ಸರ್ಕಾರದ ಸಿಬ್ಬಂದಿಯನ್ನು ತನ್ನ ಚುನಾವಣಾ ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳುತ್ತದೆ.

ಪಂಚಾಯತ್‌ಗಳ ಹಾಗು ಪೌರ ಸಂಸ್ಥೆಗಳ ಚುನಾವಣೆಯನ್ನು ರಾಜ ಚುನಾವಣಾ ಆಯೋಗ ನಡೆಸುತ್ತದೆ. ಸಂವಿಧಾನದ ವಿಧಿ 243 K ಮತ್ತು ZA ವಿಧಿಗಳನ್ವಯ ರಾಜ್ಯಪಾಲರು ಚುನಾವಣಾ ಆಯುಕ್ತರನ್ನು ನೇಮಕ ಮಾಡುತ್ತಾರೆ. ಕರ್ನಾಟಕದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರಲ್ಲಿಯ ಪ್ರಕರಣ 308ರನ್ವಯ ರಾಜ್ಯ ಚುನಾವಣಾ ಆಯೋಗವನ್ನು ಹೊಂದಲಾಗಿದ್ದು, ಇದು ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದೆ.

## ಚುನಾವಣಾ ಕ್ಷೇತ್ರಗಳು (Constituencies)

ಚುನಾವಣೆಯ ಉದ್ದೇಶಕ್ಕಾಗಿ ದೇಶ ಮತ್ತು ರಾಜ್ಯವನ್ನು ಚಿಕ್ಕಚಿಕ್ಕ ಚುನಾವಣಾ ವಿಭಾಗಗಳಾಗಿ ವಿಭಾಗಿಸಿ ಅವುಗಳನ್ನು ಚುನಾವಣಾ ಕ್ಷೇತ್ರಗಳೆಂದು ಕರೆಯಲಾಗಿದೆ. ಈ ಚುನಾವಣಾ ಕ್ಷೇತ್ರಗಳು ಜನಸಂಖ್ಯೆ ಆಧಾರಿತವಾಗಿ ವಿಂಗಡಣೆಗೊಳ್ಳುತ್ತವೆ. ಚುನಾವಣಾ ಕ್ಷೇತ್ರಗಳಲ್ಲಿ ಎರಡು ವಿಧಗಳು. ಒಂದು ಲೋಕಸಭಾ ಕ್ಷೇತ್ರ, ಎರಡನೆಯದು ವಿಧಾನಸಭಾ ಚುನಾವಣಾ ಕ್ಷೇತ್ರ. ಲೋಕಸಭಾ ಚುನಾವಣೆ ಕ್ಷೇತ್ರಗಳಿಂದ ಆಯ್ಕೆಗೊಂಡ ಅಭ್ಯರ್ಥಿಗಳು ಲೋಕಸಭೆಯ ಸದಸ್ಯರು ಅಥವಾ ಎಂ.ಪಿ.ಗಳೆನಿಸಿಕೊಂಡರೆ, ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡ ಅಭ್ಯರ್ಥಿಗಳು ರಾಜ್ಯ ವಿಧಾನಸಭೆಯ ಸದಸ್ಯರು ಅಥವಾ ಶಾಸಕ ಅಥವಾ ಎಂ.ಎಲ್.ಎ ಎಂದು ಕರೆಸಿಕೊಳ್ಳುತ್ತಾರೆ. ಈ ಎರಡೂ ಚುನಾವಣಾಕ್ಷೇತ್ರಗಳಲ್ಲಿ ನಿಯಮಾನುಸಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳನ್ನು ಮೀಸಲು ಇಡಲಾಗುತ್ತದೆ. ಇವುಗಳನ್ನು ಮೀಸಲು ಚುನಾವಣಾಕ್ಷೇತ್ರಗಳೆಂದು ಕರೆಯುತ್ತಾರೆ.

## ಮತದಾರರ ಪಟ್ಟಿ (Voters List)



ಮತದಾರರ ಭಾವಚಿತ್ರ ಸಹಿತ ಗುರುತಿನ ಚೀಟಿ (EPIC)

ಮತದಾನ ಮಾಡುವವರ ಹೆಸರು ಹಾಗೂ ಕೆಲವು ವಿವರಗಳನ್ನು ಒಳಗೊಂಡಿರುವ ಪಟ್ಟಿಯನ್ನು ಮತದಾರರ ಪಟ್ಟಿ ಎಂದು ಕರೆಯುತ್ತಾರೆ. ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗವು ಚುನಾವಣೆಗಿಂತ ಮುಂಚಿತವಾಗಿಯೇ ಸಿದ್ಧಪಡಿಸಿಕೊಳ್ಳುತ್ತದೆ. ಮತದಾರರ ಪಟ್ಟಿಯು ಪ್ರತಿ ವರ್ಷ ಪರಿಷ್ಕೃತಗೊಳ್ಳುತ್ತದೆ. ಹೀಗೆ ಪರಿಷ್ಕೃತಗೊಳ್ಳುವ ಸಂದರ್ಭದಲ್ಲಿ ಯಾರಿಗೆ ಹದಿನೆಂಟು (18) ವರ್ಷಗಳು ತುಂಬಿರುತ್ತವೋ ಅವರ ಹೆಸರುಗಳನ್ನು ಪಟ್ಟಿಗೆ ಹೊಸದಾಗಿ ಸೇರ್ಪಡೆ ಮಾಡಿಕೊಂಡು, ಯಾರು ಮರಣ ಹೊಂದಿರುತ್ತಾರೋ ಅಂತಹವರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಲಾಗುತ್ತದೆ. ಈ ಮತದಾರರ ಪಟ್ಟಿಯು ಚುನಾವಣಾ ಅಧಿಕಾರಿಗಳು ಮತದಾರರನ್ನು ಮತದಾನದ ವೇಳೆ ಗುರುತಿಸಲು ಸಹಾಯಕವಾಗುತ್ತದೆ.

ಮತದಾರನ ಛಾಯಪ್ರತಿಯ ಗುರುತಿನ ಚೀಟಿಗಳನ್ನು (EPIC) ಅರ್ಹ ಮತದಾರನಿಗೆ ಚುನಾವಣಾ ಆಯೋಗದಿಂದ ನೀಡಲ್ಪಟ್ಟಿದ್ದು, ಇದು ಅನ್ಯ ವ್ಯಕ್ತಿಯ ಮತದಾನ ತಡೆಯುವ ಕ್ರಮವಾಗಿದೆ. ಈ ಗುರುತಿನ

©KTBS
Not to be re published

ಚೀಟಿ ಮತದಾರನ ಗುರ್ತಿಸುವಿಕೆಗೆ ಪುರಾವೆಯಾಗಿ ಬಳಸಲ್ಪಡುತ್ತದೆ. ಮತದಾರನು ಮತದಾನದ ವೇಳೆ ಮತದಾರನ ಗುರುತಿನ ಚೀಟಿ ಅಥವಾ ಇತರೆ ಪುರಾವೆಗಳಾದ ವರಮಾನತೆರಿಗೆ ಇಲಾಖೆ ನೀಡಿದ ಶಾಶ್ವತ ಲೆಕ್ಕ ಸಂಖ್ಯೆಯ ಚೀಟಿ (Permanent Account Number- PANCARD) ಅಥವಾ ಚಾಲನಾ ಪರವಾನಗಿ ಅಥವಾ ರಹದಾರಿ ಪತ್ರ ಅಥವಾ ಸರ್ಕಾರ ಸೂಚಿಸಿದ ಯಾವುದೇ ಗುರುತಿನ ಪುರಾವೆಯನ್ನು ಅಧಿಕಾರಿಗಳಿಗೆ ತೋರಿಸಬೇಕಿರುತ್ತದೆ.

> *ಭಾರತ ಸರ್ಕಾರವು ದೇಶದ ಎಲ್ಲಾ ಪೌರರಿಗೂ ಜೈವಿಕ–ಮೀಟರ್ (Bio-Metric) ಮಾನದ ವಿಶಿಷ್ಟ ಗುರುತಿನ ಚೀಟಿಗಳನ್ನು (unique ID) ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಇದನ್ನು* **'ಆಧಾರ್'** *ಸಂಖ್ಯೆ ಎಂದು ಕರೆಯಲಾಗುತ್ತದೆ. ಇತ್ತೀಚಿಗೆ ಆಧಾರ್ ಸಂಖ್ಯೆ ಪಡೆಯುವುದನ್ನು ಕಡ್ಡಾಯ ಮಾಡಲಾಗಿದೆ.*

**ಅಧಿಸೂಚನೆ (Notification) :** ಚುನಾವಣಾ ಪ್ರಕ್ರಿಯೆಯು ಪ್ರಕಟಣೆಯೊಂದಿಗೆ ಆರಂಭವಾಗುತ್ತದೆ. ಚುನಾವಣಾ ಆಯೋಗವು ಚುನಾವಣೆಗಳು ನಡೆಯುವ ದಿನಾಂಕ, ವೇಳೆ ಮತ್ತಿತರ ಪೂರ್ಣ ಮಾಹಿತಿಗಳನ್ನು ಪತ್ರಿಕೆಗಳಲ್ಲಿ, ರೇಡಿಯೋ, ದೂರದರ್ಶನ ಮಾಧ್ಯಮಗಳಲ್ಲಿ ಮತ್ತು ಸರ್ಕಾರ ಪ್ರಕಟಿಸುವ ಗೆಜೆಟ್‌ನಲ್ಲಿ ಪ್ರಕಟಿಸುತ್ತದೆ.

**ಅಭ್ಯರ್ಥಿಗಳ ಉಮೇದುವಾರಿಕೆ (Nomination of the Candidates) :** ನಮ್ಮ ದೇಶದಲ್ಲಿ ಪ್ರತಿನಿಧಿತ್ವ ಪ್ರಜಾಪ್ರಭುತ್ವ ವ್ಯವಸ್ಥೆಯಿರುವುದರಿಂದ ಜನರಿಗೆ ಚುನಾವಣೆಗೆ ಸ್ಪರ್ಧಿಸುವ ಮತ್ತು ಚುನಾಯಿಸುವ ಹಕ್ಕಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ಬಯಸುವ ಅಭ್ಯರ್ಥಿಗಳು ಕೆಲವು ಅರ್ಹತೆಗಳನ್ನು ಪೂರೈಸಬೇಕಾಗುತ್ತದೆ. ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆಯ ಕಾಗದ ಪತ್ರಗಳನ್ನು ಆ ಉದ್ದೇಶಕ್ಕಾಗಿ ನೇಮಕಗೊಂಡ ಅಧಿಕಾರಿಗೆ ನಿಗದಿತ ವೇಳೆಯೊಳಗೆ ಸಲ್ಲಿಸಬೇಕು. ಅರ್ಜಿಯೊಂದಿಗೆ ನಿರ್ದಿಷ್ಟ ಮೊತ್ತವನ್ನು 'ಭದ್ರತಾ ಠೇವಣಿ'ಯ ಹಣ ಎಂದು ಪಾವತಿಸಬೇಕಾಗುತ್ತದೆ.

ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಪ್ರತಿನಿಧಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಯೊಬ್ಬನನ್ನು ಆಯ್ಕೆಮಾಡುತ್ತದೆ. ಅವನಿಗೆ ಪಕ್ಷದ ಅಧಿಕೃತ ಪರವಾನಗಿ ನೀಡುತ್ತದೆ. ಅದನ್ನು ಪಕ್ಷದ ಅಧಿಕೃತ ಪತ್ರ (Party Ticket) ಎನ್ನುತ್ತಾರೆ. ಪಕ್ಷದ ಅಧಿಕೃತ ಪತ್ರ ಪಡೆದ ಅಭ್ಯರ್ಥಿಯು ಚುನಾವಣಾ ಪ್ರಚಾರಕ್ಕೆ ಆ ಪಕ್ಷದ ಚಿಹ್ನೆ ಮತ್ತು ಬೆಂಬಲದೊಂದಿಗೆ ಪ್ರಚಾರ ಶಿಬಿರಗಳಲ್ಲಿ ಪಾಲ್ಗೊಂಡು ಮತದಾರರಲ್ಲಿ ಮತಯಾಚಿಸುವ ಅನುಕೂಲವಿದೆ. ಕೆಲವೊಮ್ಮೆ ಅಭ್ಯರ್ಥಿಗೆ ಹೆಚ್ಚು ಮತ ಪಡೆಯುವಂತೆ ಮಾಡುವಲ್ಲಿ, ಅಭ್ಯರ್ಥಿಗಳ ಪಕ್ಷವು ಹಾಗೂ ಪಕ್ಷದ ಅಧಿಕೃತ ಪತ್ರ ಪ್ರಧಾನ ಪಾತ್ರ ವಹಿಸುತ್ತದೆ. ಯಾವುದೇ ಪಕ್ಷದಿಂದ ಗುರುತಿಸಲ್ಪಡದಂತಹ ಅಭ್ಯರ್ಥಿಗಳನ್ನು 'ಸ್ವತಂತ್ರ ಅಭ್ಯರ್ಥಿಗಳು' ಎಂದು ಪರಿಗಣಿಸಿ ಅವರುಗಳಿಗೆ ಚುನಾವಣಾ ಆಯೋಗವು **ವಿವಿಧ ಚಿಹ್ನೆಗಳನ್ನು** ನೀಡುತ್ತದೆ.

**ನಾಮಪತ್ರಗಳ ಪರಿಶೀಲನೆ (Scrutiny of Nomination) :** ಅರ್ಜಿಸಲ್ಲಿಸಲು ಕೊನೆಯ ದಿನಾಂಕ ಮುಗಿದ ನಂತರ ನೇಮಕಗೊಂಡ ಅಧಿಕಾರಿಗಳು ಪ್ರತಿಯೊಬ್ಬ ಅಭ್ಯರ್ಥಿಯ ಉಮೇದುವಾರಿಕೆ ಅರ್ಜಿ ಮತ್ತು ಅದರೊಂದಿಗೆ ಸಲ್ಲಿಸಿರುವ ಅಗತ್ಯ ದಾಖಲೆಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸಿ ಅರ್ಹಗೊಂಡ ಮತ್ತು ಅನರ್ಹಗೊಂಡ ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಣೆ ಮಾಡುತ್ತಾರೆ.

**ಉಮೇದುವಾರಿಕೆ ಹಿಂಪಡೆಯುವಿಕೆ (Withdrawal of Nomination) :** ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಗೊಂಡ ನಂತರ ಅಭ್ಯರ್ಥಿಗಳು ಬಯಸಿದಲ್ಲಿ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಒಂದು ದಿನಾಂಕವನ್ನು ನಿಗದಿಗೊಳಿಸಿ ಪ್ರಕಟಣೆ ನೀಡಲಾಗುತ್ತದೆ.

**ಚುನಾವಣಾ ಪ್ರಚಾರ :** ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಗೊಂಡ ನಂತರ ಚುನಾವಣಾ ಪ್ರಚಾರ ಕಾರ್ಯ ಆರಂಭವಾಗುತ್ತದೆ. ಬಾಹ್ಯ ಪ್ರಚಾರ ಕಾರ್ಯವು ಮತದಾನ ದಿನಕ್ಕಿಂತ



©KTBS Not to be published

48 ಘಂಟೆಗಳ ಮುಂಚಿತವಾಗಿ ಮುಕ್ತಾಯವಾಗುತ್ತದೆ. ಪ್ರಚಾರ ವೇಳೆಯಲ್ಲಿ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ತಮ್ಮ ಪಕ್ಷಕ್ಕೆ ಅಥವಾ ತಮಗೆ ಜಯ ತಂದುಕೊಟ್ಟರೆ ಜನರಿಗೆ ಯಾವ ಯಾವ ಸೌಕರ್ಯ ಸವಲತ್ತುಗಳನ್ನು ಪೂರೈಕೆ ಮಾಡುವೆವು ಎಂಬ ಭರವಸೆಗಳನ್ನು ನೀಡುತ್ತಾ ಮತದಾರನನ್ನು ತನ್ನತ್ತ ಸೆಳೆಯುವ ಪ್ರಯತ್ನಮಾಡುತ್ತಾರೆ. ಈ ಭರವಸೆಗಳನ್ನು **'ಚುನಾವಣಾ ಪ್ರಣಾಳಿಕೆ'** (Election Manifesto) ಎಂದು ಕರೆಯುತ್ತಾರೆ. ಈ ಅವಧಿಯಲ್ಲಿ ಸಾರ್ವಜನಿಕ ಸಭೆಗಳು, ಮನೆಮನೆಗೆ ತೆರಳಿ ಮತಯಾಚಿಸುವುದು, ಧ್ವಜಗಳು, ನಿಶಾನೆಗಳು, ಬಟ್ಟೆಯಿಂದ ತಯಾರಾದ ತೋರಣಗಳು, ಗೋಡೆ ಪತ್ರಿಕೆಗಳು, ಭಿತ್ತಿಪತ್ರಗಳು, ಕರಪತ್ರಗಳು, ಘೋಷಣೆಗಳು ಇತ್ಯಾದಿಗಳು ಸರ್ವೇ ಸಾಮಾನ್ಯವಾದವುಗಳು. ಪ್ರತಿಯೊಬ್ಬ ಅಭ್ಯರ್ಥಿಯು ಚುನಾವಣಾ ಆಯೋಗ ನಿಗದಿಪಡಿಸಿದ **'ನೀತಿ ಸಂಹಿತೆ'**ಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

**ಮತದಾನದ ದಿನ :** ಮತದಾನದ ದಿನವೆಂದರೆ ಮತದಾರರು ಮತ ಚಲಾಯಿಸಲು ನಿಗದಿಪಡಿಸಿದ ದಿನವೆಂದರ್ಥ. ಆ ದಿವಸದಂದು ಮತದಾರನು ಮತದಾನಕ್ಕೆ ನಿಗದಿಪಡಿಸಿದ ಮತಗಟ್ಟೆ ಕೇಂದ್ರಕ್ಕೆ ಹೋಗಬೇಕಾಗುತ್ತದೆ. ಮತಗಟ್ಟೆ ಎಂದರೆ ಮತದಾನ ಮಾಡುವ ಸ್ಥಳವೆಂದರ್ಥ. ಅಲ್ಲಿ ತರಬೇತಿ ಪಡೆದ ಚುನಾವಣಾ ಅಧಿಕಾರಿಗಳು ನಿಯೋಜನೆಗೊಂಡಿರುತ್ತಾರೆ. ಮತಗಟ್ಟೆಗಳಲ್ಲಿ ಮತದಾರನ ಗುರುತು ಖಾತ್ರಿಯಾದ ಮೇಲೆ ಅವನಿಗೆ ಮತದಾನಕ್ಕಾಗಿ **'ಮತ ಪತ್ರ'** (Ballot Paper)ವನ್ನು ನೀಡುತ್ತಾರೆ. ಈ ಮತಪತ್ರದಲ್ಲಿ ಎಲ್ಲಾ ಅಭ್ಯರ್ಥಿಗಳ ಹೆಸರುಗಳು ಮತ್ತು ಅವರವರ ಹೆಸರುಗಳ ಮುಂದೆ ಅವರವರಿಗೆ ಚುನಾವಣಾ ಆಯೋಗ ನೀಡಿರುವ ಚಿಹ್ನೆಗಳು ಮುದ್ರಿತಗೊಂಡಿರುತ್ತವೆ. ಅನಕ್ಷರಸ್ಥರೂ ಕೂಡ ತಮ್ಮ ಅಭ್ಯರ್ಥಿಯನ್ನು ಆಯ್ಕೆಮಾಡಿಕೊಳ್ಳಲು ಈ ಚಿಹ್ನೆಗಳು ಅನುವುಮಾಡಿಕೊಡುತ್ತವೆ.



**ವಿದ್ಯುನ್ಮಾನ ಮತಯಂತ್ರ**

ಈಗ ವಿದ್ಯುನ್ಮಾನ ಮತಯಂತ್ರಗಳನ್ನು ಹಳೆಯ ಮತ ಪತ್ರಗಳ ಬದಲಿಗೆ ಅಳವಡಿಸಿಕೊಳ್ಳಲಾಗಿದೆ. ಮತದಾರರು ಈ ಯಂತ್ರದಲ್ಲಿ ತಮ್ಮ ಅಭ್ಯರ್ಥಿಯ ಆಯ್ಕೆಯನ್ನು ಅಭ್ಯರ್ಥಿಯ ಹೆಸರಿನ ಮುಂದೆ ಇರುವ ವಿದ್ಯುತ್ ಗುಂಡಿಯನ್ನು ಒತ್ತುವುದರ ಮೂಲಕ ತನ್ನ ಮತವನ್ನು ದಾಖಲಿಸುತ್ತಾನೆ. ಮತದಾನದ ಸಮಯ ಮುಗಿದ ಮೇಲೆ ಈ ಮತ ಪೆಟ್ಟಿಗೆ ಅಥವಾ ಮತಯಂತ್ರವನ್ನು ಸಂಬಂಧಿತ ಕೇಂದ್ರಗಳಿಗೆ ತಲುಪಿಸಲಾಗುತ್ತದೆ.

> *ಪ್ರತಿ ಒಂದು ಚುನಾವಣಾ ಕ್ಷೇತ್ರದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ನಿರ್ವಹಿಸುವ ಸಲುವಾಗಿ ಒಬ್ಬ ಅಧಿಕಾರಿಯನ್ನು ಚುನಾವಣಾ ಆಯೋಗವು ನೇಮಿಸುತ್ತದೆ. ಅವನನ್ನು 'ಚುನಾವಣಾಧಿಕಾರಿ' (Returning Officer) ಎಂದು ಕರೆಯಲಾಗುತ್ತದೆ. ಈ ಅಧಿಕಾರಿಯ ಅಧೀನದಲ್ಲಿ ಮತಗಟ್ಟೆಗಳಲ್ಲಿ ಕಾರ್ಯನಿರ್ವಹಿಸಲು ಬೇಕಾಗುವ ಚುನಾವಣಾ ಸಿಬ್ಬಂದಿ ನೇಮಕಗೊಳ್ಳುತ್ತದೆ.*

**ಮತ ಎಣಿಕೆ :** ಚುನಾವಣೆ ಮುಗಿದ ಮೇಲೆ ನಿಗದಿತ ದಿನದಂದು ಅಭ್ಯರ್ಥಿಗಳು ಮತ್ತು ಅವರ ಮಧ್ಯವರ್ತಿಗಳ ಸಮ್ಮುಖದಲ್ಲಿ ಎಣಿಕೆಗೆ ನೇಮಕಗೊಂಡ ಅಧಿಕಾರಿಗಳಿಂದ ಮತಗಳ ಎಣಿಕೆಯು ನಿರ್ದಿಷ್ಟ ಕೇಂದ್ರದಲ್ಲಿ ನಡೆಯುತ್ತದೆ. ವಿದ್ಯುನ್ಮಾನ ಮತಯಂತ್ರಗಳು ಬಂದ ಮೇಲೆ ಮತ ಎಣಿಕೆಯು ಅತ್ಯಂತ ಸುಲಭವೆನಿಸಿದೆ. ವಿಶೇಷ ಸಂದರ್ಭದಲ್ಲಿ ಮರು ಎಣಿಕೆಗೆ ಅವಕಾಶವಿರುತ್ತದೆ ಹಾಗೂ ಏನಾದರು ಅವ್ಯವಹಾರಗಳು ಕಂಡು ಬಂದಲ್ಲಿ ಅಭ್ಯರ್ಥಿಗಳು ನ್ಯಾಯಾಲಯದ ಮೊರೆ ಹೋಗಬಹುದಾಗಿದೆ. ರಿಟರ್ನಿಂಗ್ ಅಧಿಕಾರಿಯು ಮತ ಎಣಿಕೆಯ ಫಲಿತಾಂಶ ಘೋಷಿಸುತ್ತಾನೆ.

©KTBS Not to be republished

**ರಾಜಕೀಯ ಪಕ್ಷಗಳು :** ಪ್ರಜಾಪ್ರಭುತ್ವ ಮಾದರಿ ಸರ್ಕಾರಗಳಲ್ಲಿ ರಾಜಕೀಯ ಪಕ್ಷಗಳು ಅವಶ್ಯಕ ಮತ್ತು ಅನಿವಾರ್ಯ. ಈ ರಾಜಕೀಯ ಪಕ್ಷಗಳು ಪ್ರತಿನಿಧಿಗಳು, ಸರ್ಕಾರ ಮತ್ತು ಜನ ಸಮುದಾಯದ ನಡುವಿನ ಕೊಂಡಿಯಿದ್ದಂತೆ. ರಾಜಕೀಯ ಪಕ್ಷಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗಾಗಿ ನಿಯಮಗಳನ್ನು ಹಾಗೂ ಕಾನೂನುಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ರಾಜಕೀಯ ಪಕ್ಷಗಳು ಕೆಲವೊಮ್ಮೆ ರಾಜಕೀಯ ಪ್ರವೇಶ ಬಯಸುವವರಿಗೆ ತರಬೇತಿ ಕೇಂದ್ರಗಳಾಗುತ್ತವೆ. ರಾಷ್ಟ್ರಮಟ್ಟದಲ್ಲಿ ಕೇಂದ್ರ ಸಂಸತ್ತಿನ ಕೆಳಮನೆ ಅಥವಾ ಲೋಕಸಭೆ, ರಾಜ್ಯಮಟ್ಟದಲ್ಲಿ ಕೆಳಮನೆ ಅಥವಾ ವಿಧಾನಸಭೆಯಲ್ಲಿ ಬಹುಮತ ಹೊಂದಿರುವ ರಾಜಕೀಯ ಪಕ್ಷವು ಸರ್ಕಾರ ರಚಿಸುತ್ತವೆ. ಯಾವ ಪಕ್ಷ ಸರ್ಕಾರ ರಚಿಸಿಕೊಳ್ಳುತ್ತದೆಯೋ ಆ ಪಕ್ಷವನ್ನು 'ಆಡಳಿತ ಪಕ್ಷ' ಎನ್ನುತ್ತಾರೆ. ಎರಡನೇ ಸ್ಥಾನದಲ್ಲಿ ಬಹುಮತ ಪಡೆದ ಪಕ್ಷವು 'ವಿರೋಧ ಪಕ್ಷ' ಎಂದು ಕರೆಸಿಕೊಂಡು ಆಡಳಿತ ಪಕ್ಷದ ಚಟುವಟಿಕೆಗಳ ವಿಮರ್ಶೆಮಾಡುವ ಅಧಿಕಾರ ಹೊಂದಿರುತ್ತದೆ. ಉಳಿದ ಸಣ್ಣ ಸಣ್ಣ ಪಕ್ಷಗಳು ಹಾಗೂ ಸ್ವತಂತ್ರ ಅಭ್ಯರ್ಥಿಗಳು ಸಮಯ ಬಂದಾಗ ತಮ್ಮ ಸ್ವ ಇಚ್ಚೆಯಿಂದ ಆಡಳಿತ ಅಥವಾ ವಿರೋಧ ಪಕ್ಷವನ್ನು ಬೆಂಬಲಿಸುವ ಅಧಿಕಾರ ಹೊಂದಿವೆ.

**ರಾಷ್ಟ್ರೀಯ ಪಕ್ಷಗಳು :** ಭಾರತದಲ್ಲಿ ಹಲವು ರಾಜಕೀಯ ಪಕ್ಷಗಳಿದ್ದು ಅವುಗಳನ್ನು ರಾಷ್ಟ್ರೀಯ ರಾಜಕೀಯ ಪಕ್ಷಗಳು ಮತ್ತು ಪ್ರಾಂತೀಯ ರಾಜಕೀಯ ಪಕ್ಷಗಳು ಎಂದು ವರ್ಗೀಕರಿಸಬಹುದಾಗಿದೆ. ರಾಷ್ಟ್ರೀಯ ರಾಜಕೀಯ ಪಕ್ಷಗಳು ನಮ್ಮ ದೇಶದ ಹಲವಾರು ರಾಜ್ಯಗಳಲ್ಲಿ ತಮ್ಮ ಶಾಖೆಗಳನ್ನು ಹೊಂದಿರುವುದು ಕಂಡು ಬರುತ್ತದೆ. ಈ ರಾಷ್ಟ್ರೀಯ ಪಕ್ಷಗಳು ಕೇಂದ್ರದ ಲೋಕಸಭೆ ಮತ್ತು ರಾಜ್ಯದ ವಿಧಾನಸಭೆಗಳಲ್ಲಿ ಗೌರವಯುತವಾದ ಸಂಖ್ಯೆಯ ಪ್ರತಿನಿಧಿಗಳನ್ನು ಹೊಂದಿರುತ್ತವೆ. ರಾಷ್ಟ್ರೀಯ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗವು ಮಾನ್ಯತೆ ನೀಡುತ್ತದೆ. ರಾಷ್ಟ್ರೀಯ ಕಾಂಗ್ರೆಸ್ ಪಕ್ಷ, ಭಾರತೀಯ ಜನತಾ ಪಕ್ಷ, ಇತ್ಯಾದಿಗಳು ರಾಷ್ಟ್ರೀಯ ಪಕ್ಷಗಳಾಗಿದ್ದು ತಮ್ಮದೇ ಆದ ಪಕ್ಷದ ಚಿಹ್ನೆಗಳನ್ನು ಹೊಂದಿ ಗುರುತಿಸಿಕೊಂಡಿವೆ.

**ಪ್ರಾದೇಶಿಕ ರಾಜಕೀಯ ಪಕ್ಷಗಳು:** ಪ್ರಾದೇಶಿಕ ರಾಜಕೀಯ ಪಕ್ಷಗಳನ್ನು ರಾಜ್ಯಗಳ ರಾಜಕೀಯ ಪಕ್ಷಗಳೆಂತಲೂ ಕರೆಯುತ್ತಾರೆ. ವಿಧಾನಸಭೆಯಲ್ಲಿ ಗಣನೀಯ ಸಂಖ್ಯೆಯ ಅಭ್ಯರ್ಥಿಗಳನ್ನು ಅಥವಾ ಸದಸ್ಯರನ್ನು ಹೊಂದಿರುವ ರಾಜ್ಯ ಪಕ್ಷಗಳನ್ನು ಪ್ರಾದೇಶಿಕ ಪಕ್ಷಗಳೆಂದು ಮಾನ್ಯ ಮಾಡುತ್ತಾರೆ. ಹಲವಾರು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ತಮ್ಮ ವರ್ಚಸ್ಸಿನಿಂದಾಗಿ ಬಹುಮತ ಪಡೆದು ಸರ್ಕಾರ ರಚಿಸಿಕೊಂಡಿರುತ್ತವೆ. ಪ್ರಾದೇಶಿಕ ರಾಜಕೀಯ ಪಕ್ಷಗಳು ಸರ್ಕಾರ ರಚಿಸಿಕೊಂಡು ಆಡಳಿತ ನಡೆಸಿದ್ದಕ್ಕೆ ಉದಾಹರಣೆಯಾಗಿ ತಮಿಳುನಾಡಿನ ಡಿ.ಎಂ.ಕೆ ಮತ್ತು ಎ.ಐ.ಎ.ಡಿ.ಎಂ.ಕೆ ಪಕ್ಷ, ಅಸ್ಸಾಂನ ಅಸ್ಸಾಂಗಣ ಪರಿಷತ್, ಆಂದ್ರಪ್ರದೇಶದ ತೆಲುಗು ದೇಶಂ ಪಕ್ಷ, ಮಹಾರಾಷ್ಟ್ರದ ಶಿವಸೇನಾ ಪಕ್ಷ, ಕರ್ನಾಟಕದ ಜನತಾದಳ (ಜಾತ್ಯತೀತ) ಪಕ್ಷ ಮತ್ತು ಸಮಾಜವಾದಿ ಪಕ್ಷಗಳು ಪ್ರಮುಖವಾಗಿವೆ. ಈ ಎಲ್ಲಾ ಪ್ರಾದೇಶಿಕ ಪಕ್ಷಗಳು ತಮ್ಮವೇ ಆದ ಪಕ್ಷದ ಚಿಹ್ನೆಯನ್ನು ಹೊಂದಿರುತ್ತವೆ.

ಪ್ರಾದೇಶಿಕ ಪಕ್ಷಗಳು ಲೋಕಸಭೆಯಲ್ಲೂ ತನ್ನ ಪ್ರತಿನಿಧಿಗಳನ್ನು ಹೊಂದಿರಬಹುದು. ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರಕದಿದ್ದ ಪಕ್ಷದಲ್ಲಿ ಸರ್ಕಾರದ ರಚನೆಯಲ್ಲಿ ಪ್ರಾದೇಶಿಕ ಪಕ್ಷಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತಿರುವುದನ್ನು ನಾವೆಲ್ಲರೂ ಕೇಂದ್ರ ಮತ್ತು ರಾಜ್ಯಸರ್ಕಾರಗಳಲ್ಲಿ ಕಾಣುತ್ತಿದ್ದೇವೆ.

**ಸಮ್ಮಿಶ್ರ ಸರ್ಕಾರಗಳು :** ಇತ್ತೀಚಿನ ದಿನಗಳಲ್ಲಿ ಹಲವಾರು ಪಕ್ಷಗಳು ಅಧಿಕಾರಕ್ಕಾಗಿ ಚುನಾವಣೆಗಳಲ್ಲಿ ಭಾಗವಹಿಸುತ್ತಿವೆ. ಯಾವುದಾದರೊಂದು ಪಕ್ಷ ಸ್ಪಷ್ಟ ಬಹುಮತ ಪಡೆದರೆ ಅಂತಹ ಪಕ್ಷ ಸರ್ಕಾರ ರಚಿಸಿ ಆಡಳಿತ ನಡೆಸಿಕೊಂಡು ಹೋಗುತ್ತದೆ. ಎಷ್ಟೋ ಸಂದರ್ಭದಲ್ಲಿ ಯಾವ ಪಕ್ಷಕ್ಕೂ ಸರ್ಕಾರ ರಚನೆಗೆ ಬೇಕಿರುವ ಸ್ಪಷ್ಟ ಬಹುಮತ ಬರುವುದಿಲ್ಲ. ಅಂತಹ ಸಂದರ್ಭವನ್ನು "ಅತಂತ್ರ ಲೋಕಸಭೆ ಅಥವಾ ಅತಂತ್ರ ವಿಧಾನಸಭೆ" (Hung Parliament or Assembly) ಎನ್ನಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲವು ಪಕ್ಷಗಳು ಸಂಯೋಜನೆಗೊಂಡು ಅವಶ್ಯವಿರುವ ಸದಸ್ಯ ಬಲವನ್ನು ಸಾಬೀತುಪಡಿಸಿ ಸರ್ಕಾರ ರಚಿಸಿಕೊಳ್ಳುತ್ತವೆ. ಈ ಪ್ರಕಾರದ ಮೈತ್ರಿಗೆ 'ಮತದಾನೋತ್ತರ ಮೈತ್ರಿ' (Post-Poll alliance) ಎನ್ನುತ್ತಾರೆ. ಕೆಲವೊಮ್ಮೆ ಚುನಾವಣೆಗೆ ಮುಂಚಿತವಾಗಿಯೆ



© KTBS Not to be republished

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪಕ್ಷಗಳು ಕೂಡಿಕೊಂಡು ಸ್ಥಾನ ಹಂಚಿಕೆಯನ್ನು ಮಾಡಿಕೊಂಡು ಚುನಾವಣೆಗೆ ಜಂಟಿಯಾಗಿ ಸ್ಪರ್ಧಿಸುತ್ತವೆ. ಈ ಪ್ರಕಾರದ ಮೈತ್ರಿಯನ್ನು 'ಮತದಾನ ಪೂರ್ವ ಮೈತ್ರಿ' (Pre-Poll alliance) ಎಂದು ಕರೆಯುತ್ತಾರೆ. ಈ ಎರಡೂ ಪ್ರಕಾರದ ಮೈತ್ರಿಗಳು ಯಾವಾಗ ಅತಂತ್ರ ಸ್ಥಿತಿ ಉಂಟಾಗುತ್ತದೆಯೋ ಆ ಸಂದರ್ಭದಲ್ಲಿ ಸರ್ಕಾರ ರಚಿಸಿಕೊಳ್ಳಲು ಸಹಕಾರಿಯಾಗುತ್ತವೆ. ಈ ಪ್ರಕಾರವಾಗಿ ಎರಡಕ್ಕಿಂತ ಹೆಚ್ಚು ಪಕ್ಷಗಳ ಸಹಕಾರದಿಂದ ರಚಿತಗೊಂಡ ಸರ್ಕಾರವನ್ನು 'ಸಮ್ಮಿಶ್ರ ಸರ್ಕಾರ' ಎಂದು ಕರೆಯುತ್ತಾರೆ. ಸಮ್ಮಿಶ್ರ ಸರ್ಕಾರದಲ್ಲಿ ಮೈತ್ರಿ ಹೊಂದಿದ ಪಕ್ಷಗಳು ಮಂತ್ರಿಮಂಡಲದಲ್ಲಿ ತಮ್ಮ ತಮ್ಮ ಪಾಲುಗಳನ್ನು ಹಂಚಿಕೊಳ್ಳುತ್ತಾರೆ. ಕೆಲವೊಮ್ಮೆ ಮೈತ್ರಿಕೂಟದ ಪಕ್ಷವು ಅಧಿಕಾರದಲ್ಲಿ ಪಾಲು ಪಡೆಯದೆ ಪ್ರಮುಖ ಪಕ್ಷವೊಂದನ್ನು ಬೆಂಬಲಿಸಿದಾಗ ಅಂತಹ ಸಂದರ್ಭವನ್ನು 'ಬಾಹ್ಯ ಬೆಂಬಲ' ಎಂದು ಕರೆಯುತ್ತಾರೆ. ಸುಮಾರು 1989 ನೇ ಇಸವಿಯಿಂದ ಲೋಕಸಭೆ ಮತ್ತು ಕೆಲವು ವಿಧಾನಸಭೆಗಳಲ್ಲಿ ಅತಂತ್ರ ಸರ್ಕಾರಗಳು ಉಂಟಾಗಿರುವುದು ಸಾಮಾನ್ಯವಾಗಿದೆ.

**ಸಾರ್ವಜನಿಕ ಅಭಿಪ್ರಾಯ :** ಸಾಮಾನ್ಯ ಪ್ರಜೆಯೊಬ್ಬ ತನಗೆ ಸಂಬಂಧಿಸಿದ ನಿರ್ದಿಷ್ಟ ವಿಷಯವೊಂದಕ್ಕೆ ತನ್ನ ಅಭಿಪ್ರಾಯವನ್ನು ಅಭಿವ್ಯಕ್ತಿಗೊಳಿಸುವುದೇ ಸಾರ್ವಜನಿಕ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವು ಬಹುಜನರ ಅಥವಾ ರಾಜಕೀಯ ವ್ಯಕ್ತಿಗಳ ಅಭಿಪ್ರಾಯವೇನಲ್ಲ. ಸರ್ಕಾರವು ಸಾರ್ವಜನಿಕರ ಅಭಿಪ್ರಾಯಗಳ ಆಧಾರದ ಮೇಲೆ ನಿಯಮಗಳನ್ನು ರೂಪಿಸುತ್ತದೆ. ಇಂತಹ ಸಾರ್ವಜನಿಕ ಅಭಿಪ್ರಾಯಗಳು ವಿಷಯಾಧಾರಿತವಾಗಿ ಕಾಲಕಾಲಕ್ಕೆ ಬದಲಾಗುವ ಸಾಧ್ಯತೆಗಳಿವೆ. ಸಾರ್ವಜನಿಕರು ಘಟನೆಯೊಂದರ ಬಗ್ಗೆ ಜಾಗೃತಿ ಹೊಂದಿದ್ದು ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಸ್ವತಂತ್ರವಾಗಿ ಯಾವುದೇ ಹೆದರಿಕೆ ಅಥವಾ ಪೂರ್ವಾಗ್ರಹವಿಲ್ಲದೆ ವ್ಯಕ್ತಪಡಿಸಬಹುದಾಗಿದೆ. ಸರ್ಕಾರ ಮತ್ತು ರಾಜಕೀಯ ಪಕ್ಷಗಳು ಸಾರ್ವಜನಿಕ ಅಭಿಪ್ರಾಯಗಳನ್ನು ಪ್ರೋತ್ಸಾಹಿಸುತ್ತವೆ. ರೇಡಿಯೊ, ದೂರದರ್ಶನ, ವೃತ್ತಪತ್ರಿಕೆಗಳು, ನಿಯತಕಾಲಿಕಗಳು ಅಂತರ್ಜಾಲ ಮುಂತಾದ ಮಾಧ್ಯಮಗಳು ಸಾರ್ವಜನಿಕ ಅಭಿಪ್ರಾಯವನ್ನು ಹಂಚಿಕೊಳ್ಳಲು ನೆರವಾಗಿವೆ.

**ಮಾಧ್ಯಮ ಮತ್ತು ಪ್ರಜಾಪ್ರಭುತ್ವ :** ಪ್ರಸ್ತುತ ದಿನಂಪ್ರತಿ ಘಟಿಸುತ್ತಿರುವ ಘಟನೆಗಳ ಮಾಹಿತಿಗಳನ್ನು ಮಾಧ್ಯಮವು ಒದಗಿಸುತ್ತಿದೆ. ಮಾಧ್ಯಮಗಳು ಸರ್ಕಾರದ ಯೋಜನೆಗಳು ಮತ್ತು ನಿಯಮಗಳನ್ನು ಜನರು ತಿಳಿಯುವಂತೆ ಮಾಡುತ್ತವೆ. ಮಾಧ್ಯಮಗಳು ಸರ್ಕಾರದ ಕಾರ್ಯವೈಖರಿಯ ಬಗ್ಗೆ ಜನರಿಗೆ ಮಾಹಿತಿ ನೀಡುವುದರ ಜೊತೆ ಪ್ರಮುಖ ಸಂಗತಿಗಳ ಬಗೆಗಿನ ಜನಸಾಮಾನ್ಯರ ಅಭಿಪ್ರಾಯವನ್ನು ಸರ್ಕಾರ ಗಮನಿಸುವಂತೆ ಮಾಡುತ್ತದೆ. ಜನಸಾಮನ್ಯರಿಂದ ಎತ್ತಲ್ಪಟ್ಟ ವಿಷಯಗಳಿಗೆ ಜನಪ್ರತಿನಿಧಿಗಳು ಉತ್ತರಿಸುವಂತೆ ಮತ್ತು ಜವಾಬ್ದಾರರಾಗುವಂತೆ ಮಾಧ್ಯಮಗಳು ನೋಡಿಕೊಳ್ಳುತ್ತವೆ. ಆದಕಾರಣ ಮಾಧ್ಯಮವು ಯಾವತ್ತೂ ಸತ್ಯವಾದ, ಭೀತಿಯಿಲ್ಲದ, ಪಕ್ಷಪಾತವಿಲ್ಲದ ಅಭಿಪ್ರಾಯಗಳನ್ನು ದೊರಕಿಸಿಕೊಡಬೇಕೆ ಹೊರತು ಸೂಕ್ಷ್ಮ ವಿಚಾರಗಳನ್ನು ವೈಭವೀಕರಿಸಿ ಭಯದ ವಾತಾವರಣ ಸೃಷ್ಟಿಸಬಾರದು. ಮಾಧ್ಯಮವು ಸಂಗತಿಗಳನ್ನು ಬಿತ್ತರಿಸುವಾಗ ಐಕ್ಯತೆ, ಜಾತ್ಯತೀತತೆ, ಪ್ರಜಾಪ್ರಭುತ್ವದ ತತ್ವಗಳಿಗೆ ಹಾನಿಯುಂಟಾಗದಂತೆ ಎಚ್ಚರವಹಿಸಬೇಕು.

ಪತ್ರಿಕಾ ಮಾಧ್ಯಮವು ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಒಳಗೊಂಡಿದ್ದು, ಭಾರತದಲ್ಲಿ ಈ ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಕಡ್ಡಾಯವಾಗಿ ದಿನಪತ್ರಿಕಾ ನೋಂದಣಿ (Registrar of News Papers) ಕಛೇರಿಯಲ್ಲಿ ನೋಂದಾಯಿಸಿಕೊಂಡಿರತಕ್ಕದ್ದು. ದಿನಪತ್ರಿಕೆಗಳ ಗುಣಮಟ್ಟ ಹೆಚ್ಚಿಸಲು ಮತ್ತು ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ 'ಭಾರತೀಯ ಪತ್ರಿಕಾ ಪರಿಷತ್ತು' (Press Council of India) ಎಂಬ ಸಂಸ್ಥೆಯನ್ನು ಭಾರತದಲ್ಲಿ ಸ್ಥಾಪಿಸಲಾಗಿದೆ.

ಮಾಧ್ಯಮಕ್ಷೇತ್ರದಲ್ಲಿ ದೂರದರ್ಶನ, ರೇಡಿಯೋ, ಅಂತರ್ಜಾಲ ಇತ್ಯಾದಿ ವಿದ್ಯುನ್ಮಾನ ಮಾಧ್ಯಮಗಳೂ ಸೇರ್ಪಡೆಗೊಂಡಿವೆ. ಈ ವಿದ್ಯುನ್ಮಾನ ಮಧ್ಯವರ್ತಿಗಳು 1962ರ ಬಾನುಲಿ ಪ್ರಸರಣ ಸಂಹಿತೆಯಡಿ ಕಾರ್ಯನಿರ್ವಹಿಸುತ್ತಿದ್ದು ಜನಸಾಮಾನ್ಯರು, ಅಧಿಕಾರಿಗಳು ಮತ್ತು ಇತರೆ ನಾಯಕರುಗಳು ಅನೇಕ ಪ್ರಸಂಗಗಳಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿವೆ.

© KTBS Not to be re published

## ಅಭ್ಯಾಸಗಳು

**I. ಖಾಲಿಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮತದಾರರ ಪಟ್ಟಿಯು ____________ ವರ್ಷಗಳಿಗೊಮ್ಮೆ ಪರಿಷ್ಕೃತಗೊಳ್ಳುತ್ತದೆ.
2. ಪ್ರಚಾರ ಕಾರ್ಯವು ಮತದಾನದ ದಿನಕ್ಕಿಂತ ____________ ಗಂಟೆಗಳ ಮುಂಚಿತವಾಗಿ ಮುಕ್ತಾಯವಾಗುತ್ತದೆ.
3. ರಾಜಕೀಯ ಪಕ್ಷಗಳಿಗೆ ____________ ಮಾನ್ಯತೆ ನೀಡುತ್ತವೆ.
4. ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ ಇರುವ ಸಂಸ್ಥೆ ____________
5. ಮಾಹಿತಿ ಹಕ್ಕು ಕಾಯ್ದೆಯನ್ನು ____________ ರಲ್ಲಿ ಜಾರಿಗೊಳಿಸಲಾಗಿದೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಮತದಾರರ ಪಟ್ಟಿಯ ಕುರಿತು ಟಿಪ್ಪಣಿ ಬರೆಯಿರಿ.
2. 'ರಾಜಕೀಯ ಪಕ್ಷಗಳು ಪ್ರತಿನಿಧಿಗಳು ಸರ್ಕಾರ ಮತ್ತು ಜನ ಸಮುದಾಯದ ನಡುವಿನ ಕೊಂಡಿಯಿದ್ದಂತೆ' ಸಮರ್ಥಿಸಿರಿ.
3. ಸಮ್ಮಿಶ್ರ ಸರ್ಕಾರಗಳ ಕುರಿತು ಬರೆಯಿರಿ.
4. 'ಮಾಹಿತಿ ಹಕ್ಕು ಸರ್ಕಾರವನ್ನು ಪ್ರಜೆಗಳಿಗೆ ಜವಾಬ್ದಾರಿಯುತವಾಗುವಂತೆ ಮಾಡುವುದು' ಚರ್ಚಿಸಿ.

**III. ಚಟುವಟಿಕೆಗಳು**

1. ಚುನಾವಣಾ ಪ್ರಕ್ರಿಯೆ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸುವುದು.
2. ಚುನಾವಣಾ ಆಯೋಗದ ಕಾರ್ಯಗಳ ಪಟ್ಟಿ ತಯಾರಿಸುವುದು.
3. ರಾಷ್ಟ್ರೀಯ ಪಕ್ಷಗಳ ಪಟ್ಟಿ ತಯಾರಿಸುವುದು.

◈ ◈ ◈

©KTBS Not to be republished

# ಅಧ್ಯಾಯ – 6

# ದೇಶದ ರಕ್ಷಣೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಸೇನಾ ಪಡೆಗಳ ವಿಧಗಳು, ಅವುಗಳ ಹೊಣೆಗಾರಿಕೆ
- ಸೇನಾ ಪಡೆಗಳ ಕೇಂದ್ರ ಸ್ಥಾನಗಳು ಮತ್ತು ಮುಖ್ಯಸ್ಥರು
- ಸೇನಾ ಕ್ಷೇತ್ರದಲ್ಲಿ ರಾಷ್ಟ್ರ ರಕ್ಷಣೆಗೆ ಆಗಿರುವ ಅಭಿವೃದ್ಧಿ
- ಸೇನಾ ಪಡೆಗಳಲ್ಲದೆ ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆಯ ಘಟಕಗಳು

ನಮ್ಮ ದೇಶ ಈಗಾಗಲೇ ನಿಮಗೆ ತಿಳಿದಿರುವಂತೆ ಪರಕೀಯರ ಆಕ್ರಮಣಕ್ಕೆ ಒಳಗಾಗಿದ್ದು, ಅನೇಕ ಹೋರಾಟ, ತ್ಯಾಗ, ಬಲಿದಾನಗಳಿಂದ 1947 ಆಗಸ್ಟ್ 15 ರಂದು ಸ್ವಾತಂತ್ರ್ಯ ಪಡೆಯಿತು. ಈ ಸ್ವಾತಂತ್ರ್ಯ ಭಾರತವು ಮತ್ತೊಮ್ಮೆ ಪರಕೀಯರ ಆಕ್ರಮಣಕ್ಕೆ ಒಳಗಾಗದಂತೆ ರಕ್ಷಿಸುವುದು ಪ್ರಥಮ ಕರ್ತವ್ಯವಾಗಿದೆ. ಇದೇ ವೇಳೆ ನಮ್ಮ ರಕ್ಷಣಾ ವ್ಯವಸ್ಥೆಯನ್ನು ಸಾಕಷ್ಟು ಸಜ್ಜುಗೊಳಿಸಿ ಇತರರ ದಾಳಿಯಿಂದ ರಕ್ಷಿಸಬೇಕಾಗುತ್ತದೆ.

ಭಾರತವು ಸುಮಾರು 15,200 ಕಿ.ಮೀ. ಭೂಗಡಿಯನ್ನೂ, 7516.50 ಕಿ.ಮೀ. ಜಲಗಡಿಯನ್ನೂ ಹೊಂದಿದೆ. ಪಾಕಿಸ್ತಾನ, ಚೈನಾ, ಭೂತಾನ್, ನೇಪಾಳ, ಬಾಂಗ್ಲಾದೇಶ, ಮಯನ್ಮಾರ್ ಮತ್ತು ಶ್ರೀಲಂಕಾ ದೇಶಗಳು ನೆರೆ ದೇಶಗಳಾಗಿವೆ. ಇಂಡೋನೇಷಿಯಾ, ಮಲೇಶಿಯಾ, ಕಾಂಬೋಡಿಯಾ, ಥೈಲ್ಯಾಂಡ್, ವಿಯಟ್ನಾಂ ಮತ್ತು ಮಾಲ್ಡೀವ್ಸ್‌ಗಳು ಸಮುದ್ರ ಸಂಪರ್ಕದ ನೆರೆ ರಾಷ್ಟ್ರಗಳಾಗಿವೆ. ನಾವು ಶಾಂತಿಯನ್ನು ಬಯಸಿದರೂ, ನೆರೆ ರಾಷ್ಟ್ರಗಳು ನಮ್ಮನ್ನು ಶಾಂತಿಯಿಂದ ಇರಲು ಬಿಡುವುದಿಲ್ಲ. ಶಾಂತಿ ಸಂಧಾನ, ಮಾತುಕತೆಗಳು ಮತ್ತು ಒಪ್ಪಂದಗಳ ಮೂಲಕ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಭಾರತವು ನಡೆಸಿದ್ದರೂ ಈ ದಿಶೆಯಲ್ಲಿ ಸಾಕಷ್ಟು ಯಶಸ್ಸು ದೊರೆತಿಲ್ಲ. ಆದುದರಿಂದ ನಮ್ಮ ರಾಷ್ಟ್ರವನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ. ಇದಕ್ಕೆ ನಮ್ಮ ರಕ್ಷಣಾಪಡೆಗಳ ಪಾತ್ರ ಅಪಾರವಾಗಿದೆ.

## ನಮ್ಮ ಸೇನಾಪಡೆಗಳ ರಚನೆ

ನಮ್ಮ ದೇಶದಲ್ಲಿ ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಗಳಿವೆ. ಭಾರತದ ರಾಷ್ಟ್ರಪತಿಯವರು ಈ ಸೇನಾಪಡೆಗಳ ಪ್ರಧಾನ ದಂಡನಾಯಕರಾಗಿದ್ದಾರೆ. ಭೂಸೇನೆಯ ಮುಖ್ಯಸ್ಥರನ್ನು ದಂಡನಾಯಕ (ಜನರಲ್) ಎಂದೂ, ನೌಕಾಪಡೆಯ ಮುಖ್ಯಸ್ಥರನ್ನು ಅಡ್ಮಿರಲ್ ಎಂದೂ ಮತ್ತು ವಾಯುದಳದ ಮುಖ್ಯಸ್ಥರನ್ನು ಏರ್ ಚೀಫ್ ಮಾರ್ಷಲ್ ಎಂತಲೂ ಕರೆಯುತ್ತಾರೆ. 2001 ರಲ್ಲಿ ಈ ಮೂರು ಘಟಕಗಳ ಸಮನ್ವಯಕ್ಕಾಗಿ ಚೀಫ್ ಆಫ್ ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್ ಎಂಬ ಅಧಿಕಾರಿಯನ್ನು ನೇಮಿಸಿದೆ. ರಾಷ್ಟ್ರದ ರಕ್ಷಣಾ ಮಂತ್ರಿಗಳು ಸಮಗ್ರ ಮೂರೂ ಪಡೆಗಳ (ಭೂಸೇನೆ, ವಾಯುಪಡೆ, ನೌಕಾಪಡೆ) ಕಾರ್ಯಗಳನ್ನು ಸಂಘಟಿಸುತ್ತಾರೆ. ಅಲ್ಲದೆ ಮೂರೂ ಪಡೆಗಳ ಕಾರ್ಯಗಳನ್ನು ಆಯಾ ಪಡೆಗಳ ದಂಡನಾಯಕರು (ಅಧಿಪತಿ) ನಿರ್ವಹಿಸುತ್ತಾರೆ. ಸೇನಾಪಡೆಗಳ ಪ್ರತಿಯೊಂದು ವಿಭಾಗವೂ ತನ್ನದೇ ಆದ ತರಬೇತಿ ಕೇಂದ್ರಗಳನ್ನು ಹೊಂದಿವೆ.

ರಕ್ಷಣಾ ಸಚಿವಾಲಯದ ಪ್ರಧಾನ ಕಛೇರಿ ದೆಹಲಿಯಲ್ಲಿದೆ. ಈ ಸಚಿವಾಲಯ 4 ಇಲಾಖೆಗಳನ್ನು (ವಿಭಾಗಗಳು) ಒಳಗೊಂಡಿದೆ. (1) ರಕ್ಷಣಾ ವಿಭಾಗ (2) ರಕ್ಷಣಾ ಉತ್ಪಾದನಾ ವಿಭಾಗ (3) ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗ ಮತ್ತು (4) ನಿವೃತ್ತಿ ಸೇನಾ ಕಲ್ಯಾಣ ವಿಭಾಗ.

©KTBS Not to be republished

## ಭಾರತೀಯ ಭೂಸೇನೆ

ಭೂಸೇನೆಯ ಪ್ರಧಾನ ಕಛೇರಿ ದೆಹಲಿಯಲ್ಲಿದೆ. ಇದರ ಮುಖ್ಯಸ್ಥರನ್ನು ಮಹಾ ದಂಡನಾಯಕರು ಎಂದು ಕರೆಯುತ್ತಾರೆ. ಇವರಿಗೆ ಉಪ ಮಹಾದಂಡನಾಯಕರು, ಸೇನಾಪತಿ, ಸೇನಾ ಪ್ರಧಾನ ಅಧಿಕಾರಿ, ಮಾಸ್ಟರ್ ಜನರಲ್, ಮಿಲಿಟರಿ ಕಾರ್ಯದರ್ಶಿ, ಮಿಲಿಟರಿ ಇಂಜಿನಿಯರ್ ಮುಂತಾದವರು ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ. ಭೂಸೇನೆಯು ಪದಾತಿದಳ (ಸೈನಿಕ), ಅಶ್ವದಳ (ಕ್ಯಾವಲ್ರಿ), ಟ್ಯಾಂಕುಗಳ ದಳ, ಫಿರಂಗಿ ದಳಗಳನ್ನು ಒಳಗೊಂಡಿದೆ. ಅಲ್ಲದೆ ಸರಬರಾಜು ಮತ್ತು ಇಂಜಿನಿಯರಿಂಗ್ ಘಟಕವೂ ಇದರಲ್ಲಿದೆ. ಆಡಳಿತದ ದೃಷ್ಟಿಯಿಂದ ಭಾರತೀಯ ಭೂಸೇನೆಯನ್ನು ಏಳು ಕಮಾಂಡುಗಳಾಗಿ ರೂಪಿಸಿದೆ.

1) ಪಶ್ಚಿಮ ಕಮಾಂಡ್ – ಚಾಂದಿಮಂದಿರ್ (ಚಂಡೀಗಡ)
2) ಪೂರ್ವ ಕಮಾಂಡ್ – ಕೋಲ್ಕತ್ತಾ (ಪಶ್ಚಿಮಬಂಗಾಳ)
3) ಉತ್ತರ ಕಮಾಂಡ್ – ಉದಾಂಪುರ್ (ಕಾಶ್ಮೀರ)
4) ದಕ್ಷಿಣ ಕಮಾಂಡ್ – ಪುಣೆ (ಮಹಾರಾಷ್ಟ್ರ)
5) ಕೇಂದ್ರ ಕಮಾಂಡ್ – ಲಕ್ನೋ (ಉತ್ತರಪ್ರದೇಶ)
6) ತರಬೇತಿ ಕಮಾಂಡ್ – ಮಾವ್ (ಮಧ್ಯಪ್ರದೇಶ)
7) ವಾಯುವ್ಯ ಕಮಾಂಡ್ – ಜೈಪುರ (ರಾಜಸ್ತಾನ)



**ಭೂಸೇನೆ**

ಈ ಕಮಾಂಡ್‌ಗಳನ್ನು ಮತ್ತೆ ಏರಿಯಾ (ವಲಯ) ಮತ್ತು ಸಬ್ ಏರಿಯಾ (ಉಪವಲಯ) ಗಳಾಗಿ ವಿಂಗಡಿಸಿದೆ. ಲೆಫ್ಟಿನೆಂಟ್ ಜನರಲ್ ಎಂಬ ಪದಾಧಿಕಾರಿ ಕಮಾಂಡಿನ ಮುಖ್ಯಸ್ಥರಾಗಿರುತ್ತಾರೆ. ಪ್ರತಿ ವಲಯದಲ್ಲಿ ಮೇಜರ್ ಜನರಲ್ ಮುಖ್ಯಸ್ಥರಾಗಿರುತ್ತಾರೆ. ಉಪವಲಯದ ಮುಖ್ಯಸ್ಥರನ್ನು ಬ್ರಿಗೇಡಿಯರ್ ಎಂದು ಕರೆಯುತ್ತಾರೆ. ಪುಣೆ ನಗರದ ಹತ್ತಿರವಿರುವ ಖಡಕ್‌ವಾಸ್ಲಾದಲ್ಲಿಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ಉದಕಮಂಡಲದ ಬಳಿಯಲ್ಲಿರುವ ವೆಲ್ಲಿಂಗ್‌ಟನ್‌ನಲ್ಲಿಯ ರಕ್ಷಣಾ ಸೇನಾ ಸಿಬ್ಬಂದಿ ಕಾಲೇಜು, ನವದೆಹಲಿಯಲ್ಲಿರುವ ರಾಷ್ಟ್ರೀಯ ರಕ್ಷಣಾ ಕಾಲೇಜು, ಡೆಹರಾಡೂನ್‌ನಲ್ಲಿರುವ ಭಾರತೀಯ ಮಿಲಿಟರಿ ಅಕಾಡೆಮಿ, ಚೆನ್ನೈನಲ್ಲಿರುವ ಅಧಿಕಾರಿಗಳ ತರಬೇತಿ ಶಾಲೆ ಮುಂತಾದುವು ಪ್ರಮುಖ ತರಬೇತಿ ಕೇಂದ್ರಗಳಾಗಿವೆ.

ಭೂಸೈನ್ಯದ ಕಾರ್ಯವೇನೆಂದರೆ ಯಾವುದೇ ಹೊರ ರಾಷ್ಟ್ರದ ದಾಳಿಯಿಂದ ರಾಷ್ಟ್ರದ ಭೂಭಾಗವನ್ನು, ಸಮಗ್ರತೆಯನ್ನು ಕಾಪಾಡುವುದಾಗಿದೆ. ಈಗಿರುವ ನಮ್ಮ ಭೌಗೋಳಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಪರಿಸರದ ಮೇಲಿನ ರಕ್ಷಣೆ ಬಹುದೊಡ್ಡ ಕೆಲಸವಾಗಿದೆ. ಅಲ್ಲದೆ ಭೂಸೈನ್ಯ ಯಾವಾಗಲೂ

Not to be republished ©KTBS

ಯಾವುದೇ ಸವಾಲನ್ನು ಸ್ವೀಕರಿಸಲು ಸನ್ನದ್ಧವಾಗಿರುತ್ತದೆ. ದೇಶದ ಬಹುದೊಡ್ಡ ವಿಸ್ತಾರವನ್ನು ಹೊಂದಿರುವ ಗಡಿ ಪ್ರದೇಶದ ರಕ್ಷಣೆ, ನೈಸರ್ಗಿಕ ವಿಪತ್ತನ್ನು ಎದುರಿಸುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

### ಭಾರತೀಯ ನೌಕಾದಳ

ಪ್ರಪಂಚದ ಬಹುದೊಡ್ಡ ಜಲಮೇರೆಯನ್ನು ಹೊಂದಿರುವ ಭಾರತ, ಉದ್ದವಾದ ಕರಾವಳಿಯನ್ನು, ಅಂಡಮಾನ್, ನಿಕೋಬಾರ್ ಮತ್ತು ಲಕ್ಷದ್ವೀಪಗಳನ್ನು ಒಳಗೊಂಡಿದೆ. ಇವುಗಳನ್ನು ರಕ್ಷಿಸಲು ಬಲಿಷ್ಠವಾದ ನೌಕಾದಳವಿದೆ. ಇದರ ಕೇಂದ್ರ ಕಛೇರಿಯೂ ಸಹ ದೆಹಲಿಯಲ್ಲಿದೆ. ಇದರ ಪ್ರಧಾನ ಅಧಿಪತಿ ರಾಷ್ಟ್ರಪತಿಗಳು.


ನೌಕಾಪಡೆ

ನಮ್ಮ ನೌಕಾದಳವನ್ನು ಮೂರು ಪ್ರಾಂತೀಯ (Area) ಕಮಾಂಡ್‌ಗಳಾಗಿ ವಿಭಜಿಸಿದೆ. ಅವುಗಳೆಂದರೆ (1) ಪಶ್ಚಿಮ ನೌಕಾ ಕಮಾಂಡ್ (ಕೇಂದ್ರ ಕಛೇರಿ–ಮುಂಬೈ) (2) ಪೂರ್ವ ನೌಕಾ ಕಮಾಂಡ್ (ಕೇಂದ್ರ ಕಛೇರಿ – ವಿಶಾಖಪಟ್ಟಣಂ) ಮತ್ತು (3) ದಕ್ಷಿಣ ನೌಕಾ ಕಮಾಂಡ್ (ಕೇಂದ್ರ ಕಛೇರಿ–ಕೊಚ್ಚಿನ್) ಎಂಬುದಾಗಿ ವಿಭಜಿಸಲಾಗಿದೆ. ಅಲ್ಲದೆ ಭಾರತೀಯ ನೌಕಾದಳಕ್ಕೆ ಎರಡು ಫ್ಲೀಟ್‌ಗಳಿವೆ. ಪಶ್ಚಿಮ ಫ್ಲೀಟ್ ಹಾಗೂ ಪೂರ್ವ ಫ್ಲೀಟ್. ವಿಶಾಖಪಟ್ಟಣದಲ್ಲಿ ಹಿಂದೂಸ್ಥಾನ ಹಡಗು ಕಾರ್ಖಾನೆಯಿದೆ. ಅಲ್ಲದೆ ಕೊಲ್ಕತ್ತಾ ಮತ್ತು ಗೋವಾಗಳಲ್ಲಿ ಕೂಡ ಹಡಗು ನಿರ್ಮಾಣ ಕಾರ್ಯ ನಡೆಯುತ್ತದೆ. ಈ ನೌಕಾ ನಿರ್ಮಾಣ ಕೇಂದ್ರಗಳಲ್ಲಿ ಹಡಗುಗಳು, ಜಲಾಂತರ್ಗಾಮಿಗಳು ಹಾಗೂ ಚಿಕ್ಕ ದೋಣಿಗಳನ್ನು ನಿರ್ಮಿಸಲಾಗುತ್ತಿದೆ.

ಅರುಲಿಯಾಂಡರ್ ವರ್ಗದ ಫ್ರಿಗೇಟ್ಸ್ ಅಂದರೆ ಯುದ್ಧ ಹಡಗುಗಳನ್ನು ಐ.ಎನ್.ಎಸ್. ನೀಲಗಿರಿ, ಹಿಮಗಿರಿ, ದೇವಗಿರಿ, ತಾರಾಗಿರಿ, ವಿಂಧ್ಯಗಿರಿ, ಚಕ್ರಧಾರಿ (ಮಾರ್ಚ್ 2012 ರಲ್ಲಿ ಹೊಸ ಸೇರ್ಪಡೆ) ಹಾಗೂ ಭಾರತೀಯ ಮಾದರಿಯನ್ನು ಹೊಂದಿರುವ ಐ.ಎನ್.ಎಸ್. ಗೋದಾವರಿ, ಸಂಚಾರಿ ಸರ್ವೇ ಹಡಗುಗಳನ್ನು ಮತ್ತು ಕರಾವಳಿ ರಕ್ಷಣಾ ಪಡೆಗಳನ್ನು ನಿರ್ಮಿಸಲಾಗಿದೆ. ಈಚಿನ ದಿನಗಳಲ್ಲಿ ಭಾರತೀಯ ಮಾದರಿಯ ಐ.ಎನ್.ಎಸ್. ವಿಭೂತಿ ಕ್ಷಿಪಣಿ ಹಡಗನ್ನು ನಿರ್ಮಿಸಲಾಗಿದೆ. ಈ ಮೂಲಕ ಭಾರತವು ಇಂತಹ ಅತ್ಯಾಧುನಿಕ ಯುದ್ಧನೌಕೆಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ 6 ನೇ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಭಾರತೀಯ ನೌಕಾದಳದ ನೌಕಾಧಿಕಾರಿಗಳಿಗೆಂದೇ ಎರಡು ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ಅವುಗಳೆಂದರೆ ಕೇರಳದ ಐ.ಎನ್.ಎಸ್. – ವಂಡುರ್ತಿ ಮತ್ತು ಮಹಾರಾಷ್ಟ್ರದ ಲೋನಾವಾಲದಲ್ಲಿನ ಐ.ಎನ್. ಎಸ್. ಶಿವಾಜಿ.

### ವಾಯುದಳ

ಭಾರತೀಯ ವಾಯುದಳ ಆಧುನಿಕತೆ ಹೊಂದಿದ್ದು, ತಂತ್ರಜ್ಞಾನದಿಂದ ಕೂಡಿದ, ಸುಸಜ್ಜಿತವಾದ ಸಾಧನ ಸಲಕರಣೆಗಳನ್ನು ಹೊಂದಿದೆ. ಅಲ್ಲದೆ ಶಸ್ತ್ರಾಸ್ತ್ರಗಳ ವ್ಯವಸ್ಥೆ, ಉತ್ತಮ ಸಂಪರ್ಕ ವ್ಯವಸ್ಥೆ, ಪತ್ತೆ ಹಚ್ಚುವ ವಿಧಾನ, ವೈರಿಗಳನ್ನು ಎದುರಿಸುವ ಮತ್ತು ರಕ್ಷಣಾತ್ಮಕ ಸಾಮರ್ಥ್ಯವನ್ನು ಹೊಂದಿದೆ. ವಾಯುದಳದ ಅತಿ ಮುಖ್ಯವಾದ ಸಾಧನಗಳಾದ ಯುದ್ಧ ವಿಮಾನಗಳು, ಘರ್ಷಣೆಯ ವಾಯುಪಡೆ ಬಹು ಮಹತ್ವದ್ದಾಗಿದೆ.


ವಾಯುದಳ

©KTBS Not to be republished

ಭಾರತೀಯ ವಾಯುದಳವು ಯುದ್ಧ ಮತ್ತು ಶಾಂತಿ ಕಾಲದಲ್ಲಿ ದೇಶಕ್ಕೆ ಧೈರ್ಯದಿಂದ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಸಮಗ್ರ ರಾಷ್ಟ್ರೀಯ ರಕ್ಷಣೆ, ಭದ್ರತೆ ಹಾಗೂ ಸ್ಥಿರತೆಯನ್ನು ಕಾಪಾಡುವಲ್ಲಿ ಯಶಸ್ಸು ಸಾಧಿಸಿದೆ. ವಾಯುದಳದ ಕೇಂದ್ರ ಕಛೇರಿ ದೆಹಲಿಯಲ್ಲಿದೆ. ಇದು ಐದು ಪರಿಣಾಮಕಾರಿ (Operational) ಕಮಾಂಡನ್ನು ಮತ್ತು ಎರಡು ಔಪಚಾರಿಕ (Functional) ಕಮಾಂಡನ್ನು ಹೊಂದಿದೆ.

**ಪರಿಣಾಮಕಾರಿ ಕಮಾಂಡ್ (Operational)**

1) ಪಶ್ಚಿಮ ಕಮಾಂಡ್ – ದೆಹಲಿ
2) ಪೂರ್ವ ಕಮಾಂಡ್ – ಷಿಲ್ಲಾಂಗ್ (ಮೇಘಾಲಯ)
3) ಕೇಂದ್ರ ಕಮಾಂಡ್ – ಅಲಹಾಬಾದ್ (ಉತ್ತರಪ್ರದೇಶ)
4) ಈಶಾನ್ಯ ಕಮಾಂಡ್ – ಗಾಂಧಿನಗರ (ಗುಜರಾತ್)
5) ದಕ್ಷಿಣ ಕಮಾಂಡ್ – ತಿರುವನಂತಪುರಂ. (ಕೇರಳ)

**ಚಟುವಟಿಕೆ**

*ಮಾಜಿ ಸೈನಿಕರೊಂದಿಗೆ ನಮ್ಮ ಸೇನಾಪಡೆಗಳ ವ್ಯವಸ್ಥೆ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ.*

**ಔಪಚಾರಿಕ ಕಮಾಂಡ್ (Functional)**

1) ತರಬೇತಿ ಕಮಾಂಡ್ – ಬೆಂಗಳೂರು (ಕರ್ನಾಟಕ)
2) ನಿರ್ವಹಣಾ ಕಮಾಂಡ್ – ನಾಗಪುರ (ಮಹಾರಾಷ್ಟ್ರ)

ಇವಲ್ಲದೆ ವಾಯುಪಡೆಗೆ ತರಬೇತಿ ನೀಡುವ ಎರಡು ಪ್ರಮುಖ ಕೇಂದ್ರಗಳೆಂದರೆ ಬೆಂಗಳೂರು ಹಾಗೂ ಹೈದರಾಬಾದ್. ಹಾಗೆಯೇ ವಾಯುಪಡೆಗೆ ಆಯ್ಕೆಯಾಗಿ ಉಡ್ಡಣದ ತರಬೇತಿಯನ್ನು ಪಡೆಯಲು ವಿಶೇಷವಾದ ಒಂದು ತರಬೇತಿ ಅಕಾಡೆಮಿಯನ್ನು ದುಂಡಿಘಾಟ್‌ನಲ್ಲಿ ತೆರೆಯಲಾಗಿದೆ. ಅದರಂತೆಯೇ ಆಡಳಿತ ಮತ್ತು ತಂತ್ರಜ್ಞಾನ ತರಬೇತಿ ಕೇಂದ್ರಗಳು ಬೆಂಗಳೂರು ಮತ್ತು ಕೊಯಮತ್ತೂರಿನಲ್ಲಿವೆ. ನಮ್ಮ ವಾಯುಪಡೆಯು ಇಂದು ಒಂದು ಸಾವಿರಕ್ಕೂ ಮಿಗಿಲಾಗಿ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಹೊಂದಿದೆ. ಅದರಲ್ಲಿ ಪ್ರಮುಖ ಮಾದರಿಯ ವಿಮಾನಗಳೆಂದರೆ ಕೆನ್‌ಬೆರಾ, ಹಂಟರ್, ಅಜಿತ್, ಮಿಗ್ 21, ಮಿಗ್ 23, ಮಿಗ್ 25, ಮಿಗ್ 27, ಮಿಗ್ 29, ಮಿರೇಜ್ 2000 ಮುಂತಾದವು.

**ನಿಮಗಿದು ತಿಳಿದಿರಲಿ**

**3 ಪಡೆಗಳ ಸೇವಾದರ್ಜೆಗಳು**

| 1. ಭೂಸೇನೆ | 2. ನೌಕಾದಳ | 3. ವಾಯುದಳ |
|---|---|---|
| a) ಜನರಲ್ | a) ಅಡ್ಮಿರಲ್ | a) ಏರ್ ಚೀಫ್ ಮಾರ್ಷಲ್ |
| b) ಲೆಫ್ಟಿನೆಂಟ್ ಜನರಲ್ | b) ವೈಸ್ ಅಡ್ಮಿರಲ್ | b) ಏರ್ ಮಾರ್ಷಲ್ |
| c) ಮೇಜರ್ ಜನರಲ್ | c) ರಿಯರ್ ಅಡ್ಮಿರಲ್ | c) ಏರ್ ವೈಸ್ ಮಾರ್ಷಲ್ |
| d) ಬ್ರಿಗೇಡಿಯರ್ | d) ಕಮಡೊರ್ | d) ಏರ್ ಕಮಾಂಡರ್ |
| e) ಕರ್ನಲ್ | e) ಕ್ಯಾಪ್ಟನ್ | e) ಗ್ರೂಪ್ ಕಮಾಂಡರ್ |
| f) ಲೆಫ್ಟಿನೆಂಟ್ ಕರ್ನಲ್ | f) ಕಮಾಂಡರ್ | f) ವಿಂಗ್ ಕಮಾಂಡರ್ |
| g) ಮೇಜರ್ | g) ಲೆಫ್ಟಿನೆಂಟ್ ಕಮಾಂಡರ್ | g) ಸ್ಕ್ವಾಡ್ರನ್ ಲೀಡರ್ |
| h) ಕ್ಯಾಪ್ಟನ್ | h) ಲೆಫ್ಟಿನೆಂಟ್ | h) ಫ್ಲೈಟ್ ಲೆಫ್ಟಿನೆಂಟ್ |
| i) ಲೆಫ್ಟಿನೆಂಟ್ | i) ಸಬ್ ಲೆಫ್ಟಿನೆಂಟ್ | i) ಫ್ಲೆಯಿಂಗ್ ಆಫೀಸರ್ |

©KTBS Not to be republished

**ಸೇನಾ ನೇಮಕಾತಿ :** ಭಾರತದ ಪ್ರತಿಯೊಬ್ಬ ಪ್ರಜೆಯೂ ಸ್ವ ಇಚ್ಛೆಯಿಂದ ಅವನ/ಅವಳ ಯಾವುದೇ ಜಾತಿ, ಧರ್ಮ, ವರ್ಗ ಮತ್ತು ಸಮುದಾಯಕ್ಕೆ ಸೇರಿದವರು ಎಂಬ ತಾರತಮ್ಯವಿಲ್ಲದೆ ಸೇರಬಹುದು. ಆದರೆ ಸರ್ಕಾರ ನಿಗದಿಪಡಿಸಿದ ಕೆಲವು ದೈಹಿಕ, ಮಾನಸಿಕ ಆರೋಗ್ಯ, ಶೈಕ್ಷಣಿಕವಾದ ಸಾಮಾನ್ಯ ಅರ್ಹತೆ ಮತ್ತು ಆ ಹುದ್ದೆಗೆ ಬೇಕಾದ ತಾಂತ್ರಿಕ ಅರ್ಹತೆಯಂತಹ ವಿಶೇಷ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

ಭೂಸೇನೆಯಲ್ಲಿ ಕೆಳದರ್ಜೆಯ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ನೇಮಕಾತಿ ಹೊಂದಬಯಸುವ ಪುರುಷ ಜನಸಂಖ್ಯೆಗೆ ಅನುಗುಣವಾಗಿ (The Recruitable Male Population (RMP) ) ನೇಮಕಾತಿ ಮಾಡಲಾಗುತ್ತದೆ. ವಾಯುಪಡೆಗೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮತ್ತು ನೋಂದಣಿ ಮೂಲಕ ಅಖಿಲ ಭಾರತ ಮಟ್ಟದಲ್ಲಿ ನೇಮಿಸಲಾಗುತ್ತದೆ. ಇದು ಕೇಂದ್ರ ವಾಯುಪಡೆ ಆಯ್ಕೆ ಮಂಡಳಿ ಮೂಲಕ (Central Airmen Selection Board (CASB)) ನಡೆಯುತ್ತದೆ. ನೌಕಾಪಡೆಯ ನಾವಿಕರ ನೇಮಕಾತಿಯು ನೌಕಾದಳ ನೇಮಕಾತಿ ಸಂಘಟನೆ ಮೂಲಕ ನಡೆಯುತ್ತದೆ. (Naval Recruitment Organisation (NRO)) ಇದರ ಜವಾಬ್ದಾರಿ ಮಾನವ ಸಂಪನ್ಮೂಲ ಯೋಜನೆ ಮತ್ತು ನೌಕಾದಳದ ಕೇಂದ್ರ ಕಛೇರಿ ನಿರ್ದೇಶನಾಲಯದ್ದಾಗಿರುತ್ತದೆ. ಇದಲ್ಲದೆ ಈ ಮೂರು ಪಡೆಗಳಿಗೆ ಮಹಿಳೆಯರನ್ನು ನೇಮಕಾತಿ ಮಾಡುವಾಗ ಮಹಿಳಾ ಸೇರ್ಪಡೆಯ ವಿಶೇಷ ಯೋಜನೆಯ ಮೂಲಕ ನಡೆಯುತ್ತದೆ (Women Special Entry Scheme (WSES)).

**ರಕ್ಷಣಾ ಉತ್ಪಾದನೆ :** ರಕ್ಷಣಾ ಉತ್ಪಾದನೆಯ ಕಾರ್ಯಚಟುವಟಿಕೆಗಳನ್ನು 2 ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯದು ಇಲಾಖಾ ವತಿಯಿಂದಲೇ ನಡೆಸುವ ಕಾರ್ಖಾನೆಗಳು ಹಾಗೂ ಎರಡನೆಯದು ರಕ್ಷಣಾ ಸಾರ್ವಜನಿಕ ವಲಯದಲ್ಲಿನ ಕಾರ್ಖಾನೆಗಳು. ಇವುಗಳಲ್ಲಿ ಮೊದಲನೆಯದು ಮದ್ದುಗುಂಡುಗಳು, ಶಸ್ತ್ರಾಸ್ತ್ರಗಳು, ಟ್ಯಾಂಕ್‌ಗಳು ಮುಂತಾದುವುಗಳನ್ನು ತಯಾರಿಸಿದರೆ ಸಾರ್ವಜನಿಕ ಒಡೆತನದ ಉದ್ದಿಮೆಗಳು ಹಡಗುಗಳು, ವಿಮಾನಗಳು, ಭೂವಾಹನಗಳಾದ ಬುಲ್‌ಡೋಜರ್‌ಗಳು, ಸಬ್ ಮೆರಿನ್‌ಗಳು, ಕ್ಷಿಪಣಿಗಳು ಮುಂತಾದುವುಗಳನ್ನು ತಯಾರಿಸುತ್ತವೆ.

**ನಿಮಗಿದು ತಿಳಿದಿರಲಿ : ಸಾರ್ವಜನಿಕ ಒಡೆತನದ ರಕ್ಷಣಾ ಉದ್ದಿಮೆಗಳು**

| | |
|---|---|
| 1954 – BEL (Bharath Electronics Ltd.) | 1964 – HAL (Hindustan Aeronautics Ltd.) |
| 1964 – BEML (Bharath Earth Movers Ltd.) | 1970 – BDL ( Bharath Dynamics Ltd. etc) |

**ನಮ್ಮ ರಕ್ಷಣಾ ಸನ್ನದ್ಧತೆ ಮತ್ತು ಸಂಶೋಧನಾ ಅಭಿವೃದ್ಧಿ :** ಇಂದು ನಮ್ಮ ರಕ್ಷಣಾ ಪಡೆಗಳು ಅನೇಕ ಸವಾಲುಗಳನ್ನು ಎದುರಿಸಬೇಕಾಗಿದೆ. ಆದುದರಿಂದ ರಾಷ್ಟ್ರದ ಗಡಿಯನ್ನು ರಕ್ಷಿಸುವಲ್ಲಿ ನಮ್ಮ ಸೈನಿಕರು ಸದಾ ಸಿದ್ಧರಾಗಿದ್ದಾರೆ. ನಮ್ಮ ಸೇನಾಪಡೆಯು ಗಾತ್ರದಲ್ಲಿ ಜಗತ್ತಿನ 4 ನೇ ಸ್ಥಾನದಲ್ಲಿದೆ. ವಾಯುಪಡೆಯಲ್ಲಿ 5 ನೆಯದು ಮತ್ತು ನೌಕಾಪಡೆಯಲ್ಲಿಯೂ 5 ನೇ ಸ್ಥಾನ ಗಳಿಸಿಕೊಂಡಿದೆ.

ನಮ್ಮ ಸೇನೆಯನ್ನು ಬಲಪಡಿಸಲೆಂದೇ ಕಾರವಾರದ ಬಳಿ ಸೀಬರ್ಡ್ ನೌಕಾನೆಲೆಯನ್ನು ತೆರೆಯಲಾಗಿದೆ. ಅಲ್ಲದೆ 1958ರಲ್ಲಿ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯನ್ನು (DRDO – Defence Research and Development Organisation) ಸ್ಥಾಪಿಸಿ ಭೂಮಿಯಿಂದ ಭೂಮಿಗೆ ಜಿಗಿಯುವ ಕ್ಷಿಪಣಿಯಾದ ಪೃಥ್ವಿ, ತ್ರಿಶೂಲ್, ಆಕಾಶ್, ನಾಘ, ಅಗ್ನಿ 1, 2, 3, 4, 5 ಎಂಬ ಅತ್ಯಾಧುನಿಕ ಕ್ಷಿಪಣಿಗಳನ್ನು ಹೊಂದಿದೆ 19 ಏಪ್ರಿಲ್ 2012 ರಲ್ಲಿ ಅಗ್ನಿ 5 ನ್ನು 5 ಸಾವಿರ ಕಿ.ಮೀ.ನ್ನು ಗುರಿ ಹೊಂದಿದ ಕ್ಷಿಪಣಿಯನ್ನು ಉಡಾಯಿಸಲಾಯಿತು. ಸಬ್‌ಮೆರಿನ್, ಆಂಟಿ ಸಬ್‌ಮೆರಿನ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದು, ಭಾರತ ಇಂದು ಗಣ್ಯ ರಾಷ್ಟ್ರಗಳ ಸಾಲಿಗೆ ಸೇರಿದೆ.

ಭೋಫೋರ್ಸ್ ಫಿರಂಗಿಗಳನ್ನು ಕಾರ್ಗಿಲ್ ಯುದ್ಧದಲ್ಲಿ (ಭಾರತ ಮತ್ತು ಪಾಕಿಸ್ತಾನ) ಸಮರ್ಥವಾಗಿ ಬಳಸಿಕೊಳ್ಳಲಾಗಿದೆ. ಸಮಯ ಬಂದರೆ ಅಣ್ವಸ್ತ್ರ ಹೋರಾಟವನ್ನು ಸಮರ್ಥವಾಗಿ ಎದುರಿಸಬಲ್ಲ ತಂತ್ರಜ್ಞಾನವನ್ನು ಪೋಕ್ರಾನ್ ಪ್ರಯೋಗದಿಂದ ತಿಳಿಯಲಾಗಿದೆ. ಅಲ್ಲದೆ ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ 55



©KTBS Not to be re published

ರಕ್ಷಣಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಆದುದರಿಂದ ನಮ್ಮ ರಾಷ್ಟ್ರದ ಹಿತಾಸಕ್ತಿ ಮತ್ತು ಅದರ ಉಜ್ವಲ ಭವಿಷ್ಯಗಳಿಗೆ ನಾವು ಸೈನ್ಯಕ್ಕೆ ಸೇರಬೇಕು. ನಮ್ಮ ಸೇನಾಪಡೆಗಳಂತೆ ಸರ್ವ ತ್ಯಾಗಕ್ಕೂ ಸಿದ್ಧರಿರಬೇಕು.

**ನಿಮಗಿದು ತಿಳಿದಿರಲಿ :**

***ಕಾರ್ಗಿಲ್ ಯುದ್ಧ – 1999 :*** *ಭಾರತ ಮತ್ತು ಪಾಕಿಸ್ತಾನಗಳ ನಡುವೆ 1999ರ ಮೇ–ಜೂನ್‌ನಲ್ಲಿ ಕಾರ್ಗಿಲ್ ಯುದ್ಧ ನಡೆಯಿತು. ಮೇ. 16 ರಂದು ಪಾಕ್ ಸೈನಿಕರು ಕಾಶ್ಮೀರದ ಅತ್ಯಂತ ಎತ್ತರವಾದ ಪ್ರದೇಶದ ಮೇಲೆ ವೈಮಾನಿಕ ದಾಳಿ ಆರಂಭಿಸಿದರು. ಇದಕ್ಕೆ ಪ್ರತಿಯಾಗಿ ಆಪರೇಷನ್ ವಿಜಯ್ ಎಂಬ ಹೆಸರಿನಲ್ಲಿ ಭಾರತ ಪ್ರತಿದಾಳಿ ಆರಂಭಿಸಿತು. ಮೊದಲು ಭಾರತದ ಸೈನ್ಯಕ್ಕೆ ಹಿನ್ನಡೆಯಾಯಿತು. ಆನಂತರ ಹೋರಾಟ ದ್ವಿಗುಣಗೊಳಿಸಿ ಬೋಫೋರ್ಸ್ ಬಂದೂಕಗಳಿಂದ ಜೂನ್ 14ರಂದು ಪ್ರತಿ ದಾಳಿ ಮಾಡಿದಾಗ ಪಾಕಿಸ್ತಾನ ಅವಮಾನಕರ ಸೋಲುಂಡು ಹಿಂದಕ್ಕೆ ಸರಿಯಿತು. ಇದರಿಂದ ಪಾಕಿಸ್ತಾನಕ್ಕೆ ಬಾರಿ ಮುಖಭಂಗವಾಯಿತು. ಇದೊಂದು ಸಣ್ಣ ಪ್ರಮಾಣದ ಯುದ್ಧವಾದರೂ ವಿಶ್ವದ ಗಮನ ಸೆಳೆಯಿತು. ಶಾಂತಿಪ್ರಿಯ ದೇಶವಾದ ಭಾರತದ ಮೇಲೆ ದಾಳಿ ಮಾಡಿದ ಪಾಕಿಸ್ತಾನವನ್ನು ಆಕ್ರಮಣಕಾರಿ ದೇಶ ಎಂದು ಇಡೀ ವಿಶ್ವವೇ ದೂಷಿಸಿತು. ಈ ಯುದ್ಧ ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಿತು.*

*ಈ ಯುದ್ಧದಲ್ಲಿ ಭಾರತದ ಸುಮಾರು 30,000 ಸೈನಿಕರು ಕಾರ್ಯಾಚರಣೆ ನಡೆಸಿದ್ದರು. ಪಾಕಿಸ್ತಾನದ ಆಕ್ರಮಣಕಾರಿ ಸೈನಿಕರ ಸಂಖ್ಯೆ 5000 ಎಂದು ಯುದ್ಧದ ನಂತರ ಅಂದಾಜಿಸಲಾಯಿತು. ಭಾರತದ ಭೂಸೇನೆಗೆ ಬೆಂಬಲವಾಗಿ ಭಾರತೀಯ ವಾಯುಪಡೆ ಆಪರೇಷನ್ ಸೇಫ್ಡ್ ಸಾಗರ್ ಕಾರ್ಯಾಚರಣೆಯನ್ನು ಆರಂಭಿಸಿತು. ಜುಲೈ ಕೊನೆಯ ವಾರದಲ್ಲಿ ಭಾರತದ ಸೇನೆ ಅಂತಿಮ ದಾಳಿಯನ್ನು ಆರಂಭಿಸಿತು. ಜುಲೈ 26ರಂದು ಹೋರಾಟ ಸ್ಥಗಿತಗೊಂಡಿತು. ಪಾಕಿಸ್ತಾನ ವಿರುದ್ಧ ಗೆಲುವು ಸಾಧಿಸಿದ ದಿನವನ್ನು ಕಾರ್ಗಿಲ್ ವಿಜಯ್ ದಿವಸ್ (ಕಾರ್ಗಿಲ್ ವಿಜಯೋತ್ಸವ ದಿನ) ಎಂದು ಭಾರತದಲ್ಲಿ ಗುರುತಿಸಲಾಗಿದೆ. ಪ್ರತಿ ವರ್ಷವೂ ಜುಲೈ 26 ರಂದು ಈ ದಿನವನ್ನು ಆಚರಿಸಲಾಗುತ್ತಿದೆ.*

**ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆ :**

ನಮ್ಮ ಸೇನಾಪಡೆಗಳಿಗೆ ಪೂರಕವಾಗಿ ಇರುವ ಎರಡನೆಯ ಸಾಲಿನ ರಕ್ಷಣಾ ವ್ಯವಸ್ಥೆಯನ್ನು ವಿವಿಧ ಘಟಕಗಳ ಮೂಲಕ ಕಲ್ಪಿಸಲಾಗಿದೆ. ಆ ಘಟಕಗಳೆಂದರೆ,

1) ಪ್ರಾದೇಶಿಕ ಸೇನೆ (Territorial Army)
2) ಎನ್.ಸಿ.ಸಿ. (National Cadet Corps)
3) ಕರಾವಳಿ ಪಹರೆ (Coastal Guard)
4) ಗಡಿ ಭದ್ರತಾ ದಳ (Border Security Force)
5) ನಾಗರಿಕ ರಕ್ಷಣೆ (Civil Defence)
6) ಗೃಹರಕ್ಷಕ ದಳ (Home Guards)
7) ರೆಡ್ ಕ್ರಾಸ್ (Red Cross)

**ಪ್ರಾದೇಶಿಕ ಸೇನೆ (Territorial Army) :** ಇದೊಂದು ಅರೆಕಾಲಿಕ ಸ್ವಯಂ ಸೇವಾದಳ. ಇದನ್ನು 1949 ರಲ್ಲಿ ಸಂಸತ್ತಿನ ಕಾಯಿದೆಯಂತೆ ಸ್ಥಾಪಿಸಲಾಯಿತು. ಇದರಲ್ಲಿ ವೃತ್ತಿಪರ ಯೋಧರು ಇರುವುದಿಲ್ಲ. ಅಭಿಲಾಷೆಯುಳ್ಳ ನಾಗರಿಕರು ತಮ್ಮ ಬಿಡುವಿನ ಸಮಯದಲ್ಲಿ ಮಿಲಿಟರಿ ತರಬೇತಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಉದ್ಯೋಗಸ್ಥರಾದ ಹಾಗೂ 18 ರಿಂದ 42 ವಯೋಮಿತಿಯಲ್ಲಿರುವವರು ಈ ಸೇವೆಗೆ ಸೇರಲು ಅರ್ಹರಾಗಿರುತ್ತಾರೆ. ಇದರ ಕಾರ್ಯವೆಂದರೆ ರಾಷ್ಟ್ರ ತುರ್ತುಪರಿಸ್ಥಿತಿಯನ್ನು ಎದುರಿಸುವ ಸಂದರ್ಭದಲ್ಲಿ, ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಕೆಲಸ ನಿರ್ವಹಿಸುತ್ತದೆ. ಪ್ರತಿ ವರ್ಷ ನವೆಂಬರ್ ತಿಂಗಳ ಮೂರನೇ ಶನಿವಾರ ಪ್ರಾದೇಶಿಕ ಸೇನಾ ದಿನವಾಗಿದೆ.

© KTBS Not to be republished

**ಎನ್.ಸಿ.ಸಿ. (National Cadet Corps) :** ಎನ್.ಸಿ.ಸಿ.ಯು ರಾಷ್ಟ್ರದ ಒಂದು ಪ್ರಧಾನ ಯುವ ಸಂಘಟನೆಯಾಗಿದ್ದು, 1948 ರಲ್ಲಿ ಸ್ಥಾಪಿಸಲಾಯಿತು. ಇದನ್ನು ಶಾಲಾ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಸ್ವಯಂ ಆಸಕ್ತಿಯಿಂದ ಸೇರಿಕೊಳ್ಳಲು ತೆರೆಯಲಾಗಿದೆ. ಇದರ ಮುಖ್ಯ ಗುರಿ ವೈಯಕ್ತಿಕ ಗುಣಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು, ನಾಯಕತ್ವ ಗುಣ ಬೆಳೆಸಿಕೊಳ್ಳುವುದು, ಗೆಳೆತನ ಬೆಳೆಸಿಕೊಳ್ಳುವುದು ಹಾಗೂ ಆದರ್ಶ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದಾಗಿದೆ. ಇದು ಶಿಸ್ತುಬದ್ಧವಾದ ತರಬೇತಿ ಪಡೆದ ಮಾನವ ಪಡೆಯನ್ನು ಹೊಂದಿದ್ದು, ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಷ್ಟ್ರಕ್ಕೆ ಸಹಾಯ ಮಾಡುತ್ತದೆ. ಎನ್.ಸಿ.ಸಿ.ಯಲ್ಲಿ ಎರಡು ಘಟಕಗಳಿವೆ. ಅವುಗಳೆಂದರೆ ಸೀನಿಯರ್ ಅಂದರೆ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಜೂನಿಯರ್ ಅಂದರೆ ಶಾಲಾ ವಿದ್ಯಾರ್ಥಿಗಳಿಗೆ. ಈ ಕೆಡೆಟ್‌ಗಳಿಗೆ ಹಲವು ಸೌಲಭ್ಯಗಳನ್ನು ಒದಗಿಸಲಾಗಿದೆ. ಅವುಗಳೆಂದರೆ –

- ಎನ್.ಸಿ.ಸಿ. ತರಬೇತಿ ಪಡೆದವರಿಗೆ ರಕ್ಷಣಾ ಸೇನೆಗಳಿಗೆ ಸೇರಲು ವಿಶೇಷ ಅವಕಾಶ.
- ತರಬೇತಿಯಲ್ಲಿ ವಿಶಿಷ್ಠ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ವೃತ್ತಿಪರ ಕಾಲೇಜುಗಳಲ್ಲಿ ಮೀಸಲಾತಿ ಸೌಲಭ್ಯ.
- ತರಬೇತಿಯಲ್ಲಿ ಆಯುಧ ಶಿಕ್ಷಣ ನೀಡುವುದು.
- ದೂರ ನಡಿಗೆ (ಹೈಕಿಂಗ್)
- ಸಾಹಸ ಪ್ರಯಾಣ (ಟ್ರೆಕಿಂಗ್)
- ಜಾರಾಟ (ಗ್ಲೈಡಿಂಗ್)
- ಪರ್ವತಾರೋಹಣ (ಸ್ಕೇಲಿಂಗ್)



**ಕರಾವಳಿ ಪಹರೆ (Coastal Guards):** ಇದೊಂದು ಅರೆ ಮಿಲಿಟರಿ ಪಡೆಯಾಗಿದೆ. ಎರಡನೇ ಸಾಲಿನ ರಕ್ಷಣಾ ವ್ಯವಸ್ಥೆಯಲ್ಲಿ ಇದು ಬಹಳ ಮುಖ್ಯವಾಗಿದ್ದು, ಇತ್ತೀಚೆಗೆ ಅಂದರೆ 1978 ರಲ್ಲಿ ರಚಿಸಲಾಗಿದೆ. ಇದು ಕಡಲ ಸಂಬಂಧ (Maritime) ವಾದ ಮತ್ತು ರಾಷ್ಟ್ರೀಯ ಹಿತಾಸಕ್ತಿಗೆ ಸಂಬಂಧಿಸಿದ ಕಾವಲು ಪಡೆಯಾಗಿದೆ. ಇದು ಸುಮಾರು 7,516.5 ಕಿ.ಮೀ. ಕರಾವಳಿ ಪ್ರದೇಶದ ರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತದೆ. ಈ ಕಾವಲು ಪಡೆಯ ನೌಕೆಗಳಿಗೆ ವೀರೋಚಿತವಾದ ಹೆಸರುಗಳನ್ನು ನೀಡಲಾಗಿದೆ. ಅವುಗಳೆಂದರೆ – ಪುತಾರ್, ವಿಕ್ರಮ್, ವಿಜಯ್ ಹಾಗೂ ವೀರ. ಅಕ್ರಮ ಸಮುದ್ರ ವ್ಯಾಪಾರ, ಕಳ್ಳ ಸಾಗಾಣಿಕೆ ಮುಂತಾದ ಅವ್ಯವಹಾರಗಳನ್ನು ತಡೆಗಟ್ಟಲು ಇದು ಸಹಕಾರಿಯಾಗಿದೆ. ಇದರ ಪ್ರಧಾನ ಕಛೇರಿ ದೆಹಲಿಯಲ್ಲಿದ್ದು, ಓರ್ವ ಡೈರೆಕ್ಟರ್ ಜನರಲ್‌ನ್ನು ಹೊಂದಿದೆ. ಈ ಸಂಘಟನೆ ನಾಲ್ಕು ಪ್ರಾದೇಶಿಕ ಮುಖ್ಯ ಠಾಣೆಗಳನ್ನು ಹೊಂದಿದ್ದು, ಮುಂಬೈ, ಚೆನ್ನೈ, ಗಾಂಧಿನಗರ್ ಹಾಗೂ ಅಂಡಮಾನ್ ನಿಕೋಬಾರ್‌ನ ಪೋರ್ಟ್‌ಬ್ಲೇರ್‌ನಲ್ಲಿ ಸ್ಥಾಪಿಸಲಾಗಿದೆ.

**ಗಡಿ ಭದ್ರತಾ ದಳ (Border Security Force) :** ಗಡಿ ಭದ್ರತಾ ಪಡೆಯನ್ನು 1965ರಲ್ಲಿ ಸ್ಥಾಪಿಸಲಾಯಿತು. ಈ ಸೈನಿಕರು ನಮ್ಮ ದೇಶದ ಸುಮಾರು 15200 ಕಿ.ಮೀ. ಪ್ರದೇಶದ ಗಡಿ ಭಾಗಗಳನ್ನು ಕಟ್ಟೆಚ್ಚರದಿಂದ ಕಾಪಾಡುತ್ತಾರೆ. ಇದರ ತರಬೇತಿ ಕೇಂದ್ರ ಬೆಂಗಳೂರಿನ ಯಲಹಂಕದಲ್ಲಿದೆ. ಗಡಿಭಾಗದಲ್ಲಿಯ ಅತಿಕ್ರಮ ಹಾಗೂ ಅಕ್ರಮ ಪ್ರವೇಶ, ಕಳ್ಳ ಸಾಗಾಣಿಕೆಗಳನ್ನು ತಡೆಗಟ್ಟಲು ಇದು ಸಹಕಾರಿಯಾಗಿದೆ. ಅಲ್ಲದೆ ಆಂತರಿಕ ಭದ್ರತೆಯ ದೃಷ್ಟಿಯಿಂದ ಅಸ್ಸಾಂ ರೈಫಲ್ಸ್, ಇಂಡೋ–ಟಿಬೆಟಿಯನ್ ಗಡಿ ಪೋಲಿಸ್ (ITBP), ಕೇಂದ್ರ ಮೀಸಲು ಪೋಲಿಸ್ ಪಡೆ (CRPF), ಭಯೋತ್ಪಾದನೆ ನಿಗ್ರಹದ ವಿಶೇಷ ಪಡೆ, ಕೇಂದ್ರ ಕೈಗಾರಿಕಾ ಭದ್ರತಾ ಪಡೆ (CISF), ರೈಲ್ವೆ ರಕ್ಷಣಾ ಪಡೆ (RPF) ಮುಂತಾದುವು ಸಹಾಯಕ ಸೇನಾಪಡೆಗಳಾಗಿ ಕಾರ್ಯನಿರ್ವಹಿಸುತ್ತವೆ.

©KTBS Not to be republished

**ನಾಗರಿಕ ರಕ್ಷಣೆ (Civil Defence) :** ಇದರ ಮುಖ್ಯ ಗುರಿ ಜೀವರಕ್ಷಣೆ ಅಥವಾ ನಾಗರಿಕರ ಜೀವ ಉಳಿಸುವುದು. ನಾಗರಿಕರ ಆಸ್ತಿಯ ಮೇಲೆ ಆಗುವ ಹಾನಿಯನ್ನು ಕಡಿಮೆ ಮಾಡುವುದು ಮತ್ತು ಕೈಗಾರಿಕಾ ಉತ್ಪಾದನೆಗಳ ಮೇಲೆ ಆಗುವ ಅಕ್ರಮಗಳನ್ನು ತಡೆಯುವುದು. ಇದು ಸ್ವಯಂ ಸೇರ್ಪಡೆಯ ಸಂಘಟನೆಯಾಗಿದೆ. ಈ ನಾಗರಿಕ ರಕ್ಷಣೆಯ ಚಟುವಟಿಕೆ ಇದೇ ರಾಷ್ಟ್ರದಲ್ಲಿನ ಸುಮಾರು 22 ವಿಭಾಗ ಅಥವಾ ವರ್ಗದ ನಗರಗಳಿಗೆ ನಿರ್ಬಂಧಗೊಳಿಸಿದೆ. ಪ್ರಸ್ತುತ 13 ಲಕ್ಷ ನಾಗರಿಕ ರಕ್ಷಣಾ ಸ್ವಯಂ ಸೇವಕರಿದ್ದು ಅದರಲ್ಲಿ ಈಗಾಗಲೇ 6.64 ಲಕ್ಷ ಸ್ವಯಂ ಸೇವಕರು ತರಬೇತಿ ಪಡೆದಿದ್ದಾರೆ.

**ಗೃಹರಕ್ಷಕ ದಳ (Home Guards) :** ಗೃಹರಕ್ಷಕ ದಳವು ಒಂದು ಸ್ವಯಂ ಸೇವಕ ಶಕ್ತಿಯಾಗಿದೆ. ಇದು ಮೊದಲು 1946 ರಂದು ಅಸ್ತಿತ್ವಕ್ಕೆ ಬಂದಿದ್ದು, ಸ್ಥಳೀಯ ಪೋಲೀಸರಿಗೆ ಸಹಾಯಕವಾಗಿದೆ. ಇದು ನಾಗರಿಕ ಸಮಾಜದಲ್ಲಿನ ಕೋಮು ಗಲಭೆಗಳನ್ನು ನಿಯಂತ್ರಿಸುವಲ್ಲಿ, ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಹಾಗೂ ಚುನಾವಣಾ ಸಂದರ್ಭದಲ್ಲಿ ಪೋಲೀಸರಿಗೆ ಸಹಾಯಕವಾಗಿದೆ. ಇದನ್ನು ಕೆಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಳವಡಿಸಿಕೊಂಡಿವೆ. 1962 ರಲ್ಲಿ ಚೈನಾ ಭಾರತದ ಮೇಲೆ ಆಕ್ರಮಣ ಮಾಡಿದಾಗ ಅಸ್ತಿತ್ವದಲ್ಲಿದ್ದ ಈ ಸ್ವಯಂಸೇವಕರ ಸಂಘಟನೆಯು ಸಮವಸ್ತ್ರ ಧರಿಸುವ ಮೂಲಕ ರಕ್ಷಣೆಗೆ ಸಹಕರಿಸಿತು. ನಮ್ಮ ಭಾರತದಲ್ಲಿ ಸುಮಾರು 5,73,793 ಗೃಹರಕ್ಷಕ ದಳದ ಸ್ವಯಂ ಸೇವಕರಿದ್ದಾರೆ. ಈ ಸಂಘಟನೆಯು ಇಡೀ ರಾಷ್ಟ್ರಾದ್ಯಂತ ಆವರಿಸಿದೆ.

> **ಚಟುವಟಿಕೆ :**
> ನಿಮ್ಮ ಶಾಲೆಯಲ್ಲಿನ ಎನ್.ಸಿ.ಸಿ. ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಸೇರಿ ಹೆಚ್ಚಿನ ಮಾಹಿತಿಯ ಬಗ್ಗೆ ನೇರ ಅನುಭವ ಪಡೆಯಿರಿ.

**ರೆಡ್ ಕ್ರಾಸ್ (Red Cross) :** ರೆಡ್‌ಕ್ರಾಸ್ ಸಂಸ್ಥೆಯು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿದೆ. 1920ರಲ್ಲಿ ಭಾರತದ ಸಂಸತ್ತು ಕಾಯಿದೆಯೊಂದನ್ನು ಪಾಸು ಮಾಡುವುದರ ಮೂಲಕ ಅಸ್ತಿತ್ವಕ್ಕೆ ತಂದಿತು. ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ.

ಭಾರತದ ರೆಡ್‌ಕ್ರಾಸ್ ಸಂಸ್ಥೆಯು ಮಾನವೀಯ ಸ್ವಯಂ ಸಂಘಟನೆಯಾಗಿದ್ದು, ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು 700 ಶಾಖೆಗಳನ್ನು ಒಳಗೊಂಡಿದೆ. ಭಾರತದ ರಾಷ್ಟ್ರಪತಿಗಳು ಇದರ ಅಧ್ಯಕ್ಷರಾಗಿದ್ದರೆ, ರಾಜ್ಯಶಾಖೆಗೆ ರಾಜ್ಯಪಾಲರು ಅಧ್ಯಕ್ಷರಾಗಿರುತ್ತಾರೆ. ಅಲ್ಲದೆ ಒಬ್ಬರು ಸೆಕ್ರೆಟರಿ ಜನರಲ್ ಮುಖ್ಯ ಕಾರ್ಯನಿರ್ವಾಹಕರಾಗಿರುತ್ತಾರೆ. ಈ ಸಂಸ್ಥೆಯು 19 ಸದಸ್ಯರನ್ನು ಒಳಗೊಂಡ ಆಡಳಿತ ಮಂಡಳಿಯನ್ನು ಹೊಂದಿದ್ದು, ಕಾರ್ಯಾಧ್ಯಕ್ಷ ಮತ್ತು 6 ಮಂದಿ ಸದಸ್ಯರನ್ನು ರಾಷ್ಟ್ರಪತಿಗಳು ನಾಮಕರಣ ಮಾಡಿದರೆ ಉಳಿದ 12 ಸದಸ್ಯರನ್ನು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ ಶಾಖೆಗಳು ಮತದಾನದ ಮೂಲಕ ಚುನಾಯಿಸುತ್ತಾರೆ. ಈ ಸಂಘಟನೆಯು ರಾಷ್ಟ್ರದಲ್ಲಿನ ಆಪತ್ತು ಮತ್ತು ತುರ್ತು ಪರಿಸ್ಥಿತಿಯಂತಹ ಸಂದರ್ಭದಲ್ಲಿ ಜನರಿಗೆ ನೆರವು ನೀಡುತ್ತದೆ. ಇದು ಯಾವುದೇ ಭೇದಭಾವವಿಲ್ಲದೆ ಯುದ್ಧಭೂಮಿಯಲ್ಲಿನ ಗಾಯಾಳುಗಳಿಗೆ, ಅನಾರೋಗ್ಯಪೀಡಿತರಿಗೆ ಸೇವೆ ಸಲ್ಲಿಸುತ್ತದೆ. ಈ ಸಂಸ್ಥೆಯು 7 ಮೂಲಭೂತ ತತ್ವಗಳನ್ನು ಹೊಂದಿದೆ. ಅವುಗಳೆಂದರೆ (1) ಮಾನವೀಯತೆ (2) ನಿಷ್ಪಕ್ಷಪಾತ (3) ತಾಟಸ್ಥ್ಯ (4) ಸ್ವಾತಂತ್ರ್ಯ (5) ಸ್ವಯಂಸೇವೆ (6) ಏಕತೆ ಮತ್ತು (7) ವಿಶ್ವವ್ಯಾಪಕತೆ.

ನಮ್ಮ ಮೂರು ರಕ್ಷಣಾ ಪಡೆಗಳ ಜೊತೆಗೆ ಎರಡನೇ ಸಾಲಿನ ರಕ್ಷಣಾ ಪಡೆಗಳಿಂದ ರಾಷ್ಟ್ರ ಸುರಕ್ಷಿತವಾಗಿದೆ. ನಮ್ಮ ಸೈನಿಕರಿಗೆ ಬೆಂಬಲ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಪರಮವೀರಚಕ್ರ, ಮಹಾವೀರಚಕ್ರ, ವೀರಚಕ್ರ ಮುಂತಾದ ಪ್ರಶಸ್ತಿಗಳನ್ನು ಸೈನಿಕರಿಗೆ ನೀಡಲಾಗುತ್ತಿದೆ. ಇಂತಹ ಪ್ರಶಸ್ತಿಗಳು ಶಾಂತಿ ಸಮಯದಲ್ಲಿ ನೀಡುವ ಅಶೋಕ ಚಕ್ರಕ್ಕೆ ಸರಿಸಮನಾಗಿರುತ್ತದೆ.

**ರಕ್ಷಣಾ ಪಡೆಗಳು ಮತ್ತು ಅಂತರರಾಷ್ಟ್ರೀಯ ಶಾಂತಿ :** ನಮ್ಮ ಸೇನಾಪಡೆಗಳು ಕೇವಲ ರಾಷ್ಟ್ರರಕ್ಷಣೆಗೆ ಮಾತ್ರ ಸೀಮಿತವಾಗಿರದೆ ವಿದೇಶಗಳಲ್ಲಿ ಶಾಂತಿ ಸ್ಥಾಪನಾ ಕಾರ್ಯಗಳನ್ನು ಮಾಡುವುದರ ಮೂಲಕ ಗೌರವಕ್ಕೆ ಪಾತ್ರವಾಗಿವೆ. ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ನಮ್ಮ ಸೇನಾಪಡೆಗಳು ಗಾಝಾ, ಕೊರಿಯಾ, ಕಾಂಗೋ,

©KTBS Not to be republished

ಶ್ರೀಲಂಕಾ ಮುಂತಾದ ದೇಶಗಳಲ್ಲಿ ಸೇವೆ ಮಾಡಿ ಹೆಸರು ಗಳಿಸಿರುತ್ತವೆ. ಬಾಂಗ್ಲಾದೇಶ ಸ್ವಾತಂತ್ರ್ಯ ಗಳಿಸುವಲ್ಲಿ ನಮ್ಮ ಸೇನಾಪಡೆಗಳ ಪಾತ್ರ ಪ್ರಮುಖವಾಗಿತ್ತು.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ನಮ್ಮ ರಕ್ಷಣಾ ನೀತಿಯ ಮುಖ್ಯ ಗುರಿ ________________ ಕಾಪಾಡುವುದಾಗಿದೆ.
2. ನಮ್ಮ ಮೂರು ಸೇನಾಪಡೆಗಳ ಪ್ರಧಾನ ದಂಡನಾಯಕರು ____________ .
3. ಭೂ ಸೇನಾ ಮುಖ್ಯಸ್ಥರನ್ನು ____________ ಎಂದು ಕರೆಯಲಾಗುತ್ತದೆ.
4. ರಕ್ಷಣಾ ಸಚಿವಾಲಯದ ಪ್ರಧಾನ ಕಛೇರಿ ______________ ಯಲ್ಲಿದೆ.
5. ಹಿಂದೂಸ್ಥಾನ್ ಹಡಗು ಕಾರ್ಖಾನೆ _______________ ನಲ್ಲಿದೆ.
6. ಗಡಿ ಭದ್ರತಾ ಪಡೆಯ ತರಬೇತಿ ಕೇಂದ್ರ ______________ ದಲ್ಲಿದೆ.
7. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯು _______________ ರಲ್ಲಿ ಸ್ಥಾಪನೆಯಾಯಿತು.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಕಾರವಾರದ ಬಳಿ ಇರುವ ನೌಕಾನೆಲೆಯನ್ನು ಏನೆಂದು ಕರೆಯಲಾಗುತ್ತದೆ ?
2. ನಮ್ಮ ರಕ್ಷಣಾ ಸಚಿವಾಲಯದ ನಾಲ್ಕು ಇಲಾಖೆಗಳಾವುವು ?
3. ಭಾರತದ ಭೂಸೇನಾ ರಚನೆಯನ್ನು ವಿವರಿಸಿ.
4. ಭಾರತೀಯ ಭೂಸೇನೆ ಕಮಾಂಡ್‌ಗಳಾವುವು ?
5. ಭಾರತೀಯ ವಾಯುದಳದ ಕಾರ್ಯಗಳನ್ನು ವಿವರಿಸಿ.
6. ಸೇನಾ ನೇಮಕಾತಿಗೆ ಇರಬೇಕಾದ ಅರ್ಹತೆಗಳಾವುವು ?
7. ಎನ್.ಸಿ.ಸಿ. ಯ ಗುರಿಗಳೇನು ? ಅದರ ಸೌಲಭ್ಯಗಳಾವುವು ?
8. ಭಾರತದ ರೆಡ್‌ಕ್ರಾಸ್ ಸಂಸ್ಥೆಯ ಸಂಘಟನೆಯನ್ನು ವಿವರಿಸಿ.

**III. ಚಟುವಟಿಕೆ.**

1. ದೇಶದ ಭದ್ರತೆ ನಮ್ಮ ಸೈನಿಕ ಪಡೆಗಳನ್ನು ಅವಲಂಬಿಸಿದೆ ಎಂಬುದರ ಬಗ್ಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ.
2. ನಿಮಗೆ ಹತ್ತಿರವಿರುವ ರೆಡ್‌ಕ್ರಾಸ್ ಸಂಸ್ಥೆಗೆ ಭೇಟಿ ನೀಡಿರಿ. ಅದು ನಿರ್ವಹಿಸುತ್ತಿರುವ ಕಾರ್ಯಗಳ ಪರಿಚಯ ಮಾಡಿಕೊಳ್ಳಿ.
3. ನಿವೃತ್ತ ಸೈನಿಕರನ್ನು ಶಾಲೆಗೆ ಆಹ್ವಾನಿಸಿ ಅವರಿಂದ ಸೇವಾ ಅನುಭವಗಳನ್ನು ಹಂಚಿಕೊಳ್ಳಿ.

**IV. ಯೋಜಿತ ಕಾರ್ಯ**

1) ನಮ್ಮ ಸೇನಾ ಪಡೆಗಳ ಚಿತ್ರಗಳನ್ನು ತಯಾರಿಸಿ ಶಾಲೆಯಲ್ಲಿ ಹಾಕಿರಿ.
2) ಶಾಲೆಯಲ್ಲಿ ರೆಡ್‌ಕ್ರಾಸ್ ಸಂಸ್ಥೆ ತೆರೆದು ಸಾರ್ವಜನಿಕರಿಗೆ ಸೇವೆ ಮಾಡಿರಿ.
3) ಯುದ್ಧ ವಿಮಾನಗಳು, ಯುದ್ಧ ಹಡಗುಗಳ ಛಾಯಾ ಚಿತ್ರ ಸಂಗ್ರಹಿಸಿ.

◈ ◈ ◈

©KTBS Not to be re published

## ಅಧ್ಯಾಯ – 7

# ರಾಷ್ಟ್ರೀಯ ಭಾವೈಕ್ಯತೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ರಾಷ್ಟ್ರೀಯತೆಯ ಅರ್ಥ
- ದೇಶದ ವಿವಿಧತೆಯಲ್ಲಿ ಏಕತೆಯನ್ನು ಮೂಡಿಸುವ ಅಂಶಗಳು
- ರಾಷ್ಟ್ರೀಯ ಭಾವೈಕ್ಯತೆ ಸಾಧಿಸುವಲ್ಲಿನ ಅಂಶಗಳು
- ರಾಷ್ಟ್ರೀಯ ಭಾವೈಕ್ಯತೆ ಸಾಧಿಸುವಲ್ಲಿನ ಅಡೆ–ತಡೆಗಳು

**ರಾಷ್ಟ್ರೀಯತೆ :** ರಾಷ್ಟ್ರ ಎಂಬ ಪದದಿಂದ ರಾಷ್ಟ್ರೀಯತೆ ಎನ್ನುವ ಪದ ಬಂದಿದೆ. ಆಧುನಿಕ ವಿದ್ವಾಂಸರ ಅಭಿಪ್ರಾಯದಲ್ಲಿ ರಾಷ್ಟ್ರೀಯತೆಯನ್ನು ನಿರ್ಧರಿಸುವ ಅಂಶಗಳೆಂದರೆ – ತಾವು ವಾಸಿಸುವ ನೆಲವನ್ನು ಮಾತೃಭೂಮಿ ಎಂದು ತಿಳಿಯುವ ಜನಸಮೂಹ, ಆ ಜನ ಸಮೂಹದಲ್ಲಿ ಪರಸ್ಪರ ಸೋದರತೆಯ ಭಾವನೆ ಮತ್ತು ರಾಷ್ಟ್ರದ ಸುಖ–ದುಃಖಗಳಲ್ಲಿ ಸಮಾನ ಭಾಗಿತ್ವ. ಇಂತಹ ಜನರನ್ನು ರಾಷ್ಟ್ರೀಯರು ಮತ್ತು ಈ ಭಾವನೆಯನ್ನು ರಾಷ್ಟ್ರೀಯತೆ ಎನ್ನುತ್ತಾರೆ.

ಅನಾದಿಕಾಲದಿಂದ ಭಾರತದ ಉದ್ದಗಲಕ್ಕೂ ವಾಸಿಸುವ ಜನರಲ್ಲಿ ಇಂತಹ ರಾಷ್ಟ್ರೀಯ ಭಾವನೆ ಇರುವುದನ್ನು ಕಾಣುತ್ತೇವೆ. ನಮ್ಮ ದೇಶದ ಮೇಲೆ ಆದ ವಿದೇಶಿಯರ ಆಕ್ರಮಣಗಳ ವಿರುದ್ಧ ಹೋರಾಡಲು ಪ್ರೇರೇಪಿಸಿದ್ದು ಈ ರಾಷ್ಟ್ರೀಯ ಭಾವನೆಯಾಗಿದೆ. ಬ್ರಿಟಿಷರ ವಿರುದ್ಧ ನಮ್ಮ ಹೋರಾಟದ ಮೂಲಸ್ಫೂರ್ತಿಯೇ ಇದಾಗಿದೆ.



**ರಾಷ್ಟ್ರೀಯ ಭಾವೈಕ್ಯತೆ :** ಒಂದು ರಾಷ್ಟ್ರದ ಜನರು ನಾವೆಲ್ಲಾ ಒಂದೇ ಎನ್ನುವ ಭಾವನೆಯೇ ರಾಷ್ಟ್ರೀಯ ಭಾವೈಕ್ಯತೆ. ಇದರ ಅರ್ಥ ವಿವಿಧ ಜಾತಿ, ಧರ್ಮ, ಪ್ರಾದೇಶಿಕತೆ ಮತ್ತು ವಿವಿಧ ಭಾಷೆಗಳನ್ನು ಮಾತನಾಡುವ ಜನರು ನಾವೆಲ್ಲಾ ಒಂದೇ ಎಂದು ಗುರುತಿಸಿಕೊಳ್ಳುವುದು. ಈ ರೀತಿಯ ಐಕ್ಯತೆಯು ಶಕ್ತಿಯುತವಾದ ರಾಷ್ಟ್ರವನ್ನು ನಿರ್ಮಿಸಲು ಬಹಳ ಮುಖ್ಯವಾಗಿದೆ.

ಭಾರತವು ವಿಶಾಲವಾದ ರಾಷ್ಟ್ರವಾಗಿದ್ದು, ಪ್ರಪಂಚದ ಜನಸಂಖ್ಯೆಯಲ್ಲಿ ಎರಡನೇ ಸ್ಥಾನ ಪಡೆದಿದೆ. ಈ ದೇಶದಲ್ಲಿ ಸುಮಾರು 1652 ಭಾಷೆ ಮತ್ತು ಉಪಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಇದರಲ್ಲಿ 22 ಭಾಷೆಗಳನ್ನು ಅಧಿಕೃತ ಭಾಷೆಗಳನ್ನಾಗಿ ನಮ್ಮ ಸಂವಿಧಾನ ಅಂಗೀಕರಿಸಿದೆ. ನಮ್ಮ ದೇಶದಲ್ಲಿ ಹಲವಾರು ಧರ್ಮ ಮತ್ತು ಮತಗಳು (ಹಿಂದೂ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ, ಸಿಖ್ ಮತ್ತು ಪಾರ್ಸಿ) ಆಚರಣೆಯಲ್ಲಿರುವುದು ಒಂದು ಅದ್ವಿತೀಯ ಲಕ್ಷಣವಾಗಿದೆ. ಅದೇ ರೀತಿ ವಿವಿಧ ಉಡುಗೆ, ಆಹಾರ ಪದ್ಧತಿ ಮತ್ತು ಸಾಮಾಜಿಕ ವ್ಯವಸ್ಥೆ ಇದ್ದರೂ ನಾವೆಲ್ಲಾ ಒಂದೇ ಎಂಬ ಭಾವನೆಯುಳ್ಳವರಾಗಿದ್ದೇವೆ. ಭೌಗೋಳಿಕವಾಗಿ ಮತ್ತು ಐತಿಹಾಸಿಕವಾಗಿ ವೈವಿಧ್ಯತೆಯಿಂದ ಕೂಡಿದ್ದರೂ

©KTBS Not to be republished

ರಾಜಕೀಯವಾಗಿ ಒಗ್ಗಟ್ಟಾಗಿ ಪ್ರತಿ ಭಾಗವೂ ಒಂದೇ ಸಂವಿಧಾನದಡಿಯಲ್ಲಿ ನಿರ್ದೇಶಿಸಲ್ಪಡುತ್ತಿದೆ ಮತ್ತು ನಿಯಂತ್ರಿಸಲ್ಪಡುತ್ತದೆ.

**ವೈವಿಧ್ಯತೆಯಲ್ಲಿ ಏಕತೆ:** ಭಾರತವು ತನ್ನ ಅನೇಕ ವೈವಿಧ್ಯತೆಗಳ ನಡುವೆಯೂ ಐಕ್ಯತೆಯ ಮೂಲ ಬುನಾದಿಯನ್ನು ಹೊಂದಿದೆ. ಭೌಗೋಳಿಕ, ಸಾಮಾಜಿಕ, ಭಾಷೆ, ಸಂಪ್ರದಾಯ, ರಾಜಕೀಯ, ಧಾರ್ಮಿಕ, ಜನಾಂಗೀಯ ಹಾಗೂ ಸಂಸ್ಕೃತಿಗಳ ನಡುವೆ ಅನೇಕ ವೈವಿಧ್ಯತೆಯನ್ನು ಹೊಂದಿದ್ದರೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಭಾರತೀಯರ ಜೀವನದ ವಿಧಾನದಲ್ಲಿ ಏಕತೆಯ ಅಂಶಗಳು ಅಡಗಿವೆ. ಏಕರೀತಿಯ ಆಡಳಿತ ವ್ಯವಸ್ಥೆ, ಸುಲಭ ಸಂಪರ್ಕ ಸಾಧನಗಳು, ಆಧುನಿಕ ಶಿಕ್ಷಣ, ಸ್ವಾಸ್ಥ್ಯ, ಕಾನೂನು ಪದ್ಧತಿಗಳು ಮುಂತಾದುವು ಏಕತೆಯ ಅಂಶವನ್ನು ಮೂಡಿಸಿವೆ.

## ವಿವಿಧತೆಯಲ್ಲಿ ಐಕ್ಯತೆ ಮೂಡಿಸುವ ಅಂಶಗಳು

**ಭೌಗೋಳಿಕ ಐಕ್ಯತೆ :** ಭಾರತವು ವಿಶ್ವದ ಇತರ ರಾಷ್ಟ್ರಗಳಿಂದ ಬೇರ್ಪಡಿಸಿರುವ ಹಿಮಾಲಯ ಪರ್ವತ, ಬಂಗಾಳ ಕೊಲ್ಲಿ, ಹಿಂದೂ ಮಹಾಸಾಗರ, ಅರಬ್ಬೀ ಸಮುದ್ರ ಇವುಗಳು ಭಾರತವನ್ನು ನೈಸರ್ಗಿಕವಾಗಿ ಐಕ್ಯಗೊಳ್ಳುವಂತೆ ಮಾಡಿವೆ. ಭೌಗೋಳಿಕವಾಗಿ ವಾಸಿಸುವ ಜನರೆಲ್ಲರೂ ರಾಷ್ಟ್ರಗೀತೆಯನ್ನು ಹಾಡುವುದು ರಾಷ್ಟ್ರದ ಐಕ್ಯತೆಯನ್ನು ಸೂಚಿಸುತ್ತದೆ.

**ರಾಜಕೀಯ ಐಕ್ಯತೆ :** ಅನಾದಿ ಕಾಲದಿಂದಲೂ ಏಕರೂಪತೆಯನ್ನು ಹೊಂದಿರುವ ಭಾರತ ಇಂದಿಗೂ ಒಂದೇ ಸಂವಿಧಾನ, ಏಕ ರೀತಿಯ ಕಾನೂನು, ಶಿಕ್ಷಣ ಕ್ರಮ, ಏಕೀಕೃತ ನ್ಯಾಯಾಂಗ ವ್ಯವಸ್ಥೆ, ಬಲಿಷ್ಠ ಕೇಂದ್ರ ಸರ್ಕಾರದ ಆಡಳಿತಗಳಿಂದ ರಾಜಕೀಯ ಐಕ್ಯತೆಯನ್ನು ಸಾಧಿಸಿದೆ. ನಾವು ಭಾರತೀಯರೆಂಬ ರಾಜಕೀಯ ಗುರುತಿಸುವಿಕೆ, ಜೊತೆಗೆ ಶಿಕ್ಷಣ, ಸ್ವಾಸ್ಥ್ಯ ಕಾನೂನು, ಸಂಪರ್ಕ ಸಾಧನ ಮುಂತಾದ ಕ್ಷೇತ್ರಗಳು ಸರ್ವಮಾನ್ಯ ಮಾನದಂಡಗಳಾಗಿವೆ.

**ಧಾರ್ಮಿಕ ಐಕ್ಯತೆ :** ಭಾರತವು ಅನೇಕ ಮತಗಳಿಂದ ಕೂಡಿದ್ದು, ಹಿಂದೂ, ಬೌದ್ಧ, ಜೈನ, ಸಿಖ್, ಕ್ರಿಶ್ಚಿಯನ್, ಇಸ್ಲಾಂ, ಪಾರ್ಸಿ ಮುಂತಾದ ಮತಗಳು ಇಲ್ಲಿವೆ. ಪ್ರತಿಯೊಂದು ಮತವೂ ತನ್ನದೇ ಆದ ವೈಶಿಷ್ಠತೆಯನ್ನು ಹೊಂದಿದೆ. ಒಂದು ಮತದ ಜನತೆಯನ್ನು ಇನ್ನೊಂದು ಮತದ ಜನತೆಯು ತಮ್ಮೊಡನೆ, ಭಾಗವಹಿಸುವುದರ ಮೂಲಕ ಐಕ್ಯತೆಯನ್ನು ಮೂಡಿಸುವುದೇ ಅಲ್ಲದೆ, ಸರ್ವಮತ ಸಮನ್ವಯತೆ ಅಥವಾ ಭಾರತದಲ್ಲಿ ಎಲ್ಲ ಮತೀಯರಿಗೂ ತಮ್ಮ ತಮ್ಮ ಮತ ಪಾಲಿಸುವ ಸಮಾನ ಹಕ್ಕು ಇದೆ.

**ಭಾಷಾ ಐಕ್ಯತೆ :** ಭಾರತವು ವಿವಿಧ ಭಾಷೆಗಳ ತವರೂರಾಗಿದೆ. ವಿವಿಧ ಭಾಷೆಗಳನ್ನು ಮಾತನಾಡುವ ಜನರು ಭಾರತದಲ್ಲಿದ್ದಾರೆ. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಭಾಷೆ, ಸಾಹಿತ್ಯವನ್ನು ಹೊಂದಿದೆ. ಆದರೂ ಭಾಷೆಯಿಂದ ಐಕ್ಯತೆಗೆ ಧಕ್ಕೆ ಬಂದಿಲ್ಲ. ಒಂದು ಭಾಷೆಯ ಜನರು ಇತರೆ ಭಾಷೆಗಳನ್ನು ಗೌರವಿಸುತ್ತಾರೆ.

**ಸಾಂಸ್ಕೃತಿಕ ಐಕ್ಯತೆ :** ಭಾರತದಲ್ಲಿ ವಿವಿಧ ಜನಾಂಗಗಳು, ಧರ್ಮಗಳಿದ್ದರೂ ಸಾಂಸ್ಕೃತಿಕ ಐಕ್ಯತೆಯನ್ನು ಎಲ್ಲೆಲ್ಲೂ ಕಾಣಬಹುದು. ವಿವಿಧ ಭಾಗದ ಜನರು ತಮ್ಮದೇ ಆದ ಸಂಪ್ರದಾಯ, ಆಚಾರ ವಿಚಾರಗಳು, ವೇಷಭೂಷಣಗಳು, ಆಹಾರ ಪದ್ಧತಿ, ಜೀವನ ಶೈಲಿ ಮುಂತಾದ ಸಾಂಸ್ಕೃತಿಕ ವೈವಿಧ್ಯತೆ ಇದ್ದರೂ ಸಾಮ್ಯತೆಯನ್ನು ಮತ್ತು ಸಾಮರಸ್ಯವನ್ನು ಹೊಂದಿದ್ದಾರೆ.

## ರಾಷ್ಟ್ರೀಯ ಐಕ್ಯತೆಯನ್ನು ವೃದ್ಧಿಸುವ ಅಂಶಗಳು (ಪ್ರೋತ್ಸಾಹಿಸುವ ಅಂಶಗಳು)

**ಜಾತ್ಯತೀತತೆ (ಮತನಿರಪೇಕ್ಷ):** ಭಾರತ ಒಂದು ಜಾತ್ಯತೀತ ರಾಷ್ಟ್ರ. ಇದರ ಅರ್ಥ ರಾಷ್ಟ್ರದ ಪ್ರತಿಯೊಬ್ಬ

©KTBS Not to be republished

ಪೌರನು ತನ್ನದೇ ಆದ ಮತವನ್ನು ಸ್ವೀಕರಿಸುವ, ಆಚರಿಸುವ ಪ್ರಚಾರ ಮಾಡುವ ಧಾರ್ಮಿಕ ಹಕ್ಕನ್ನು ಹೊಂದಿದ್ದಾನೆ. ಸರ್ವಧರ್ಮ ಸಮನ್ವಯತೆಯಿದೆ. ಆದುದರಿಂದ ಇದು ರಾಷ್ಟ್ರದ ಐಕ್ಯತೆಯನ್ನು ಪ್ರೋತ್ಸಾಹಿಸುತ್ತದೆ.


**ಪ್ರಜಾಪ್ರಭುತ್ವ :** ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಎಲ್ಲಾ ಪೌರರು ದೇಶದ ಕಾನೂನಿನಡಿಯಲ್ಲಿ ಸಮಾನರಾಗಿರುತ್ತಾರೆ. ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ತ್ವಗಳಲ್ಲಿ ರಾಜ್ಯದ ಎಲ್ಲಾ ಪೌರರು ಒಂದೇ ಎಂದು ಪರಿಗಣಿಸಲ್ಪಟ್ಟಿದೆ. ಸಮಾನವಾಗಿ, ಜೀವನ ನಿರ್ವಹಿಸಲು ಅವಕಾಶ ನೀಡಿದೆ. ಭಾಷೆ, ಸಂಸ್ಕೃತಿ, ಪ್ರದೇಶ ಮುಂತಾದ ಯಾವುದೇ ಅಂಶಗಳ ಆಧಾರದ ಮೇಲೆ ತಾರತಮ್ಯ ಮಾಡುವುದನ್ನು ನಿಷೇಧಿಸಿದೆ. ಇದು ಭಾರತ ಒಂದು ಐಕ್ಯ ರಾಷ್ಟ್ರವಾಗಿ ಬೆಳೆಯಲು ಪ್ರೋತ್ಸಾಹಿಸಿದೆ.

**ರಾಷ್ಟ್ರೀಯ ಹಬ್ಬಗಳು :** ದೇಶದ ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಗಾಂಧಿ ಜಯಂತಿ ಮುಂತಾದುವುಗಳು ಭಾರತೀಯರನ್ನು ಒಂದುಗೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಹಬ್ಬಗಳನ್ನು ಎಲ್ಲಾ ಭಾರತೀಯ ಪೌರರು ಪ್ರತಿಯೊಂದು ಭಾಗದಲ್ಲೂ ಆಚರಿಸುತ್ತಾರೆ. ಯಾವುದೇ ಭಾಷೆ, ಮತ್ತು ಸಂಸ್ಕೃತಿಯನ್ನು ಗಣನೆಗೆ ತೆಗೆದುಕೊಳ್ಳದೆ ಆಚರಿಸುವುದರಿಂದ ನಮ್ಮ ಹಬ್ಬಗಳು ನಮ್ಮ ಏಕ ರಾಷ್ಟ್ರೀಯತೆಯನ್ನು ವೃದ್ಧಿಸುತ್ತವೆ.

**ನಮ್ಮ ರಾಷ್ಟ್ರೀಯ ಲಾಂಛನಗಳು :** ನಮ್ಮ ರಾಷ್ಟ್ರೀಯ ಚಿನ್ಹೆಗಳು ಅಥವಾ ರಾಷ್ಟ್ರಲಾಂಛನ, ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರೀಯ ಹೂ, ರಾಷ್ಟ್ರ ಪಕ್ಷಿ, ರಾಷ್ಟ್ರೀಯ ಪ್ರಾಣಿ ಮುಂತಾದುವು ಸಹ ನಾವೆಲ್ಲಾ ಒಂದು ಎಂದು ಗುರುತಿಸಿಕೊಳ್ಳಲು ಸಹಾಯಕವಾಗಿವೆ. ಈ ಅಂಶವೂ ಸಹ ಆಚರಣೆಯ ಸಂದರ್ಭದಲ್ಲಿಯಾಗಲೀ ಅಥವಾ ವಿಪತ್ತಿನ ಸಂದರ್ಭದಲ್ಲಾಗಲೀ ನಾವೆಲ್ಲಾ ಒಂದು ಎಂದು ಒಗ್ಗೂಡಿಸುವ ಆರೋಗ್ಯಕರ ಅಂಶವಾಗಿದೆ.


ರಾಷ್ಟ್ರ ಲಾಂಛನ


ರಾಷ್ಟ್ರ ಪಕ್ಷಿ – ನವಿಲು


ರಾಷ್ಟ್ರ ಪ್ರಾಣಿ – ಹುಲಿ


ರಾಷ್ಟ್ರೀಯ ಹೂ – ಕಮಲ

**ಪರಸ್ಪರ ಅನ್ಯೋನ್ಯತೆ:** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಮಾನ್ಯ ಧ್ಯೇಯೋದ್ದೇಶಗಳ ಮೂಲಕ ಕಾರ್ಯ ಸಾಧನೆ ಮಾಡುತ್ತವೆ. ರಾಷ್ಟ್ರದ ಪ್ರತಿಯೊಂದು ಭಾಗವೂ ಇನ್ನೊಂದು ಭಾಗದ ಮೇಲೆ ಅವಲಂಬಿತವಾಗಿವೆ. ಆಯಾ ಭಾಗದ ಉತ್ಪಾದನೆಗಳು ಆರ್ಥಿಕ ಬೆಳವಣಿಗೆಯನ್ನು ಒಳಗೊಂಡಿರುತ್ತದೆ. ಉದಾ :– ಪಂಜಾಬ್‌ನಲ್ಲಿ ಗೋಧಿ ಬೆಳೆದರೆ ತಮಿಳುನಾಡಿನಲ್ಲಿ ಮಾರಾಟವಾಗುತ್ತದೆ. ಹತ್ತಿ ಗುಜರಾತ್‌ನಲ್ಲಿ ಬೆಳೆದರೆ ಬಿಹಾರ್‌ನಲ್ಲಿ ಮಾರಾಟವಾಗುತ್ತದೆ. ಆದುದರಿಂದ ಯಾವುದೇ ಭಾಗವು ಇತರೆ ಭಾಗದ ಮೇಲೆ ಅವಲಂಬಿಸಬೇಕಾಗುತ್ತದೆ. ಯಾವುದು ಸಂಪೂರ್ಣವಾಗಿ ಸ್ವಾವಲಂಬಿಯಾಗದು. ಈ ಅಂಶವೂ ಕೂಡ ನಾವೆಲ್ಲಾ ಒಂದೇ ರಾಷ್ಟ್ರದವರು ಎಂಬುದನ್ನು ಸೂಚಿಸುತ್ತದೆ.

Not to be published ©KTBS

ಇವಲ್ಲದೆ ಇತರೆ ಅಂಶಗಳಾದ ಸಂಪರ್ಕ ವಿಧಾನ, ಸಮೂಹ ಮಾಧ್ಯಮಗಳು, ನೈಸರ್ಗಿಕ ಅಂಶಗಳು, ವಿವಿಧ ಸಂಸ್ಕೃತಿ, ಮುಂತಾದುವುಗಳು ಇಡೀ ರಾಷ್ಟ್ರದ ಜನತೆ ಒಂದೇ ಎಂಬ ಐಕ್ಯತೆಯನ್ನು ಬಿಂಬಿಸುತ್ತವೆ.

**ರಾಷ್ಟ್ರೀಯ ಐಕ್ಯತೆಗಿರುವ ಅಡೆ–ತಡೆಗಳು**

1. ದೇಶದಲ್ಲಿ ವಿವಿಧ ಕೋಮುಗಳ ಜನರು, ತಮ್ಮ ಕೋಮುಗಳಿಗೆ / ಮತಗಳಿಗೆ ಸಂಬಂಧಿಸಿದಂತೆ ಸಂಘಟನೆಗಳನ್ನು ಹೊಂದಿ, ತಮ್ಮ ತಮ್ಮ ಕೋಮುಗಳನ್ನು ಸಂಘಟಿಸುವುದು ಮತ್ತು ಕೋಮುಗಳಿಗೆ ಸಂಬಂಧಿಸಿದ ಅಂಶಗಳನ್ನು ತೀವ್ರವಾಗಿ ಪ್ರತಿಪಾದಿಸುತ್ತಿರುವುದು ರಾಷ್ಟ್ರೀಯ ಸಮಗ್ರತೆಯನ್ನು ಒಡೆಯುವ ಪ್ರಯತ್ನವಾಗಿದೆ.
2. ದೇಶದಲ್ಲಿ ಹಲವಾರು ಭಾಷೆಗಳು ಅಸ್ತಿತ್ವದಲ್ಲಿದ್ದು ಅಂಥ ಪ್ರಾದೇಶಿಕ ಭಾಷಾಭಿಮಾನವು ಬೆಳೆಯುತ್ತಿದೆ.
3. ದೇಶದಲ್ಲಿ ಹಲವಾರು ಜಾತಿಗಳು, ಜಾತಿ ಸಂಘಟನೆಗಳನ್ನು ರೂಪಿಸಿಕೊಂಡು, ಜನರಲ್ಲಿ ಜಾತಿಯ ಮನೋಭಾವ ಹೆಚ್ಚಿಸುತ್ತಿರುವುದು.
4. ನಮ್ಮ ರಾಜ್ಯ, ನಮ್ಮ ಪ್ರದೇಶ ಎಂಬ ಪ್ರಾಂತೀಯ ಮನೋಭಾವನೆಯು ರಾಷ್ಟ್ರೀಯ ಐಕ್ಯತೆಗೆ ಸಮಸ್ಯೆಯಾಗುತ್ತಿದೆ.
5. ಅಂತರ ರಾಜ್ಯಗಳಲ್ಲಿನ ಗಡಿ ವಿವಾದ, ಜಲ ವಿವಾದ, ಭಾಷಾ ವಿವಾದಗಳು ಕೂಡಾ ರಾಷ್ಟ್ರೀಯ ಸಮಗ್ರತೆಗೆ ಸಮಸ್ಯೆಯಾಗುತ್ತಿವೆ.

> **ಚಟುವಟಿಕೆ:**
> *ನಿಮ್ಮ ಶಾಲೆಯಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ವೃದ್ಧಿಸಬಹುದಾದ ಸಂದರ್ಭಗಳ ಬಗ್ಗೆ ಟಿಪ್ಪಣಿ ಬರೆಯಿರಿ.*

ಈ ಮೇಲಿನ ಅಂಶಗಳಷ್ಟೇ ಅಲ್ಲದೆ ಭಯೋತ್ಪಾದನೆ, ಅಸ್ಪೃಶ್ಯತೆ, ರಾಜಕಾರಣಿಗಳಲ್ಲಿನ ಇಚ್ಛಾಶಕ್ತಿಯ ಕೊರತೆ, ಜನರಲ್ಲಿನ ಅಜಾಗರೂಕತೆ ಮುಂತಾದುವುಗಳೆಲ್ಲವೂ ರಾಷ್ಟ್ರೀಯ ಐಕ್ಯತೆಗೆ ಅಡೆತಡೆಗಳಾಗಿವೆ. ಆದರೂ ಈಗಾಗಲೇ ತಿಳಿದಿರುವಂತೆ ವಿವಿಧ ಮತ ವರ್ಗಗಳು, ಜನಾಂಗದವರಿದ್ದು ಪ್ರತಿಯೊಂದು ವರ್ಗವು ಇನ್ನೊಂದು ವರ್ಗವನ್ನು, ಮತ ಬೋಧಕರನ್ನು ಗೌರವಿಸಬೇಕು, ಪ್ರೀತಿಸಬೇಕು. ಪ್ರತಿಯೊಂದು ಧರ್ಮದ ಪವಿತ್ರ ದಿನಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಪರಸ್ಪರ ಸಹಕಾರ, ಸಹಾಯ ಮತ್ತು ಅಭಿನಂದನೆಗಳಿರಬೇಕು. ಯಾವುದೇ ಒಂದು ಮತೀಯ ಗುಂಪು ಇತರೆ ಮತದ ಗುಂಪಿನ ಬಗ್ಗೆ ಉದಾಸೀನತೆ ಹೊಂದಿರಬಾರದು. ವೃತ್ತಿ ಶಿಕ್ಷಣವನ್ನು ಹೆಚ್ಚು ಹೆಚ್ಚು ನೀಡಬೇಕು. ಶಾಲೆ ಬಿಡುವ ಮಕ್ಕಳನ್ನು ನಿಯಂತ್ರಿಸಬೇಕು. ಹೀಗೆ ಜವಾಬ್ದಾರಿಯುತ ಪ್ರಜೆಗಳಾದ ನಾವು ಇತರೆ ಭಾಷೆಗಳಿಗೆ, ಸಂಸ್ಕೃತಿಗೆ, ಮತಗಳಿಗೆ ಸೂಕ್ತ ಗೌರವ ಕೊಡಬೇಕು. ಆಗಲೇ ರಾಷ್ಟ್ರದಲ್ಲಿ ನೈಜ ಸಮಗ್ರತೆ ಮೂಡುವುದು.

## ಅಭ್ಯಾಸಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಭಾರತ ಒಂದು ಜಾತ್ಯಾತೀತ ರಾಷ್ಟ್ರವಾಗಿದ್ದು ___________ ವಿರೋಧಿ ರಾಷ್ಟ್ರವಲ್ಲ.
2. ಕೋಮುವಾದವು ನಮ್ಮ ___________ ಗೆ ಒಂದು ದೊಡ್ಡ ಅಪಾಯವಾಗಿದೆ.
3. ಗಣರಾಜ್ಯೋತ್ಸವವು ___________ ಹಬ್ಬಗಳಲ್ಲಿ ಒಂದಾಗಿದೆ.

©KTBS Not to be republished

4. ಭಾರತವು ರಾಷ್ಟ್ರೀಯ ಭಾಷೆಗಳನ್ನಾಗಿ ಅಂಗೀಕರಿಸಿರುವ ಭಾಷೆಗಳ ಸಂಖ್ಯೆ ________ .

5. ನಮ್ಮ ರಾಷ್ಟ್ರೀಯ ಪ್ರಾಣಿ ____________ .

**II. ಈ ಕೆಳಗಿನ ಪ್ರಶ್ನೆಗಳಿಗೆ ಸಹಪಾಠಿಗಳ ಜೊತೆ ಚರ್ಚಿಸಿ ಉತ್ತರಿಸಿ.**

1. ರಾಷ್ಟ್ರೀಯತೆ ಎಂದರೇನು ?
2. ರಾಷ್ಟ್ರೀಯ ಐಕ್ಯತೆ ಎಂದರೇನು ?
3. ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವ ಅಂಶಗಳಾವುವು ?
4. ರಾಷ್ಟ್ರೀಯ ಐಕ್ಯತೆಯನ್ನು ಪ್ರೋತ್ಸಾಹಿಸುವ ಅಂಶಗಳಾವುವು ?
5. ರಾಷ್ಟ್ರೀಯ ಐಕ್ಯತೆಗೆ ಇರುವ ಅಡೆತಡೆಗಳನ್ನು ನಿವಾರಿಸಲು ನಿಮ್ಮ ಸಲಹೆಗಳೇನು ?

**III. ಚಟುವಟಿಕೆ.**

1. ವೈವಿಧ್ಯತೆಯಲ್ಲಿ ಏಕತೆ ಮೂಡಿಸುವ ಚಿತ್ರಗಳನ್ನು ತಯಾರಿಸಿ ಶಾಲೆಯಲ್ಲಿ ಹಾಕಿರಿ.
2. ನಿಮ್ಮ ಸ್ಥಳದಲ್ಲಿ ವಿವಿಧ ಧರ್ಮ/ಮತದವರು ಆಚರಿಸುವ ಹಬ್ಬಗಳ ರೀತಿಯ ಬಗ್ಗೆ ಸಂಬಂಧಿಸಿದವರಿಂದ ಮಾಹಿತಿ ಸಂಗ್ರಹಿಸಿ ಬರೆಯಿರಿ.

**IV. ಯೋಜಿತ ಕಾರ್ಯ**

1. ರಾಷ್ಟ್ರೀಯ ಐಕ್ಯತೆ ಮೂಡಿಸುವ ಛಾಯಾಚಿತ್ರಗಳನ್ನು ಸಂಗ್ರಹಿಸಿರಿ.
2. ರಾಷ್ಟ್ರೀಯ ಐಕ್ಯತೆಯನ್ನು ಪ್ರೋತ್ಸಾಹಿಸುವ ಧರ್ಮಗ್ರಂಥಗಳನ್ನು ಸಂಗ್ರಹಿಸಿರಿ.

©KTBS Not to be republished

# ಅಧ್ಯಾಯ –3

# ಸಾಮಾಜಿಕ ಬದಲಾವಣೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಸಾಮಾಜಿಕ ಬದಲಾವಣೆಯ ಅರ್ಥ*
- *ಹೊಂದಾಣಿಕೆ*
- *ಸಹಜೀವನ*
- *ಸಂಘರ್ಷ*
- *ಸಹಕಾರ*
- *ಸ್ಪರ್ಧೆ*

**ಸಾಮಾಜಿಕ ಬದಲಾವಣೆ ಅರ್ಥ :**

ಬದಲಾವಣೆ ಪ್ರಕೃತಿಯ ನಿಯಮ. ಮಾನವ ಸಮಾಜದ ವಿಕಾಸವಾಗಿರುವುದೇ ಕಾಲಾನಂತರದಲ್ಲಿ ಉಂಟಾದ ಜೈವಿಕ ಬದಲಾವಣೆಗಳಿಂದ. ಸಾಮಾಜಿಕ ಬದಲಾವಣೆ ಎನ್ನುವುದು ಮಾನವ ನಡವಳಿಕೆಗಳಲ್ಲಿ, ಸಾಂಸ್ಕೃತಿಕ ಮೌಲ್ಯಗಳಲ್ಲಿ, ಸಾಮಾಜಿಕ ನೀತಿ–ನಿಯಮಗಳಲ್ಲಿ ಉಂಟಾಗಿರುವ 'ಮಹತ್ವದ' ಮಾರ್ಪಾಡುಗಳನ್ನು ಅವಲಂಬಿಸುತ್ತದೆ. ಹಾಗೆಯೇ ಸಾಮಾಜಿಕ ಪ್ರಕ್ರಿಯೆಗಳ ರೂಪಾವಳಿಗಳನ್ನು ಮತ್ತು ಸಾಮಾಜಿಕ ಸಾಂಸ್ಕೃತಿಕ ವಿಕಾಸವನ್ನು ಸೂಚಿಸುತ್ತದೆ. ಸಾಮಾಜಿಕ ಬದಲಾವಣೆಯು ಸಾಮಾಜಿಕ–ಆರ್ಥಿಕ ರಚನೆಯಲ್ಲಿನ ಬದಲಾವಣೆಗಳನ್ನು ವಿವರಿಸುತ್ತದೆ. ಬದಲಾವಣೆಯ ವೇಗವನ್ನು ಶೈಕ್ಷಣಿಕ, ಆರ್ಥಿಕ, ವೈಜ್ಞಾನಿಕ ಅಥವಾ ತಾಂತ್ರಿಕ ಅವಿಷ್ಕಾರಗಳು ಹೆಚ್ಚಿಸುತ್ತವೆ. ಅಂದರೆ ಮಾನವನ ಚಲನ ಸ್ಥಿತಿಗೆ ಸಾಮಾಜಿಕ ಬದಲಾವಣೆಯೇ ಪ್ರಮುಖ ಕಾರಣ ಎಂದು ಹೇಳಬಹುದು.

ಬದಲಾವಣೆ ಎನ್ನುವುದು ಪ್ರಮುಖವಾಗಿ ಎರಡು ಮೂಲಗಳಿಂದ ನಡೆಯುತ್ತದೆ. ಒಂದು, ಪ್ರಾಕೃತಿಕವಾದ ಕಾರಣಗಳು, ಪ್ರಕೃತಿ ವಿಕೋಪಗಳು, ಭೂಕಂಪಗಳು, ಪ್ರವಾಹಗಳು, ಇತ್ಯಾದಿಗಳಿಂದ ಸಮಾಜದ ಬದುಕಿನಲ್ಲಿ ಅನಿವಾರ್ಯ ಬದಲಾವಣೆ ಉಂಟಾಗುತ್ತದೆ. ಪ್ರಕೃತಿಗೆ ಹೊಂದಿಕೊಳ್ಳುವಂತೆ ಈ ಬದಲಾವಣೆಗಳು ಸಂಭವಿಸುತ್ತವೆ. ಉದಾಹರಣೆಗೆ ಇತ್ತೀಚೆಗೆ ಜಾಗತಿಕ ತಾಪಮಾನದ ಹೆಚ್ಚಳದಿಂದ ಉಂಟಾದ ಅನೇಕ ಪ್ರಾಕೃತಿಕ ಬದಲಾವಣೆಗಳನ್ನು ಗಮನಿಸಬಹುದು.

ಮತ್ತೊಂದು, ಮಾನವನ ಚಲನಶೀಲತೆ ಮತ್ತು ಕ್ರೀಯಾಶೀಲತೆಯಿಂದ ಹೊಸ ಹೊಸ ಅವಿಷ್ಕಾರಗಳ ಮೂಲಕ ಉಂಟಾಗುವ ಬದಲಾವಣೆಗಳು. ಉದಾಹರಣೆಗೆ ಗುಲಾಮಗಿರಿಯ, ಜೀತ ಶೋಷಣೆಗಳ ವಿರುದ್ಧ ಚಳವಳಿಗಳ ಮೂಲಕ ಸ್ವಾತಂತ್ರ್ಯವನ್ನು ಪಡೆಯಲಾಯಿತು. ನಂತರ ಮಹಿಳಾ ಹಕ್ಕು, ದಲಿತರ ಹಕ್ಕು ಮತ್ತು ನಾಗರಿಕ ಹಕ್ಕು ರಕ್ಷಣೆ ಮಾಡಿಕೊಳ್ಳಲು ಹೊಸ ಕಾನೂನುಗಳನ್ನು ಮತ್ತು ಆಡಳಿತ ವ್ಯವಸ್ಥೆಗಳನ್ನು ರೂಪಿಸಿಕೊಳ್ಳಲಾಯಿತು. ಇದು ಸಮಾಜದ ಸಂರಚನೆ ಮತ್ತು ಕಾರ್ಯಗಳ ಸಂಬಂಧಗಳಲ್ಲಿ ಹಲವು ಬದಲಾವಣೆಗಳನ್ನು ತಂದಿದೆ. ಇಂತಹ ಬದಲಾವಣೆಗಳನ್ನೇ ಸಾಮಾಜಿಕ ಬದಲಾವಣೆ ಎಂದು ಕರೆಯುವುದು.

ಇದನ್ನು ಹೀಗೆ ವ್ಯಾಖ್ಯಾನ ಮಾಡಬಹುದು : ಸಾಮಾಜಿಕ ಬದಲಾವಣೆಯೆಂಬುದು ಜನರ ಜೀವನ ವಿಧಾನಗಳಲ್ಲಿ ಉಂಟಾದ ಪರಿವರ್ತನೆ.

ಮೆಕೈವರ್ ಎನ್ನುವ ಸಮಾಜಶಾಸ್ತ್ರಜ್ಞರ ಪ್ರಕಾರ 'ಸಾಮಾಜಿಕ ಸಂಬಂಧಗಳಲ್ಲಾಗುವ ಬದಲಾವಣೆಯೇ ಸಾಮಾಜಿಕ ಬದಲಾವಣೆ.'

© KTBS Not to be republished

## ಸಾಮಾಜಿಕ ಬದಲಾವಣೆಯ ಲಕ್ಷಣಗಳು

- ಸಾಮಾಜಿಕ ಬದಲಾವಣೆಯು ನಿರಂತರವಾದದ್ದು
- ಸಾಮಾಜಿಕ ಬದಲಾವಣೆಯು ಸಾರ್ವತ್ರಿಕವಾದದ್ದು
- ಸಾಮಾಜಿಕ ಬದಲಾವಣೆಯ ರೂಪ ಮತ್ತು ಗತಿ ಒಂದೇ ರೀತಿಯಲ್ಲಿರುವುದಿಲ್ಲ.
- ಸಾಮಾಜಿಕ ಪ್ರಕ್ರಿಯೆಗಳ ಸರಪಳಿಗಳು ಸಾಮಾಜಿಕ ಬದಲಾವಣೆಗಳನ್ನು ಸೃಷ್ಟಿ ಮಾಡುತ್ತವೆ.

## ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ಪ್ರಕ್ರಿಯೆ :

ಸಾಮಾಜಿಕ ಪ್ರಕ್ರಿಯೆಯ ಮೂಲಕ ಸಾಮಾಜಿಕ ಬದಲಾವಣೆ ಉಂಟಾಗುತ್ತದೆ. ಸಮಾಜಶಾಸ್ತ್ರಜ್ಞರಾಗಿರುವ ಪಾರ್ಕ್ ಮತ್ತು ಬರ್ಗೆಸ್ ಅವರು ಪ್ರಮುಖ ನಾಲ್ಕು ವಿಧಗಳ ಮೂಲಕ ಸಾಮಾಜಿಕ ಪ್ರಕ್ರಿಯೆಗಳನ್ನು ವಿವರಿಸುತ್ತಾರೆ. ಆದರೆ ಸಾಮಾನ್ಯವಾಗಿ ಚರ್ಚೆಗೆ ಒಳಪಡುವ ಸಾಮಾಜಿಕ ಪ್ರಕ್ರಿಯೆಗಳ ಪ್ರಕಾರಗಳೆಂದರೆ: 1. ಸಂಘರ್ಷ; 2. ಹೊಂದಾಣಿಕೆ; 3. ಸಹಕಾರ; 4. ಸಹಜೀವನ ಮತ್ತು 5. ಸ್ಪರ್ಧೆ. ಇಲ್ಲಿ ಸ್ಪರ್ಧೆಯೂ ಸಾಮಾಜಿಕ ಪ್ರಕ್ರಿಯೆಯೆಂದು ಹೆಸರಿಸಲಾಗಿದೆ.

**ಸಂಘರ್ಷ :** ಸಂಘರ್ಷವು ಸಾಮಾಜಿಕ ಬದಲಾವಣೆಗಳಲ್ಲಿ ಅತ್ಯಂತ ಮುಖ್ಯವಾದ ಹಾಗೂ ತೀವ್ರ ಸ್ವರೂಪದ ಸಾಮಾಜಿಕ ಪ್ರಕ್ರಿಯೆ. ಒಂದು ತಂಡ ಅಥವಾ ಗುಂಪು ತಮ್ಮ ಉದ್ದೇಶಗಳನ್ನು ಸಾಧಿಸಲು ನಡೆಸುವ ತಿಕ್ಕಾಟಗಳೆಲ್ಲವೂ ಸಾಮಾಜಿಕ ಸಂಘರ್ಷಗಳಾಗಿವೆ. ಉದಾಹರಣೆಗೆ ಕಬಡ್ಡಿ ಆಟವನ್ನು ಆಡುವಾಗ ಎರಡೂ ತಂಡಗಳೂ ಅಂಕವನ್ನು ಪಡೆಯಲು ಪ್ರಯತ್ನ ಮಾಡಿ ಸೆಣಸಾಡುತ್ತಿರುತ್ತವೆ. ಯಾವ ತಂಡ ಯುಕ್ತಿ ಮತ್ತು ಶಕ್ತಿಯಿಂದ ಆಡುತ್ತದೆಯೋ, ಆ ತಂಡ ಗೆಲ್ಲುತ್ತದೆ. ಇದೇ ರೀತಿ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಗಳಿಂದ ಅಥವಾ ಜನರ ಗುಂಪುಗಳಿಂದ ತಮ್ಮ ಹಕ್ಕುಗಳಿಗೆ, ತಮಗೆ ಅಗತ್ಯವಾದ ಸೌಲಭ್ಯಗಳು ದೊರಕದೇ ಇದ್ದಾಗ, ಸ್ವಾತಂತ್ರ್ಯ ಮತ್ತು ಸಮಾನತೆ ದೊರಕದೇ ಇದ್ದಾಗ, ವೈಯಕ್ತಿಕವಾಗಿ ಮತ್ತು ಚಳುವಳಿಯ ಮಾದರಿಯಲ್ಲಿ ಸಂಘರ್ಷ ನಡೆಸಿ ಅದನ್ನು ಪಡೆದುಕೊಳ್ಳಲು ಪ್ರಯತ್ನಗಳು ನಡೆಯುತ್ತವೆ. ಇದಕ್ಕೆ ಅತ್ಯಂತ ಸೂಕ್ತವಾದ ಉದಾಹರಣೆಯೆಂದರೆ, ಮಹಿಳೆಯರ, ಮಕ್ಕಳ ಮತ್ತು ದಲಿತರ ಹಕ್ಕುಗಳನ್ನು ಕಿತ್ತುಕೊಂಡಾಗ, ಇಡೀ ಸಮಾಜದಲ್ಲಿ ಅವರ ಹಕ್ಕುಗಳನ್ನು ಕಿತ್ತುಕೊಳ್ಳಬಾರದೆಂದು ಚರ್ಚೆ ಆರಂಭವಾಗುತ್ತದೆ. ಈ ಚರ್ಚೆ ಹಕ್ಕುಗಳನ್ನು ಕಸಿದುಕೊಂಡವರು ಮತ್ತು ಕಳೆದು ಕೊಂಡವರು ಎಂಬುವರ ನಡುವಿನ ಚರ್ಚೆ ಮಾತ್ರ ಆಗಿರುವುದಿಲ್ಲ. ಇದು ಒಂದು ಬಗೆಯಲ್ಲಿ ಹಕ್ಕುಗಳನ್ನು ಪ್ರತಿಪಾದಿಸುವ ಸಂಘರ್ಷ. ಇದು ಸಾಮಾಜಿಕ ಬದಲಾವಣೆಯನ್ನು ತರುವ ಮೂಲಾಂಶ.

**ಹೊಂದಾಣಿಕೆ :** ಸಾಮಾಜಿಕ ಬದಲಾವಣೆಗೆ ಸಂಘರ್ಷ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾದ ಸಾಮಾಜಿಕ ಪ್ರಕ್ರಿಯೆಯೆಂದರೆ ಹೊಂದಾಣಿಕೆ. ಆಯಾ ಸಮಾಜದಲ್ಲಿರುವ ವ್ಯಕ್ತಿಗಳು ಮತ್ತು ಗುಂಪುಗಳು ತಮ್ಮ ತಮ್ಮಲ್ಲಿರುವ ವಿಚಾರಗಳ ಆಧಾರದಲ್ಲಿ ಕೆಲವು ನಿಲುವುಗಳಿಗೆ ಬಂದಿರುತ್ತಾರೆ. ಈ ನಿಲುವುಗಳು ಅನೇಕ ಬಗೆಯ ತಿಕ್ಕಾಟಗಳನ್ನು ಉಂಟುಮಾಡುತ್ತಿರುತ್ತವೆ. ಈ ತಿಕ್ಕಾಟಗಳನ್ನು ಹೊಂದಾಣಿಕೆಯ ಮೂಲಕ ಬಗೆಹರಿಸಿಕೊಳ್ಳಲಾಗುತ್ತದೆ. ಹೊಂದಾಣಿಕೆಯಾಗದೇ ಬರೀ ಸಂಘರ್ಷಗಳೇ ಮುಂದುವರೆದರೆ ಆ ಸಮಾಜದಲ್ಲಿ ಅರಾಜಕತೆ ಮತ್ತು ಗುಂಪು ಘರ್ಷಣೆ ಹೆಚ್ಚುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ಪರಸ್ಪರ ಮಾತುಕತೆಯ ಮೂಲಕ ಒಪ್ಪಂದಕ್ಕೆ ಬರಲಾಗುತ್ತದೆ. ಇದನ್ನೇ ನಾವು 'ಹೊಂದಾಣಿಕೆ' ಎಂದು ಕರೆಯುತ್ತೇವೆ. ಈ ಹೊಂದಾಣಿಕೆಯು ಕುಟುಂಬದ ಒಳಗೆ, ಹೊರಗೆ, ಸಮಾಜದಲ್ಲಿ, ಚಳವಳಿಗಳ ನಡುವೆ, ಸಿದ್ಧಾಂತದ ಒಳಗೆ ಅನೇಕ ಬಗೆಯ ಬದಲಾವಣೆಗೆ ಕಾರಣವಾಗುವುದನ್ನು ನಾವು ಕಾಣಬಹುದು. ಇದು ಮತ್ತೊಬ್ಬರ ಇರುವಿಕೆಯನ್ನು ಗೌರವಿಸುವ ಕ್ರಮವೂ ಹೌದು. ಇದರಿಂದ ಸಮಾಜದಲ್ಲಿ ಶಾಂತಿ, ಸಹಬಾಳ್ವೆ, ನಿರ್ಮಾಣವಾಗುತ್ತವೆ.

©KTBS Not to be republished

**ಸಹಕಾರ :** ಸಹಕಾರವು ಮಾನವ ತನಗೆ ಬೇಕಾಗುವ ಅಗತ್ಯಗಳನ್ನು ಪಡೆದುಕೊಳ್ಳಲು ಬಳಸುವ ಒಂದು ಮಾರ್ಗ. ಸಮಾಜದಲ್ಲಿ ಬಹುತೇಕ ಸಾಮಾಜಿಕ ಸಂಬಂಧಗಳು ಕೊಡು ಕೊಳ್ಳುವಿಕೆಯ ಮೂಲಕ ನಡೆಯುತ್ತಿರುತ್ತವೆ. ಇದನ್ನು ಸಹಕಾರ ಮನೋಭಾವ ಎಂದು ಕರೆಯತ್ತೇವೆ. ಸಹಕಾರದಲ್ಲಿ ಎರಡು ವಿಧ. ಒಂದು – ಪ್ರತ್ಯಕ್ಷ ಸಹಕಾರ ಎರಡು – ಪರೋಕ್ಷ ಸಹಕಾರ. ಇದನ್ನು ಹೀಗೆ ವಿವರಿಸಬಹುದು. ಒಂದು ಮಗು ಶಾಲೆಯಲ್ಲಿ ಕಲಿಯಬೇಕಾದರೆ, ಆ ಮಗು ಕಲಿಯುತ್ತಿರುವಾಗ ಬೋಧಿಸುವ ಶಿಕ್ಷಕರು ಆ ಮಗುವಿನ ಕಲಿಕೆಗೆ ಪ್ರತ್ಯಕ್ಷವಾಗಿ ಸಹಕರಿಸುತ್ತಿರುತ್ತಾರೆ. ಅದೇ ಶಾಲಾ ಆವರಣದಲ್ಲಿ ಆಡಳಿತ ನೋಡಿಕೊಳ್ಳುವ, ಮುಖ್ಯ ಶಿಕ್ಷಕರು, ಬಿಸಿಯೂಟ ಮಾಡುವ ಮಹಿಳೆಯರು, ಶಾಲೆಯನ್ನು ಸ್ವಚ್ಛಗೊಳಿಸುವ ಸಿಬ್ಬಂದಿ, ಮಕ್ಕಳಿಗೆ ಕುಡಿಯಲು ನೀರು ತರುವ ತಾಯಂದಿರು, ಮಕ್ಕಳ ಕಲಿಕೆಯಲ್ಲಿ ಪರೋಕ್ಷವಾಗಿ ಸಹಕರಿಸುತ್ತಿರುತ್ತಾರೆ. ಹೀಗೆ ಸಹಕಾರಗಳ ಮೂಲಕ ನಡೆಯುವ ಶಾಲೆಯು ಕಾಲಾನಂತರದಲ್ಲಿ ಆ ಶಾಲೆ ನೆಲೆಗೊಂಡಿರುವ ಪರಿಸರದ ಉತ್ತಮ ಕಲಿಕೆಗೆ ಬೆಂಬಲವಾಗಿ ನಿಲ್ಲುವ ಮೂಲಕ ಆ ಹಳ್ಳಿಯ ಅಥವಾ ಆ ಪ್ರದೇಶದ ಬದಲಾವಣೆಗೆ ಕಾರಣವಾಗುತ್ತದೆ. ಶಿಕ್ಷಣದ ಮೂಲ ಕಲಿಕೆಯು ಮುಂದೆ ನಮ್ಮೊಳಗೆ ಸಹಜೀವನಕ್ಕೆ ಮಾರ್ಗದರ್ಶನ ನೀಡುತ್ತದೆ.

**ಸಹಜೀವನ :** ಸಹಜೀವನ, ಮಾನವ ಸಮಾಜದ ಉಳಿವಿಗೆ ಮತ್ತು ಬೆಳವಣಿಗೆಗೆ ಅತ್ಯಂತ ಮುಖ್ಯವಾದ ಒಂದು ಅಂಶ. ಸಹಜೀವನ ನಮ್ಮ ಸಂವಿಧಾನದ ಆಶಯವಾದ ಸರ್ವಧರ್ಮ, ಸಮಾಜವಾದಿ, ಪ್ರಜಾಸತ್ತಾತ್ಮಕ ಆಶಯಗಳನ್ನು ಹೊಂದಿದೆ. ಇದರ ಅರ್ಥ ಎಲ್ಲರೂ ಸಮಾನ ಅವಕಾಶದಿಂದ, ಸ್ವಾತಂತ್ರ್ಯ, ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯಗಳಿಂದ ಒಟ್ಟಿಗೆ ಬದುಕುವುದು. ಇದನ್ನು ವಿವರಿಸುವುದಾದರೆ, ಸಂವಿಧಾನದ ಕಲಂ 14, ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬುದನ್ನು ಸೂಚಿಸುತ್ತದೆ. ಇದು ಜಾತಿ, ಧರ್ಮ, ಜನಾಂಗ, ಲಿಂಗ, ಪ್ರದೇಶ ಮತ್ತು ಇತ್ಯಾದಿಗಳ ಸಮಾನತೆಗೆ ಸಂಬಂಧಿಸಿದೆ. ಸಾಮಾಜಿಕ ಆರ್ಥಿಕ ಅಸಮಾನತೆಗಳಿಂದ ಯಾರನ್ನೂ ಕಾಣಬಾರದು ಎಂದು ಹೇಳುತ್ತದೆ. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಲು ಸಹಬಾಳ್ವೆ ಅಗತ್ಯವಾಗಿದೆ. ಅಸಂಖ್ಯಾತ ಜಾತಿ, ಸಂಸ್ಕೃತಿ, ಭಾಷೆ, ಆಚಾರ –ವಿಚಾರಗಳನ್ನೊಳಗೊಂಡ ಭಾರತೀಯರೆಲ್ಲರೂ ಜಗತ್ತಿಗೆ ಮಾದರಿಯೆಂಬಂತೆ ಜೀವಿಸುವುದು ಸಹಬಾಳ್ವೆಯ ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ. ಇದು ಸಂಘರ್ಷರಹಿತ ಶಾಂತಿ ಹಾಗೂ ಅಹಿಂಸಾ ಜೀವನವನ್ನು ಬೆಂಬಲಿಸುತ್ತದೆ. ಆ ಮೂಲಕ ನಾವೆಲ್ಲರೂ ಒಂದೇ ಎನ್ನುವ ಭಾವನೆಯನ್ನು ಹೆಚ್ಚಿಸುತ್ತದೆ.

**ಚಟುವಟಿಕೆ:**

ಸಹಕಾರ, ಸಹಜೀವನ ಮಹತ್ವ ಕುರಿತು ಕುಟುಂಬದ ಸದಸ್ಯರಿಂದ ನೆರೆಹೊರೆಯವರಿಂದ ಮಾಹಿತಿ ಪಡೆಯಿರಿ.

**ಸ್ಪರ್ಧೆ :** ಸ್ಪರ್ಧೆ ಮಾನವ ಜೀವಿಯ ವಿಕಾಸದ ಹಾದಿಯಲ್ಲೇ ಪ್ರಾರಂಭವಾಯಿತು. ಡಾರ್ವಿನ್ ತಮ್ಮ ವಿಕಾಸವಾದವನ್ನು ಮಂಡಿಸುವಾಗ ಹೀಗೆ ವಿವರಿಸುತ್ತಾರೆ: "ಜೀವ ವಿಕಾಸವು ಸಂಘರ್ಷ ಮತ್ತು ಸ್ಪರ್ಧೆಯ ನೆಲೆಯಲ್ಲಿ ನಡೆಯುತ್ತಿರುತ್ತದೆ. ಹೀಗೆ ನಡೆಯುವಾಗ ಸ್ಪರ್ಧೆಯು ಹೆಚ್ಚಾದಂತೆ ಪ್ರಬಲವಾಗಿರುವುದು ಉಳಿದುಕೊಳ್ಳುತ್ತದೆ. ದುರ್ಬಲವಾಗಿರುವುದು ಅಳಿಯುತ್ತದೆ." ಪ್ರಾಣಿ, ಪಕ್ಷಿ, ಕ್ರಿಮಿ–ಕೀಟಗಳೂ ಸಹ ಆಹಾರ ಪಡೆಯಲು ಸ್ಪರ್ಧೆ ನಡೆಸುವುದನ್ನು ನಾವು ಕಾಣುತ್ತೇವೆ. ಇಂಥ ಸ್ಪರ್ಧೆಗಳು ಮಾನವ ಸಮಾಜದಲ್ಲಿಯೂ ಇವೆ. ಸಹಜ ಸ್ಪರ್ಧೆಗೆ ಯಾವುದೇ ಗುಂಪುಗಾರಿಕೆ ಮತ್ತು ಪಕ್ಷಪಾತಗಳು ಇರುವುದಿಲ್ಲ. ಆದರೆ ಇತ್ತೀಚಿನ ಕೆಲವು ಸ್ಪರ್ಧೆಗಳು ಅಮಾನವೀಯವಾಗುತ್ತಿರುವುದನ್ನು ನಾವು ಕಾಣುತ್ತೇವೆ. ಇವು ಸಮಾಜದಲ್ಲಿ ಅನೇಕ ಸಂಘರ್ಷಗಳನ್ನು ಉಂಟು ಮಾಡುತ್ತಿವೆ. ನಿಯಮರಹಿತ ಮತ್ತು ನಿಯಮಸಹಿತ ಸ್ಪರ್ಧೆಗಳು ಸಮಾಜದಲ್ಲಿ

**ಚಟುವಟಿಕೆ**

ಸ್ಪರ್ಧೆಗಳು ಸಮಾಜದ ಯೋಗಕ್ಷೇಮಕ್ಕೆ ಕೊರತೆಯಾಗದಂತೆ ನಡೆಸಬಹುದಾದ ಸ್ಪರ್ಧೆಗಳನ್ನು ಪಟ್ಟಿ ಮಾಡಿ.

©KTBS Not to be republished

ಅನೇಕ ಸಕಾರಾತ್ಮಕ ಮತ್ತು ನಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡುತ್ತಿರುತ್ತವೆ. ಆದರೆ ಇತ್ತೀಚೆಗೆ ಜಾಗತಿಕ ಆರ್ಥಿಕತೆಯು ಸ್ಫರ್ಧೆ ಎನ್ನುವುದನ್ನು ಸಮಾಜದ ಆರೋಗ್ಯಕ್ಕಿಂತಲೂ ಆದಾಯ ಸಂಪಾದನೆಯ ನೆಲೆಯಲ್ಲಿ ಬೆಳೆಸುತ್ತಿದೆ. ಈ ಬೆಳವಣಿಗೆಯು ಜೀವಜಗತ್ತಿನ ಮನೋಧರ್ಮವನ್ನೇ ಬದಲಾಯಿಸುತ್ತದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಬದಲಾವಣೆ ____________ ನಿಯಮ.
2. ಸಹಕಾರ ಜೀವನಕ್ಕೆ ಶಾಲೆ ಒಂದು ____________ ಎನ್ನುತ್ತಾರೆ.
3. ವಿಕಾಸವಾದವನ್ನು ಮಂಡಿಸಿದವರು ____________ .

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಸಾಮಾಜಿಕ ಬದಲಾವಣೆ ಎಂದರೇನು?
2. ಸಹಕಾರ ಎಂದರೇನು?
3. ಸಹಜೀವನ ಮೂಲ ಅಂಶಗಳು ಯಾವುವು?
4. ಸಾಮಾಜಿಕ ಬದಲಾವಣೆಯ ಲಕ್ಷಣಗಳನ್ನು ತಿಳಿಸಿ.
5. ಸಾಮಾಜಿಕ ಬದಲಾವಣೆ ಅಗತ್ಯವೆ?
6. ಸ್ಪರ್ಧೆ ದಿನೇ ದಿನೇ ಹೆಚ್ಚಾಗಲು ಕಾರಣಗಳೇನು?

**III. ಚಟುವಟಿಕೆ**

1. ಸಂಘರ್ಷದ ಅನುಕೂಲ-ಅನಾನುಕೂಲಗಳನ್ನು ಕುರಿತು ಸಂವಾದ ನಡೆಸಿ.
2. ಸಹಬಾಳ್ವೆಯ ಮಹತ್ವವನ್ನು ಕುರಿತು, ಪ್ರಬಂಧ ಮತ್ತು ಚರ್ಚಾ ಸ್ಪರ್ಧೆಗಳನ್ನು ಶಾಲೆಗಳಲ್ಲಿ ನಡೆಸಿ.

**IV. ನಿಯೋಜಿತ ಕಾರ್ಯ**

1. ಸಾಮಾಜಿಕ ಬದಲಾವಣೆ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿ.
2. ಶಾಲೆಗೆ ಹತ್ತಿರವಿರುವ ಸಹಕಾರಿ ವ್ಯವಸ್ಥೆಯನ್ನು ಮಕ್ಕಳಿಗೆ ತೋರಿಸಿ.

©KTBS Not to be re published

## ಅಧ್ಯಾಯ–4

# ಸಮುದಾಯ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಸಮುದಾಯದ ಅರ್ಥ.*
- *ಅಲೆಮಾರಿ ಸಮುದಾಯ ಮತ್ತು ಅದರ ಲಕ್ಷಣಗಳು.*
- *ಬುಡಕಟ್ಟು ಸಮುದಾಯ ಮತ್ತು ಅದರ ಲಕ್ಷಣಗಳು.*
- *ಗ್ರಾಮ ಸಮುದಾಯ ಮತ್ತು ಅದರ ಲಕ್ಷಣಗಳು.*
- *ನಗರ ಸಮುದಾಯ ಮತ್ತು ಅದರ ಲಕ್ಷಣಗಳು.*

### ಸಮುದಾಯದ ಅರ್ಥ

ಒಂದು ಗುಂಪಿನಲ್ಲಿ ಮೂರಕ್ಕಿಂತ ಹೆಚ್ಚಿನ ಜನರು ವಾಸಮಾಡುತ್ತಾ, ಕೆಲವು ಸಾಮಾನ್ಯ ನೀತಿ–ನಿಯಮ, ಮೌಲ್ಯಗಳು ಮತ್ತು ಗುರುತುಗಳನ್ನು ಹೊಂದಿ, ಒಂದು ನಿಗದಿತ ಭೌಗೋಳಿಕ ಪ್ರದೇಶದಲ್ಲಿ ಬದುಕುವುದನ್ನು ಸಮುದಾಯವೆಂದು ಕರೆಯಲಾಗುತ್ತದೆ. ಹೀಗಾಗಿ ಸಮುದಾಯವನ್ನು ಒಂದು ಸಾಮಾಜಿಕ ಘಟಕ ಎಂದು ಕರೆಯಲಾಗುತ್ತದೆ.

ಎಲ್ಲಾ ಸಮುದಾಯಗಳು ಮಾನವ ಜೀವನಕ್ಕೆ ಬೇಕಾಗುವ ಅಗತ್ಯ ವಸ್ತು ಪದಾರ್ಥಗಳನ್ನು ತಮ್ಮ ತಮ್ಮ ನೆಲೆಯಲ್ಲಿ ಉತ್ಪಾದಿಸಿ ಒದಗಿಸುತ್ತವೆ. ಅಂದರೆ ವಿವಿಧ ಲಕ್ಷಣಗಳು ಮತ್ತು ವೃತ್ತಿ ಅವಲಂಬನೆ, ಆಹಾರ ಉತ್ಪಾದಿಸುವ ಕ್ರಮ, ಆಹಾರದ ಬಳಕೆಯ ಕ್ರಮ, ವಾಸದ ನೆಲೆ, ಆರೋಗ್ಯ, ಶಿಕ್ಷಣ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳ ದೊರೆಯುವಿಕೆ, ಇತ್ಯಾದಿ ಸೌಲಭ್ಯಗಳನ್ನು ಸಮುದಾಯಗಳು ಪಡೆದುಕೊಳ್ಳುತ್ತವೆ. ಸಾಮಾಜಿಕ ಜೀವನ, ವೃತ್ತಿ ಲಕ್ಷಣಗಳು, ಸಾಂಸ್ಕೃತಿಕ ಜೀವನ, ನಂಬಿಕೆ, ಆರ್ಥಿಕ ವ್ಯವಸ್ಥೆ, ಜನಸಂಖ್ಯೆಯ ಆಧಾರದಲ್ಲಿ ಸಮುದಾಯಗಳನ್ನು ಪ್ರಮುಖವಾಗಿ ನಾಲ್ಕು ಗುಂಪುಗಳಾಗಿ ವಿಭಾಗಿಸಲಾಗಿದೆ. ಅವೆಂದರೆ – ಅಲೆಮಾರಿ, ಬುಡಕಟ್ಟು, ಗ್ರಾಮ ಮತ್ತು ನಗರ ಸಮುದಾಯ.

### ಅಲೆಮಾರಿ ಸಮುದಾಯ

ಅಲೆಮಾರಿತನವು ಒಂದು ಜೀವನ ವಿಧಾನ ಎಂದು ಎನ್ಸೈಕ್ಲೋಪೀಡಿಯ ಬ್ರಿಟಾನಿಕಾ ಹೇಳುತ್ತದೆ. ಬೇಟೆ ಮತ್ತು ಆಹಾರ ಸಂಗ್ರಹಣೆ, ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಒಂದೆಡೆ ನೆಲೆಯೂರದೆ ಋತುಮಾನಗಳಿಗೆ ಅನುಗುಣವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುವ ಜನರ ಗುಂಪನ್ನು ಅಲೆಮಾರಿ ಸಮುದಾಯ ಎಂದು ಕರೆಯಲಾಗುತ್ತದೆ. ಈ ಅಲೆದಾಟವು ವಲಸೆ ಪ್ರಕ್ರಿಯೆಗಿಂತ ವಿಭಿನ್ನ. ಅಲೆಮಾರಿ ಎಂಬ ಪದಕ್ಕೆ ಹಿಂದಿಯಲ್ಲಿ ಸಂಚಾರಿ, ತಮಿಳಿನಲ್ಲಿ ಪೊಕ್ಕನ್, ತುಳುವಿನಲ್ಲಿ ತೆಂಡುಳಿ, ತೆಲುಗಿನಲ್ಲಿ ತಿರುಗುಬೋತು, ಮಲೆಯಾಳಂನಲ್ಲಿ ತೆಂಟಿ, ಲ್ಯಾಟಿನಿನಲ್ಲಿ ನೋಮಾಸ್ (nomas), ಇಂಗ್ಲಿಷಿನಲ್ಲಿ ನೊಮ್ಯಾಡ್ (nomad) ಎಂದು ಹೆಸರಿಸಲಾಗುತ್ತಿದೆ. ಜೊತೆಗೆ ಪರದೇಶಿ, ನೆಲೆಯಿಲ್ಲದವರು, ದೇಶ ಸಂಚಾರಿಗಳು, ಪರಸ್ಥಳದವರು, ಹೊರಗಡೆಯವರು, ಉಚಲ್ಯಾ, ಜಿಪ್ಸಿ, ಬೀಡು ಬಿಡುವವರು, ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ.

©KTBS Not to be republished

## ಅಲೆಮಾರಿ ಸಮುದಾಯದ ಲಕ್ಷಣಗಳು

1. **ಜೀವನ ಅಥವಾ ಬದುಕಿಗಾಗಿ ಅಲೆದಾಟ :** ಪಾರಂಪರಿಕವಾಗಿ ಪ್ರಾಣಿ, ಪಕ್ಷಿಗಳ ಬೇಟೆ, ಪಳಗಿಸುವಿಕೆ ಮತ್ತು ಪ್ರದರ್ಶನ, ಪಶುಪಾಲನೆ, ನಾಟಿವೈದ್ಯ, ಕಲಾ ಪ್ರದರ್ಶನ, ಇತ್ಯಾದಿಗಳ ಮೂಲಕ ಬದುಕಿಗಾಗಿ ಅಲೆದಾಟ ನಡೆಸುವುದು. ಉದಾಹರಣೆ: ಕರಡಿ, ಕೋತಿ, ಹಾವು, ನಂದಿಗಳ ಪ್ರದರ್ಶನ, ತೊಗಲು ಗೊಂಬೆಯಾಟ, ದೊಂಬರಾಟ, ಮಾರಮ್ಮ ದೈವ ಇತ್ಯಾದಿಗಳ ಪ್ರದರ್ಶನ, ನಾಟಿವೈದ್ಯ, ಸಣ್ಣಪುಟ್ಟ ವಸ್ತುಗಳ ಮಾರಾಟ ಮತ್ತು ರಿಪೇರಿ ಇವು ಅಲೆಮಾರಿ ಸಮುದಾಯದ ಪ್ರಮುಖ ಲಕ್ಷಣ.
2. **ತಾತ್ಕಾಲಿಕ ವಾಸ :** ಸ್ಥಿರವಾಗಿ ನೆಲೆನಿಲ್ಲದೆ, ಆರ್ಥಿಕ ಭದ್ರತೆ ಮತ್ತು ಅಕ್ಷರ ಜ್ಞಾನದ ಕೊರತೆಯಿಂದ ಗ್ರಾಮಗಳ ಹೊರಗೆ, ಸಾರ್ವಜನಿಕ ಸ್ಥಳಗಳ ಬಯಲು ಜಾಗದಲ್ಲಿ ತಾತ್ಕಾಲಿಕವಾಗಿ ಬಿಡಾರಗಳನ್ನು ಹೂಡಿ ವಾಸಮಾಡುತ್ತಾರೆ.
3. **ಶೂನ್ಯ ಅಥವಾ ಅಲ್ಪ ಬಂಡವಾಳದ ಕಾಯಕ ಜೀವಿಗಳು :** ಈ ಸಮುದಾಯಗಳಿಗೆ ಯಾವುದೇ ಆರ್ಥಿಕ ಭದ್ರತೆಗಳಿಲ್ಲ. ಇವರಲ್ಲಿ ಬಹುತೇಕ ಜನರು ಗುಜರಿ ಆರಿಸುವುದು, ಬಕೆಟ್ ರಿಪೇರಿ ಮಾಡುವುದು, ದಾರ, ಪಿನ್ನು, ಸೂಜಿ, ಜಡಿಬೂಟಿ ಮಾರುವುದು, ಮೀನು ಹಿಡಿಯುವುದು, ಪ್ಲಾಸ್ಟಿಕ್‌ಪೇಪರ್ ಆರಿಸುವುದು, ಕೃಷಿಕೂಲಿ ಇತ್ಯಾದಿ ದುಡಿಮೆ ಮಾಡುತ್ತಾರೆ.
4. **ಸರ್ವಚೇತನವಾದಿಗಳು :** ಅಗಾಧವಾದ ಪ್ರಾಕೃತಿಕ ಜ್ಞಾನ, ಪ್ರಕೃತಿಯ ಅಗೋಚರ ಶಕ್ತಿಗಳಲ್ಲಿ ಸಿದ್ಧಹಸ್ತರು ಮತ್ತು ಅದರಲ್ಲಿ ನಂಬಿಕೆಯುಳ್ಳವರು.
5. **ವಿಭಿನ್ನ ಮಾತೃಭಾಷಿಕರು :** ಅಲೆಮಾರಿ ಸಮುದಾಯಗಳು ಅನೇಕ ಜನಾಂಗಗಳಿಂದ ಕೂಡಿದ್ದು ಒಂದೊಂದು ಜನಾಂಗದವರು ತಮ್ಮದೇ ಆದ ವಿಶಿಷ್ಟ ಭಾಷೆಗಳಲ್ಲಿ ಮಾತನಾಡುತ್ತಾರೆ.

## ಬುಡಕಟ್ಟು ಸಮುದಾಯ ಮತ್ತು ಅದರ ಲಕ್ಷಣಗಳು



ಬುಡಕಟ್ಟು ಎಂಬ ಪದವನ್ನು ಜೀವ ವಿಜ್ಞಾನಿಗಳು, ಸಮಾಜ ವಿಜ್ಞಾನಿಗಳು ವಿಭಿನ್ನ ಅರ್ಥದಲ್ಲಿ ಬಳಸಿದ್ದಾರೆ. ಕಿಟ್ಟೆಲ್ಲರು ತಮ್ಮ ಅರ್ಥಕೋಶದಲ್ಲಿ ಬುಡಕಟ್ಟು ಎಂಬ ಶಬ್ದಕ್ಕೆ 'ಕುಟುಂಬ' ಹಾಗೂ 'ಕುಲ' ಎಂಬ ಅರ್ಥವನ್ನು ನೀಡಿದ್ದಾರೆ. ಬುಡಕಟ್ಟು ಎಂಬ ಪದವು ಆಂಗ್ಲಭಾಷೆಯಲ್ಲಿ ಬಳಕೆಯಾಗುವ 'ಟ್ರೈಬ್' ಎಂಬ ಪದಕ್ಕೆ ಸಮಾನಾರ್ಥಕ ಪದ. ಇದು ಲ್ಯಾಟೀನ್ ಭಾಷೆಯ "ಟ್ರೈಬಸ್' ಎಂಬ ಪದದಿಂದ ಉಗಮಗೊಂಡಿದೆ. ಗ್ರೀಕ್ ಮತ್ತು ರೋಮನ್ ಲೇಖಕರು ಲ್ಯಾಟಿಯಂ ಜಿಲ್ಲೆಯಲ್ಲಿ ನೆಲಸಿದ ಬುಡಕಟ್ಟಿನವರಿಗೆ ಪ್ರಪಥಮವಾಗಿ 'ಟ್ರೈಬ್' ಎಂಬ ಪದ ಬಳಸಿರುವುದು ತಿಳಿಯುತ್ತದೆ. ಕುಟುಂಬ ಹಾಗೂ ರಕ್ತ ಸಂಬಂಧ

©KTBS Not to be re published

ಹೊಂದಿದ ಕುಲಗಳ ಕೂಟಕ್ಕೆ ಕನ್ನಡದಲ್ಲಿ ಬುಡಕಟ್ಟು ಎಂಬ ಪದ ಬಳಸಲಾಗುತ್ತದೆ. ಬುಡಕಟ್ಟುಗಳಿಗೆ ಆದಿವಾಸಿ, ಮೂಲನಿವಾಸಿ, ಗಿರಿಜನ, ವನ್ಯಜಾತಿ, ಎಂಬ ಹೆಸರುಗಳಿಂದಲೂ ಕರೆಯಲಾಗಿದೆ. "ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಅಥವಾ ಅದನ್ನು ತನ್ನದೆಂದು ಹೇಳಿಕೊಳ್ಳುವ ರಾಜಕೀಯ, ಸಾಮಾಜಿಕ, ಮತ್ತು ಸಾಂಸ್ಕೃತಿಕ ರಚನೆಗೆ ಹೊಂದಿಕೊಂಡಿರುವ ಸ್ವಯಂ ಆಡಳಿತವುಳ್ಳ ಗುಂಪೇ ಬುಡಕಟ್ಟು" ಎಂದು ಲಂಡನ್ನಿನ ರಾಯಲ್ ಆಂಥ್ರೋಪಾಲಾಜಿಕಲ್ ಇನ್‌ಸ್ಟಿಟ್ಯೂಟ್ ವ್ಯಾಖ್ಯಾನಿಸಿದೆ.

ಭೌತಿಕ ಮಾನವಶಾಸ್ತ್ರಜ್ಞರು ಮಾನವ ದೈಹಿಕ ಲಕ್ಷಣಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಬುಡಕಟ್ಟುಗಳನ್ನು ಮೂರು ದೊಡ್ಡ ಬುಡಕಟ್ಟುಗಳನ್ನಾಗಿ ವಿಭಾಗಿಸುತ್ತಾರೆ. ಅವೆಂದರೆ: ಕಕೇಶಿಯನ್, ಮಂಗೋಲಿಯನ್ ಮತ್ತು ನೀಗ್ರೊ. ಈ ಪಂಗಡಗಳನ್ನು ಕ್ರಮವಾಗಿ ಬಿಳಿಯರು, ಹಳದಿಯವರು ಮತ್ತು ಕಪ್ಪು ಜನರು ಎಂದು ಕರೆಯಲಾಗುತ್ತದೆ.

**(ಅ) ಕಕೇಶಿಯನ್:** ಈ ಬುಡಕಟ್ಟಿಗೆ ಸೇರಿದ ಜನರು ಶ್ವೇತವರ್ಣೀಯರು. ಇವರು ಎತ್ತರ ನಿಲುವು, ಉದ್ದವಾದ, ಚೂಪಾದ, ನೇರವಾದ ಮೂಗು, ಓರೆ ತಲೆ, ನೇರ ದವಡೆ, ಉದ್ದವಾದ ಮುಖ, ಸಣ್ಣ ತುಟಿ, ಮೈಮೇಲೆ ದಟ್ಟವಾಗಿ ಬೆಳೆದ ಕೂದಲು, ಕಂದು ಬಣ್ಣ ಮುಂತಾದ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ. ಈ ಬುಡಕಟ್ಟಿನ ಜನರು ಯೂರೋಪು, ಉತ್ತರ ಹಾಗೂ ದಕ್ಷಿಣ ಅಮೆರಿಕ, ಪ್ಯಾಲೆಸ್ತೈನ್, ಏಷ್ಯಾ, ಇರಾನ್, ಬಲೂಚಿಸ್ಥಾನ ಮತ್ತು ಉತ್ತರ ಭಾರತದಲ್ಲಿ ಕಂಡುಬರುತ್ತಾರೆ. ಕಕೇಶಿಯನ್ ಬುಡಕಟ್ಟಿನಲ್ಲಿ ನಾರ್ಡಿಕ್, ಆಲ್‌ಫೈನ್, ಮೆಡಿಟರೇನಿಯನ್ ಮತ್ತು ಹಿಂದೂ ಎಂಬ ನಾಲ್ಕು ಉಪಪಂಗಡಗಳಿವೆ.

**(ಆ) ಮಂಗೋಲಿಯನ್:** ಈ ಬುಡಕಟ್ಟಿಗೆ ಸೇರಿದ ಜನರು ಪೀತವರ್ಣೀಯರು – ಅಂದರೆ ಹಳದಿ ಬಣ್ಣದವರು. ಗುಂಡು ತಲೆ, ಓರೆ ಕಣ್ಣು, ಚಪ್ಪಟೆಯಾದ ಹಾಗೂ ದುಂಡನೆಯ ಆಕಾರದ ಮುಖ, ನೇರವಾದ ಮತ್ತು ಉದ್ದವಾದ ತಲೆಗೂದಲು ಮೊದಲಾದ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ. ಅವರ ದವಡೆ ಅಷ್ಟಾಗಿ ಮುಂದಕ್ಕೆ ಚಾಚಿರುವುದಿಲ್ಲ. ಇವರು ಏಷ್ಯಾಖಂಡದ ಪೂರ್ವಭಾಗದಲ್ಲಿಯೂ, ಮಲಯಾ ಪರ್ಯಾಯ ದ್ವೀಪದಲ್ಲಿಯೂ, ಅಮೆರಿಕಾದಲ್ಲಿಯೂ ಇದ್ದಾರೆ. ಈ ಬುಡಕಟ್ಟಿನಲ್ಲಿ ಮಂಗೋಲಿಯನ್, ಮಲೇಶಿಯನ್, ಅಮೆರಿಕನ್ ಇಂಡಿಯನ್ ಎಂಬ ಮೂರು ಉಪಪಂಗಡಗಳಿವೆ.

**(ಇ) ನೀಗ್ರೊ :** ಈ ಬುಡಕಟ್ಟಿಗೆ ಸೇರಿದ ಜನರು ಗುಂಡು ತಲೆ, ಚಪ್ಪಟೆಯಾದ ಮೂಗು, ಮುಂದಕ್ಕೆ ಚಾಚಿದ ದವಡೆ, ದುಂಡನೆಯ ಕಂದುಬಣ್ಣದ ಕಿರುಗಣ್ಣುಗಳು, ಹೊಳಪಾದ ಹಾಗೂ ಮೋಟಾದ ಗುಂಗುರು ಕೂದಲು, ದಪ್ಪ ತುಟಿ ಮುಂತಾದ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ. ಈ ಬುಡಕಟ್ಟಿನ ಜನರು ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಭಾರತ–ಭೂಭಾಗಗಳಲ್ಲಿದ್ದಾರೆ. ಆಸ್ಟ್ರೇಲಿಯಾ ಮತ್ತು ಭಾರತದಲ್ಲಿನ ಆದಿವಾಸಿಗಳು ಮಾತ್ರ ಈ ಬುಡಕಟ್ಟಿಗೆ ಸೇರಿದವರು. ಈ ಬುಡಕಟ್ಟಿನಲ್ಲಿ ಮಲೇಷಿಯನ್ನರು, ನೀಗ್ರೊ ಮತ್ತು ಕರಿಯಬಣ್ಣದ ಕುಳ್ಳರು ಎಂಬ ಮೂರು ಉಪಪಂಗಡಗಳಿವೆ. ಈ ಮೂರು ಮುಖ್ಯ ಬುಡಕಟ್ಟು ಜನಾಂಗಗಳನ್ನು ಮತ್ತೆ ಉಪ ಬುಡಕಟ್ಟು ಮತ್ತು ಜನಾಂಗಗಳಾಗಿ ವಿಂಗಡಿಸಲಾಗಿದೆ.

ಭಾರತದಲ್ಲಿ ಬುಡಕಟ್ಟುಗಳು ವಾಸಿಸುವ ಪ್ರಮುಖ ಮೂರು ಭೌಗೋಳಿಕ ವಲಯಗಳು :

**1. ಉತ್ತರ ಮತ್ತು ಉತ್ತರ–ಪೂರ್ವ ವಲಯ :** ಹಿಮಾಲಯದ ಉಪ ಗಿರಿಕಂದರ ಶ್ರೇಣಿಯಲ್ಲಿ ನಾಗಾ ಬುಡಕಟ್ಟಿನ ಕೊನ್ಯಾಕ್, ರೆಂಗ್ಮಾ, ಸೆಂಗ್ಮಾ, ಅಹೋ, ಅಂಗಾಮಾ, ಲ್ಹೋಟಾ, ಫೋಮೆ, ಚಾಂಗ, ಕಾಬುಲ, ಕುಕಿ ಬುಡಕಟ್ಟಿನ ಲುಶಾಮಿ, ಲಾಖೇರ, ಚಿನ್ಸ್, ಖುಷಿ, ಗಾರೊ, ಕಚಾರಿ, ಲೆಪ್ಚಾ, ಭೂಟಿಯ, ರಾಭಾ, ಥಾರು, ಖಾಸಾ, ಚೇನಿ ಇತ್ಯಾದಿ ಸಮುದಾಯಗಳು ವಾಸಿಸುತ್ತಿವೆ.

©KTBS Not to be re published

**2. ಕೇಂದ್ರೀಯ ಅಥವಾ ಮಧ್ಯ ವಲಯ :** ಈ ವಲಯದಡಿ ಪಶ್ಚಿಮ ಬಂಗಾಳ, ಬಿಹಾರ, ಒರಿಸ್ಸಾ, ದಕ್ಷಿಣದ ಉತ್ತರಪ್ರದೇಶ, ಉತ್ತರ ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ರಾಜಸ್ತಾನ ರಾಜ್ಯಗಳಲ್ಲಿರುವ ಸಂತಾಲ, ಮುಂಡಾ, ಉರಾಂವ, ಭೂಮಿಜ, ಕೋಯ, ಲೋಧಾ, ಸಾಪುರ, ಜವುಂಗ, ಖೊಂಡ, ಕೊರ್ಕು, ಗೊಂಡ, ಭಿಲ್, ಬಿರಹಾರ್, ಕೋಲ್, ಮಾಲೇರ, ಅಸುರ, ಬೈಗಾ, ಪ್ರಧಾನ, ಬಿರಝಿಮ. ಅಗೇರಿಯ, ಹಿಲ್ ಮಾರಿಯ, ಬಿಸೊನ್ ಹಾರ್ನಮಾರಿಮ ಇತ್ಯಾದಿ ಬುಡಕಟ್ಟುಗಳು ಪ್ರಮುಖವಾಗಿವೆ.

**3. ದಕ್ಷಿಣ ವಲಯ :** ಈ ವಲಯದ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳಲ್ಲಿ ಚೆಂಚು, ತೋಡ, ಬಡಗ, ಕೋಟ, ಪಣಿಯನ್, ಇರುಳ, ಕುರಮನ್, ಕುರುಂಬ, ಗೊಂಡ, ರಾಜಗೊಂಡ, ಸೋಲಿಗ, ಕಾಡುಕುರುಬ, ಜೇನುಕುರುಬ, ಕೊರಗ, ಹಸಲ, ಕೋಟ, ಪಳ್ಳಿಯನ್, ಯರವ, ಧನಗರ ಗೌಳಿ, ಕಾಡು ಗೊಲ್ಲ, ಹಾಲಕ್ಕಿ ಒಕ್ಕಲಿಗ, ಇತ್ಯಾದಿ ಬುಡಕಟ್ಟುಗಳು ಪ್ರಮುಖವಾಗಿವೆ.

**ಬುಡಕಟ್ಟುಗಳ ಲಕ್ಷಣಗಳು**

1. ಸರಳ ಮತ್ತು ಸ್ವಯಂ ಪರಿಪೂರ್ಣತೆ.
2. ಪ್ರಕೃತಿಯ ಪೂಜೆ.
3. ಸಮೂಹದ ಬಗ್ಗೆ ಅವರ ನಿಷ್ಠೆ ಮತ್ತು ಸಮಗ್ರತೆಗೆ ಮಹತ್ವ.
4. ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಸಮಾನತೆ.
5. ಒಳಬಾಂಧವ್ಯ ವಿವಾಹ.
6. ವಿಭಿನ್ನ ಮಾತೃಭಾಷೆ.
7. ಪ್ರಾಕೃತಿಕ ಪರಿಸರದಲ್ಲಿಯೇ ವಾಸ.
8. ಬೇಟೆ, ಸ್ವಲ್ಪ ಪ್ರಮಾಣದ ಕೃಷಿ, ಅರಣ್ಯ ಉಪ-ಉತ್ಪನ್ನಗಳ ಆರ್ಥಿಕ ವ್ಯವಸ್ಥೆ.

## ಗ್ರಾಮ ಸಮುದಾಯ

ಪ್ರಾದೇಶಿಕ ಭಾಷೆಗಳಲ್ಲಿ ಗ್ರಾಮಕ್ಕೆ ವಿವಿಧ ಹೆಸರುಗಳಿವೆ. ಉದಾಹರಣೆಗೆ ಹೇಳುವುದಾದರೆ ಹಳ್ಳಿ, ಪಳ್ಳಿ, ಊರ್, ಖೇಡ, ಗಾಂವ್ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಭಾರತ ಎಂದರೆ 'ಗ್ರಾಮಗಳ ನಾಡು ಹಳ್ಳಿಗಳ ಬೀಡು' ಎಂದು ಹೇಳಲಾಗುತ್ತದೆ. ಭಾರತದ ಪ್ರಾಚೀನ ಸಾಹಿತ್ಯದಲ್ಲಿ ಗ್ರಾಮಗಳ ಸಂಘಟನೆ ಹಾಗೂ ಅವುಗಳ ಆಡಳಿತದ ವಿಷಯವಾಗಿ ಹಲವು ವಿವರಣೆಗಳಿರುವುದನ್ನು ಕಾಣಬಹುದು. ಮಾನವ ಸಮಾಜವು ಗ್ರಾಮ ಎಂಬ ತೊಟ್ಟಿಲಲ್ಲಿಯೇ ವಿಕಾಸವಾಗಿದೆ ಎಂದು ಬೋಗಾರ್ಡಸ್ ಅಭಿಪ್ರಾಯಪಟ್ಟಿದ್ದಾರೆ. ಗ್ರಾಮ ಎಂಬುದು ಅತ್ಯಂತ ಪ್ರಾಚೀನ ನೆಲೆಯಾಗಿದ್ದರೂ ಕೂಡಾ ಇದನ್ನು ಅರ್ಥಪೂರ್ಣವಾಗಿ ವ್ಯಾಖ್ಯಾನಿಸುವುದು ಸಾಧ್ಯವಾಗಿಲ್ಲ. ಬೋಗಾರ್ಡಸ್‌ನ ಪ್ರಕಾರ 'ಕಡಿಮೆ ಜನಸಾಂದ್ರತೆಯುಳ್ಳ, ಸರಳ ಹಾಗೂ ಮಿತವ್ಯಯವಾದ ಜೀವನ ಸಾಗಿಸುವ, ಪ್ರಾಥಮಿಕ ಸಂಬಂಧಗಳನ್ನೊಳಗೊಂಡ ಕುಟುಂಬಗಳ ಒಕ್ಕೂಟವೇ ಗ್ರಾಮ ಸಮುದಾಯ.'

ಆದರೆ ಇಂದು ಗ್ರಾಮಗಳನ್ನು ಗುರುತಿಸಲು ಜನಸಂಖ್ಯೆ ಬಾಹುಳ್ಯವನ್ನೇ ಸಾರ್ವತ್ರಿಕವಾಗಿ ಆಧಾರವಾಗಿಟ್ಟುಕೊಳ್ಳಲಾಗಿದೆ. ಹಾಲೆಂಡನಲ್ಲಿ ಇಪತ್ತು ಸಾವಿರಕ್ಕಿಂತಲೂ ಕಡಿಮೆ ಜನಸಂಖ್ಯೆ ಹೊಂದಿದ ಪ್ರದೇಶ ಗ್ರಾಮವಾಗಿದೆ. ಅಮೆರಿಕಾದಲ್ಲಿ ಇಪ್ಪತ್ತೈದು ಸಾವಿರ, ಫ್ರಾನ್ಸ್, ಜಪಾನ್ ಮುಂತಾದ ದೇಶಗಳಲ್ಲಿ ಮೂವತ್ತು ಸಾವಿರಕ್ಕಿಂತಲೂ ಕಡಿಮೆ ಜನರು ವಾಸಿಸುವ ಪ್ರದೇಶವನ್ನು ಗ್ರಾಮ ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಐದು ಸಾವಿರಕ್ಕಿಂತ ಕಡಿಮೆ ಇರುವ ಪ್ರದೇಶಗಳನ್ನು ಗ್ರಾಮ ಎಂದು ಕರೆಯಲಾಗುತ್ತದೆ. ಆದರೆ ಇದಕ್ಕೆ ಬೇರೆಬೇರೆ ಉಪಾದಿಗಳನ್ನು ಸೇರಿಸಲಾಗಿದೆ. ಕಳೆದ ಐದು ಜನಗಣತಿಗಳಿಂದ ಜನಸಂಖ್ಯೆಯ

©KTBS Not to be re published

ಗಾತ್ರವಲ್ಲದೆ, ಅಲ್ಲಿನ ವೃತ್ತಿ ಜೀವನ, ಆರ್ಥಿಕ ಬದುಕು, ಆದಾಯದ ಮೂಲಗಳು, ದುಡಿಮೆಯ ಚಟುವಟಿಕೆ, ಅಗತ್ಯ ಮೂಲ ಸೌಲಭ್ಯ, ಇತ್ಯಾದಿಗಳ ಆಧಾರದಲ್ಲಿ ಗ್ರಾಮೀಣ ಪ್ರದೇಶವನ್ನು ವ್ಯಾಖ್ಯಾನಿಸಲಾಗುತ್ತಿದೆ.

ಜನಸಂಖ್ಯಾಶಾಸ್ತ್ರದ ನೆಲೆಯಲ್ಲಿ ಗ್ರಾಮ ಎಂದರೆ ಮುಂದಿನ ವಿವರಣೆ ಕೊಡಬಹುದು: 5000ಕ್ಕಿಂತಲೂ ಕಡಿಮೆ ಜನವಸತಿ ಹೊಂದಿದ ಪ್ರದೇಶವಾಗಿದ್ದು, ಪ್ರತಿ ಚದರ ಕಿಲೋಮೀಟರಗೆ 400ಕ್ಕಿಂತ ಕಡಿಮೆ ಜನಸಾಂದ್ರತೆ ಇರಬೇಕು. ಅಲ್ಲಿ ಶೇಕಡಾ 70ಕ್ಕಿಂತಲೂ ಹೆಚ್ಚು ಜನ ಕೃಷಿ ಹಾಗೂ ಅದಕ್ಕೆ ಪೂರಕವಾದ ವೃತ್ತಿ ಅನುಸರಿಸುತ್ತಿರಬೇಕು. ಕೇವಲ ಜನಸಂಖ್ಯೆಯ ಆಧಾರದಲ್ಲಿ ಗ್ರಾಮೀಣ ಪ್ರದೇಶವನ್ನು ವ್ಯಾಖ್ಯಾನ ಮಾಡುವುದು ಸರಿಯಲ್ಲ, ವ್ಯಕ್ತಿ ವ್ಯಕ್ತಿಯ ನಡುವೆ ಇರುವ ಸಾಮಾಜಿಕ ಸಂಬಂಧಗಳು ಮುಖ್ಯ – ಎಂದು ಕೆಲವು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ.

### ಗ್ರಾಮದ ರಚನೆ

ಗ್ರಾಮ ನಗರಕ್ಕಿಂತ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಭಿನ್ನವಾಗಿರುತ್ತದೆ. ಗ್ರಾಮ ಎಂದಾಕ್ಷಣವೇ ಕೃಷಿ ಹಾಗೂ ಅದಕ್ಕೆ ಪೂರಕವಾದ ವೃತ್ತಿಯನ್ನು ಅವಲಂಬಿಸಿದ ಹಲವು ಕುಟುಂಬಗಳು ವಾಸಿಸುವ ಪ್ರದೇಶ ಎಂದು ಹೇಳಬಹುದು. ಕೆಲವು ಕುಟುಂಬಗಳ ಸುತ್ತಲೂ ಹೊಲ–ಗದ್ದೆಗಳು, ಕಿರುದಾರಿ, ಮರಗಿಡಗಳು ಕೃಷಿ ಅಥವಾ ನಿಸರ್ಗವನ್ನೇ ಅವಲಂಬಿಸಿದ ಜನಸಮೂಹ ಅಲ್ಲಿ ಇರುತ್ತದೆ. ಕೇವಲ ಕೃಷಿ ಅವಲಂಬಿಸಿದ ಕುಟುಂಬಗಳಲ್ಲದೆ ಇತರ ಸಾಕುಪ್ರಾಣಿಗಳಾದ ಎತ್ತು, ಎಮ್ಮೆ, ಆಕಳು, ಕುರಿ, ಕೋಳಿ ಮುಂತಾದವುಗಳು ಇರುತ್ತವೆ. ಒಟ್ಟಿನಲ್ಲಿ ಗ್ರಾಮದ ಭೌತಿಕ ಸ್ವರೂಪ ಎಂದರೆ ಹಲವಾರು ಕೃಷಿ ಸಂಬಂಧಿ ಅಂಶಗಳನ್ನು ಒಳಗೊಂಡಿರುತ್ತದೆ. ಜನಸಂಖ್ಯೆಯ ಪ್ರಮಾಣ, ಜನಸಾಂದ್ರತೆ, ವೃತ್ತಿ, ನಿಸರ್ಗದ ಸ್ವರೂಪ, ನೀರು, ನೆಲ, ಮೂಲ ಸೌಲಭ್ಯಗಳ ದೊರೆಯುವಿಕೆ ಮತ್ತು ಋತುಮಾನಗಳ ಪ್ರಭಾವ ಇಲ್ಲಿ ಅಡಕವಾಗಿರುತ್ತವೆ.

### ಗ್ರಾಮಗಳ ಪ್ರಕಾರಗಳು

ಗ್ರಾಮಗಳನ್ನು ವಿಶಾಲಾರ್ಥದಲ್ಲಿ ಈ ಕೆಳಗಿನಂತೆ ವಿಂಗಡಿಸಬಹುದು.

1. **ಕೇಂದ್ರೀಕೃತ ಗ್ರಾಮ :** ಈ ಗ್ರಾಮಗಳ ಮುಖ್ಯ ಲಕ್ಷಣ ಎಂದರೆ ಹೊಲಗಳ ಮಧ್ಯದಲ್ಲಿ ಮನೆಗಳಿರುತ್ತವೆ. ಮನೆಗಳು ಒಂದಕ್ಕೊಂದು ಹತ್ತಿರದಲ್ಲಿಯೇ ಇರುತ್ತವೆ. ಮನೆಗಳ ಸುತ್ತಲೂ ಹೊಲಗಳಿರುತ್ತವೆ. ಬೇಸಾಯ ಮಾಡುವವರ ಸಂಖ್ಯೆ ಹೆಚ್ಚಿದಂತೆ ಗ್ರಾಮದ ವ್ಯಾಪ್ತಿ ವಿಶಾಲವಾಗುತ್ತದೆ.

2. **ಪ್ರತ್ಯೇಕಿತ ಹೊಲ ಮನೆಗಳ ಗ್ರಾಮ** : ಇಂತಹ ಗ್ರಾಮಗಳನ್ನು ಕರ್ನಾಟಕದ ಕರಾವಳಿ ಪ್ರದೇಶ ಮತ್ತು ರಾಯಚೂರು ಜಿಲ್ಲೆಯ ನೀರಾವರಿ ಪ್ರದೇಶಗಳಲ್ಲಿ ಕಾಣಬಹುದು. ಇಲ್ಲಿ ಒಂದು ರೈತ ಕುಟುಂಬ ಇನ್ನೊಂದು ರೈತ ಕುಟುಂಬದಿಂದ ಪ್ರತ್ಯೇಕವಾಗಿ ವಾಸಿಸುತ್ತದೆ. ರೈತರು ವಾಸಿಸುವ ಮನೆಯ ಸುತ್ತಲೂ ದನದ ಕೊಟ್ಟಿಗೆ, ಕೃಷಿಗೆ ಬೇಕಾಗುವ ಸಾಧನ ಸಲಕರಣೆ, ಬೆಳೆಗಳನ್ನು ರಾಶಿ ಮಾಡುವ ಸ್ಥಳ, ದನಗಳಿಗೆ ಬೇಕಾಗುವ ಮೇವು–ಹುಲ್ಲುಗಳ ಬಣವೆ ಇರುತ್ತವೆ.

3. **ಚದುರಿದ ಗುಂಪು ಗ್ರಾಮ :** ಇಂತಹ ಗ್ರಾಮಗಳು, ಕರ್ನಾಟಕದ ಗುಡ್ಡಗಾಡು ಪ್ರದೇಶ ಮತ್ತು ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ಕಾಣಬಹುದು. ಇಲ್ಲಿ ಮನೆಗಳು ಒಟ್ಟಾಗಿ ಇರುವುದಿಲ್ಲ. ನಾಲ್ಕಾರು ಕುಟುಂಬಗಳು ಚಿಕ್ಕ ದಿನ್ನೆಯ ಮೇಲೆ ಇದ್ದರೆ. ಅದೇ ದಿನ್ನೆಯ ಇಳಿಜಾರಿನಲ್ಲಿ ಮತ್ತೆ ಕೆಲವು ಕುಟುಂಬಗಳು ಇರುತ್ತವೆ. ಇಂತಹ ಹಲವು ಮನೆಗಳ ಗುಂಪು ಒಂದು ಗ್ರಾಮ ಎಂದು ಕರೆಯಿಸಿಕೊಳ್ಳುತ್ತದೆ.

4. **ಸಾಲುಮನೆಗಳ ಗ್ರಾಮ :** ಈ ಗ್ರಾಮಗಳಲ್ಲಿ ಬೀದಿಯ ಎರಡು ಬದಿಗೆ ಸಾಲಾಗಿ ಹಲವು ಕುಟುಂಬಗಳು ವಾಸಿಸುತ್ತವೆ. ಇಲ್ಲಿ ಒಂದು ಮನೆ ಇನ್ನೊಂದು ಮನೆಗೆ ಅಂಟಿಕೊಂಡಂತೆ ಇರುತ್ತದೆ. ಇಲ್ಲಿ ಮನೆಗಳನ್ನು ವಿಭಜಿಸಲು ಎರಡು ಮನೆ ನಡುವೆ ಒಂದು ಗೋಡೆ ಇರುತ್ತದೆ. ಎಲ್ಲ ಮನೆಗಳು ಒಂದೇ ಕಟ್ಟಡದ ವಿಸ್ತರಣೆಯಂತೆ ಕಾಣುತ್ತವೆ.

©KTBS Not to be republished

**5. ಚಕ್ರಾಕಾರದ ಗ್ರಾಮಗಳು:** ಈ ಗ್ರಾಮಗಳನ್ನು ದುಂಡಾಕಾರದ ಗ್ರಾಮಗಳೆಂದು ಕರೆಯುತ್ತಾರೆ. ವಿಶೇಷವಾಗಿ ದೇವಾಲಯ, ಮಸೀದಿ, ಚರ್ಚ್, ಕೆರೆ ಮುಂತಾದ ಸ್ಥಳಗಳ ಸುತ್ತಲೂ ಜನರ ವಾಸದ ಮನೆಗಳಿರುತ್ತವೆ.

**6. ಚೌಕಾಕಾರದ ಅಥವಾ ಆಯತಾಕಾರದ ಗ್ರಾಮ:** ಈ ಗ್ರಾಮಗಳು ಸಾಲುಮನೆ ಗ್ರಾಮವನ್ನೇ ಹೋಲುತ್ತವೆ. ಇವುಗಳ ವಿಶಿಷ್ಟತೆ ಎಂದರೆ ಮನೆಗಳ ಸಾಲು ಒಂದಕ್ಕೊಂದು ಸಮಾನಾಂತರ ಅಥವಾ ಲಂಬ ರೂಪದಲ್ಲಿ ಇರುತ್ತವೆ.

**7. ಕೂಡುದಾರಿ ಹಾಗೂ ಮಾರುಕಟ್ಟೆ ಗ್ರಾಮ :** ಕೃಷಿಯೇತರ ವೃತ್ತಿ ಅನುಸರಿಸುವ ಕುಟುಂಬಗಳು ಇಲ್ಲಿ ವಾಸಿಸುತ್ತವೆ. ಎರಡು ಮೂರು ರಸ್ತೆಗಳು ಕೂಡುವ ಪ್ರದೇಶದಲ್ಲಿ ಮನೆಗಳಿರುತ್ತವೆ. ವಾಸದ ಮನೆಯ ಜೊತೆಗೆ ಅಂಗಡಿ, ಉಪಾಹಾರ ಮಂದಿರ ಇರುತ್ತವೆ. ಇವುಗಳನ್ನು ಕೈಮರ, ಜಂಕ್ಷನ್, ಕೊಡು, ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ.

ಮೇಲೆ ವಿವರಿಸಿದ ಗ್ರಾಮಗಳ ವಿಂಗಡನೆ ಒಂದು ರೀತಿ ಅಪೂರ್ಣವಾಗಿಯೆ ಇರಬಹುದು. ಕೆಲವು ಗ್ರಾಮಗಳು ಇಂತಹ ವರ್ಗೀಕರಣದಲ್ಲಿ ಸೇರ್ಪಡೆಯಾಗದೇ ಹೋಗಬಹುದು. ಏಕೆಂದರೆ ಅಭಿವೃದ್ಧಿ, ತಂತ್ರಜ್ಞಾನ ಆಧಾರಿತ ಕೃಷಿ ಹಾಗೂ ಹೊಸ ಹೊಸ ಉದ್ಯೋಗಗಳಿಂದ ಉಂಟಾಗುವ ಬದಲಾವಣೆಗಳು ಗ್ರಾಮಗಳ ರಚನೆಯನ್ನು ವೇಗವಾಗಿ ಬದಲಾಯಿಸುತ್ತವೆ.

## ಗ್ರಾಮ ಸಮುದಾಯದ ಲಕ್ಷಣಗಳು

ಭಾರತದ ಗ್ರಾಮ ಸಮಾಜವು ಮೇಲಿಂದ ಮೇಲೆ ಅನೇಕ ಬದಲಾವಣೆಗೆ ಒಳಗೊಂಡಿದ್ದರೂ ಕೆಲವು ವಿಶಿಷ್ಟ ಲಕ್ಷಣಗಳನ್ನು ಒಳಗೊಂಡಿದೆ:



**1. ಗಾತ್ರದಲ್ಲಿ ಚಿಕ್ಕದು:** ಮ್ಯಾಕ್ಸ್ ವೇಬರ್ ಹೇಳಿದಂತೆ ಬಹುಸಂಖ್ಯಾತ ಭಾರತೀಯರು ಗ್ರಾಮವಾಸಿಗಳು. 2011ನೇ ಜನಗಣತಿ ವರದಿ ಪ್ರಕಾರ ಒಟ್ಟು ಜನರಲ್ಲಿ ಶೇಕಡ 68 ಪ್ರಮಾಣದ ಜನರು ಗ್ರಾಮವಾಸಿಗಳು. ಇದರ ಪ್ರಭಾವವನ್ನು ಜನತೆಯ ಸಾಮಾಜಿಕ ಜೀವನದ ಮೇಲೆ ಕಾಣಬಹುದು. ಗ್ರಾಮವು ಸಾಮಾನ್ಯವಾಗಿ ಚಿಕ್ಕಗಾತ್ರವನ್ನು ಹೊಂದಿರುತ್ತದೆ. ಜನಸಾಂದ್ರತೆ ದಟ್ಟವಾಗಿ ಇರುವುದಿಲ್ಲ.

**2. ಕೃಷಿ ಮತ್ತು ಕೃಷಿ ಪೂರಕ ಆರ್ಥಿಕ ಜೀವನ :** ಗ್ರಾಮೀಣ ಜೀವನ ಹೆಚ್ಚು ಸರಳವಾದುದು. ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳು ಇಲ್ಲಿ ಪ್ರಮುಖವಾಗಿವೆ. ವ್ಯವಸಾಯವು ಮುಖ್ಯವಾಗಿ ಪ್ರಕೃತಿಯನ್ನೇ ಅವಲಂಬಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ 59ರಷ್ಟು ಪುರುಷರು ಮತ್ತು ಶೇಕಡ 75 ರಷ್ಟು ಮಹಿಳೆಯರು ಜೀವನೋಪಾಯಕ್ಕೆ ಕೃಷಿಯನ್ನು ನೇರವಾಗಿ ಅವಲಂಬಿಸಿದ್ದಾರೆ. ಕಳೆದ ಮೂರು ಜನಗಣತಿ ಅವಧಿಯಲ್ಲಿ ಕೃಷಿಕೂಲಿ ಕಾರ್ಮಿಕರ ಸಂಖ್ಯೆ 74.6 ಮಿಲಿಯನ್(1991) ಯಿಂದ 106.8 ಮಿಲಿಯನ್ (2001) ಮತ್ತು 144 ಮಿಲಿಯನ್‌ಗೆ (2011) ಹೆಚ್ಚಳವಾಗಿದೆ. ಕೃಷಿಯು ಹವಾಮಾನದ ಜೊತೆ ಆಡುವ ಜೂಜಾಟ ಎಂದು ಹೇಳಲಾಗುತ್ತದೆ. ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳು ನಿಶ್ಚಿತ ಆದಾಯ ಇಲ್ಲದೆ ಗ್ರಾಮೀಣ ಬದುಕಿನ ಬಹುದೊಡ್ಡ ಸವಾಲಾಗಿದೆ.

© KTBS Not to be republished

**3. ಸಮುದಾಯ ಜೀವನ :** ಗ್ರಾಮ ಸಮುದಾಯದವರು ಪ್ರಕೃತಿಯಲ್ಲಿ ಅಚಲವಾದ ಭಕ್ತಿ ಇಟ್ಟಿರುತ್ತಾರೆ. ಮಳೆಗಾಗಿ ಪೂಜೆ ಪುನಸ್ಕಾರಗಳನ್ನು ಎಲ್ಲರೂ ಸೇರಿ ಮಾಡುತ್ತಾರೆ. ಸ್ಥಳೀಯ ದೇವರುಗಳ ಜಾತ್ರೆ, ಹಬ್ಬ ಹರಿದಿನಗಳನ್ನು ಸಾಮೂಹಿಕವಾಗಿ ಆಚರಣೆ ಮಾಡುತ್ತಾರೆ. ಸಾಮಾನ್ಯವಾಗಿ ಎಲ್ಲರೂ ಸೌಹಾರ್ದತೆಯಿಂದ ಜೀವಿಸುತ್ತಾರೆ. 'ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ' ಎಂಬ ಸಹಕಾರ ತತ್ವದಲ್ಲಿ ಗ್ರಾಮಗಳು ಬೆಳೆದು ಬಂದಿವೆ. ಇಲ್ಲಿ ಸ್ಪರ್ಧೆ, ವಂಚನೆ, ಮೋಸ, ಕೃತ್ರಿಮತೆ, ದೌರ್ಜನ್ಯಗಳಿಗೆ ಹೆಚ್ಚು ಸ್ಥಾನವಿಲ್ಲ.

**4. ಪ್ರಜಾಪ್ರಭುತ್ವದ ಆದರ್ಶ :** ಭಾರತದ ಗ್ರಾಮಗಳು ಇಂದು ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪುಗೊಳ್ಳುತ್ತಿವೆ. ಗ್ರಾಮದ ಕೆಲವು ಸಾಮಾನ್ಯ ಕಾರ್ಯಗಳಲ್ಲಿ ಎಲ್ಲಾ ಪಂಗಡದ ಹಾಗೂ ಜಾತಿಯ ಜನರು ಭಾಗವಹಿಸುತ್ತಿದ್ದಾರೆ. ಗ್ರಾಮ ಪಂಚಾಯತಿಗಳಲ್ಲಿ ಎಲ್ಲಾ ಪಂಗಡ ಮತ್ತು ಜಾತಿಯವರು ಭಾಗವಹಿಸುವುದೇ ಇದಕ್ಕೆ ನಿದರ್ಶನವಾಗಿದೆ.

**5. ನಾಗರಿಕ ಮೂಲ ಸೌಲಭ್ಯಗಳ ಕೊರತೆ :** ಗ್ರಾಮೀಣ ಪ್ರದೇಶದಲ್ಲಿ ಮಾನವ ಸಮಾಜಕ್ಕೆ ಬೇಕಾಗುವ ಆರೋಗ್ಯ, ಶಿಕ್ಷಣ, ನಾಗರಿಕ ರಕ್ಷಣಾ ವ್ಯವಸ್ಥೆ ಮತ್ತು ನ್ಯಾಯಾಂಗ ವ್ಯವಸ್ಥೆ ಇತ್ಯಾದಿಗಳ ಅಸಮತೋಲನ ಇರುವುದು ಸಹ ವಾಸ್ತವ ಸಂಗತಿ.

## ನಗರ ಸಮುದಾಯ

ನಗರ ಸಮುದಾಯಗಳು ಮಾನವ ಚರಿತ್ರೆಯಷ್ಟೇ ಇತಿಹಾಸ ಹೊಂದಿವೆ. ಕಾಲ ಕಾಲಕ್ಕೆ ಮಾನವನಲ್ಲಿ ಉಂಟಾದ ಉತ್ಪಾದನಾ ಸಾಮರ್ಥ್ಯ ಮತ್ತು ಉತ್ಪಾದನಾ ಮಾರ್ಗಗಳು ನಗರಗಳ ಸ್ವರೂಪವನ್ನು ರೂಪಾಂತರಿಸಿವೆ. ಹರಪ್ಪ, ಮೆಹೆಂಜೊದಾರೊ ನಗರಗಳಿಂದ ಇಲ್ಲಿಯವರೆಗೂ ನಗರಗಳು ಬೃಹತ್ ಪ್ರಮಾಣದಲ್ಲಿ ವಿಸ್ತರಣೆಯಾಗುತ್ತಿವೆ. ಹೀಗಾಗಿ ನಗರಗಳು ಮಾನವ ಜೀವನವಿಕಾಸದಲ್ಲಿ ಒಂದು ವಿಶಿಷ್ಟ ಹಂತ. ಇದು ಮಾನವ ಜೀವನ ಶೈಲಿಯಲ್ಲಿ ಉಂಟಾದ ಮಾರ್ಪಾಡುಗಳ ಜೊತೆಗೆ ಮಾನವ ನಾಗರಿಕತೆಯನ್ನು ರೂಪಿಸುವಲ್ಲಿ ನಗರಗಳು ಮಹತ್ವದ ಪಾತ್ರವನ್ನು ನಿರ್ವಹಿಸಿವೆ.


ಕೈಗಾರಿಕಾ ಕ್ರಾಂತಿಯ ನಂತರ ನಗರಗಳ ಸ್ವರೂಪದಲ್ಲಿ ಮಹತ್ವದ ರೂಪಾಂತರವಾಗಿದೆ. ತಂತ್ರಜ್ಞಾನದ ಕ್ರಾಂತಿಯು ಕೈಗಾರಿಕಾ ಕ್ರಾಂತಿಯನ್ನು ಪ್ರಭಾವಿಸುತ್ತದೆ. ಕೈಗಾರಿಕಾ ಕ್ರಾಂತಿಯ ಪ್ರಕ್ರಿಯೆಗಳು ನಗರಗಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿವೆ. ಆ ಸಮಯದಲ್ಲಿ ಲೆಕ್ಕವಿಲ್ಲದಷ್ಟು ಜನರು ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ವಲಸೆ ಬಂದರು. ಚಿಕ್ಕ-ಪುಟ್ಟ ಪಟ್ಟಣಗಳು, ಬೃಹತ್ ನಗರಗಳಾಗಿ ರೂಪಾಂತರವಾದವು. ಕೃಷಿಯಲ್ಲಿನ ಹೆಚ್ಚುವರಿ ಉತ್ಪಾದನೆಯು ಕೃಷಿಯೇತರ ಚಟುವಟಿಕೆಗಳನ್ನು ಹೆಚ್ಚಿಸಿತು. ಹೆಚ್ಚುವರಿ ಉತ್ಪಾದನೆಯು ಬೃಹತ್ ಕಟ್ಟಡಗಳ ನಿರ್ಮಾಣಕ್ಕೆ ಮತ್ತು ಬೃಹತ್ ಉದ್ಯಮಗಳ ಸ್ಥಾಪನೆಗೆ ಮತ್ತು ಬೃಹತ್ ವ್ಯವಹಾರ-ವಾಣಿಜ್ಯಗಳಿಗೆ ಎಡೆಮಾಡಿಕೊಟ್ಟಿತು. ಈ ಪ್ರಕ್ರಿಯೆಯು ನಗರಗಳನ್ನು ಗ್ರಾಮಗಳಿಂದ ಪ್ರತ್ಯೇಕಿಸಿ ಗ್ರಾಮ ಮತ್ತು ನಗರ ಎನ್ನುವ ಎರಡು ವ್ಯವಸ್ಥೆಗಳನ್ನು ಹುಟ್ಟುಹಾಕಿತು.

ನಗರಗಳನ್ನು ಆಧುನಿಕ ಜನವಸತಿ ನೆಲೆಗಳು ಎಂದು ಹೇಳಲಾಗುತ್ತದೆ. ನಗರ ಜೀವನವು ಮಾನವನ ಸಾಮಾಜಿಕ ಚರಿತ್ರೆಯಲ್ಲಿ ಅತಿ ಉನ್ನತ ಮತ್ತು ವೈಭವಯುತ ಜೀವನ ಮಾದರಿ ಅನ್ನಿಸುವಾಗಲೇ ಅಷ್ಟೇ ಸಂಕೀರ್ಣವಾಗಿದೆ. ಶಾಸನಬದ್ಧ ಅರ್ಥದಲ್ಲಿ ಒಂದು ರಾಷ್ಟ್ರದ ಆಡಳಿತ ಒಂದು ಜನವಸತಿಗೆ, ನಗರ ಸ್ಥಾನಮಾನ ಇದೆ, ಎಂದು ಅಧಿಕೃತ ಪ್ರಕಟಣೆ ಹೊರಡಿಸಿದಲ್ಲಿ ಆಗ ಅದು ನಗರವಾಗುತ್ತದೆ. ಯಾವ ಸಮುದಾಯ 5000 ಜನಸಂಖ್ಯೆಗಿಂತ ಹೆಚ್ಚಿಗೆ ಜನರನ್ನು ಹೊಂದಿದ್ದು, ಪತಿ ಚದರ ಕಿಲೋಮೀಟರಿಗೆ 1000 ಜನಸಾಂದ್ರತೆ ಹೊಂದಿದ್ದು, ಅಲ್ಲಿ ನೆಲೆಸಿರುವ ಜನರಲ್ಲಿ ಶೇಕಡ 75ಕ್ಕಿಂತ ಹೆಚ್ಚು ಜನರು ಬದುಕಿಗೆ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿದ್ದಾರೊ ಅದಕ್ಕೆ ನಗರ ಎಂದು ಕರೆಯುತ್ತಾರೆ. ಜನಸಂಖ್ಯಾಶಾಸ್ತ್ರದ ದೃಷ್ಟಿಯಲ್ಲಿ ಯಾವ ಪ್ರದೇಶ ಅತಿ ಹೆಚ್ಚು ಜನಸಂಖ್ಯೆ ಮತ್ತು ಜನಸಾಂದ್ರತೆ ಹೊಂದಿರುತ್ತದೆಯೊ ಅದನ್ನು ನಗರ ಎಂದು ಕರೆಯಬಹುದು.

©KTBS Not to be republished

ನಗರೀಕರಣ ಒಂದು ಸಮಾಜದಲ್ಲಿ ಕಾಲದಿಂದ ಕಾಲಕ್ಕೆ ನಡೆಯುವ ಪ್ರಕ್ರಿಯೆ. ಹಲವು ಕಾರಣಗಳಿಂದ ನಗರವಾಸಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತದೆ. ಒಂದು ಸಮಾಜ ತನ್ನ ಗ್ರಾಮೀಣ ನೆಲೆಯಿಂದ ನಗರ ಸಮಾಜದತ್ತ ಪರಿವರ್ತನೆ ಹೊಂದುವ ಪ್ರಕ್ರಿಯೆಯೆ ನಗರೀಕರಣ. ಔದ್ಯಮೀಕರಣವು ಎಲ್ಲ ಸಮಾಜಗಳಿಗೆ ಆರ್ಥಿಕ ಚೈತನ್ಯ ಒದಗಿಸಿ ಜನವಸತಿ ನೆಲೆಗಳಿಗೆ ಹೊಸ ಸ್ವರೂಪ ನೀಡಲು ಪ್ರಾರಂಭಿಸಿದಾಗಿನಿಂದ ನಗರೀಕರಣ ಪ್ರಕ್ರಿಯೆ ನಡೆಯುತ್ತಿದೆ. ಹೀಗಾಗಿ ನಗರೀಕರಣ ಪ್ರಕ್ರಿಯೆ ಇಂದು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಕಂಡುಬರುತ್ತದೆ.

**ನಗರ ಸಮುದಾಯದ ಲಕ್ಷಣಗಳು :**



**1. ಗಾತ್ರದಲ್ಲಿ ದೊಡ್ಡದು :** ನಗರ ಸಮುದಾಯ ದೊಡ್ಡದಿದ್ದು, ಹೆಚ್ಚಿನ ಜನಸಾಂದ್ರತೆ ಹೊಂದಿರುತ್ತದೆ. ಉದಾಹರಣೆಗೆ ಬೆಂಗಳೂರಿನಲ್ಲಿ 2011ರ ಜನಗಣತಿಯಂತೆ ಒಂದು ಚದುರ ಕಿ.ಮೀ.ನಲ್ಲಿ 4381 ಜನರು ವಾಸ ಮಾಡುತ್ತಿದ್ದಾರೆ.

**2. ಸಾಂಸ್ಕೃತಿಕ ಬಹುತ್ವ:** ನಗರಗಳಲ್ಲಿ ಹೆಚ್ಚಿನ ಸಾಂಸ್ಕೃತಿಕ ಬಹುತ್ವವನ್ನು ನಾವು ಕಾಣಬಹುದು. ಏಕೆಂದರೆ, ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಜನರು ಬೇರೆ ಬೇರೆ ಪ್ರದೇಶಗಳಿಂದ ಬಂದು ಒಂದೇ ಕಡೆ ವಾಸಮಾಡುತ್ತಿರುತ್ತಾರೆ. ಆಗ ಅವರ ಜೀವನವು ಒಂದೇ ಸಾಂಸ್ಕೃತಿಕ ನೆಲೆಯಲ್ಲಿ ನಡೆಯದೆ, ವಿವಿಧ ಭಾಷಿಕ, ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ನಡೆಯುತ್ತಿರುತ್ತದೆ.

**3. ಕೃಷಿಯೇತರ ವೃತ್ತಿ :** ನಗರಗಳಲ್ಲಿ ಹೆಚ್ಚಿನ ಜನರು ಕೃಷಿಯೇತರ ವೃತ್ತಿಗಳನ್ನು ಮಾಡುತ್ತಾರೆ. ಅಂತಹ ಚಟುವಟಿಕೆಗಳೆಂದರೆ ಕೈಗಾರಿಕಾ ಉತ್ಪಾದನೆ, ವ್ಯಾಪಾರ ಮತ್ತು ವಾಣಿಜ್ಯ, ವೃತ್ತಿಪರತೆ ಮತ್ತು ಆಡಳಿತದಲ್ಲಿ ಉದ್ಯೋಗ–ಹೀಗೆ ವಿವಿಧ ವೃತ್ತಿಗಳಲ್ಲಿ ಜನರು ತೊಡಗಿರುತ್ತಾರೆ.

**4. ಗೌಣವಾಗುವ ಪ್ರಾಥಮಿಕ ಸಂಬಂಧಗಳು:** ನಗರ ಸಮುದಾಯದಲ್ಲಿ ಔಪಚಾರಿಕ ಸಂಬಂಧಗಳೇ ಹೆಚ್ಚು. ಒಂದು ರೀತಿಯಲ್ಲಿ ಯಾರೂ ಯಾರನ್ನೂ ಹೆಚ್ಚಾಗಿ ಹಚ್ಚಿಕೊಳ್ಳುವುದಿಲ್ಲ. ತಾವಾಯಿತು ತಮ್ಮ ಕುಟುಂಬ ಜೀವನವಾಯಿತು ಎಂದು ಕೊಂಡವರೇ ಹೆಚ್ಚು.

**5. ಔಪಚಾರಿಕ ಸಾಮಾಜಿಕ ನಿಯಂತ್ರಣ:** ನಗರ ಪ್ರದೇಶದಲ್ಲಿ ಸಮಾಜದ ರಕ್ಷಣೆ ಮತ್ತು ನಾಗರಿಕ ಹಕ್ಕುಗಳ ರಕ್ಷಣೆಗೆ ಬೇಕಾಗುವ ಪೊಲೀಸ್ ವ್ಯವಸ್ಥೆ, ನ್ಯಾಯಾಂಗ ಇನ್ನೂ ಮುಂತಾದ ನಾಗರಿಕ ರಕ್ಷಣಾ ವ್ಯವಸ್ಥೆಗಳ ಮೂಲಕ ಸಾಮಾಜಿಕ ನಿಯಂತ್ರಣ ಜಾರಿಯಲ್ಲಿರುತ್ತದೆ.

## ಅಭ್ಯಾಸಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1 ಅಲೆಮಾರಿತನವು ಒಂದು ಜೀವನ ವಿಧಾನ ಎಂದು __________ ಹೇಳುತ್ತದೆ.

2. ಭಾರತೀಯ ಸಮಾಜದ ಆಧಾರ ಸ್ತಂಭ __________ ಸಮುದಾಯ.

3. ಈಶಾನ್ಯ ವಲಯದ ಆದಿವಾಸಿಗಳು __________ .

©KTBS Not to be republished

**II. ಈ ಕೆಳಗಿನ ಪ್ರಶ್ನೆಗಳಿಗೆ ಚರ್ಚಿಸಿ ಉತ್ತರ ಬರೆಯಿರಿ.**

1. ಬುಡಕಟ್ಟು ಎಂದರೇನು?
2. ಗ್ರಾಮ ಎಂದರೇನು?
3. ನಗರ ಪರಿಕಲ್ಪನೆಯನ್ನು ತಿಳಿಸಿ.
4. ಬುಡಕಟ್ಟು ಸಮುದಾಯಗಳ ಲಕ್ಷಣಗಳನ್ನು ವಿವರಿಸಿ.
5. ಭೌಗೋಳಿಕ ನೆಲೆಯಲ್ಲಿ ಭಾರತದ ಬುಡಕಟ್ಟುಗಳನ್ನು ಹೇಗೆ ವಿಭಾಗಿಸಲಾಗಿದೆ ವಿವರಿಸಿ.
6. ಗ್ರಾಮ ಸಮುದಾಯಗಳ ಪ್ರಕಾರಗಳನ್ನು ವಿವರಿಸಿ.

**III. ಚಟುವಟಿಕೆ :**

1. ಗ್ರಾಮೀಣ ಮತ್ತು ನಗರ ಜೀವನದ ಸವಾಲು ಸಾಧ್ಯತೆಗಳನ್ನು ಕುರಿತು ಮಕ್ಕಳನ್ನು ಎರಡು ಗುಂಪುಗಳಾಗಿ ವಿಭಾಗಿಸಿ ಚರ್ಚೆಗಳನ್ನು ಏರ್ಪಡಿಸುವುದು.
2. ಶಾಲೆಗೆ ಸಮೀಪವಿರುವ / ಮಕ್ಕಳಿಗೆ ತಿಳಿದಿರುವ ಬುಡಕಟ್ಟಿನ ಜೀವನ ಶೈಲಿಯನ್ನು ಸಂಗ್ರಹಿಸುವುದು.

**IV. ನಿಯೋಜಿತ ಕಾರ್ಯ**

1. ಮಕ್ಕಳಿಗೆ ಗ್ರಾಮ/ನಗರದಲ್ಲಿ ಸೌಲಭ್ಯಗಳ ಕೊರತೆಯನ್ನು ಸರಿಪಡಿಸಲು ಗ್ರಾಮ ಪಂಚಾಯತಿ/ ನಗರ ಸಭೆ/ ಕಾರ್ಪೋರೇಷನ್‌ಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಸ್ಥಳೀಯ ಸರ್ಕಾರಗಳ ಸದಸ್ಯರಿಂದ ಮಾಹಿತಿ ಪಡೆಯಲು ತಿಳಿಸುವುದು.

©KTBS Not to be re published


# ಅಧ್ಯಾಯ – 6

# ಕರ್ನಾಟಕದ ಖನಿಜ ಸಂಪನ್ಮೂಲಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕರ್ನಾಟಕದಲ್ಲಿ ದೊರೆಯುವ ಖನಿಜಗಳ ಪರಿಚಯ ಮತ್ತು ಅವುಗಳ ಪ್ರಾಮುಖ್ಯತೆ.*
- *ಕರ್ನಾಟಕದ ಪ್ರಮುಖ ಖನಿಜಗಳ ಹಂಚಿಕೆ ಹಾಗೂ ಉತ್ಪಾದನೆ.*

ಒಂದು ದೇಶ, ರಾಜ್ಯ ಅಥವಾ ಪ್ರದೇಶವು ಆರ್ಥಿಕವಾಗಿ ಮುಂದುವರಿಯಲು ಅಲ್ಲಿ ಸಿಗುವ ಅಪಾರವಾದ ಖನಿಜ ಸಂಪನ್ಮೂಲಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕರ್ನಾಟಕ ರಾಜ್ಯವು ವಿವಿಧ ರೀತಿಯ ಖನಿಜ ಸಂಪತ್ತನ್ನು ಹೊಂದಿದೆ. ಅವುಗಳಲ್ಲಿ ಕಬ್ಬಿಣದ ಅದಿರು, ಚಿನ್ನ, ಮ್ಯಾಂಗನೀಸ್, ಸುಣ್ಣಕಲ್ಲು, ತಾಮ್ರ, ಬಾಕ್ಸೈಟ್, ಕ್ರೋಮೈಟ್, ಕಲ್ನಾರು, ಅಬ್ರಕ ಮತ್ತು ಗ್ರಾನೈಟ್ ಪ್ರಮುಖವಾದವು. ಇವುಗಳನ್ನು ಕುರಿತು ಮುಂದೆ ತಿಳಿಯೋಣ.




**ಕಬ್ಬಿಣದ ಅದಿರು:** ಇದು ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಕಚ್ಚಾ ವಸ್ತು. ಕರ್ನಾಟಕವು ಉತ್ತಮ ದರ್ಜೆಯ ಮ್ಯಾಗ್ನಟೈಟ್ ಮತ್ತು ಹೆಮಾಟೈಟ್ ವರ್ಗದ ಅಪಾರವಾದ ಕಬ್ಬಿಣದ ಅದಿರಿನ ನಿಕ್ಷೇಪ ಹೊಂದಿದೆ. ಭಾರತದ ಕಬ್ಬಿಣದ ಅದಿರಿನ ಉತ್ಪಾದನೆಯಲ್ಲಿ ಕರ್ನಾಟಕವು ಎರಡನೆಯ ಸ್ಥಾನದಲ್ಲಿದೆ. ರಾಜ್ಯದಲ್ಲಿ 75 ಕಬ್ಬಿಣದ ಅದಿರಿನ ಗಣಿಗಳಿವೆ. ನಮ್ಮ ರಾಜ್ಯ ಉತ್ಪಾದಿಸುವ ಕಬ್ಬಿಣದ ಅದಿರಿನಲ್ಲಿ ಶ್ರೇಷ್ಠ ದರ್ಜೆಯ ಮ್ಯಾಗ್ನಟೈಟ್‌ನ ಪಾಲು ಶೇ.63 ಭಾಗದಷ್ಟಿದೆ. ಉಳಿದದ್ದು ಹೆಮಾಟೈಟ್ ದರ್ಜೆಯದಾಗಿದೆ.

**ಹಂಚಿಕೆ:** ಕರ್ನಾಟಕದ ಕಬ್ಬಿಣದ ಅದಿರಿನ ಹಂಚಿಕೆ ಅಧಿಕವಾಗಿ ಬಳ್ಳಾರಿ, ಚಿಕ್ಕಮಗಳೂರು, ಬಾಗಲಕೋಟೆ, ಚಿತ್ರದುರ್ಗ, ತುಮಕೂರು, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಗದಗ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯು ಅಪಾರವಾದ ನಿಕ್ಷೇಪವನ್ನು ಹೊಂದಿದ್ದು, ಪ್ರಥಮ ಸ್ಥಾನದಲ್ಲಿದೆ. ಅದು ಹೊಸಪೇಟೆ ಮತ್ತು ಸಂಡೂರು ಪ್ರದೇಶಗಳಲ್ಲಿ ಕಂಡುಬರುತ್ತದೆ. ದೋಣಿಮಲೈ, ವಿಭೂತಿಗುಡ್ಡ, ಬೆಳಗಾಳ, ಕುಮಾರಸ್ವಾಮಿ ಬೆಟ್ಟಗಳು, ತಿಮ್ಮಪ್ಪನ ಗುಡಿ, ದೇವಾದ್ರಿ ಶ್ರೇಣಿ, ರಾಮದುರ್ಗ ಬೆಟ್ಟಗಳಲ್ಲಿ ಕಬ್ಬಿಣದ ಅದಿರನ್ನು ಉತ್ಪಾದಿಸಲಾಗುತ್ತಿದೆ.

ಚಿಕ್ಕಮಗಳೂರು ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಬಾಬಾಬುಡನ್‌ಗಿರಿ, ಕೆಮ್ಮಣ್ಣುಗುಂಡಿ, ಕುದುರೆಮುಖ, ಗಂಗಾಮೂಲ, ಕಲ್ಹತ್ತಗಿರಿ, ಜೇನುಸುರಿ ಗುಡ್ಡಗಳಲ್ಲಿ ಕಬ್ಬಿಣದ ಅದಿರು ದೊರೆಯುತ್ತದೆ. ಜೀವವೈವಿಧ್ಯತೆಯನ್ನು ಕಾಪಾಡಲು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರೀಯ ಉದ್ಯಾನವಿರುವ ಕುದುರೆಮುಖದಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಯನ್ನು ಸ್ಥಗಿತಗೊಳಿಸಿ, ತೀರ್ಪು ನೀಡಿದೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಸಾಸಲು, ಬಾಗಲಕೋಟೆಯ ಅಮೀನಗಡ, ತುಮಕೂರು ಜಿಲ್ಲೆಯ ಹುಳಿಯಾರು, ಚಿಕ್ಕನಾಯಕನಹಳ್ಳಿ, ಶಿವಮೊಗ್ಗ ಜಿಲ್ಲೆಯ ಕುಂಸಿ, ಶಂಕರಗುಡ್ಡ, ಸಿದ್ದರಹಳ್ಳಿ ಮುಂತಾದ ಕಡೆಗಳಲ್ಲಿಯೂ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ.

> **ಚಟುವಟಿಕೆ:**
> ನಿಮ್ಮ ಜಿಲ್ಲೆಯಲ್ಲಿ ದೊರೆಯಬಲ್ಲ ಖನಿಜ ಸಂಪನ್ಮೂಲಗಳ ಪಟ್ಟಿ ತಯಾರಿಸಿ.

Not to be re published ©KTBS

ರಾಜ್ಯದಲ್ಲಿ ಉತ್ಪಾದನೆಯಾಗುವ ಕಬ್ಬಿಣದ ಅದಿರನ್ನು ಭದ್ರಾವತಿ ಮತ್ತು ಬಳ್ಳಾರಿ ಸಮೀಪದ ಜಿಂದಾಲ್ ವಿಜಯನಗರ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಿಗೆ ಉಪಯೋಗಿಸಿ, ಉಳಿದ ಭಾಗವನ್ನು ರಫ್ತು ಮಾಡಲಾಗುತ್ತದೆ.

**ಮ್ಯಾಂಗನೀಸ್ :** ಮ್ಯಾಂಗನೀಸ್ ಅದಿರು ಮುಖ್ಯವಾಗಿ ಪದರು ಶಿಲೆ ಮತ್ತು ರೂಪಾಂತರ ಶಿಲೆಗಳಲ್ಲಿ ಆಕ್ಸೈಡ್ ರೂಪದಲ್ಲಿ ದೊರೆಯುತ್ತದೆ. ಇದನ್ನು ಮಿಶ್ರ ಲೋಹವಾಗಿ ಉಕ್ಕಿನ ತಯಾರಿಕೆಯಲ್ಲಿ ಕಾಠಿಣ್ಯತೆಯನ್ನು ಹೆಚ್ಚಿಸಲು ಬಳಸುವರು. ಜೊತೆಗೆ ರಾಸಾಯನಿಕ, ವಿದ್ಯುತ್ ಕೈಗಾರಿಕೆ, ರಾಸಾಯನಿಕ ಗೊಬ್ಬರ, ಕ್ಯಾಲಿಕೋ ಪ್ರಿಂಟಿಂಗ್ ಹಾಗೂ ಬಣ್ಣಗಳ ತಯಾರಿಕೆಯಲ್ಲಿಯೂ ಬಳಸುವರು. ಆದ್ದರಿಂದ ಇದನ್ನು 'ಬಹು ಉಪಯೋಗಿ ಖನಿಜ'ವೆನ್ನುವರು.

**ಹಂಚಿಕೆ :** ಕರ್ನಾಟಕದಲ್ಲಿ ಮ್ಯಾಂಗನೀಸ್ ಅದಿರಿನ ನಿಕ್ಷೇಪ ಹೇರಳವಾಗಿದ್ದು, ದೇಶದ ಒಟ್ಟು ನಿಕ್ಷೇಪದಲ್ಲಿ ಶೇ.27 ಭಾಗದಷ್ಟಿದೆ. ಮ್ಯಾಂಗನೀಸ್ ಉತ್ಪಾದನೆಯಲ್ಲಿ ಒಡಿಶಾದ ನಂತರ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ರಾಜ್ಯದ ಮ್ಯಾಂಗನೀಸ್ ಹಂಚಿಕೆಯು ಕಬ್ಬಿಣದ ಅದಿರಿನ ಪ್ರದೇಶಗಳಲ್ಲೇ ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯ ಸಂಡೂರು ಪ್ರಮುಖ ಮ್ಯಾಂಗನೀಸ್ ಉತ್ಪಾದಿಸುವ ಪ್ರದೇಶವಾಗಿದೆ. ಇಲ್ಲಿ ರಾಜ್ಯದ ಶೇ. 90 ರಷ್ಟು ಮ್ಯಾಂಗನೀಸ್ ಉತ್ಪಾದಿಸಲಾಗುತ್ತಿದೆ. ಇತರೆ ಪ್ರಮುಖ ಮ್ಯಾಂಗನೀಸ್ ಗಣಿ ಕೇಂದ್ರಗಳೆಂದರೆ ಶಿವಮೊಗ್ಗ ಜಿಲ್ಲೆಯ ಕುಂಸಿ, ಶಂಕರಗುಡ್ಡ, ಹೊಸಹಳ್ಳಿ, ಚಿತ್ರದುರ್ಗ ಜಿಲ್ಲೆಯ ಸಾದರಹಳ್ಳಿ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು, ಸೂಪ, ಲೋಂಡ, ಉಸ್ಕಾಂಡ ಹಾಗೂ ಧಾರವಾಡ, ವಿಜಯಪುರ, ಚಿಕ್ಕಮಗಳೂರು ಜಿಲ್ಲೆಗಳು. ರಾಜ್ಯದ ಮ್ಯಾಂಗನೀಸ್ ಉತ್ಪಾದನೆಯ ಬಹುಪಾಲು ಜಪಾನ್, ಚೀನಾ ಮುಂತಾದ ರಾಷ್ಟ್ರಗಳಿಗೆ ರಫ್ತಾಗುವುದು.

**ಬಾಕ್ಸೈಟ್ :** ಬಾಕ್ಸೈಟ್ ಅದಿರನ್ನು ಅಲ್ಯೂಮಿನಿಯಂ ಲೋಹವನ್ನು ಉತ್ಪಾದಿಸಲು ಅಧಿಕವಾಗಿ ಬಳಸುತ್ತಾರೆ. ಸಿಮೆಂಟ್, ಉಕ್ಕು, ವಿದ್ಯುತ್ ತಂತಿಗಳ ತಯಾರಿಕೆಯಲ್ಲೂ ಬಳಸುತ್ತಿರುವುದರಿಂದ ಇದಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ.

**ಹಂಚಿಕೆ :** ಕರ್ನಾಟಕದಲ್ಲಿ ಬಾಕ್ಸೈಟ್ ಅದಿರಿನ ನಿಕ್ಷೇಪವು ಬೆಳಗಾವಿ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ. ಬೆಳಗಾವಿ ಜಿಲ್ಲೆಯು ಪ್ರಮುಖ ಬಾಕ್ಸೈಟ್ ಉತ್ಪಾದಿಸುವ ಜಿಲ್ಲೆಯಾಗಿದೆ. ಇಲ್ಲಿನ ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ಬಾಕ್ಸೈಟ್ ಗಣಿಗಳಿವೆ. ಈ ಅದಿರನ್ನು ಬೆಳಗಾವಿಯ ಇಂಡಿಯನ್ ಅಲ್ಯೂಮಿನಿಯಂ ಕಂಪನಿಯ ಕೈಗಾರಿಕೆಯಲ್ಲಿ ಬಳಸಲಾಗುತ್ತಿದೆ.

**ಚಿನ್ನ :** ಚಿನ್ನವು ಅಪರೂಪದ, ಹೊಳೆಯುವ, ಹೆಚ್ಚು ಬಾಳಿಕೆ ಬರುವ ಹಳದಿ ಲೋಹವಾಗಿದೆ. ಇದನ್ನು ಆಭರಣಗಳ ತಯಾರಿಕೆ, ಗಡಿಯಾರ ಮುಂತಾದ ಅಮೂಲ್ಯ ವಸ್ತುಗಳ ತಯಾರಿಕೆಯಲ್ಲಿ ಅಧಿಕವಾಗಿ ಬಳಸುತ್ತಾರೆ. ಚಿನ್ನದ ಬೇಡಿಕೆ ಮತ್ತು ಬಳಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದರಿಂದ ಬೆಲೆಯೂ ದುಬಾರಿಯಾಗಿದೆ.

ಕರ್ನಾಟಕವು ಚಿನ್ನದ ಗಣಿಗಾರಿಕೆಯಲ್ಲಿ ಭಾರತದಲ್ಲಿ ಪ್ರಥಮ ಸ್ಥಾನ ಪಡೆದಿದೆ. ಉತ್ಪಾದನೆಯ ಹೆಚ್ಚು ಚಿನ್ನವನ್ನು ಕರ್ನಾಟಕದ ಗಣಿಗಳಿಂದಲೇ ಪಡೆಯಲಾಗುತ್ತಿದೆ. ಆದ್ದರಿಂದ ಇದನ್ನು 'ಚಿನ್ನದ ನಾಡು' ಎಂದು ಕರೆಯುವರು. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಚಿನ್ನ ಗಣಿಗಾರಿಕೆ ಕಂಡು ಬಂದಿದೆ. ಆದರೆ ದೊಡ್ಡ ಪ್ರಮಾಣದಲ್ಲಿ ಚಿನ್ನದ ಗಣಿಗಾರಿಕೆ 1880 ರಲ್ಲಿ ಜಾನ್ ಟೇಲರ್ ಎಂಬುವನು ಪ್ರಾರಂಭ ಮಾಡಿ, 1885 ರಲ್ಲಿ ಕೆ.ಜಿ.ಎಫ್. ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ನಾಲ್ಕು ಪ್ರಮುಖ ಗಣಿಗಳಿವೆ. ಅವುಗಳೆಂದರೆ ನಂದಿದುರ್ಗ, ಉರಿಗಾಂ, ಚಾಂಪಿಯನ್ ರೀಫ್ ಮತ್ತು ಮೈಸೂರು ಗಣಿ. ಇದರಲ್ಲಿ ಚಾಂಪಿಯನ್ ರೀಫ್ ಗಣಿಯು ಅತ್ಯಂತ ಆಳವಾದ ಚಿನ್ನದ ಗಣಿಯಾಗಿದೆ (3217 ಮೀ.). ಈ ಗಣಿಗಳಲ್ಲಿ ಹಲವು ವರ್ಷಗಳ ನಿರಂತರ ಗಣಿಗಾರಿಕೆಯಿಂದ ಚಿನ್ನದ ನಿಕ್ಷೇಪದ ಪ್ರಮಾಣ ಕಡಿಮೆಯಾಗಿದೆ. ಈಗ ಗಣಿಗಾರಿಕೆ ಸ್ಥಗಿತಗೊಂಡಿದೆ. ಹಟ್ಟಿ ಪ್ರದೇಶದಲ್ಲಿ ಗಣಿಗಾರಿಕೆ ಮುಂದುವರಿದಿದೆ.

ಪ್ರಸ್ತುತ ರಾಯಚೂರು ಜಿಲ್ಲೆಯ ಹಟ್ಟಿ ಭಾರತದ ಅತಿ ದೊಡ್ಡ ಚಿನ್ನದ ಗಣಿಯಾಗಿದೆ. ಇಲ್ಲಿ ಹೆಚ್ಚು ಚಿನ್ನವನ್ನು ಉತ್ಪಾದಿಸಲಾಗುತ್ತಿದೆ. ತುಮಕೂರು ಜಿಲ್ಲೆಯ ಬೆಳ್ಳಾರ, ಶಿರಾ ಸಮೀಪವಿರುವ ಅಜ್ಜನಹಳ್ಳಿಯಲ್ಲೂ ಚಿನ್ನದ ಅದಿರನ್ನು ಉತ್ಪಾದಿಸಲಾಗುತ್ತಿದೆ. ಇತರೆ ಚಿನ್ನದ ನಿಕ್ಷೇಪವಿರುವ ಸ್ಥಳಗಳೆಂದರೆ ಗದಗ ಜಿಲ್ಲೆಯ ಮುಳಗುಂದ, ಕಪ್ಪತ್ತಗುಡ್ಡ, ಹಾಸನ ಜಿಲ್ಲೆಯ ಕೆಂಪಿನಕೋಟೆ ಮೊದಲಾದವುಗಳು.

© KTBS Not to be republished

# ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ಕುದುರೆಮುಖದಲ್ಲಿ __________ ಅದಿರು ದೊರೆಯುತ್ತದೆ.
2. ಉತ್ತಮದರ್ಜೆಯ ಕಬ್ಬಿಣದ ಅದಿರು __________ .
3. ಬಳ್ಳಾರಿ ಜಿಲ್ಲೆಯ ಸಂಡೂರು __________ ಗಣಿಗಳನ್ನು ಹೊಂದಿದೆ.
4. ಬಾಕ್ಸೈಟ್ ಅದಿರಿನಿಂದ __________ ಲೋಹವನ್ನು ಉತ್ಪಾದಿಸುತ್ತಾರೆ.
5. ಅತ್ಯಂತ ಆಳವಾದ ಚಿನ್ನದ ಗಣಿ __________ .

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಕರ್ನಾಟಕವನ್ನು 'ಚಿನ್ನದ ನಾಡು' ಎಂದು ಏಕೆ ಕರೆಯುತ್ತಾರೆ?
2. ಕರ್ನಾಟಕದಲ್ಲಿ ಸಿಗುವ ಪ್ರಮುಖ ಖನಿಜಗಳಾವುವು?
3. ಮಿಶ್ರಲೋಹವಾಗಿ ಬಳಸುವ ಅದಿರು ಯಾವುದು?
4. ನಮ್ಮ ರಾಜ್ಯದಲ್ಲಿ ಕಬ್ಬಿಣದ ಅದಿರು ದೊರೆಯುವ ಪ್ರದೇಶಗಳನ್ನು ತಿಳಿಸಿ.
5. ಬಾಕ್ಸೈಟ್ ಉತ್ಪಾದಿಸುವ ಪ್ರಮುಖ ಜಿಲ್ಲೆ ಯಾವುದು?
6. ಕರ್ನಾಟಕದ ಪ್ರಮುಖ ಚಿನ್ನದ ಗಣಿಗಳನ್ನು ತಿಳಿಸಿ.

**III. ಹೊಂದಿಸಿ ಬರೆಯಿರಿ.**

| ಅ | ಆ |
|---|---|
| 1) ಸೂಪ | ಎ) ಮ್ಯಾಂಗನೀಸ್ |
| 2) ಹಟ್ಟಿ | ಬಿ) ಬಾಕ್ಸೈಟ್ |
| 3) ಕುಂಸಿ | ಸಿ) ಸುಣ್ಣಕಲ್ಲು |
| 4) ಖಾನಾಪುರ | ಡಿ) ಕಬ್ಬಿಣದ ಅದಿರು |
| | ಇ) ಚಿನ್ನದ ಗಣಿ |

**IV. ಚಟುವಟಿಕೆಗಳು**

1) ಕರ್ನಾಟಕದಲ್ಲಿ ದೊರೆಯುವ ಖನಿಜಗಳ ಮಾದರಿಯನ್ನು (ಸ್ಯಾಂಪಲ್) ಸಂಗ್ರಹಿಸಿರಿ ಮತ್ತು ಟಿಪ್ಪಣಿ ಬರೆಯಿರಿ.

2) ಖನಿಜಗಳ ಹಂಚಿಕೆಯನ್ನು ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

**V. ಯೋಜನಾಕಾರ್ಯ**

1) ಕರ್ನಾಟಕದಲ್ಲಿ ದೊರೆಯುವ ಖನಿಜಗಳ ಮಾದರಿಯನ್ನು (ಸ್ಯಾಂಪಲ್) ಸಂಗ್ರಹಿಸಿರಿ ಮತ್ತು ಅವುಗಳ ಬಗ್ಗೆ ಟಿಪ್ಪಣಿ ಬರೆಯಿರಿ.

Not to be republished
© KTBS


## ಅಧ್ಯಾಯ – 7

# ಕರ್ನಾಟಕದ ಸಾರಿಗೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕರ್ನಾಟಕದಲ್ಲಿ ಸಾರಿಗೆಯ ಮಹತ್ವ.*
- *ರಸ್ತೆ ಸಾರಿಗೆ – ವಿಧಗಳು, ಪ್ರಮುಖ ಹೆದ್ದಾರಿಗಳು.*
- *ರೈಲು ಸಾರಿಗೆಯ ಮಹತ್ವ, ಪ್ರಮುಖ ರೈಲು ಮಾರ್ಗಗಳು.*
- *ಜಲಸಾರಿಗೆ ಮತ್ತು ವಾಯುಸಾರಿಗೆ.*

ಸ್ಥಳದಿಂದ ಸ್ಥಳಕ್ಕೆ ಸರಕುಗಳು ಹಾಗೂ ಪ್ರಯಾಣಿಕರನ್ನು ಸಾಗಿಸುವ ಮಾಧ್ಯಮವೇ ಸಾರಿಗೆ. ಕೃಷಿ, ಕೈಗಾರಿಕೆ ಮತ್ತು ವ್ಯಾಪಾರದ ಪ್ರಗತಿಯಲ್ಲಿ ಸಾರಿಗೆ ಸಂಪರ್ಕಗಳು ಜೀವನಾಡಿಯಿದ್ದಂತೆ. ಕರ್ನಾಟಕವು ಅನೇಕ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದ ರಾಜ್ಯ. ಇಲ್ಲಿ ಖನಿಜ ವಸ್ತುಗಳು, ವಾಣಿಜ್ಯ ಬೆಳೆಗಳು, ಅರಣ್ಯ ವಸ್ತುಗಳು, ಶಕ್ತಿ ಸಾಧನಗಳು ದೊರೆಯುವುವು. ಇವುಗಳ ಸಮರ್ಥ ಬಳಕೆಯಿಂದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಸುವ್ಯವಸ್ಥಿತವಾದ ಸಾರಿಗೆ ಸೌಲಭ್ಯವು ಅಗತ್ಯ. ಕರ್ನಾಟಕವು ಕೃಷಿ ಪ್ರಧಾನ ರಾಜ್ಯ. ಆಹಾರ ಧಾನ್ಯ ಹಾಗೂ ಇತರ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು, ಗೊಬ್ಬರ, ಕೃಷಿ ಉಪಕರಣಗಳನ್ನು ಕೃಷಿ ವಲಯಗಳಿಗೆ ಸಾಗಿಸಲು, ಗಣಿಗಳಿಂದ ಖನಿಜಗಳನ್ನು, ಕೈಗಾರಿಕೆಗಳಿಂದ ಸಿದ್ಧವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು, ಪ್ರಯಾಣಿಕರನ್ನು ಸಾಗಿಸಲು, ಇನ್ನೂ ಹಲವಾರು ಉದ್ದೇಶಗಳಿಗೆ ವಿವಿಧ ರೀತಿಯ ಸಾರಿಗೆ ಸೌಲಭ್ಯವು ಅವಶ್ಯಕ. ಕರ್ನಾಟಕವು ರಸ್ತೆ, ರೈಲು, ಜಲಸಾರಿಗೆ ಮತ್ತು ವಾಯುಸಾರಿಗೆ ವ್ಯವಸ್ಥೆಗಳನ್ನು ಹೊಂದಿದೆ.




## ರಸ್ತೆ ಸಾರಿಗೆ

**ಪ್ರಾಮುಖ್ಯತೆ :** ಕರ್ನಾಟಕದ ಜನರು ಹೆಚ್ಚಾಗಿ ಹಳ್ಳಿಗಾಡಿನಲ್ಲೇ ವಾಸ ಮಾಡುವುದರಿಂದ ಪ್ರತಿಯೊಂದು ಹಳ್ಳಿ–ಪಟ್ಟಣ ಹಾಗೂ ಇತರ ಜನವಸತಿಗಳನ್ನು

Not to be republished ©KTBS

ಸಂಪರ್ಕಿಸುವುದರಲ್ಲಿ ರಸ್ತೆ ಸಾರಿಗೆಯ ಪಾತ್ರ ಮಹತ್ವವುಳ್ಳದ್ದಾಗಿದೆ. ರಸ್ತೆಗಳನ್ನು ಸುಲಭವಾಗಿ, ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದು. ಇದರಿಂದ ಪ್ರಯಾಣಿಕರು ಮತ್ತು ಸರಕುಗಳನ್ನು ರಾಜ್ಯದ ಮೂಲೆ ಮೂಲೆಗೂ ಸಾಗಿಸಬಹುದು. ರಸ್ತೆಗಳ ಅಭಿವೃದ್ಧಿಯು ರಾಜ್ಯದ ಕೃಷಿ, ಕೈಗಾರಿಕೆ, ಗಣಿಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಯನ್ನು ನಿರ್ಧರಿಸುತ್ತದೆ.

**ರಸ್ತೆ ಸಾರಿಗೆಯ ಬೆಳವಣಿಗೆ :** ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ರಸ್ತೆ ಸಾರಿಗೆಯು ರೂಢಿಯಲ್ಲಿದೆ. ರಾಜಮಹಾರಾಜರುಗಳು ತಮ್ಮ ಸೈನಿಕರು ಮತ್ತು ಆಡಳಿತ ನಿರ್ವಹಣೆಗಾಗಿ ರಸ್ತೆಗಳನ್ನು ನಿರ್ಮಾಣ ಮಾಡುತ್ತಿದ್ದರು. ಪ್ರಮುಖ ರಸ್ತೆ ಮಾರ್ಗಗಳಲ್ಲಿ ಅರವಟಿಗೆ, ತಂಗುದಾಣ, ತೋಪುಗಳು ಹಾಗೂ ಛತ್ರಗಳಿದ್ದವು. ಕರಾವಳಿ ಮತ್ತು ಒಳನಾಡನ್ನು ಸಂಪರ್ಕಿಸುವ ರಸ್ತೆಗಳನ್ನು ನಿರ್ಮಾಣ ಮಾಡಿದ್ದರು.

> **ನೀವೇ ಮಾಡಿ :**
> ನಿಮ್ಮ ಜಿಲ್ಲೆಯಲ್ಲಿ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ಮತ್ತು ಅವುಗಳು ನಿಮ್ಮ ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಹಾಯ್ದು ಹೋಗಿವೆ ಎಂಬುದನ್ನು ಪಟ್ಟಿ ಮಾಡಿ.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಅಷ್ಟಾಗಿ ರಸ್ತೆಗಳು ನಿರ್ಮಾಣವಾಗಿರಲಿಲ್ಲ. ಹಳೆ ಮೈಸೂರು ಪ್ರಾಂತ್ಯದಲ್ಲಿ ಬೆಂಗಳೂರು ಮತ್ತು ಜಿಲ್ಲಾ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿದ್ದವು. ಅವು ಸುವ್ಯವಸ್ಥಿತವಾಗಿರಲಿಲ್ಲ. ಸ್ವಾತಂತ್ರ್ಯಾನಂತರ ವಿಶಾಲ ಮೈಸೂರು ರಾಜ್ಯ ನಿರ್ಮಾಣವಾದ ಮೇಲೆ 1961 ರಲ್ಲಿ ಒಟ್ಟು 43,182 ಕಿ.ಮೀ.ಗಳಷ್ಟು ಉದ್ದದ ರಸ್ತೆಗಳಿದ್ದವು. ಪ್ರಸ್ತುತ ಒಟ್ಟು ರಸ್ತೆಗಳ ಉದ್ದ 2,53,601 ಕಿ.ಮೀ.ಗಳು. ಇವುಗಳಲ್ಲಿ ಶೇ.35.70 ಭಾಗದಷ್ಟು ಪಕ್ಕಾ ರಸ್ತೆಗಳು ಮತ್ತು ಶೇ. 64.30 ಭಾಗದಷ್ಟು ಕಚ್ಚಾ ರಸ್ತೆಗಳಾಗಿರುತ್ತವೆ. ಇತ್ತೀಚೆಗೆ ರಸ್ತೆಗಳ ಗುಣಮಟ್ಟದಲ್ಲಿಯೂ ಪ್ರಗತಿಯಾಗಿರುವುದು ಕಂಡುಬರುತ್ತದೆ.

**ರಸ್ತೆಗಳ ವಿಧಗಳು :** ಕರ್ನಾಟಕದ ರಸ್ತೆಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ:

(1) ರಾಷ್ಟ್ರೀಯ ಹೆದ್ದಾರಿಗಳು (2) ರಾಜ್ಯ ಹೆದ್ದಾರಿಗಳು

(3) ಜಿಲ್ಲಾ ರಸ್ತೆಗಳು ಹಾಗೂ (4) ಗ್ರಾಮೀಣ ರಸ್ತೆಗಳು.

**1) ರಾಷ್ಟ್ರೀಯ ಹೆದ್ದಾರಿಗಳು :** ಪ್ರಮುಖ ನಗರಗಳು, ರಾಜ್ಯಗಳ ರಾಜಧಾನಿಗಳು ಹಾಗೂ ಬಂದರುಗಳನ್ನು ಸಂಪರ್ಕಿಸುವ ರಸ್ತೆಗಳಿಗೆ 'ರಾಷ್ಟ್ರೀಯ ಹೆದ್ದಾರಿ'ಗಳೆನ್ನುವರು. ಇವು ಗುಣಮಟ್ಟದ ಮತ್ತು ಅಗಲವಾದ ರಸ್ತೆಗಳಾಗಿದ್ದು, ದ್ವಿಮುಖ, ನಾಲ್ಕು ಪಥ ಮತ್ತು ಆರು ಪಥಗಳ ರಸ್ತೆಗಳನ್ನು ಹೊಂದಿರುತ್ತವೆ. ಇವು ಕೇಂದ್ರ ಸರ್ಕಾರದ ಅಧೀನದಲ್ಲಿದ್ದು, ಇವುಗಳ ನಿರ್ವಹಣೆ ಕಾರ್ಯವು 'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ'(NHAI)ಕ್ಕೆ ಸೇರಿದೆ. ಕರ್ನಾಟಕದಲ್ಲಿ ಪ್ರಸ್ತುತ 14 ರಾಷ್ಟ್ರೀಯ ಹೆದ್ದಾರಿಗಳಿವೆ. ಇವುಗಳ ಒಟ್ಟು ಉದ್ದ 6,572 ಕಿ.ಮೀ.ಗಳು. ಉತ್ತರ ಕನ್ನಡ, ವಿಜಯಪುರ, ಬೆಳಗಾವಿ, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ತುಮಕೂರು, ದಕ್ಷಿಣ ಕನ್ನಡ ಹಾಗೂ ಬಳ್ಳಾರಿ ಜಿಲ್ಲೆಗಳು ಹೆಚ್ಚು ರಾಷ್ಟ್ರೀಯ ಹೆದ್ದಾರಿಗಳನ್ನು ಹೊಂದಿವೆ. ಆದರೆ ರಾಯಚೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳಿಲ್ಲ.

> **ಕರ್ನಾಟಕದಲ್ಲಿ ಹಾದು ಹೋಗುವ ಅತಿ ಉದ್ದದ ರಾಷ್ಟ್ರೀಯ ಹೆದ್ದಾರಿಯ ಸಂಖ್ಯೆ 13**
> ಮಂಗಳೂರು – ಮೂಡಬಿದ್ರಿ, ಕೊಪ್ಪ, ಶಿವಮೊಗ್ಗ, ಚಿತ್ರದುರ್ಗ, ಹೊಸಪೇಟೆ, ಇಳಕಲ್, ವಿಜಯಪುರ ಮಾರ್ಗವಾಗಿ ಸೊಲ್ಲಾಪುರಕ್ಕೆ ಸೇರುತ್ತದೆ.

ರಾಷ್ಟ್ರೀಯ ಹೆದ್ದಾರಿ NH – 4 ಮತ್ತು NH – 7 ಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ 'ಸುವರ್ಣ ಚತುಷ್ಕೋನ ಹೆದ್ದಾರಿ ಯೋಜನೆ' ಹಾಗೂ 'ಕಾರಿಡಾರ್ ಯೋಜನೆ'ಗಳಿಗೆ ಸೇರಿವೆ. ಅವು ಆರು ಪಥಗಳನ್ನು

Not to be republished ©KTBS

ಹೊಂದಿವೆ. ರಾಜ್ಯದಲ್ಲಿ ಹಾಯ್ದು ಹೋಗುವ ಇತರೆ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳೆಂದರೆ NH 4, NH 4 A , NH 7, NH 9, NH - 13, NH - 17, NH 48, NH 63, NH 67 NH 206, NH 207 NH 209 NH 212 ಮತ್ತು NH 218

**2) ರಾಜ್ಯ ಹೆದ್ದಾರಿಗಳು :** ರಾಜಧಾನಿ ಬೆಂಗಳೂರಿನಿಂದ ಜಿಲ್ಲಾ ಕೇಂದ್ರ, ಪ್ರಮುಖ ಪಟ್ಟಣಗಳು ಹಾಗೂ ರಾಷ್ಟ್ರೀಯ ಹೆದ್ದಾರಿಗಳೊಡನೆ ಸಂಪರ್ಕಿಸುವ ರಸ್ತೆಗಳಿಗೆ 'ರಾಜ್ಯ ಹೆದ್ದಾರಿ' ಎಂದು ಕರೆಯುವರು. ಇವುಗಳ ನಿರ್ಮಾಣ–ನಿರ್ವಹಣೆ ರಾಜ್ಯ ಸರ್ಕಾರಗಳಿಗೆ ಸೇರಿದೆ. ಕರ್ನಾಟಕ ರಾಜ್ಯದಲ್ಲಿ 19,578 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳಿವೆ. ಬೆಳಗಾವಿ ಜಿಲ್ಲೆ ಅತಿ ಉದ್ದದ ರಾಜ್ಯ ಹೆದ್ದಾರಿ ಹೊಂದಿರುವ ಜಿಲ್ಲೆಯಾಗಿದೆ. ಬೆಂಗಳೂರು ಅತಿ ಕಡಿಮೆ ಉದ್ದದ ರಾಜ್ಯ ಹೆದ್ದಾರಿಯುಳ್ಳ ಜಿಲ್ಲೆಯಾಗಿದೆ. ಏಕೆಂದರೆ ಇಲ್ಲಿ ನಗರ ರಸ್ತೆಗಳು ಹೆಚ್ಚು.

**3) ಜಿಲ್ಲಾ ರಸ್ತೆಗಳು :** ಜಿಲ್ಲಾ ಕೇಂದ್ರದಿಂದ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ, ಪ್ರಮುಖ ಪಟ್ಟಣ, ಗ್ರಾಮಗಳು, ರೈಲು ಮಾರ್ಗ ಹಾಗೂ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಜಿಲ್ಲಾ ರಸ್ತೆಗಳೆನ್ನುವರು. ಇವುಗಳ ನಿರ್ಮಾಣ ಅಭಿವೃದ್ಧಿ ಮೇಲ್ವಿಚಾರಣೆಯು 'ಜಿಲ್ಲಾ ಪಂಚಾಯತ್' ಗೆ ಸೇರಿರುತ್ತದೆ. ರಾಜ್ಯದಲ್ಲಿ ಒಟ್ಟು 49,909 ಕಿ.ಮೀ. ಉದ್ದದ ಜಿಲ್ಲಾ ರಸ್ತೆಗಳಿವೆ. ತುಮಕೂರು ಜಿಲ್ಲೆ ಹೆಚ್ಚು ಜಿಲ್ಲಾ ರಸ್ತೆಗಳನ್ನೊಳಗೊಂಡಿದೆ. ರಾಯಚೂರು ಜಿಲ್ಲೆ ಕಡಿಮೆ ಜಿಲ್ಲಾ ರಸ್ತೆಗಳನ್ನೊಳಗೊಂಡಿದೆ.

**4) ಗ್ರಾಮೀಣ ರಸ್ತೆಗಳು :** ತಾಲ್ಲೂಕು ಕೇಂದ್ರದಿಂದ ಪ್ರತಿಯೊಂದು ಗ್ರಾಮಗಳಿಗೂ, ಎಲ್ಲಾ ಜಿಲ್ಲಾ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳೇ 'ಗ್ರಾಮೀಣ ರಸ್ತೆ'ಗಳು. ಇವುಗಳ ನಿರ್ಮಾಣ, ನಿರ್ವಹಣೆ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಆಡಳಿತಕ್ಕೆ ಸೇರಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು 1,77,542ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳಿವೆ.

ಮೇಲ್ಕಂಡ ವರ್ಗದ ರಸ್ತೆಗಳಲ್ಲದೆ, ವಿವಿಧ ಉದ್ದೇಶ ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಗಳ ಅಧೀನದ ರಸ್ತೆಗಳಿವೆ. ಉದಾ : ಲೋಕೋಪಯೋಗಿ ರಸ್ತೆ, ಅರಣ್ಯ ಇಲಾಖೆ, ನೀರಾವರಿ ಇಲಾಖೆ ಹಾಗೂ ಪುರಸಭೆ–ನಗರಪಾಲಿಕೆ ರಸ್ತೆಗಳು.

## ರೈಲು ಸಾರಿಗೆ

ಕರ್ನಾಟಕದಲ್ಲಿ ರಸ್ತೆ ಸಾರಿಗೆಯ ನಂತರ ರೈಲು ಸಾರಿಗೆಯು ಪ್ರಮುಖವಾದುದು. ಕಡಿಮೆ ದರದಲ್ಲಿ ದೂರದ ಸ್ಥಳಗಳಿಗೆ ಪ್ರಯಾಣಿಸಲು ಹಾಗೂ ಸರಕುಗಳನ್ನು ಸಾಗಿಸಲು ರೈಲು ಸಾರಿಗೆಯು ಮಹತ್ವ ಪಡೆದಿದೆ.

ಕರ್ನಾಟಕದಲ್ಲಿ ಮೊಟ್ಟಮೊದಲು ರೈಲು ಸಂಚಾರ ಆರಂಭವಾಗಿದ್ದು 1864 ರಲ್ಲಿ, ಇದನ್ನು ಬೆಂಗಳೂರು ಮತ್ತು ಮದರಾಸು ನಗರಗಳ ಮಧ್ಯೆ 'ಮದರಾಸು ರೈಲ್ವೆ ಕಂಪನಿ'ಯು ನಿರ್ಮಿಸಿತು. 1956 ರ ವೇಳೆಗೆ ಒಟ್ಟು 2595 ಕಿ.ಮೀ.ಗಳಿದ್ದು ಅದು ದಕ್ಷಿಣ ರೈಲ್ವೆ ವಲಯಕ್ಕೆ ಸೇರಿತ್ತು. ಈಗ ನೈಋತ್ಯ ರೈಲ್ವೆ ವಲಯವು ಅಸ್ತಿತ್ವಕ್ಕೆ ಬಂದಿದೆ. ಅದರ ಆಡಳಿತ ಕೇಂದ್ರ ಹುಬ್ಬಳ್ಳಿಯಲ್ಲಿದೆ. ಕರ್ನಾಟಕದಲ್ಲಿ ಇಂದು ಒಟ್ಟು 3244 ಕಿ.ಮೀ ಉದ್ದದ ರೈಲು ಮಾರ್ಗಗಳಿವೆ.


ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ರೈಲು ಮಾರ್ಗಗಳು ಸಮನಾಗಿ ಹಂಚಿಕೆಯಾಗಿಲ್ಲ. ಬೆಂಗಳೂರು, ಬಳ್ಳಾರಿ, ಬೆಳಗಾವಿ, ಹಾಸನ, ಉತ್ತರ ಕನ್ನಡ, ಚಿತ್ರದುರ್ಗ, ಉಡುಪಿ, ರಾಮನಗರ, ದಕ್ಷಿಣ ಕನ್ನಡ ಜಿಲ್ಲೆಗಳು ಸರಾಸರಿ 150–200 ಕಿ.ಮೀ. ಉದ್ದದ ರೈಲು ಮಾರ್ಗಗಳನ್ನು ಹೊಂದಿರುತ್ತವೆ. ಕೊಡಗು ಜಿಲ್ಲೆಯು ಯಾವುದೇ ರೈಲು ಮಾರ್ಗವನ್ನು ಹೊಂದಿರುವುದಿಲ್ಲ.

**ಚಟುವಟಿಕೆ:**

ರಸ್ತೆಸಾರಿಗೆ ಮತ್ತು ರೈಲು ಸಾರಿಗೆಯ ಪ್ರಮಾಣದಲ್ಲಿ ನಿಮಗಾದ ಅನುಭವವನ್ನು ಗುಂಪಿನಲ್ಲಿ ಚರ್ಚಿಸಿ, ನಂತರ ಯಾವ ಸಾರಿಗೆ ಉತ್ತಮ ಎಂಬುದನ್ನು ತೀರ್ಮಾನಿಸಿ.

©KTBS Not to be republished

**ಕೊಂಕಣ ರೈಲ್ವೆ :** ಇದು ಪಶ್ಚಿಮ ಕರಾವಳಿಯ ಮಹತ್ವಪೂರ್ಣವಾದ ರೈಲು ಮಾರ್ಗ. ಇದು ಮಂಗಳೂರು–ಮುಂಬೈನ ನಡುವಿನ ಪ್ರಯಾಣದ ಅವಧಿ 41 ಗಂಟೆಗಳಿಂದ 18 ಗಂಟೆಗಳಿಗೆ ಕಡಿಮೆ ಮಾಡಿದೆ. ಇದರ ಉದ್ದ ಕರ್ನಾಟಕದಲ್ಲಿ 273 ಕಿ.ಮೀ.ಗಳು. ಇದರಲ್ಲಿ 13 ಪ್ರಮುಖ ಮತ್ತು 310 ಇತರೆ ಸೇತುವೆಗಳಿವೆ. ಅವುಗಳಲ್ಲಿ ಶರಾವತಿ ಸೇತುವೆ (2.2 ಕಿ.ಮೀ.) ಅತ್ಯಂತ ಉದ್ದವಾಗಿದೆ. ಕಾಳಿ ನದಿ ಸೇತುವೆ (1.2 ಕಿ.ಮೀ.) ಯೂ ಪ್ರಮುಖವಾಗಿದೆ. ಹಲವಾರು ಸುರಂಗ ಮಾರ್ಗಗಳು ಮತ್ತು ಸೇತುವೆಗಳ ಮೂಲಕ ಹಾದು ಹೋಗುವ ಈ ಮಾರ್ಗವು ಅತ್ಯಂತ ಸುಂದರವಾದ ಪ್ರಾಕೃತಿಕ ದೃಶ್ಯಾವಳಿಯಿಂದ ಕೂಡಿದೆ.




**ಮೆಟ್ರೋ ರೈಲು :** ಬೆಂಗಳೂರು ಬೃಹತ್ ನಗರವಾಗಿ ಬೆಳೆದಿದ್ದು, ಟ್ರಾಫಿಕ್ ಸಮಸ್ಯೆ ಅತಿಯಾಗಿದೆ. ಅದನ್ನು ನಿವಾರಿಸಲು 'ನಮ್ಮ ಮೆಟ್ರೋ' ನಗರ ರೈಲು ಯೋಜನೆಯನ್ನು ಜಾರಿಗೆ ತರಲಾಯಿತು. ಇದರಿಂದ ಅಕ್ಟೋಬರ್ 20, 2011 ರಲ್ಲಿ ಮೊಟ್ಟ ಮೊದಲ ಮೆಟ್ರೋ ರೈಲು ಬೆಂಗಳೂರು ನಗರದ ಬೈಯಪ್ಪನ ಹಳ್ಳಿಯಿಂದ ಎಂ.ಜಿ. ರಸ್ತೆಯವರೆಗೆ ಕಾರ್ಯಾರಂಭಗೊಂಡು ಲಕ್ಷಾಂತರ ಜನರು ಪ್ರಯಾಣಿಸುತ್ತಿದ್ದಾರೆ. ಇದರಿಂದ ತ್ವರಿತವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಲುಪಬಹುದು. ಇನ್ನೂ ಕೆಲವು ಮೆಟ್ರೋ ರೈಲು ಮಾರ್ಗಗಳು ನಿರ್ಮಾಣ ಹಂತದಲ್ಲಿವೆ.

## ವಾಯು ಸಾರಿಗೆ

ವಾಯು ಸಾರಿಗೆ ಅತಿ ವೇಗ ಚಾಲಿತ ಸಾರಿಗೆ ಮಾಧ್ಯಮ. ಇದು ಪ್ರಯಾಣಿಕರು, ಅಂಚೆ ಮತ್ತು ಬೆಲೆ ಬಾಳುವ ಹಗುರವಾದ ವಸ್ತುಗಳನ್ನು ದೂರದ ಸ್ಥಳಗಳಿಗೆ ಬೇಗ ಸಾಗಿಸುವುದಕ್ಕೆ ಬಹಳ ಉಪಯುಕ್ತವಾದುದು. ನೈಸರ್ಗಿಕ ವಿಪತ್ತುಗಳು ಸಂಭವಿಸಿದಾಗ ಹಾಗೂ ಯುದ್ಧಗಳಂತಹ ತುರ್ತು ಪರಿಸ್ಥಿತಿಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳುವುದಕ್ಕೂ ನೆರವಾಗುವುದು. ಆದರೆ ಇದು ದುಬಾರಿಯಾದ ಸಾರಿಗೆ ಮಾಧ್ಯಮವಾಗಿದ್ದು ಎಲ್ಲ ವರ್ಗದ ಜನರಿಗೂ ಲಭ್ಯವಾಗದು.

ಕರ್ನಾಟಕದಲ್ಲಿ ಮೊದಲ ವಿಮಾನ ಯಾನವನ್ನು 1946 ರಲ್ಲಿ ಬೆಂಗಳೂರು – ಹೈದರಾಬಾದ್ ನಡುವೆ 'ಡೆಕ್ಕನ್ ಏರ್‌ವೇಸ್' ಎಂಬ ಕಂಪನಿಯು ಪ್ರಾರಂಭಿಸಿತು. ಭಾರತೀಯ ವಿಮಾನ ಸಂಚಾರವು 1953 ರಲ್ಲಿ ರಾಷ್ಟ್ರೀಕರಣಗೊಂಡು, ಇಂಡಿಯನ್ ಏರ್‌ಲೈನ್ಸ್ ಸಂಸ್ಥೆ ಆರಂಭಗೊಂಡ ಮೇಲೆ ಬೆಂಗಳೂರಿನಿಂದ ವಿವಿಧ ಕೇಂದ್ರಗಳಿಗೆ ವಿಮಾನಯಾನದ ಸೌಲಭ್ಯವನ್ನು ಕಲ್ಪಿಸಲಾಯಿತು. ರಾಜ್ಯದ ರಾಜಧಾನಿಯಾದ ಬೆಂಗಳೂರು 1996 ರಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂದು ಘೋಷಿಸಲ್ಪಟ್ಟಿತ್ತು. ಬೆಳಗಾವಿ, ಹುಬ್ಬಳ್ಳಿ, ಮೈಸೂರು,

©KTBS Not to be re published

ಮಂಗಳೂರುಗಳಲ್ಲಿ ದೇಶೀಯ ವಿಮಾನ ನಿಲ್ದಾಣಗಳಿವೆ. ಹೊಸದಾಗಿ ಹಾಸನ, ಕಲಬುರಗಿ(ಗುಲ್ಬರ್ಗ)ಗಳಲ್ಲಿ ನಿರ್ಮಾಣಗೊಳ್ಳಲಿವೆ.

ಈ ಹಿಂದೆ ಬೆಂಗಳೂರು ನಗರದ ಎಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿದ್ದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಅಲ್ಲಿಂದ 34 ಕಿ.ಮೀ. ದೂರದಲ್ಲಿ ದೇವನಹಳ್ಳಿಗೆ ದಿನಾಂಕ 24-05-2008 ರಂದು ಸ್ಥಳಾಂತರಗೊಂಡಿತು. ಎಚ್.ಎ.ಎಲ್. ವಿಮಾನ ನಿಲ್ದಾಣವನ್ನು ಈಗ ಪೈಲಟ್‌ಗಳ ತರಬೇತಿಗೆ ಬಳಸಲಾಗುತ್ತಿದೆ. ಹೊಸದಾಗಿ ನಿರ್ಮಿಸಿದ ದೇವನಹಳ್ಳಿ ವಿಮಾನ ನಿಲ್ದಾಣವು ಭಾರತದ ಮೊದಲ 'ಹಸಿರು ಕ್ಷೇತ್ರದ ವಿಮಾನ ನಿಲ್ದಾಣ'ವಾಗಿದೆ. (Green field Airport) ಇದು ಸುಸಜ್ಜಿತ ಸೌಲಭ್ಯಗಳಿಂದ ಕೂಡಿರುವ ಅತ್ಯಾಧುನಿಕ ವಿಮಾನ ನಿಲ್ದಾಣವಾಗಿದೆ. ಇದನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂದು ಕರೆಯಲಾಗಿದೆ.

## ಜಲ ಸಾರಿಗೆ

ಕರ್ನಾಟಕದಲ್ಲಿ ಒಳನಾಡಿನ ಮತ್ತು ಸಮುದ್ರ ಜಲಸಂಚಾರಗಳೆರಡೂ ರೂಢಿಯಲ್ಲಿವೆ. ಅವುಗಳ ಲಭ್ಯತೆ ಬಹು ಸೀಮಿತವಾಗಿದ್ದು, ಅವು ಅಷ್ಟೊಂದು ಮಹತ್ವ ಹೊಂದಿಲ್ಲ. ಹಿಂದೆ ಒಳನಾಡಿನ ಜಲಸಂಚಾರವು ನಾಡದೋಣಿ, ಹರಿಗೋಲು, ತೆಪ್ಪಗಳಿಗೆ ಸೀಮಿತಗೊಂಡಿತ್ತು. ಇತ್ತೀಚೆಗೆ ಯಂತ್ರಚಾಲಿತ ದೋಣಿಗಳ ಸಂಚಾರ ರೂಢಿಗೆ ಬಂದಿದೆ. ಇದು ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುವುದು. ಈ ಜಿಲ್ಲೆಗಳಲ್ಲಿ ಹರಿಯುವ ಗಂಗಾವಳಿ, ಕಾಳಿ, ಶರಾವತಿ, ಹಾಲಾಡಿ, ಚಕ್ರ, ಕೊಲ್ಲೂರು (ಉಡುಪಿ ಜಿಲ್ಲೆ), ಉದ್ಯಾವರ, ನೇತ್ರಾವತಿ ನದಿಗಳು ಮುಖ್ಯ ಒಳನಾಡಿನ ಜಲಸಾರಿಗೆಯನ್ನು ಪೂರೈಸುತ್ತವೆ. ಕೃಷ್ಣಾನದಿಯನ್ನು ದಾಟಲು ಕೆಲವೆಡೆ ದೋಣಿಗಳನ್ನು ಬಳಸಲಾಗುವುದು. ರಸ್ತೆ ಮತ್ತು ಸಂಚಾರ ಸೌಲಭ್ಯದ ಅಭಿವೃದ್ಧಿಯಿಂದಾಗಿ ಜಲ ಸಾರಿಗೆ ವ್ಯವಸ್ಥೆ ಕಡಿಮೆಯಾಗಿದೆ.

**ಬಂದರುಗಳು :** ಹಡಗು ನಿಲ್ಲುವ ಸಮುದ್ರ ತೀರದ ಸ್ಥಳಗಳನ್ನು ಬಂದರುಗಳೆನ್ನುವರು. ಮೀನುಗಾರಿಕೆ, ವ್ಯಾಪಾರ, ಜನರ ಪ್ರಯಾಣ ಮತ್ತು ಸರಕುಗಳ ಸಾಗಾಣಿಕೆಗಳಿಗೆ ಹಡಗುಗಳನ್ನು ಬಳಸುತ್ತಾರೆ. ಕರ್ನಾಟಕದಲ್ಲಿ ಸುಮಾರು 25 ಸಣ್ಣ ಮತ್ತು ದೊಡ್ಡ ಪ್ರಮಾಣದ ಬಂದರುಗಳಿವೆ. 1957 ರಲ್ಲಿ ಬಂದರು ಅಭಿವೃದ್ಧಿ ಇಲಾಖೆಯು ಸ್ಥಾಪಿತಗೊಂಡು ಸೌಲಭ್ಯಗಳ ವಿಸ್ತರಣೆ ಆರಂಭಗೊಂಡಿತು. 'ನವ ಮಂಗಳೂರು' 1974 ರ ಮೇ 4 ರಂದು ಭಾರತದ ಒಂಬತ್ತನೆಯ 'ಪ್ರಮುಖ ಬಂದರು' ಎಂದು ಘೋಷಿಸಲ್ಪಟ್ಟಿತು. ಇದನ್ನು 'ಕರ್ನಾಟಕದ ಹೆಬ್ಬಾಗಿಲು' ಎಂದು ಕರೆಯುವರು. ಈ ಬಂದರಿನಿಂದ ಕಬ್ಬಿಣದ ಅದಿರು, ಕಾಫಿ, ಸಾಂಬಾರ ಪದಾರ್ಥಗಳು, ಗೋಡಂಬಿ, ಶ್ರೀಗಂಧ, ಹೆಂಚು, ಕ್ರೋಮೈಟ್, ಗ್ರಾನೈಟ್ ಶಿಲೆ, ಸಂಸ್ಕರಿಸಿದ ಹಣ್ಣು ಮತ್ತು ಮೀನುಗಳು ರಫ್ತಾಗುತ್ತವೆ. ಪೆಟ್ರೋಲಿಯಂ ಆಮದಾಗುತ್ತದೆ. ಇದರ ಜೊತೆಗೆ ರಾಜ್ಯವು 10 ಚಿಕ್ಕ ಬಂದರುಗಳನ್ನು ಅಭಿವೃದ್ಧಿಪಡಿಸಿದೆ. ಅವುಗಳೆಂದರೆ ಹಳೆಯ ಮಂಗಳೂರು ಬಂದರು, ಮಲ್ಪೆ, ಹಂಗಾರಕಟ್ಟೆ, ಕುಂದಾಪುರ, ಪಡುಬಿದ್ರಿ, ಭಟ್ಕಳ, ಹೊನ್ನಾವರ, ಬೇಲೆಕೇರಿ, ತದ್ರಿ ಮತ್ತು ಕಾರವಾರ. ಇವುಗಳಲ್ಲಿ ಕಾರವಾರ ಬಂದರು ಅತಿ ಸುಂದರವಾದ ಬಂದರು ಎಂದು ಪ್ರಸಿದ್ಧಿಯಾಗಿದೆ. ಇದು ಸರ್ವಋತು ಬಂದರಾಗಿದ್ದು ತನ್ಮೂಲಕ ಕಬ್ಬಿಣದ ಅದಿರು, ಮ್ಯಾಂಗನೀಸ್, ಗ್ರಾನೈಟ್ ಹಾಗೂ ವ್ಯವಸಾಯೋತ್ಪನ್ನಗಳು ರಫ್ತಾಗುತ್ತವೆ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ಪ್ರತಿಯೊಂದು ಹಳ್ಳಿ-ಪಟ್ಟಣಗಳನ್ನು ___________ ಸಾರಿಗೆ ಸಂಪರ್ಕಿಸುತ್ತದೆ.

© KTBS Not to be re published

2. ಕರ್ನಾಟಕದಲ್ಲಿ ಒಟ್ಟು ____________ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ.

3. ಬೆಂಗಳೂರಿನಲ್ಲಿರುವ ನಗರ ರೈಲನ್ನು ____________ ಎನ್ನುತ್ತಾರೆ.

4. ಕರ್ನಾಟಕದ ಹೆಬ್ಬಾಗಿಲು ಎಂದು ____________ ಬಂದರನ್ನು ಕರೆಯಲಾಗಿದೆ.

5. ಕರ್ನಾಟಕದ ಕರಾವಳಿಯ ರೈಲುಮಾರ್ಗವನ್ನು ____________ ಎಂದು ಕರೆಯುತ್ತಾರೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ರಸ್ತೆ ಸಾರಿಗೆಯ ಮಹತ್ವವನ್ನು ತಿಳಿಸಿ.
2. ಕರ್ನಾಟಕದ ರಸ್ತೆಗಳ ವಿಧಗಳನ್ನು ಬರೆಯಿರಿ.
3. ಕರ್ನಾಟಕದ ಪ್ರಮುಖ ರೈಲುಮಾರ್ಗಗಳನ್ನು ಹೆಸರಿಸಿ.
4. ವಾಯು ಸಾರಿಗೆಯ ಅನುಕೂಲಗಳೇನು?
5. ಕರ್ನಾಟಕದಲ್ಲಿರುವ ಪ್ರಮುಖ ಬಂದರುಗಳನ್ನು ಹೆಸರಿಸಿ.

**III. ಹೊಂದಿಸಿ ಬರೆಯಿರಿ.**

| ಅ | ಆ |
|---|---|
| 1) ಸುವರ್ಣ ಚತುಷ್ಕೋನ | ಎ) ಬಂದರು |
| 2) ಬ್ರಾಡ್‌ಗೇಜ್ | ಬಿ) ಬೆಂಗಳೂರು |
| 3) ಹೆಚ್.ಎ.ಎಲ್ | ಸಿ) NH – 4 |
| 4) ಬೇಲಿಕೇರಿ | ಡಿ) ವಿಮಾನ ನಿಲ್ದಾಣ |
| 5) ನಮ್ಮ ಮೆಟ್ರೋ | ಇ) ರೈಲು ಮಾರ್ಗ |
| | ಎಫ್) ಜಲಮಾರ್ಗ |

**IV. ಚಟುವಟಿಕೆಗಳು**

1) ಕರ್ನಾಟಕದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳನ್ನು ನಕ್ಷೆಯಲ್ಲಿ ಗುರುತಿಸಿ ಮತ್ತು ಹೆಸರಿಸಿ.

**V. ಯೋಜನಾಕಾರ್ಯ**

1) ನೀವು ರೈಲಿನಲ್ಲಿ ಪ್ರಯಾಣ ಮಾಡಿದ ಅನುಭವಗಳನ್ನು ಕುರಿತು ಬರೆಯಿರಿ.

2) ನಿಮ್ಮ ಸ್ಥಳೀಯ ಸಾರಿಗೆ ವ್ಯವಸ್ಥೆ ಬಗ್ಗೆ ಟಿಪ್ಪಣಿ ಬರೆಯಿರಿ.

◈ ◈ ◈

Not ©KTBS to be re published

## ಅಧ್ಯಾಯ – 8

# ಕರ್ನಾಟಕದ ಕೈಗಾರಿಕೆಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕರ್ನಾಟಕದ ಕೈಗಾರಿಕೆಗಳ ಮಹತ್ವ ಮತ್ತು ಕೈಗಾರಿಕಾಭಿವೃದ್ಧಿ.*
- *ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಹಂಚಿಕೆ ಮತ್ತು ಉತ್ಪಾದನೆ.*
- *ಹತ್ತಿ ಬಟ್ಟೆ, ಸಕ್ಕರೆ, ಸಿಮೆಂಟ್, ಕಾಗದ ಕೈಗಾರಿಕೆಗಳು.*
- *ಬೆಂಗಳೂರು – ಭಾರತದ ಪ್ರಮುಖ ಮಾಹಿತಿ ತಂತ್ರಜ್ಞಾನ ಕೈಗಾರಿಕೆಯ ಕೇಂದ್ರ.*
- *ಕರ್ನಾಟಕದ ಪ್ರಮುಖ ಕೈಗಾರಿಕಾ ವಲಯಗಳು.*

## ಕೈಗಾರಿಕೆಗಳ ಮಹತ್ವ ಮತ್ತು ಕೈಗಾರಿಕಾಭಿವೃದ್ಧಿ

ದೇಶದ ಯಾವುದೇ ರಾಜ್ಯದ ತ್ವರಿತವಾದ ಅಭಿವೃದ್ಧಿಯಲ್ಲಿ ಕೈಗಾರಿಕಾಭಿವೃದ್ಧಿ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ಉತ್ತಮ ಅವಕಾಶ ನಮ್ಮ ರಾಜ್ಯಕ್ಕಿದೆ. ಅಪಾರ ಖನಿಜ ಸಂಪತ್ತು, ಕಚ್ಚಾ ವಸ್ತುಗಳು, ಸೂಕ್ತ ವಾಯುಗುಣ, ಸಾಕಷ್ಟು ನೀರಿನ ಪೂರೈಕೆ, ಸಾರಿಗೆ ವ್ಯವಸ್ಥೆ, ನುರಿತ ಕಾರ್ಮಿಕರ ಲಭ್ಯತೆ, ವಿಶಾಲ ಮಾರುಕಟ್ಟೆ ಹಾಗೂ ತಂತ್ರಜ್ಞಾನ ಇರುವುದರಿಂದ ಕರ್ನಾಟಕವು ಅನೇಕ ವೈವಿಧ್ಯಮಯ ಕೈಗಾರಿಕೆಗಳಿಗೆ ಹೆಸರುವಾಸಿಯಾಗಿದೆ. ನಮ್ಮ ರಾಜ್ಯವು ಕೃಷಿ ಆಧಾರಿತ ಗುಡಿ ಕೈಗಾರಿಕೆಗಳಿಂದ ಆಧುನಿಕ ಕೈಗಾರಿಕೋದ್ಯಮದೆಡೆಗೆ ದಾಪುಗಾಲು ಹಾಕಿದೆ.

ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಸರ್‌ಎಂ. ವಿಶ್ವೇಶ್ವರಯ್ಯನವರ ಕೊಡುಗೆ ಅಪಾರ. 'ಕೈಗಾರಿಕೀಕರಣ ಇಲ್ಲವೆ ವಿನಾಶ' ಎಂಬ ತತ್ವವನ್ನು ಹೊಂದಿದ್ದ ಅವರು ರಾಜ್ಯದ ಅನೇಕ ಕೈಗಾರಿಕೆಗಳಿಗೆ ಬುನಾದಿಯನ್ನು ಹಾಕಿದರು. 1902 ರಂದು ಶಿವನಸಮುದ್ರದಲ್ಲಿ ಜಲ ವಿದ್ಯುಚ್ಛಕ್ತಿ ಉತ್ಪಾದನೆ ಪ್ರಾರಂಭಗೊಂಡ ಮೇಲೆ ವಿವಿಧ ಮೂಲ ಸಾಮಗ್ರಿ, ದಿನೋಪಯೋಗಿ ವಸ್ತುಗಳನ್ನು ತಯಾರಿಸುವ ಉದ್ಯಮಗಳು ಅಸ್ತಿತ್ವಕ್ಕೆ ಬಂದವು. ಅಕ್ಕಿ ಗಿರಣಿ, ಹೆಂಚಿನ ತಯಾರಿಕೆ, ಬೀಡಿ, ಸಿಗರೇಟು, ಕಬ್ಬಿಣ ಮತ್ತು ಹಿತ್ತಾಳೆ ಫೌಂಡ್ರಿಗಳು ಸ್ಥಾಪನೆಯಾದವು. 1923 ರ ನಂತರ ರಾಜ್ಯದಲ್ಲಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ, ಸಾಬೂನು ತಯಾರಿಕೆ, ಹತ್ತಿ ಮತ್ತು ರೇಷ್ಮೆ ಗಿರಣಿ, ಕಾಗದ, ಸಿಮೆಂಟ್, ಬಣ್ಣ, ಸಕ್ಕರೆ, ಶ್ರೀಗಂಧದೆಣ್ಣೆ ಮುಂತಾದ ಆಧುನಿಕ ಕೈಗಾರಿಕೆಗಳು ಸ್ಥಾಪನೆಗೊಂಡವು. ಸ್ವಾತಂತ್ರ್ಯ ಪೂರ್ವದಲ್ಲೇ ಅಂದಿನ ಮೈಸೂರು ಪ್ರಾಂತ್ಯವು ಕೈಗಾರಿಕೆಯಲ್ಲಿ ಮಾದರಿ ರಾಜ್ಯವಾಗಿತ್ತು. ಇದಕ್ಕೆ ಆರಂಭದಲ್ಲಿ ಬ್ರಿಟಿಷರು ಮತ್ತು ಅಂದಿನ ಆಳರಸರ ಆಸಕ್ತಿಯೂ ಕಾರಣ.

ಸ್ವಾತಂತ್ರ್ಯಾನಂತರ ಕೇಂದ್ರ ಸರ್ಕಾರದ ಕೈಗಾರಿಕಾ ನೀತಿ ರಾಜ್ಯದ ಕೈಗಾರಿಕಾ ಪ್ರಗತಿಗೆ ಪೂರಕವಾಯಿತು. ಇದರ ಫಲವಾಗಿ ಅನೇಕ ಕೈಗಾರಿಕೆಗಳು ಸ್ಥಾಪನೆಗೊಂಡವು. ಅವುಗಳೆಂದರೆ: ವಿಮಾನ ತಯಾರಿಕೆ, ಎಂಜಿನೀಯರಿಂಗ್, ಮೆಷಿನ್ ಟೂಲ್ಸ್, ಗಡಿಯಾರಗಳು, ಕಬ್ಬಿಣ ಮತ್ತು ಉಕ್ಕು, ಅಲ್ಯೂಮಿನಿಯಂ, ಮಾಹಿತಿ ತಂತ್ರಜ್ಞಾನ, ವಿದ್ಯುನ್ಮಾನ, ಜೈವಿಕ ತಂತ್ರಜ್ಞಾನ ಉದ್ಯಮ ಇತ್ಯಾದಿ.

### ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ

ಕರ್ನಾಟಕವು ದಕ್ಷಿಣ ಭಾರತದಲ್ಲೇ ಮೊಟ್ಟ ಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ಸ್ಥಾಪಿಸಿದ ಕೀರ್ತಿಗೆ ಪಾತ್ರವಾಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರ ದೂರದೃಷ್ಟಿಯಿಂದ ಬಾಬಾಬುಡನ್‌ಗಿರಿ ಬೆಟ್ಟಗಳಲ್ಲಿ

©KTBS Not to be republished

ಸಿಗುವ ಉತ್ತಮ ಹಾಗೂ ಅಪಾರ ಕಬ್ಬಿಣದ ಅದಿರನ್ನು ಬಳಸಿಕೊಳ್ಳಲು ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ 1923 ರಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪಿಸಲಾಯಿತು. ಇದನ್ನು ಮೈಸೂರು ಐರನ್ ಅಂಡ್ ಸ್ಟೀಲ್ ಇಂಡಸ್ಟ್ರೀಸ್ ಲಿಮಿಟೆಡ್ (MISL) ಎಂದು ಕರೆಯಲಾಯಿತು. ಅನಂತರ 1989 ರಲ್ಲಿ ಭಾರತದ ಉಕ್ಕು ಪ್ರಾಧಿಕಾರಕ್ಕೆ (SAIL) ವಹಿಸಿಕೊಡಲಾಯಿತು. ಇಂದು ಇದಕ್ಕೆ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಎಂದು (VISL) ಹೆಸರಿಡಲಾಗಿದೆ. ಈ ಕಾರ್ಖಾನೆಗೆ ಅಗತ್ಯವಾದ ಕಬ್ಬಿಣದ ಅದಿರು ಕೆಮ್ಮಣ್ಣುಗುಂಡಿಯಿಂದ, ಬಂಡಿಗುಡ್ಡದಿಂದ ಸುಣ್ಣ, ಭದ್ರಾ ನದಿಯಿಂದ ನೀರು ಹಾಗೂ ಸಂಡೂರಿನಿಂದ ಮ್ಯಾಂಗನೀಸ್ ಪೂರೈಕೆ ಆಗುತ್ತದೆ. ಆರಂಭದಲ್ಲಿ ಊದುಕುಲುಮೆಗೆ ಉರುವಲನ್ನು ಉಪಯೋಗಿಸಲಾಗುತ್ತಿತ್ತು. ಶರಾವತಿ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರ ಪ್ರಾರಂಭವಾದ ಮೇಲೆ ಜಲ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳಲಾಗಿದೆ. ಈಗ ವಿಶೇಷ ರೀತಿಯ ಉಕ್ಕು, ಬೀಡು ಕಬ್ಬಿಣವನ್ನು ಉತ್ಪಾದಿಸಲಾಗುತ್ತಿದೆ. ಕರ್ನಾಟಕದ ಮತ್ತೊಂದು ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಖಾಸಗಿ ವಲಯದ ಜಿಂದಾಲ್ ವಿಜಯನಗರ ಉಕ್ಕು ಲಿಮಿಟೆಡ್. ಇದು ಬಳ್ಳಾರಿ ಜಿಲ್ಲೆಯ ತೋರಣಗಲ್ ಎಂಬಲ್ಲಿ 2001ರಲ್ಲಿ ಅತ್ಯಾಧುನಿಕ ಕೊರೆಕ್ಸ್ (Corex) ತಂತ್ರಜ್ಞಾನವನ್ನು ಉಪಯೋಗಿಸಿ ಸ್ಥಾಪಿಸಲಾಗಿದೆ. ಇದು ಕಬ್ಬಿಣ ಮತ್ತು ಉಕ್ಕನ್ನು ಉತ್ಪಾದಿಸುತ್ತಿದೆ.

### ಹತ್ತಿ ಬಟ್ಟೆ ಕೈಗಾರಿಕೆ

ಹತ್ತಿ ಬಟ್ಟೆ ಕೈಗಾರಿಕೆಯು ಮೊದಲಿಗೆ ಆರಂಭಗೊಂಡ ಆಧುನಿಕ ಕೈಗಾರಿಕೆಗಳಲ್ಲಿ ಒಂದಾಗಿದೆ. ಇದು ಕೃಷಿಯಾಧಾರಿತ ಕೈಗಾರಿಕೆ. ಪುರಾತನ ಕಾಲದಿಂದಲೂ ಕೈಮಗ್ಗಗಳಿಂದ ಬಟ್ಟೆ ನೇಯ್ಗೆ ಕರ್ನಾಟಕದಲ್ಲಿ ರೂಢಿಯಲ್ಲಿತ್ತು. ಈಗಲೂ ಕೈಮಗ್ಗದಿಂದ ಬಟ್ಟೆ ನೇಯುವುದು ರೂಢಿಯಲ್ಲಿದೆ. ಕೃತಕ ನಾರಿನ ಬಟ್ಟೆ, ವಿದೇಶಿ ಹತ್ತಿ ಬಟ್ಟೆಯ ಪೈಪೋಟಿಯ ನಡುವೆಯೂ ಹತ್ತಿ ಬಟ್ಟೆಗೆ ಈಗಲೂ ರಾಜ್ಯದಲ್ಲಿ ಅಪಾರ ಬೇಡಿಕೆಯಿದೆ.

ಆಧುನಿಕ ಹತ್ತಿ ಗಿರಣಿಗಳು 19ನೇ ಶತಮಾನದ ಕೊನೆಯ ಭಾಗದಲ್ಲಿ ಆರಂಭವಾಗತೊಡಗಿದ್ದವು. ಹತ್ತಿಯಿಂದ ಬೀಜ ಬೇರ್ಪಡಿಸುವ (ಜಿನ್ನಿಂಗ್ ಗಿರಣಿ), ಹತ್ತಿ ದಾರ ತೆಗೆಯುವ (ಸ್ಪಿನ್ನಿಂಗ್ ಗಿರಣಿ) ಉತ್ತರ ಕರ್ನಾಟದ ಜಿಲ್ಲೆಗಳಲ್ಲಿ ಆರಂಭಗೊಂಡವು. ಮೊಟ್ಟ ಮೊದಲು 1884 ರಲ್ಲಿ ಎಂ.ಎಸ್.ಕೆ. ಗಿರಣಿ ಕಲಬುರಗಿ(ಗುಲ್ಬರ್ಗ)ಯಲ್ಲಿ ಸ್ಥಾಪನೆಗೊಂಡಿತು. ಅನಂತರ ಹುಬ್ಬಳ್ಳಿಯಲ್ಲಿ ಹತ್ತಿ ಬಟ್ಟೆ ಕೈಗಾರಿಕೆಗಳು ಪ್ರಾರಂಭಗೊಂಡವು. 1900ರ ನಂತರ ದೊಡ್ಡ ಹತ್ತಿ ಬಟ್ಟೆ ಗಿರಣಿಗಳು ಸ್ಥಾಪನೆಗೊಂಡವು. ಅವುಗಳಲ್ಲಿ ಬೆಂಗಳೂರಿನ ಬಿನ್ನಿ ಮಿಲ್, ಮಿನರ್ವ ಮಿಲ್, ಮೈಸೂರಿನ ಕೆ.ಆರ್.ಮಿಲ್, ದಾವಣಗೆರೆಯ ಕಾಟನ್ ಮಿಲ್ ಮುಂತಾದುವು ಸ್ವಾತಂತ್ರ್ಯ ಪೂರ್ವದಲ್ಲೇ ಸ್ಥಾಪನೆಗೊಂಡಿದ್ದವು.

ಅನಂತರ ಹತ್ತಿ ಬೆಳೆಯುವ ಉತ್ತರದ ಬಯಲು ಪ್ರದೇಶದಲ್ಲಿ ಅಭಿವೃದ್ಧಿಗೊಂಡವು. ದಾವಣಗೆರೆಯು ರಾಜ್ಯದ ಅತಿ ಮುಖ್ಯ ಹತ್ತಿಬಟ್ಟೆ ಕೈಗಾರಿಕಾ ಕೇಂದ್ರವಾಯಿತು. ಇದನ್ನು 'ಕರ್ನಾಟಕದ ಮ್ಯಾಂಚೆಸ್ಟರ್' ಎಂದು ಕರೆಯುತ್ತಾರೆ. ಹುಬ್ಬಳ್ಳಿ, ಇಳಕಲ್, ಗುಳೇದಗುಡ್ಡ, ರಬಕವಿ, ಬಾಗಲಕೋಟೆ, ಮೊಳಕಾಲ್ಮೂರು, ಗದಗ–ಬೆಟಗೇರಿ, ಬಾದಾಮಿ, ಬೆಳಗಾವಿ, ನರಗುಂದ, ಗೋಕಾಕ್, ಬಳ್ಳಾರಿ, ಹುಣಸೂರು, ನಂಜನಗೂಡು, ಪಿರಿಯಾಪಟ್ಟಣ, ಚಾಮರಾಜನಗರಗಳಲ್ಲೂ ಹತ್ತಿ ಬಟ್ಟೆ ನೂಲುವ, ನೇಯುವ ಗಿರಣಿಗಳಿವೆ. ಪ್ರಸ್ತುತ ರಾಜ್ಯದಲ್ಲಿ 44 ಹತ್ತಿ ಬಟ್ಟೆ ಗಿರಣಿಗಳಿವೆ. ವಾರ್ಷಿಕ ಸರಾಸರಿ 5.1 ದಶಲಕ್ಷ ಮೀಟರ್ ಹತ್ತಿ ಬಟ್ಟೆಯನ್ನು ಉತ್ಪಾದಿಸಲಾಗುತ್ತಿದೆ.

ಇತ್ತೀಚೆಗೆ ಕೆಲವು ಹತ್ತಿ ಗಿರಣಿಗಳು ಮುಚ್ಚಲ್ಪಟ್ಟಿವೆ. ಇದಕ್ಕೆ ಕಚ್ಚಾ ಹತ್ತಿಯ ಕೊರತೆ, ಹಳೆಯ ಯಂತ್ರಗಳು, ವಿದ್ಯುಚ್ಛಕ್ತಿಯ ಕೊರತೆ, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ಕೃತಕ ನಾರಿನ ಬಟ್ಟೆಯ ಪೈಪೋಟಿ ಇತ್ಯಾದಿ ಕಾರಣಗಳಾಗಿರುತ್ತವೆ.


ಕರ್ನಾಟಕದಲ್ಲಿ ಜವಳಿ ಉದ್ಯಮದ ಪರಿಸ್ಥಿತಿಯನ್ನು ಸುಧಾರಿಸಲು 'ಸುವರ್ಣ ಜವಳಿ ನೀತಿ 2008–13'

©KTBS Not to be re published

ಎಂಬ ಯೋಜನೆಯನ್ನು ಸರ್ಕಾರ ಪ್ರಾರಂಭಿಸಿ, 11 ಜಿಲ್ಲೆಗಳಲ್ಲಿ ಬಟ್ಟೆಯ ಸಿದ್ಧ ಉಡುಪಿನ ಪಾರ್ಕ್‌ಗಳನ್ನು ಸ್ಥಾಪಿಸಿದೆ. ಇವುಗಳ ಉತ್ಪಾದನೆಯನ್ನು ವಿದೇಶಗಳಿಗೆ ರಫ್ತು ಮಾಡುವುದು ಇದರ ಉದ್ದೇಶವಾಗಿದೆ. ಈಗಾಗಲೇ ಬಟ್ಟೆ ರಫ್ತಿನಲ್ಲಿ ಕರ್ನಾಟಕವು ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ದೊಡ್ಡಬಳ್ಳಾಪುರ, ಆನೇಕಲ್, ಬೆಳಗಾವಿ, ಮೈಸೂರು, ರಾಮನಗರಗಳಲ್ಲಿ ಇಂತಹ ಪಾರ್ಕ್‌ಗಳಿವೆ.

## ಸಕ್ಕರೆ ಕೈಗಾರಿಕೆ

ಸಕ್ಕರೆ ಕೈಗಾರಿಕೆಯು ಕರ್ನಾಟಕದ ಪ್ರಮುಖ ಬೃಹತ್ ಪ್ರಮಾಣದ ಉದ್ಯಮಗಳಲ್ಲಿ ಒಂದಾಗಿದೆ. ಇದೂ ಸಹ ಕೃಷಿ ಆಧಾರಿತವಾದುದು. ಇದರ ಪ್ರಗತಿಗೆ ಅಗತ್ಯವಾದ ಎಲ್ಲಾ ಸ್ಥಾನೀಕರಣ ಅಂಶಗಳು ರಾಜ್ಯದಲ್ಲಿ ಪೂರಕವಾಗಿವೆ. ಉದಾ: ಕಬ್ಬು ಉತ್ಪಾದನೆ, ಉತ್ತಮ ಹವಾಮಾನ, ವಿದ್ಯುತ್ ಸರಬರಾಜು, ಸ್ಥಳೀಯ ಮಾರುಕಟ್ಟೆ, ಸಾರಿಗೆ ವ್ಯವಸ್ಥೆ ಇತ್ಯಾದಿ. ಇದು ಕರ್ನಾಟಕದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲೇ ಶ್ರೀರಂಗಪಟ್ಟಣದ ಪಾಲಳ್ಳಿ (ಅಷ್ಟಗ್ರಾಮ) ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಸಕ್ಕರೆ ತಯಾರಿಸುತ್ತಿದ್ದನ್ನು ಸರ್ ಫ್ರಾನ್ಸಿಸ್ ಬುಕಾನನ್ ಉಲ್ಲೇಖಿಸಿರುವನು. ಅವು 1847ರಲ್ಲಿಯೇ ಸಕ್ಕರೆಯನ್ನು ಉತ್ಪಾದಿಸುತ್ತಿದ್ದು, ಲಂಡನ್ನಿನ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದುದು ದಾಖಲೆಗಳಿಂದ ತಿಳಿದು ಬಂದಿದೆ. ಮೊಟ್ಟಮೊದಲ ಆಧುನಿಕ ಸಕ್ಕರೆ ಕೈಗಾರಿಕೆ 1933ರಲ್ಲಿ 'ಮೈಸೂರು ಸಕ್ಕರೆ ಕಂಪನಿ' (Mysugar) ಮಂಡ್ಯದಲ್ಲಿ ಪ್ರಾರಂಭವಾಯಿತು. 1951 ರವರೆಗೂ ಒಂದೇ ಕಾರ್ಖಾನೆಯಿತ್ತು. ಇಂದು ರಾಜ್ಯದಲ್ಲಿ ಒಟ್ಟು 47 ಸಕ್ಕರೆ ಕಾರ್ಖಾನೆಗಳಿವೆ. ಸಕ್ಕರೆ ಉತ್ಪಾದನೆಯಲ್ಲಿ ಕರ್ನಾಟಕವು ಭಾರತದಲ್ಲೇ ಮೂರನೇ ಸ್ಥಾನದಲ್ಲಿದೆ.




**ಹಂಚಿಕೆ :** ಕರ್ನಾಟಕದ ಸಕ್ಕರೆ ಕೈಗಾರಿಕೆಯು ವಿಶೇಷವಾಗಿ ಕಬ್ಬು ಬೆಳೆಯುವ ಪ್ರದೇಶಗಳಲ್ಲೇ ಹಂಚಿಕೆಯಾಗಿದೆ. ಕಾವೇರಿ, ಕೃಷ್ಣ ಮತ್ತು ತುಂಗಭದ್ರಾ ನದಿಗಳ ಜಲಾನಯನ ಪ್ರದೇಶದ ಜಿಲ್ಲೆಗಳಲ್ಲಿ ಕೇಂದ್ರೀಕೃತಗೊಂಡಿವೆ. ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ

**ನಿಮಗೆ ತಿಳಿದಿರಲಿ:**
ಕರ್ನಾಟಕದ ಸಕ್ಕರೆ ನಗರ – ಮಂಡ್ಯ
ಸಕ್ಕರೆಯ ಜಿಲ್ಲೆ – ಬೆಳಗಾವಿ

©KTBS Not to be republished

ಹೆಚ್ಚು ಸಕ್ಕರೆ ಕಾರ್ಖಾನೆಗಳಿವೆ. ತರುವಾಯ ಮಂಡ್ಯ, ಮೈಸೂರು, ಬೀದರ್, ವಿಜಯಪುರ, ಕಲಬುರಗಿ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳು ಪ್ರಮುಖವಾದವು.

ಕಬ್ಬಿನ ಸಿಪ್ಪೆ ಮತ್ತು ಕಾಕಂಬಿಗಳು ಈ ಉದ್ಯಮದಿಂದ ದೊರೆಯುವ ಉಪ ಪದಾರ್ಥಗಳು. ಕಬ್ಬಿನ ಸಿಪ್ಪೆಯಿಂದ ಕಾಗದದ ತಯಾರಿಕೆ ಹಾಗೂ ಇಂಧನವನ್ನಾಗಿ ಬಳಸುವರು. ಕಾಕಂಬಿಯಿಂದ ಮದ್ಯಸಾರವನ್ನು ಉತ್ಪಾದಿಸುವರು.

### ಕಾಗದ ಕೈಗಾರಿಕೆ

ಕಾಗದವು ಆಧುನಿಕ ಜಗತ್ತಿನಲ್ಲಿ ಮಹತ್ವದ ವಸ್ತುವಾಗಿದೆ. ಶಿಕ್ಷಣ, ಮುದ್ರಣ, ವೃತ್ತಪತ್ರಿಕೆ ಹಾಗೂ ಸಂಸ್ಕೃತಿಯ ವಿಕಾಸಕ್ಕೆ ಅಗತ್ಯವಾದ ವಸ್ತುವಾಗಿದೆ. ಕಾಗದ ಕೈಗಾರಿಕೆಯು ಅರಣ್ಯಾಧಾರಿತವಾದುದು. ಈ ಕೈಗಾರಿಕೆಗೆ ಬಿದಿರು, ಮರದ ತಿರುಳು, ಹುಲ್ಲು, ಕಬ್ಬಿನ ಸಿಪ್ಪೆ, ಚಿಂದಿ ಬಟ್ಟೆ, ರದ್ದಿ ಕಾಗದಗಳನ್ನು ಕಚ್ಚಾ ಪದಾರ್ಥಗಳಾಗಿ ಬಳಸಲಾಗುವುದು. ಮೊಟ್ಟಮೊದಲು ಕರ್ನಾಟಕದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ದಟ್ಟವಾದ ಅರಣ್ಯವನ್ನು ಗಮನದಲ್ಲಿಟ್ಟುಕೊಂಡು ಭದ್ರಾವತಿಯಲ್ಲಿ 'ಮೈಸೂರು ಪೇಪರ್ ಮಿಲ್ ಲಿಮಿಟೆಡ್' ಕಾರ್ಖಾನೆಯು 1936ರಲ್ಲಿ ಪ್ರಾರಂಭಗೊಂಡಿತು. ಅನಂತರ 'ವೆಸ್ಟ್ ಕೋಸ್ಟ್ ಪೇಪರ್ ಮಿಲ್' ಖಾಸಗಿ ಕಂಪೆನಿಯಿಂದ ದಾಂಡೇಲಿಯಲ್ಲಿ ಸ್ಥಾಪನೆಗೊಂಡಿತು. ಸಮೀಪದ ಅರಣ್ಯಗಳ ಬಿದಿರು, ನೀಲಗಿರಿ ಮರದ ತಿರುಳು, ಕಾಳಿ ನದಿ ನೀರು, ಜೋಗ್‌ನಿಂದ ವಿದ್ಯುತ್ ಪೂರೈಕೆಯಾಗುತ್ತವೆ. ನಂಜನಗೂಡು, ಕೃಷ್ಣರಾಜನಗರ, ಸತ್ಯಗಾಲ, ಮುಂಡಗೋಡ, ಮುನಿರಾಬಾದ್, ಯಡಿಯೂರು ಮತ್ತು ಬೆಂಗಳೂರಿನಲ್ಲಿ ರಾಜ್ಯದ ಇತರೆ ಕಾಗದ ತಯಾರಿಕಾ ಘಟಕಗಳಿವೆ. ದೇಶದ ಕಾಗದ ಉತ್ಪಾದಿಸುವ ರಾಜ್ಯಗಳಲ್ಲಿ ಕರ್ನಾಟಕವು ನಾಲ್ಕನೆಯ ಸ್ಥಾನದಲ್ಲಿದೆ.

### ಸಿಮೆಂಟ್ ಕೈಗಾರಿಕೆ

ಕರ್ನಾಟಕದಲ್ಲಿ ನಗರೀಕರಣ ಮತ್ತು ಕೈಗಾರಿಕೀಕರಣ ವಿಸ್ತರಣೆ ಹೆಚ್ಚಾಗಿದ್ದರಿಂದ ನಿರ್ಮಾಣ ಕಾರ್ಯಗಳಿಗೆ ಸಿಮೆಂಟ್‌ಗೆ ಬೇಡಿಕೆಯೂ ಹೆಚ್ಚಾಗಿದೆ. ಮನೆ ಕಟ್ಟಲು, ದೊಡ್ಡ ಕಟ್ಟಡಗಳ ನಿರ್ಮಾಣ, ರಸ್ತೆ, ಸೇತುವೆ, ಅಣೆಕಟ್ಟೆ ಮೊದಲಾದವುಗಳ ನಿರ್ಮಾಣಕ್ಕೆ ಸಿಮೆಂಟ್ ಬೇಕು.

ಸಿಮೆಂಟ್ ಕೈಗಾರಿಕೆಯ ಸ್ಥಾಪನೆಗೆ ಅಗತ್ಯವಾದ ಅಪಾರವಾದ ಸುಣ್ಣಕಲ್ಲು ರಾಜ್ಯದಲ್ಲಿ ದೊರೆಯುತ್ತದೆ. ಜೊತೆಗೆ ಜಿಪ್ಸಂ ಮತ್ತು ಬಾಕ್ಸೈಟ್‌ಗಳೂ ದೊರೆಯುತ್ತವೆ. ಕಲ್ಲಿದ್ದಲು ಮಾತ್ರ ನೆರೆಯ ರಾಜ್ಯಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ. ನೀರು, ಮರಳು, ಸಾರಿಗೆ, ವಿದ್ಯುಚ್ಛಕ್ತಿ, ಜೇಡಿಮಣ್ಣು, ವಿಶಾಲವಾದ ಮಾರುಕಟ್ಟೆ ಸೌಲಭ್ಯಗಳೂ ಸಹ ಸಿಮೆಂಟ್ ಕೈಗಾರಿಕಾಭಿವೃದ್ಧಿಗೆ ಸಹಾಯಕವಾಗಿವೆ.

ರಾಜ್ಯದ ಮೊದಲ ಸಿಮೆಂಟ್ ಕಾರ್ಖಾನೆಯು 1939 ರಲ್ಲಿ ಭದ್ರಾವತಿಯಲ್ಲಿ ಸ್ಥಾಪಿತವಾಯಿತು. ಅನಂತರ ಬಾಗಲಕೋಟೆ, ತುಮಕೂರು ಜಿಲ್ಲೆಯ ಅಮ್ಮಸಂದ್ರ, ಕಲಬುರಗಿ ಜಿಲ್ಲೆಯ ಶಹಾಬಾದ್‌ಗಳಲ್ಲಿ ಸ್ಥಾಪಿಸಲ್ಪಟ್ಟವು. ಇತರೆ ಸಿಮೆಂಟ್ ಕೈಗಾರಿಕೆ ಕೇಂದ್ರಗಳೆಂದರೆ: ವಾಡಿ, ಲೋಕಾಪುರ, ಇಟ್ಟಿಗೆಹಳ್ಳಿ, ಮಡಕೆರೆ, ಕಂಚಿಪುರ, ಕಲದಗಿ, ಕುರಕುಂಟ, ಸೇಡಂ ಮತ್ತು ಚಿತ್ತಾಪುರ. ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ. 8 ಭಾಗದಷ್ಟು ಕರ್ನಾಟಕ ಉತ್ಪಾದಿಸುತ್ತದೆ. ರಾಜ್ಯಕ್ಕೆ ಈಗ ಸುಮಾರು 121 ಲಕ್ಷ ಟನ್ನುಗಳಷ್ಟು ವಾರ್ಷಿಕ ಸಿಮೆಂಟ್ ಉತ್ಪಾದಿಸುವ ಸಾಮರ್ಥ್ಯವಿದೆ.

©KTBS Not to be re published

**ಮಾಹಿತಿ ತಂತ್ರಜ್ಞಾನ ಉದ್ಯಮಗಳು**

ಕರ್ನಾಟಕವು ಭಾರತದ ಪ್ರಮುಖ ಜ್ಞಾನ ಮತ್ತು ತಾಂತ್ರಿಕತೆಯ ರಾಜ್ಯವಾಗಿದ್ದು, ಇಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯಮಗಳು ಹೆಚ್ಚು ಅಭಿವೃದ್ಧಿಗೊಂಡಿವೆ. ಅನೇಕ ಎಂಜಿನೀಯರಿಂಗ್ ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ಕಂಪ್ಯೂಟರ್ ಆಧಾರಿತ ತಂತ್ರಜ್ಞಾನದ ಕೋರ್ಸ್‌ಗಳಿಗೆ ಹೆಚ್ಚು ಒತ್ತು ನೀಡಿರುವುದರಿಂದ ಪರಿಣತಿ ಹೊಂದಿರುವ ಅಪಾರ ಮಾನವ ಶಕ್ತಿಯನ್ನು ಹೊಂದಿದೆ. ಇದರಿಂದ ಅನೇಕ ಸಾಫ್ಟ್‌ವೇರ್ ಉದ್ಯಮಗಳು ಸ್ಥಾಪನೆಗೊಂಡು ಇಂದು ಕರ್ನಾಟಕವು ಭಾರತದಲ್ಲೇ ಅತ್ಯುನ್ನತ ಸ್ಥಾನದಲ್ಲಿದೆ.

**ಬೆಂಗಳೂರು ; ಭಾರತದ ಪ್ರಮುಖ ಮಾಹಿತಿ ತಂತ್ರಜ್ಞಾನ ಕೇಂದ್ರ**

ಬೃಹತ್ ಬೆಂಗಳೂರು ನಗರವು ಭಾರತದ 'ಸಿಲಿಕಾನ್ ಕಣಿವೆ' ಎಂದೇ ಪ್ರಸಿದ್ಧವಾಗಿದೆ. ಸಾಫ್ಟ್‌ವೇರ್ (ತಂತ್ರಾಂಶ) ಅಥವಾ ಕಂಪ್ಯೂಟರ್ ಪ್ರೋಗ್ರಾಂಗಳಿಗೆ ಉಪಯೋಗಿಸುವ ಸಾಮಗ್ರಿಗಳ ಉತ್ಪಾದನೆ ಹಾಗೂ ರಫ್ತು ಮಾಡುವುದರಲ್ಲಿ ಮೊದಲ ಸ್ಥಾನದಲ್ಲಿದೆ. ಇದು ಪ್ರಪಂಚದ ಹತ್ತು ಪ್ರಮುಖ ಉನ್ನತ ತಂತ್ರಜ್ಞಾನದ (ಹೈಟೆಕ್) ನಗರಗಳಲ್ಲಿ ಒಂದಾಗಿದೆ. ಇದರಿಂದ ಸಮೀಪದ ಇತರ ನಗರಗಳಲ್ಲೂ ಸಾಫ್ಟ್‌ವೇರ್ ಉದ್ಯಮ ವ್ಯಾಪಿಸಿದೆ. ಈ ನಗರವೊಂದರಲ್ಲೇ 1200 ಐ.ಟಿ. ಬಿ.ಟಿ. ಕೈಗಾರಿಕೆಗಳು ಇದ್ದು, ಸುಮಾರು 4 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಕಲ್ಪಿಸಿವೆ. ಇಲ್ಲಿ ಪ್ರಪಂಚದ ಹಲವು ಪ್ರಸಿದ್ಧ ಕಂಪನಿಗಳು ತಮ್ಮ ಶಾಖೆಗಳನ್ನು ಸ್ಥಾಪಿಸಿವೆ. ಇದಕ್ಕೆ ಕಾರಣ ಉತ್ತಮ ಹವಾಮಾನ, ವಿದ್ಯುತ್ ಪೂರೈಕೆ, ತಾಂತ್ರಿಕ ಪರಿಣಿತರು, ಆರ್ಥಿಕ ನೆರವು, ವಿಶಾಲವಾದ ಮಾರುಕಟ್ಟೆ ಹಾಗೂ ಮೂಲ ಸೌಕರ್ಯಗಳಿರುವುದರಿಂದ ಬೃಹತ್ ಬೆಂಗಳೂರು ಭಾರತದ ಪ್ರತಿಷ್ಠಿತ ಮಾಹಿತಿ ತಂತ್ರಜ್ಞಾನ ಕೇಂದ್ರವಾಗಿ ಹೊರಹೊಮ್ಮಿದೆ.

ಬೆಂಗಳೂರಿನಲ್ಲಿ ಇನ್ಫೋಸಿಸ್, ವಿಪ್ರೋ ಮೊದಲಾದ ಪ್ರತಿಷ್ಠಿತ ಕಂಪೆನಿಗಳಿವೆ. ಅವುಗಳ ಶಾಖೆ ರಾಜ್ಯದ ಇತರ ಕೆಲವು ನಗರ ಕೇಂದ್ರಗಳಲ್ಲೂ ಕಂಡುಬರುತ್ತವೆ. ಉದಾ: ಮೈಸೂರು, ಹುಬ್ಬಳ್ಳಿ, ಕಲಬುರಗಿ, ಶಿವಮೊಗ್ಗ, ತುಮಕೂರು, ಮಂಗಳೂರು ಮುಂತಾದುವು. ಮಾನವ ಸಂಪನ್ಮೂಲದ ಮಾಹಿತಿ, ನೇಮಕಾತಿ, ತರಬೇತಿ, ಪಠ್ಯಕ್ರಮ ಮುಂತಾದುವುಗಳನ್ನು ತಿಳಿಸುವುದಕ್ಕೆ ಈ ಉದ್ಯಮ ಹೆಚ್ಚು ಸೂಕ್ತ.

**ಕರ್ನಾಟಕದ ಕೈಗಾರಿಕಾ ವಲಯಗಳು :** ರಾಜ್ಯದಲ್ಲಿ ಕೈಗಾರಿಕೆಗಳು ವ್ಯಾಪಿಸಿರುವ ಆಧಾರದಲ್ಲಿ ಕರ್ನಾಟಕವನ್ನು ಐದು ಕೈಗಾರಿಕಾ ವಲಯಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ :

1) ಬೆಂಗಳೂರು – ಕೋಲಾರ – ತುಮಕೂರು ಕೈಗಾರಿಕಾ ವಲಯ – ಇದು ಅತಿ ಹೆಚ್ಚು ಕೈಗಾರಿಕೆಗಳನ್ನು ಹೊಂದಿರುವ ಪ್ರದೇಶವಾಗಿದೆ.
2) ಬೆಳಗಾವಿ – ಧಾರವಾಡ ಕೈಗಾರಿಕಾ ವಲಯ.
3) ದಕ್ಷಿಣ ಕನ್ನಡ – ಉಡುಪಿ ಜಿಲ್ಲಾ ಕೈಗಾರಿಕಾ ವಲಯ.
4) ಬಳ್ಳಾರಿ – ರಾಯಚೂರು – ಕೊಪ್ಪಳ ಜಿಲ್ಲಾ ಕೈಗಾರಿಕಾ ವಲಯ.
5) ಮೈಸೂರು – ಮಂಡ್ಯ ಕೈಗಾರಿಕಾ ವಲಯ.

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಕರ್ನಾಟಕದ ಮೊಟ್ಟಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪನೆಗೊಂಡ ಸ್ಥಳ ______ .
2. ಕರ್ನಾಟಕದ ಮ್ಯಾಂಚೆಸ್ಟರ್ __________ .

©KTBS Not to be republished

3. ಕಬ್ಬಿನಿಂದ ____________ ನ್ನು ಉತ್ಪಾದಿಸುತ್ತಾರೆ.

4. ಅಮ್ಮಸಂದ್ರದಲ್ಲಿ ____________ ಕೈಗಾರಿಕೆಯಿದೆ.

5. 'ಸಿಲಿಕಾನ್ ಕಣಿವೆ' ಎಂದು ____________ ನಗರವನ್ನು ಕರೆಯುತ್ತಾರೆ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆಯನ್ನು ಕುರಿತು ಬರೆಯಿರಿ.
2. ಕರ್ನಾಟಕದಲ್ಲಿನ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಕುರಿತು ವಿವರಿಸಿ.
3. ಹತ್ತಿ ಬಟ್ಟೆ ಕೈಗಾರಿಕೆಯ ಹಂಚಿಕೆಯನ್ನು ತಿಳಿಸಿ.
4. ಸಕ್ಕರೆ ಕೈಗಾರಿಕೆಯನ್ನು ಸ್ಥಾಪಿಸಲು ಬೇಕಾಗುವ ಅಂಶಗಳನ್ನು ತಿಳಿಸಿ.
5. ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು ಕೇಂದ್ರೀಕೃತವಾಗಲು ಕಾರಣ ತಿಳಿಸಿ.

**III. ಹೊಂದಿಸಿ ಬರೆಯಿರಿ.**

| ಅ | ಆ |
|---|---|
| 1) ದಾಂಡೇಲಿ | ಎ) ಸಿಮೆಂಟ್ |
| 2) ತೋರಣಗಲ್ | ಬಿ) ಹತ್ತಿಬಟ್ಟೆ |
| 3) ಮೊಳಕಾಲ್ಮೂರು | ಸಿ) ಕಾಗದ |
| 4) ಶಹಾಬಾದ್ | ಡಿ) ಕಂಪ್ಯೂಟರ್ |
| 5) ಇನ್ಫೋಸಿಸ್ | ಇ) ಕಬ್ಬಿಣ ಮತ್ತು ಉಕ್ಕು |

**IV. ಚಟುವಟಿಕೆಗಳು**

1. ಕರ್ನಾಟಕದ ರೇಖಾನಕ್ಷೆಯನ್ನು ರಚಿಸಿ, ಅದರಲ್ಲಿ ಕರ್ನಾಟಕದ ಪ್ರಮುಖ ಕೈಗಾರಿಕೆಗಳ ಹಂಚಿಕೆಯನ್ನು ಗುರುತಿಸಿ.

**V ಯೋಜನಾಕಾರ್ಯ**

1. ನಿಮ್ಮ ಸಮೀಪದಲ್ಲಿರುವ ಯಾವುದಾದರೂ ಕಾರ್ಖಾನೆಗೆ ಭೇಟಿ ನೀಡಿ. ಅಲ್ಲಿ ಬಳಕೆ ಮಾಡುವ ಕಚ್ಚಾ ವಸ್ತು, ಅದರ ಸಂಗ್ರಹ ಮತ್ತು ಅದರಿಂದ ತಯಾರಿಸುವ ಸಿದ್ಧ ವಸ್ತುಗಳ ಬಗ್ಗೆ ವರದಿ ಸಿದ್ಧಪಡಿಸಿ.
2. ಬೆಂಗಳೂರು ನಗರದಲ್ಲಿ ಕಂಡುಬರುವ ಜ್ಞಾನಾಧಾರಿತ ಕೈಗಾರಿಕಾ ಸಂಸ್ಥೆಗಳನ್ನು ಕುರಿತ ಪಟ್ಟಿ ಸಿದ್ಧಪಡಿಸಿ.

◈ ◈ ◈

©KTBS Not to be re published

# ಅಧ್ಯಾಯ – 9

# ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕರ್ನಾಟಕದ ನೈಸರ್ಗಿಕ ಹಾಗೂ ಸಾಂಸ್ಕೃತಿಕ ತಾಣಗಳ ಪರಿಚಯ ಹಾಗೂ ಮಹತ್ವ.*
- *ಪ್ರಮುಖ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ವಿವರಣೆ ಹಾಗೂ ಅವುಗಳ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಹತ್ವ.*
- *ಪ್ರಮುಖ ಬೆಟ್ಟಗಳು, ಜಲಪಾತಗಳು, ಐತಿಹಾಸಿಕ ಸ್ಥಳಗಳು.*

**ಪರಿಚಯ ಮತ್ತು ಮಹತ್ವ :**

'ದೇಶ ನೋಡು ಕೋಶ ಓದು' ಎಂಬ ನಾಣ್ಣುಡಿ ಇದೆ. ಜನರು ತಮ್ಮ ವ್ಯಾಪಾರ ವಹಿವಾಟಿಗಾಗಿ, ಕುತೂಹಲಕ್ಕಾಗಿ, ಧಾರ್ಮಿಕ ಆಚರಣೆ, ಮನಃಶಾಂತಿ, ವಿಹಾರ, ಸುಂದರ ತಾಣಗಳನ್ನು ನೋಡುವ ಹಂಬಲ, ಸಂತೋಷಕ್ಕಾಗಿ, ಆರೋಗ್ಯ ವೃದ್ಧಿಗಾಗಿ ತಮ್ಮ ಸ್ಥಳಗಳಿಂದ ಸೂಕ್ತವಾದ ಸ್ಥಳಗಳಿಗೆ ಹೋಗಿ ಕೆಲವು ದಿನ ಸಂಚಾರ ಮಾಡಿ ಬರುವುದನ್ನು ಪ್ರವಾಸ ಎನ್ನುವರು. ಪ್ರವಾಸಿ ಸ್ಥಳಗಳಲ್ಲಿ ತಂಗುವ ಮತ್ತು ಉಪಹಾರಗಳು ವ್ಯವಸ್ಥೆ ಇರುತ್ತದೆ. ಆದ್ದರಿಂದ ಅಲ್ಲಿ ಕೆಲವು ದಿನಗಳು ನೆಲೆಸಿದ್ದು ಬೇರೆ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಆಧುನಿಕ ಪ್ರಪಂಚದಲ್ಲಿ ಪ್ರವಾಸವು ಮಾನವನ ಜೀವನದ ಅನಿವಾರ್ಯ ಸಂಗತಿಯಾಗಿದೆ. ಪ್ರವಾಸದಿಂದ ನಾಡು, ನುಡಿ, ಸಂಸ್ಕೃತಿ, ನಾಗರಿಕತೆ, ಜನಜೀವನದ ಕ್ರಮ ಮುಂತಾದವುಗಳನ್ನು ತಿಳಿಯುವುದು ಸಾಧ್ಯವಾಗುತ್ತದೆ.

ಕರ್ನಾಟಕವು ಭಾರತದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿರುವ ಅತ್ಯಂತ ಹೆಸರಾದ ರಾಜ್ಯಗಳಲ್ಲಿ ಒಂದಾಗಿದೆ. ಕರ್ನಾಟಕವು ಪ್ರಕೃತಿದತ್ತವಾದ ಅನೇಕ ಸುಂದರ ತಾಣಗಳನ್ನು ಹೊಂದಿದೆ. ಹಸಿರಿನಿಂದ ಕಂಗೊಳಿಸುವ ಸಹ್ಯಾದ್ರಿ ಘಟ್ಟಗಳು, ಅಲ್ಲಿನ ನದಿಗಳು, ಜಲಪಾತಗಳು, ಸುಂದರ ನಯನ ಮನೋಹರವಾದ ಕಣಿವೆಗಳು, ವನ್ಯಜೀವಿಗಳು, ಶ್ರೀಗಂಧದ ಕಾಡುಗಳು ಮುಂತಾದುವುಗಳನ್ನು ಹೊಂದಿದೆ. ಸುಂದರ ಕಡಲತೀರಗಳು, ಐತಿಹಾಸಿಕ ತಾಣಗಳು, ಶಿಲ್ಪಕಲಾ ವೈಭವದಿಂದ ಕೂಡಿದ ದೇವಸ್ಥಾನಗಳು, ವಿವಿಧ ಧರ್ಮಗಳ ಧಾರ್ಮಿಕ ಕೇಂದ್ರಗಳು, ಯಾತ್ರಾ ಸ್ಥಳಗಳು ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತವೆ. ಇದರ ಮಹತ್ವವನ್ನು ಮನಗಂಡು ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಲು ಸರ್ಕಾರ 1974 ರಲ್ಲಿ ವ್ಯವಸ್ಥಿತ ಪ್ರವಾಸ ಹಾಗೂ ನಿರ್ವಹಣೆಗಾಗಿ 'ಕರ್ನಾಟಕ ಪ್ರವಾಸೋದ್ಯಮ ನಿಗಮ' ವನ್ನು (KSTDC) ಸ್ಥಾಪಿಸಿದ್ದು, ಪ್ರವಾಸಿಗರಿಗೆ ಮೂಲಸೌಲಭ್ಯಗಳನ್ನು ಒದಗಿಸಲು, ಯಾತ್ರಿ ನಿವಾಸ, ಪ್ರವಾಸಿ ಗೃಹ, ಉಪಹಾರ ಗೃಹ ಮುಂತಾದುವುಗಳ ವ್ಯವಸ್ಥೆಯನ್ನು ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ಒದಗಿಸಿದೆ.

ಕರ್ನಾಟಕವು ಪ್ರವಾಸಿಗರ ಸ್ವರ್ಗವಾಗಿದ್ದು ಅನೇಕ ವೈವಿಧ್ಯಮಯವಾದ ಸುಂದರ ತಾಣಗಳನ್ನು ಹೊಂದಿದ್ದು, ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಯುನೆಸ್ಕೊದವರು ಹಂಪಿ, ಪಟ್ಟದಕಲ್ಲು ಮತ್ತು ಇತ್ತೀಚೆಗೆ ಪಶ್ಚಿಮ ಘಟ್ಟಗಳನ್ನು 'ವಿಶ್ವ ಪರಂಪರೆಯ ತಾಣ' ಗಳೆಂದು ಗುರುತಿಸಿದೆ. ಇದರಿಂದ ವಿಶ್ವದಾದ್ಯಂತ ಕರ್ನಾಟಕವು ಪ್ರಸಿದ್ಧಿಯಾಗಿದೆ.

ಕರ್ನಾಟಕ ಸರ್ಕಾರವು ಹೊಸ ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸಿ ಖಾಸಗಿಯವರಿಗೆ ಅವಕಾಶ ಮತ್ತು ಉತ್ತೇಜನ ನೀಡಿದೆ. 'ಉತ್ತಮ ಪ್ರವಾಸೋದ್ಯಮ ನಿರ್ವಹಣಾ' ರಾಜ್ಯವೆಂದು 1996–97 ರಲ್ಲಿ ಪ್ರಶಸ್ತಿ ದೊರಕಿದೆ. ಈ ಕೆಳಗಿನ ಪ್ರೇಕ್ಷಣೀಯ ಸ್ಥಳಗಳು ಹೆಸರುವಾಸಿಯಾಗಿವೆ.

© KTBS Not to be republished

## ಪ್ರಮುಖ ಪ್ರೇಕ್ಷಣೀಯ ಸ್ಥಳಗಳು

**ಕರ್ನಾಟಕದ ಗಿರಿಧಾಮಗಳು :** ಕರ್ನಾಟಕವು ವೈವಿಧ್ಯಮಯವಾದ ಭೂಸ್ವರೂಪಗಳನ್ನು ಹೊಂದಿದ್ದು, ಅನೇಕ ಎತ್ತರವಾದ ಗಿರಿಶ್ರೇಣಿಗಳನ್ನು ಹೊಂದಿದೆ. ಇದರಿಂದ ಅನೇಕ ಗಿರಿಧಾಮಗಳು ಕಂಡುಬರುತ್ತವೆ. ಚಿಕ್ಕಮಗಳೂರು ಜಿಲ್ಲೆಯ 'ಕುದುರೆಮುಖ' ಗಿರಿಧಾಮ ಪ್ರಮುಖವಾಗಿದ್ದು ಇದರ ಸುತ್ತಲೂ ಹಸಿರಿನಿಂದ ಕೂಡಿದ ದಟ್ಟ ಅರಣ್ಯಗಳು, ಬೆಟ್ಟಗಳು, ಕಾಫಿ ತೋಟಗಳು, ಜಲಪಾತಗಳು ಇರುವುದರಿಂದ ಆಕರ್ಷಣೀಯ ಸ್ಥಳವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮವು ಸಮುದ್ರ ಮಟ್ಟದಿಂದ ಸುಮಾರು 1492 ಮೀ. ಎತ್ತರವಿದ್ದು, ತಂಪಾದ ಹವಾಮಾನವನ್ನು ಹೊಂದಿರುತ್ತದೆ. ಇದು ಬೆಂಗಳೂರಿಗೆ ಸಮೀಪದಲ್ಲಿರುವುದರಿಂದ ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುತ್ತದೆ. ವಸತಿ ಮತ್ತು, ಉಪಹಾರ ವ್ಯವಸ್ಥೆಯಿದ್ದು ತಂಗಲು ಅವಕಾಶವಿದೆ. ಮಹಾತ್ಮ ಗಾಂಧಿಯವರು ಆರೋಗ್ಯ ಸುಧಾರಣೆಗಾಗಿ ತಂಗಿದ್ದರಿಂದ ಇಲ್ಲಿ 'ಗಾಂಧಿ ಭವನ' ನಿರ್ಮಿಸಲಾಗಿದೆ.

ಅದೇ ರೀತಿ ಬಿಳಿಗಿರಿ ರಂಗನಬೆಟ್ಟ, ಆಗುಂಬೆಯ ಸೂರ್ಯಾಸ್ತ ತಾಣ, ಕೆಮ್ಮಣ್ಣುಗುಂಡಿ, ದೇವರಾಯನದುರ್ಗ, ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ, ಕೊಡಚಾದ್ರಿ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ರಾಮನಗರ ಬಂಡೆಗಳು, ಮಧುಗಿರಿಯ ಏಕಶಿಲಾ ಬೆಟ್ಟ, ವಿಸ್ಮಯಕಾರಿಯಾದ ಯಾಣದ ಬಂಡೆಗಳು, ಮಡಿಕೇರಿ ಮುಂತಾದುವುಗಳು ಬೇಸಿಗೆಯ ತಂಗುದಾಣಗಳಾಗಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತವೆ.

> **ಚಟುವಟಿಕೆ:**
> *ನಿಮ್ಮ ಶಾಲಾ ಹಂತದಲ್ಲಿ ಜಿಲ್ಲಾ ದರ್ಶನ ಏರ್ಪಡಿಸಿ ಜಿಲ್ಲೆಯ ಪ್ರಮುಖ ಪ್ರವಾಸಿ ಕೇಂದ್ರಗಳ ಬಗ್ಗೆ ಟಿಪ್ಪಣಿ ಬರೆಯಿರಿ.*

**ಕರ್ನಾಟಕದ ಜಲಪಾತಗಳು :** ನಮ್ಮ ರಾಜ್ಯವು ಜಲಪಾತಗಳ ತವರೂರಾಗಿದೆ. ಮಲೆನಾಡು ಅನೇಕ ಜಲಪಾತಗಳನ್ನು ಹೊಂದಿವೆ. ಮಳೆಗಾಲದಲ್ಲಿ ನೀರು ರಭಸವಾಗಿ ಧುಮ್ಮಿಕ್ಕುತ್ತವೆ. ಉತ್ತರ ಕನ್ನಡ ಜಿಲ್ಲೆಯು ಅತಿ ಹೆಚ್ಚು ಜಲಪಾತಗಳನ್ನು ಹೊಂದಿದೆ.

ಭಾರತದಲ್ಲೇ ಅತಿ ಎತ್ತರವಾದ ಜೋಗ್ ಜಲಪಾತವು ಶಿವಮೊಗ್ಗ ಜಿಲ್ಲೆಯಲ್ಲಿದೆ. ಸುಮಾರು 253 ಮೀ. ಎತ್ತರದಿಂದ ಶರಾವತಿ ನದಿಯು ನಾಲ್ಕು ಸೀಳುಗಳಾಗಿ ಬೀಳುತ್ತದೆ. ಇವುಗಳನ್ನು ರಾಜ, ರಾಣಿ, ರೋರರ್ ಮತ್ತು ರಾಕೆಟ್ ಎಂದು ಕರೆಯುತ್ತಾರೆ. ಇದು ಮಳೆಗಾಲದಲ್ಲಿ ಮೈದುಂಬಿ ಧುಮುಕುವಾಗ ಮರೆಯಲಾಗದ ಚೆಲುವನ್ನು ಮೂಡಿಸುತ್ತದೆ.

ಕಾವೇರಿ ನದಿಯು ಮಂಡ್ಯ ಜಿಲ್ಲೆಯ ಶಿವನಸಮುದ್ರದ ಸಮೀಪದಲ್ಲಿ ಗಗನಚುಕ್ಕಿ ಮತ್ತು ಭರಚುಕ್ಕಿ ಅವಳಿ ಜಲಪಾತಗಳನ್ನು ನಿರ್ಮಿಸಿದೆ. ಮಡಿಕೇರಿ ಸಮೀಪ ಸುಂದರವಾದ 'ಅಬ್ಬಿ ಜಲಪಾತ'ವಿದೆ. ಕೆಮ್ಮಣ್ಣು ಗುಂಡಿ ಗಿರಿಧಾಮದ ಬಳಿ ಹೆಬ್ಬೆ ಜಲಪಾತವಿದೆ. ಅಲ್ಲದೆ ಕಲ್ಹತ್ತಗಿರಿ ಜಲಪಾತ, ಉತ್ತರ ಕನ್ನಡ ಜಿಲ್ಲೆಯ ಉಂಚಳ್ಳಿ ಜಲಪಾತ, ಮಾಗೋಡು ಜಲಪಾತ, ಬೆಳಗಾವಿ ಜಿಲ್ಲೆಯ 'ಗೋಕಾಕ ಜಲಪಾತ'ಗಳಿವೆ. ಘಟಪ್ರಭಾ ನದಿಯಿಂದ ನಿರ್ಮಾಣಗೊಂಡ ಗೋಕಾಕ ಜಲಪಾತವನ್ನು 'ಕರ್ನಾಟಕದ ನಯಾಗರ' ಎಂದು ಕರೆಯುವರು.

> **ಚಟುವಟಿಕೆ: ನಮ್ಮೂರಿನ ಬಗ್ಗೆ ತಿಳಿಯೋಣ**
> ನಮ್ಮ ರಾಜ್ಯದ ಪ್ರತಿ ಸ್ಥಳವು ತನ್ನದೇ ಆದ ಮಹತ್ವ ಹೊಂದಿದೆ. ಹಾಗಾದಲ್ಲಿ ನಿಮ್ಮ ಊರಿನ ಹೆಸರಿನ ಹಿನ್ನೆಲೆ, ಇತಿಹಾಸ ಮತ್ತು ಮಹತ್ವ ಕುರಿತು ಹಿರಿಯರಿಂದ ಮಾಹಿತಿ ಸಂಗ್ರಹಿಸಿ ತಿಳಿಯಿರಿ.

**ಕರ್ನಾಟಕದ ವನ್ಯಜೀವಿಧಾಮಗಳು :** ಕರ್ನಾಟಕವು ದಟ್ಟವಾದ ಅರಣ್ಯಗಳನ್ನು ಹೊಂದಿರುವ ಪ್ರದೇಶಗಳಿಂದ ಕೂಡಿದೆ. ಅರಣ್ಯಗಳು ಮತ್ತು ಕಾಡುಪ್ರಾಣಿಗಳ ಸಂರಕ್ಷಣೆಗಾಗಿ ಸರ್ಕಾರ ಅನೇಕ ವನ್ಯಜೀವಿಧಾಮ, ಪಕ್ಷಿಧಾಮ, ರಾಷ್ಟ್ರೀಯ ಉದ್ಯಾನ, ಹುಲಿಧಾಮ ಹಾಗೂ ಜೀವಿವೈವಿಧ್ಯತಾ ವಲಯಗಳನ್ನು ನಿರ್ವಹಿಸುತ್ತಿದೆ.

ಕರ್ನಾಟಕದಲ್ಲಿ ಐದು ರಾಷ್ಟ್ರೀಯ ಉದ್ಯಾನಗಳಿವೆ. ಅವುಗಳೆಂದರೆ ನಾಗರಹೊಳೆಯ 'ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನ', ಬಂಡಿಪುರ, ಬನ್ನೇರುಘಟ್ಟ, ಕುದುರೆಮುಖ ಹಾಗೂ ಅನ್ಷಿ ರಾಷ್ಟ್ರೀಯ ಉದ್ಯಾನಗಳು.

©KTBS Not to be republished

ಪ್ರಾಣಿಗಳನ್ನು ಅವುಗಳ ನೆಲೆಯಲ್ಲಿಯೇ ಸಂರಕ್ಷಿಸಲು ರಾಜ್ಯದಲ್ಲಿ 27 ವನ್ಯಜೀವಿಧಾಮಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಮುತ್ತೋಡಿ, ಬಂಡಿಪುರ, ನಾಗರಹೊಳೆ, ದಾಂಡೇಲಿ, ಭದ್ರಾ ವನ್ಯಜೀವಿಧಾಮ, ರಂಗನತಿಟ್ಟು, ಕೊಕ್ಕರೆ ಬೆಳ್ಳೂರು, ಮಂದಗದ್ದೆ, ಗುಡವಿ ಪಕ್ಷಿಧಾಮ ಇತ್ಯಾದಿ.

ಕರ್ನಾಟಕವು ಸುಂದರವಾದ ಕಡಲತೀರಗಳನ್ನು ಹೊಂದಿದೆ. ಅವುಗಳೆಂದರೆ ಗೋಕರ್ಣದ 'ಓಂ ಬೀಚ್', ಉಳ್ಳಾಲ ಬೀಚ್, ಮುರ್ಡೇಶ್ವರ, ಮರವಂತೆ, ಮಲ್ಪೆ ಇತ್ಯಾದಿ. ಬೀಚ್‌ಗಳು ಅಸಂಖ್ಯಾತ ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಉಡುಪಿಯ ಸಮೀಪದ ಸೇಂಟ್ ಮೇರೀಸ್ ದ್ವೀಪವು ವಿಶಿಷ್ಟವಾದ ಸ್ತಂಭ ಮಾದರಿಯ ನಿಸರ್ಗದತ್ತವಾದ ಶಿಲಾರಚನೆಯನ್ನು ಹೊಂದಿದ್ದು ಮನೋಹರವಾಗಿವೆ. ಮುರ್ಡೇಶ್ವರದ ನೇತ್ರಾಣಿ ದ್ವೀಪ, ಕಾರವಾರದ ಬಳಿ ದೇವಗಡ, ಕೂರ್ಮಗಡ ಎಂಬ ಎರಡು ದ್ವೀಪಗಳಿವೆ.

**ಐತಿಹಾಸಿಕ ಸ್ಥಳಗಳು (ಚಾರಿತ್ರಿಕ ಸ್ಥಳಗಳು) :** ನಮ್ಮ ನಾಡನ್ನಾಳಿದ ಕದಂಬರು, ಹೊಯ್ಸಳರು, ಚಾಲುಕ್ಯರು, ವಿಜಯನಗರದ ಅರಸರುಗಳು ತಾವು ನಿರ್ಮಿಸಿದ ಶಿಲ್ಪಕಲಾ ವೈಭವದಿಂದ ಕೂಡಿರುವ, ಜನಾಕರ್ಷಣೀಯವಾದ ಅನೇಕ ಸ್ಥಳಗಳನ್ನು ಬಿಟ್ಟು ಹೋಗಿದ್ದಾರೆ. ಅವುಗಳೆಂದರೆ ಹಂಪಿ, ಬೇಲೂರು, ಹಳೇಬೀಡು, ಸೋಮನಾಥಪುರ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ವಿಜಯಪುರ(ಬಿಜಾಪುರ)ದ ಗೋಳಗುಮ್ಮಟ, ಲಕ್ಕುಂಡಿ, ಬನವಾಸಿ, ಬಸರಾಳು, ಬಳ್ಳಿಗಾವೆ, ಮೈಸೂರು, ಶ್ರೀರಂಗಪಟ್ಟಣ, ಮುಂತಾದ ಚಾರಿತ್ರಿಕ ಐತಿಹ್ಯದ ತಾಣಗಳಿವೆ. ಇವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿವೆ.

**ಯಾತ್ರಾಸ್ಥಳಗಳು :** ಕರ್ನಾಟಕದಲ್ಲಿ ಅನೇಕ ಯಾತ್ರಾಸ್ಥಳಗಳಿವೆ. ಧರ್ಮಸ್ಥಳ, ಉಡುಪಿ, ಶೃಂಗೇರಿ, ಹೊರನಾಡು, ಕೊಲ್ಲೂರು, ಗೋಕರ್ಣ, ಉಳವಿ, ಸಿರ್ಸಿ, ಶ್ರವಣಬೆಳಗೊಳ, ಕೂಡಲಸಂಗಮ, ಮೇಲುಕೋಟೆ, ಆದಿಚುಂಚನಗಿರಿ, ಕಾರ್ಕಳ, ದೇವರಗುಡ್ಡ, ಮೈಲಾರಕ್ಷೇತ್ರ, ಕಲಬುರಗಿಯ ಬಂದೇ ನವಾಜ್ ದರ್ಗಾ, ವಿಜಯಪುರದ ಇಬ್ರಾಹಿಂ ರೋಜಾ, ಶಿರಾದ ಮಲ್ಲಿಕ್ ರಹಾನ್ ದರ್ಗಾ, ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್, ಮಂಗಳೂರಿನ ರೊಜಾರಿಯೋ ಕೆಥೆಡ್ರಲ್ ಚರ್ಚ್ ಇತ್ಯಾದಿ.

> **ಚಟುವಟಿಕೆ:**
> ನಮ್ಮ ಊರಿನ ಹಾಗೂ ಅಕ್ಕ-ಪಕ್ಕದ ಗ್ರಾಮಗಳಲ್ಲಿರುವ ಐತಿಹಾಸಿಕ ಸ್ಮಾರಕಗಳು, ದೇವಾಲಯಗಳ ಬಗ್ಗೆ ಮಾಹಿತಿ ಸಂಗ್ರಹಿಸೋಣ.

**ಕರ್ನಾಟಕದ ಕೋಟೆಗಳು:** ಅನೇಕ ಚರಿತ್ರಾರ್ಹ ಸುಭದ್ರವಾದ ಕೋಟೆಗಳು ಕರ್ನಾಟಕದಲ್ಲಿ ಈಗಲೂ ಪ್ರವಾಸಿಗರ ಪ್ರಮುಖ ತಾಣಗಳಾಗಿವೆ. ಬೀದರನ ಕೋಟೆ, ವಿಜಯಪುರ, ಕಲಬುರಗಿ, ವಿಜಯನಗರ (ಹಂಪಿ) ಕೋಟೆ, ಕೆಳದಿ, ಚಿತ್ರದುರ್ಗ ಕೋಟೆ, ಮಧುಗಿರಿ, ನಂದಿಬೆಟ್ಟ, ಪಾವಗಡ, ಮಂಜರಾಬಾದ್, ಉಚ್ಚಂಗಿದುರ್ಗ, ಕವಲೇದುರ್ಗ, ಪರಸಗಡ, ಶ್ರೀರಂಗಪಟ್ಟಣ, ಕರಾವಳಿ ಕೋಟೆಗಳಾದ ಬಹದ್ದೂರ್‌ಗಡ, ಬಸವರಾಜದುರ್ಗ, ದೇವಗಡ, ಕೂರ್ಮಗಡ ಇತ್ಯಾದಿಗಳಿವೆ.

ಈ ಮೇಲ್ಕಂಡ ಎಲ್ಲಾ ಪ್ರೇಕ್ಷಣೀಯ ಸ್ಥಳಗಳು ಕರ್ನಾಟಕದ ಹಿರಿಮೆಯನ್ನು ಹೆಚ್ಚಿಸಿವೆ. ನಮ್ಮ ರಾಜಧಾನಿಯಾದ ಬೆಂಗಳೂರು ನಗರ ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇಲ್ಲಿನ ಉತ್ತಮ ಹವಾಮಾನ, ವಿಧಾನಸೌಧದಂತಹ ಸುಂದರ ಹಾಗೂ ಭವ್ಯ ಕಟ್ಟಡ. ಕಬ್ಬನ್‌ಪಾರ್ಕ್, ಲಾಲ್‌ಬಾಗ್ ನಂತಹ ಅನೇಕ ಆಕರ್ಷಣೀಯ ಹಾಗೂ ಭವ್ಯ ಉದ್ಯಾನಗಳನ್ನು ಹೊಂದಿದ್ದು 'ಉದ್ಯಾನ ನಗರಿ' ಎಂದು ಕರೆಯುತ್ತಾರೆ. ಇದು ಕರ್ನಾಟಕದ ಅತಿ ದೊಡ್ಡ ನಗರವಾಗಿದೆ. ರಾಷ್ಟ್ರಮಟ್ಟದ ಬೃಹನ್ನಗರಗಳಲ್ಲಿ ಒಂದಾಗಿದೆ.

ಅದೇ ರೀತಿ ಮೈಸೂರು 'ಅರಮನೆಗಳ ನಗರ'ವಾಗಿದ್ದು, ಅನೇಕ ಸುಂದರವಾದ ಅರಮನೆಗಳನ್ನು ಹೊಂದಿದೆ. ಇಲ್ಲಿನ ದಸರಾ ಉತ್ಸವಕ್ಕೆ ದೇಶ ವಿದೇಶಗಳಿಂದ ಲಕ್ಷಾಂತರ ಜನರು ಬಂದು ಹೋಗುತ್ತಾರೆ. ಚಾಮುಂಡಿ ಬೆಟ್ಟ, ಕೃಷ್ಣರಾಜಸಾಗರದ ಬೃಂದಾವನ ಇತ್ಯಾದಿ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು.

© KTBS Not to be republished

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ನಂದಿ ಗಿರಿಧಾಮ ____________ ಜಿಲ್ಲೆಯಲ್ಲಿದೆ.
2. ಅಬ್ಬಿ ಜಲಪಾತ ____________ ನಗರದ ಸಮೀಪ ಇದೆ.
3. ಕರ್ನಾಟಕದ ನಯಾಗರ ಎಂದು ____________ ಜಲಪಾತವನ್ನು ಕರೆಯುತ್ತಾರೆ.
4. ಗೋಕರ್ಣದ ಸಮೀಪ ____________ ಬೀಚ್ ಇದೆ.
5. ಅರಮನೆಗಳ ನಗರ ಎಂದು ____________ ನ್ನು ಕರೆಯುತ್ತಾರೆ.

**II. ಗುಂಪುಗಳಲ್ಲಿ ಚರ್ಚಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಪ್ರವಾಸ ಮಾಡುವುದರಿಂದಾಗುವ ಪ್ರಯೋಜನಗಳೇನು ?
2. ಪ್ರವಾಸ ಸ್ಥಳಗಳಲ್ಲಿರಬೇಕಾದ ಮೂಲ ಸೌಲಭ್ಯಗಳನ್ನು ತಿಳಿಸಿ.
3. ಕುದುರೆಮುಖ ಗಿರಿಧಾಮವನ್ನು ಕುರಿತು ಬರೆಯಿರಿ.
4. ಕರ್ನಾಟಕದ ವನ್ಯಜೀವಿಧಾಮಗಳನ್ನು ಹೆಸರಿಸಿ.
5. ಕರ್ನಾಟಕದ ಐತಿಹಾಸಿಕ ಮಹತ್ವದ ಸ್ಥಳಗಳನ್ನು ತಿಳಿಸಿ.

**III. ಹೊಂದಿಸಿ ಬರೆಯಿರಿ.**

| ಅ | ಆ |
|---|---|
| 1) ಬಿಳಿಗಿರಿರಂಗನ ಬೆಟ್ಟ | ಎ) ಉತ್ತರಕನ್ನಡ ಜಿಲ್ಲೆ |
| 2) ಜೋಗಿಮಟ್ಟಿ | ಬಿ) ಚಾಮರಾಜನಗರ ಜಿಲ್ಲೆ |
| 3) ಯಾಣ | ಸಿ) ಪಕ್ಷಿಧಾಮ |
| 4) ಅನ್ಶಿ | ಡಿ) ಚಿತ್ರದುರ್ಗ |
| 5) ರಂಗನತಿಟ್ಟು | ಇ) ರಾಷ್ಟ್ರೀಯ ಉದ್ಯಾನ |
| | ಈ) ನವಿಲುಧಾಮ |

**IV. ಚಟುವಟಿಕೆಗಳು**

1. ಕರ್ನಾಟಕದ ಗಿರಿಧಾಮ/ವನ್ಯಧಾಮಗಳ ಪಟ್ಟಿ ಮಾಡಿರಿ.
2. ಕರ್ನಾಟಕದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದ ಅನುಭವಗಳನ್ನು ಕುರಿತು ಬರೆಯಿರಿ.

**V. ಯೋಜಿತ ಕಾರ್ಯ**

1. ಪ್ರವಾಸಿ ಸ್ಥಳಗಳ ಛಾಯಾ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ಸಿದ್ಧಪಡಿಸಿ.

◈ ◈ ◈

Not to be republished ©KTBS

# ಅಧ್ಯಾಯ – 10

# ಕರ್ನಾಟಕದ ಜನಸಂಖ್ಯೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಕರ್ನಾಟಕದ ಜನಸಂಖ್ಯೆಯ ಮಹತ್ವ.*
- *ಜನಸಂಖ್ಯೆಯ ಬೆಳವಣಿಗೆ, ಗಾತ್ರ ಮತ್ತು ಹಂಚಿಕೆ.*
- *ಜನಸಾಂದ್ರತೆ ಮತ್ತು ಸಾಕ್ಷರತೆ.*
- *ಅಧಿಕ ಜನಸಂಖ್ಯೆಯ ಪರಿಣಾಮ, ಪ್ರಮುಖ ಜನಭರಿತ ನಗರಗಳು.*

ಒಂದು ನಿರ್ದಿಷ್ಟವಾದ ಭೂ ಪ್ರದೇಶದಲ್ಲಿ ವಾಸಿಸುವ ಜನರ ಒಟ್ಟು ಸಮೂಹವನ್ನು 'ಜನಸಂಖ್ಯೆ' ಎನ್ನುವರು. ಇದು ಆ ಪ್ರದೇಶದ ಆರ್ಥಿಕಾಭಿವೃದ್ಧಿಯ ಮೇಲೆ ಪ್ರಭಾವ ಬೀರುತ್ತದೆ. ಮಾನವರು ತಮ್ಮ ಬುದ್ಧಿಶಕ್ತಿ ಮತ್ತು ಕಾರ್ಯಕೌಶಲ್ಯದಿಂದ ಪ್ರಾಕೃತಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ದೇಶದ ಅಭಿವೃದ್ಧಿಗೆ ಪೂರಕವಾಗುತ್ತಾರೆ. ಅದು ಜನಸಂಖ್ಯೆಯ ಗಾತ್ರ, ಬೆಳವಣಿಗೆಯ ದರ, ವಯೋಮಾನ ರಚನೆ, ಗುಣಮಟ್ಟ ಇತ್ಯಾದಿಗಳನ್ನು ಆಧರಿಸಿರುತ್ತದೆ.

**ಜನಸಂಖ್ಯೆಯ ಗಾತ್ರ :** ಈ ಮೊದಲಿಗೆ ತಿಳಿಸಿರುವಂತೆ ಕರ್ನಾಟಕವು ವಿಸ್ತೀರ್ಣದಲ್ಲಿ ಭಾರತದ ಎಂಟನೆಯ ಸ್ಥಾನದಲ್ಲಿದೆ. ಜನಸಂಖ್ಯೆಯ ಪ್ರಮಾಣದಲ್ಲಿ ಒಂಬತ್ತನೆಯ ಸ್ಥಾನದಲ್ಲಿದೆ. 2011ರ ಜನಗಣತಿಯ ಪ್ರಕಾರ ಕರ್ನಾಟಕವು 6,11,30,404 ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರ ಸಂಖ್ಯೆ 3,10,57,742 ಮತ್ತು ಮಹಿಳೆಯರ ಸಂಖ್ಯೆ 3,00,72,662 ಗಳಾಗಿದೆ. ಜನಸಂಖ್ಯೆಯ ಪ್ರಮಾಣವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಒಂದೇ ಪ್ರಮಾಣದಲ್ಲಿರುವುದಿಲ್ಲ. ಬೆಂಗಳೂರು ನಗರ ಜಿಲ್ಲೆಯು ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ಮೊದಲ ಸ್ಥಾನದಲ್ಲಿದೆ, ಕೊಡಗು ಜಿಲ್ಲೆಯು ಕಡೆಯ ಸ್ಥಾನದಲ್ಲಿದೆ. ಬೆಂಗಳೂರಿನ ನಂತರ ಬೆಳಗಾವಿ, ಮೈಸೂರು, ತುಮಕೂರು, ಕಲಬುರಗಿ ಹಾಗೂ ಬಳ್ಳಾರಿ ಜಿಲ್ಲೆಗಳು ಹೆಚ್ಚು ಜನಸಂಖ್ಯೆಯನ್ನು ಹೊಂದಿವೆ.


**ಜನಸಂಖ್ಯೆಯ ಬೆಳವಣಿಗೆ :** 2001 ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ 5,28,50,562 ಗಳಷ್ಟಿತ್ತು. 2001 ರಿಂದ 2011 ರ ದಶಕದಲ್ಲಿ 80,80,142 ಜನರು ಹೆಚ್ಚುವರಿಯಾಗಿರುತ್ತಾರೆ. ಇದೇ ಅವಧಿಯಲ್ಲಿ ಜನಸಂಖ್ಯೆಯ ಬೆಳವಣಿಗೆ ದರವು ಶೇ.15.67ಗಳಾಗಿರುತ್ತದೆ. ಇದು ಭಾರತದ ಜನಸಂಖ್ಯಾ ಬೆಳವಣಿಗೆಯ (17.64%) ದರಕ್ಕಿಂತ ಕಡಿಮೆ. ಇದಕ್ಕೆ ಕಾರಣ ಕುಟುಂಬ ಯೋಜನಾ ಕಾರ್ಯಕ್ರಮದ ಜಾಗೃತಿ, ಸಾಕ್ಷರತಾ ಕಾರ್ಯಕ್ರಮ, ಜನನ ನಿಯಂತ್ರಣಗಳು ಇತ್ಯಾದಿ.

**ಜನಸಾಂದ್ರತೆ :** ಪ್ರತಿ ಚದರ ಕಿ.ಮೀ. ಕ್ಷೇತ್ರದಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಜನಸಾಂದ್ರತೆಯೆಂದು ಕರೆಯುವರು. 2001 ರ ಜನಗಣತಿಯ ಪ್ರಕಾರ ನಮ್ಮ ರಾಜ್ಯದ ಜನಸಾಂದ್ರತೆಯು ಪ್ರತಿ ಚದರ ಕಿಲೋಮೀಟರ್‌ಗೆ 275 ಜನರು. ಅದು 2011 ರ ವೇಳೆಗೆ 319ಕ್ಕೆ ಹೆಚ್ಚಿದೆ. ಆದರೂ ಭಾರತದ ಸರಾಸರಿಗಿಂತ ಕಡಿಮೆ ಇದೆ. ಜಿಲ್ಲಾವಾರು ಜನಸಾಂದ್ರತೆಯನ್ನು ನೋಡಿದಾಗ ಬೆಂಗಳೂರು ನಗರ ಜಿಲ್ಲೆಯು ಅಧಿಕ ಜನಸಾಂದ್ರತೆ ಹೊಂದಿದ್ದು ಮೊದಲ ಸ್ಥಾನದಲ್ಲಿದೆ. ದಕ್ಷಿಣ ಕನ್ನಡ, ಮೈಸೂರು, ಬೆಂಗಳೂರು ಗ್ರಾಮಾಂತರ, ಧಾರವಾಡ, ಕೋಲಾರ ಜಿಲ್ಲೆಗಳು ನಂತರದ ಸ್ಥಾನಗಳಲ್ಲಿ ಬರುತ್ತವೆ. ಇದಕ್ಕೆ ಪ್ರತಿಯಾಗಿ ಕೊಡಗು ಜಿಲ್ಲೆ (135) ಅತಿ ಕಡಿಮೆ ಜನಸಾಂದ್ರತೆಯನ್ನು ಹೊಂದಿದ ಜಿಲ್ಲೆಯಾಗಿದೆ.

©KTBS Not to be re published

**ಗ್ರಾಮೀಣ ಮತ್ತು ನಗರ ಜನಸಂಖ್ಯೆ :**

ಕರ್ನಾಟಕವು ಗ್ರಾಮೀಣ ಪ್ರಧಾನವಾಗಿದ್ದು, 29,340 ಹಳ್ಳಿಗಳನ್ನೊಳಗೊಂಡಿದೆ (2011) ಅವು ಒಟ್ಟು 3.75 ಕೋಟಿ ಜನಸಂಖ್ಯೆಯನ್ನು ಹೊಂದಿವೆ. ಅಂದರೆ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಶೇ.61.4% ಗ್ರಾಮೀಣರು ಹಾಗೂ ಶೇ.38.6% ಭಾಗವು (2.35 ಕೋಟಿ) ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಭಾರತದ ಸರಾಸರಿಗೆ ಹೋಲಿಸಿದಾಗ ಕರ್ನಾಟಕದ ನಗರ ಜನಸಂಖ್ಯೆ ಹೆಚ್ಚಾಗಿದೆ. ಎಲ್ಲ ಜಿಲ್ಲೆಗಳಲ್ಲೂ ಅದು ಒಂದೇ ರೀತಿಯಾಗಿಲ್ಲ. ಬೆಂಗಳೂರು ನಗರ ಜಿಲ್ಲೆ ಅಧಿಕ ಪ್ರಮಾಣದ ನಗರ ಜನಸಂಖ್ಯೆಯನ್ನು ಹೊಂದಿದ್ದರೆ, ಕೊಡಗು ಜಿಲ್ಲೆ ಅತಿ ಕಡಿಮೆ ನಗರ ಜನಸಂಖ್ಯೆಯುಳ್ಳ ಜಿಲ್ಲೆ.




**ಲಿಂಗಾನುಪಾತ :** ಪ್ರತಿ ಸಾವಿರ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಲಿಂಗಾನುಪಾತವೆನ್ನುವರು. 2001 ರಲ್ಲಿ ಕರ್ನಾಟಕದ ಸರಾಸರಿ ಲಿಂಗಾನುಪಾತವು 965 ಗಳಾಗಿತ್ತು. ಅದು 2011 ರಲ್ಲಿ 968 ಕ್ಕೆ ಏರಿದೆ. ಲಿಂಗಾನುಪಾತವು ಎಲ್ಲಾ ಜಿಲ್ಲೆಗಳಲ್ಲೂ ಒಂದೇ ರೀತಿಯಾಗಿಲ್ಲ. ಉಡುಪಿ, ಕೊಡಗು, ದಕ್ಷಿಣ ಕನ್ನಡ, ಹಾಸನ ಜಿಲ್ಲೆಗಳು ಪುರುಷರಿಗಿಂತ ಹೆಚ್ಚು ಮಹಿಳೆಯರ ಸಂಖ್ಯೆಯನ್ನು ಹೊಂದಿವೆ. ಉಡುಪಿ ಜಿಲ್ಲೆಯಲ್ಲಿ ಪ್ರತಿ ಸಾವಿರ ಪುರುಷರಿಗೆ 1093 ಸ್ತ್ರೀಯರಿದ್ದು ರಾಜ್ಯದಲ್ಲೇ ಅತಿ ಹೆಚ್ಚು ಸ್ತ್ರೀಯರ ಪ್ರಮಾಣವುಳ್ಳ ಜಿಲ್ಲೆಯಾಗಿದೆ. ಕೊಡಗು, ದಕ್ಷಿಣ ಕನ್ನಡ, ಹಾಸನ ಜಿಲ್ಲೆಗಳು ಅನಂತರದ ಸ್ಥಾನಗಳಲ್ಲಿವೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಪ್ರತಿ ಸಾವಿರ ಪುರುಷರಿಗೆ 908 ಮಹಿಳೆಯರಿದ್ದು ರಾಜ್ಯದ ಕಡೆಯ ಸ್ಥಾನದಲ್ಲಿದೆ.

**ವಯೋಮಾನ ರಚನೆ :** 2011 ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 15 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳು ಶೇ. 29.7 ಭಾಗದಷ್ಟಿದ್ದಾರೆ. 60 ವರ್ಷಗಳಿಗಿಂತ ಹೆಚ್ಚು ವಯಸ್ಸಿನ ವೃದ್ಧರ ಸಂಖ್ಯೆ ಶೇ. 5.5 ಭಾಗದಷ್ಟಿದೆ ಮತ್ತು ದುಡಿಯುವ ವರ್ಗದ ಪ್ರಮಾಣ ಶೇ. 64.9 ಭಾಗದಷ್ಟಾಗಿರುತ್ತದೆ.

**ಸಾಕ್ಷರತೆಯ ಪ್ರಮಾಣ :** ಓದು ಬರಹದ ತಿಳುವಳಿಕೆಯುಳ್ಳ ವ್ಯಕ್ತಿಯನ್ನು ಸಾಕ್ಷರ ಅಥವಾ ಅಕ್ಷರಸ್ಥನೆಂದು ಪರಿಗಣಿಸಲಾಗಿದೆ. ರಾಜ್ಯದ ಸರಾಸರಿ ಸಾಕ್ಷರತೆಯ ಪ್ರಮಾಣ 2011 ರಲ್ಲಿ ಶೇ. 75.6 ಭಾಗವಾಗಿತ್ತು. ಇದು ಭಾರತದ (74%) ಸರಾಸರಿಗಿಂತ ಉತ್ತಮವಾಗಿದೆ. ಜಿಲ್ಲಾವಾರು ಸಾಕ್ಷರತೆಯನ್ನು ಗಮನಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ. 88.6 ಭಾಗದಷ್ಟಿದ್ದು, ಅದು ಪ್ರಥಮ ಸ್ಥಾನದಲ್ಲಿದೆ. ಅನಂತರ ಬೆಂಗಳೂರು ನಗರ ಜಿಲ್ಲೆಯು (88.5%) ದ್ವಿತೀಯ ಸ್ಥಾನದಲ್ಲಿದೆ. ಉಡುಪಿ ಮೂರನೆಯ ಸ್ಥಾನಗಳಲ್ಲಿದೆ. ಇದಕ್ಕೆ ಪ್ರತಿಯಾಗಿ ಯಾದಗಿರಿ (52.4%) ಅತಿ ಕಡಿಮೆ ಸಾಕ್ಷರತೆಯುಳ್ಳ ಜಿಲ್ಲೆಯಾಗಿದೆ.

> **ಚರ್ಚಿಸಿ:**
> ರಾಜ್ಯದ ಜನಸಂಖ್ಯೆಯು ರಾಜ್ಯದ ಮಾನವ ಸಂಪನ್ಮೂಲ ಹೇಗೆ ?

©KTBS Not to be republished

ಕರ್ನಾಟಕದ ಪುರುಷರ ಸಾಕ್ಷರತೆಯ ಪ್ರಮಾಣವು ಶೇ. 82.9, ಮಹಿಳೆಯರ ಸಾಕ್ಷರತೆ ಶೇ. 68.2 ರಷ್ಟಿರುತ್ತದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಾಕ್ಷರತೆಯನ್ನು ಗಮನಿಸಿದಾಗ ಸ್ವಾಭಾವಿಕವಾಗಿ ನಗರಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚು ಸಾಕ್ಷರತೆ ಕಂಡು ಬರುತ್ತದೆ.

**ಕರ್ನಾಟಕದ ಪ್ರಥಮ ಹತ್ತು ಜನಭರಿತ ನಗರಗಳು (2011)**

| ಕ್ರ.ಸಂ. | ನಗರ | ಜನಸಂಖ್ಯೆ | ಕ್ರ.ಸಂ. | ನಗರ | ಜನಸಂಖ್ಯೆ |
|---|---|---|---|---|---|
| 1 | ಬೆಂಗಳೂರು | 84,99,399 | 6 | ಕಲಬುರಗಿ | 5,41,617 |
| 2 | ಮೈಸೂರು | 9,83,893 | 7 | ದಾವಣಗೆರೆ | 4,35,128 |
| 3 | ಹುಬ್ಬಳ್ಳಿ–ಧಾರವಾಡ | 9,43,857 | 8 | ಬಳ್ಳಾರಿ | 4,09,644 |
| 4 | ಮಂಗಳೂರು | 6,19,664 | 9 | ವಿಜಯಪುರ | 3,26,360 |
| 5 | ಬೆಳಗಾವಿ | 6,10,189 | 10 | ಶಿವಮೊಗ್ಗ | 3,22,428 |

©KTBS Not to be re published

## ಅಭ್ಯಾಸಗಳು

**I. ಬಿಟ್ಟಿರುವ ಸ್ಥಾನಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. 2011ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ ____________ .
2. ಕರ್ನಾಟಕದ ____________ ಜಿಲ್ಲೆಯು ಹೆಚ್ಚು ಜನಸಂಖ್ಯೆ ಹೊಂದಿರುವ ಜಿಲ್ಲೆ.
3. ಮಹಿಳೆಯರ ಪ್ರಮಾಣ ಹೆಚ್ಚಾಗಿರುವ ಜಿಲ್ಲೆ ____________ .
4. ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆ ____________ .
5. ಕರ್ನಾಟಕದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ ____________ ಜನರು.

**II. ಗುಂಪಿನಲ್ಲಿ ಚರ್ಚಿಸಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಕರ್ನಾಟಕದ ಜನಸಂಖ್ಯೆಯ ಬೆಳವಣಿಗೆಯನ್ನು ಕುರಿತು ಬರೆಯಿರಿ.
2. ಕಡಿಮೆ ಮತ್ತು ಅಧಿಕ ಜನಸಾಂದ್ರತೆಯುಳ್ಳ ಜಿಲ್ಲೆಗಳನ್ನು ಹೆಸರಿಸಿ.
3. ಕರ್ನಾಟಕದಲ್ಲಿ ನಗರ ಮತ್ತು ಗ್ರಾಮೀಣ ಜನಸಂಖ್ಯೆ ಕುರಿತು ವಿವರಿಸಿ.
4. ಕರ್ನಾಟಕದಲ್ಲಿನ ಸಾಕ್ಷರತೆ ಕುರಿತು ಬರೆಯಿರಿ.

**III. ಚಟುವಟಿಕೆ**

1. ಕರ್ನಾಟಕದ ನಕ್ಷೆಯಲ್ಲಿ ಸಾಕ್ಷರತೆ ಹಂಚಿಕೆಯನ್ನು ತೋರಿಸುವುದು.

**IV. ಯೋಜಿತಕಾರ್ಯ**

1. ನೀವು ವಾಸವಾಗಿರುವ ಊರು ಅಥವಾ ಬಡಾವಣೆಗೆ ಸಂಬಂಧಿಸಿದ ಜನಸಂಖ್ಯೆಯ ಮಾಹಿತಿ ಸಂಗ್ರಹಿಸಿ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

# ಅಧ್ಯಾಯ 3

# ಬಡತನ ಮತ್ತು ಹಸಿವು


**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಬಡತನದ ಅರ್ಥ ಮತ್ತು ಕಾರಣ.
- ಬಡತನ ರೇಖೆಯ ಪರಿಕಲ್ಪನೆ.
- ಭಾರತದಲ್ಲಿ ಬಡತನದ ಪ್ರಮಾಣ.
- ಹಸಿವು ಮತ್ತು ಆಹಾರ ಭದ್ರತೆ.
- ಬಡತನ ಮತ್ತು ಹಸಿವಿನ ಲಿಂಗ ಆಯಾಮಗಳು.
- ಆಹಾರ ಭದ್ರತೆಯ ಅವಶ್ಯಕತೆ ಹಾಗೂ ಅದನ್ನು ಸಾಕಾರಗೊಳಿಸಲು ಕೈಗೊಂಡ ಕ್ರಮಗಳು.
- ಬಡತನ ನಿರ್ಮೂಲನೆಗಾಗಿ ಸದ್ಯ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳು.

**ಬಡತನದ ಅರ್ಥ**

ನೀವು ನಿಮ್ಮ ಸುತ್ತಮುತ್ತಲಿನ ಜೀವನವನ್ನು ಗಮನಿಸಿರಬಹುದು. ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಬಡತನ ಕಂಡುಬರುತ್ತದೆ. ನಗರಗಳಲ್ಲಿ ಬೀದಿಬದಿಯ ವ್ಯಾಪಾರಿಗಳು, ದಿನಗೂಲಿ ಕಾರ್ಮಿಕರು, ಭಿಕ್ಷುಕರು, ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು, ಅಲೆಮಾರಿಗಳು ಮುಂತಾದವರು ಬಡವರೆನಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸ್ವಂತ ಜಮೀನು ಇಲ್ಲದೆ ಇತರರ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರು, ಕಡಿಮೆ ಜಮೀನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿಯೇತರ ಕಸಬುಗಳಲ್ಲಿ ತೊಡಗಿರುವ ಬುಟ್ಟಿ ಹೆಣೆಯುವವರು, ಮಡಿಕೆ ಮಾಡುವವರು, ಕಮ್ಮಾರರು, ಮುಂತಾದವರು ಬಡತನದಲ್ಲಿ ವಾಸಿಸುತ್ತಿದ್ದಾರೆ.

ಬಡವರು ಎರಡು ಹೊತ್ತಿನ ಊಟಕ್ಕೆ ಸಾಕಾಗುವಷ್ಟು ಆದಾಯ ಗಳಿಸಲು ವಿಫಲರಾಗುತ್ತಾರೆ. ಇದರಿಂದಾಗಿ ಇವರಲ್ಲಿ ಅಪೌಷ್ಠಿಕತೆ ಮತ್ತು ಅನಾರೋಗ್ಯ ಅಧಿಕವಾಗಿರುತ್ತದೆ. ಶಿಕ್ಷಣ ಮತ್ತು ತರಬೇತಿಯಿಲ್ಲದೆ ಕೌಶಲ್ಯರಹಿತರಾಗಿರುತ್ತಾರೆ. ಇವರಿಗೆ ಉದ್ಯೋಗಾವಕಾಶಗಳು ಕಡಿಮೆ ಮತ್ತು ಇರುವ ಕೆಲಸವೂ ಸ್ಥಿರವಾಗಿರುವುದಿಲ್ಲ. ಸಾಮಾನ್ಯವಾಗಿ ಬಡವರು ಕಚ್ಚಾ ಮನೆಗಳಲ್ಲಿ ವಾಸಿಸುತ್ತಾರೆ ಅಥವಾ ಮನೆಯೇ ಇರುವುದಿಲ್ಲ. ಹೀಗೆ ಮಾನವನ ಬದುಕಿಗೆ ಅಗತ್ಯವಾದ ಊಟ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ ಮುಂತಾದ ಕನಿಷ್ಠ ಮೂಲಭೂತ ಅವಶ್ಯಕತೆಗಳಿಂದ ಬಹುಪಾಲು ಜನರು ವಂಚಿತರಾಗಿರುವ ಸ್ಥಿತಿಯನ್ನು ಬಡತನ ಎನ್ನಬಹುದು.




©KTBS Not to be republished


ಆದರೆ ಬಡತನವನ್ನು ಗುರುತಿಸಿ ಅದರ ಪ್ರಮಾಣವನ್ನು ಅಳೆಯುವುದಕ್ಕಾಗಿ ನಿಖರವಾದ ಮಾನದಂಡದ ಅವಶ್ಯಕತೆಯಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ದಾದಾಭಾಯಿ ನವರೋಜಿಯವರು ಬಡವರನ್ನು ಗುರುತಿಸಲು ಮೊಟ್ಟಮೊದಲ ಬಾರಿಗೆ ಬಡತನ ರೇಖೆಯನ್ನು ಬಳಕೆಗೆ ತಂದರು. ಸ್ವಾತಂತ್ರ್ಯಾ ನಂತರವೂ ಬಡತನ ರೇಖೆಯನ್ನು ಬಡತನ ಅಳೆಯುವ ಪ್ರಮುಖ ಸೂಚಿಯಾಗಿ ಬಳಕೆಯಾಗುತ್ತಿದೆ. ಹಾಗಾದರೆ ಬಡತನ ರೇಖೆ ಎಂದರೇನು? ಮೂಲ ಅವಶ್ಯಕತೆಗಳನ್ನು ಪಡೆದುಕೊಳ್ಳಲು ಅವಶ್ಯವಿರುವ ಕನಿಷ್ಠ ಆದಾಯದ ಪ್ರಮಾಣವೇ ಬಡತನ ರೇಖೆಯಾಗಿದೆ. ಅದು ಒಬ್ಬ ವ್ಯಕ್ತಿಯು ತನ್ನ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಂಡು, ಆರೋಗ್ಯಯುತವಾಗಿ ಮತ್ತು ಘನತೆಯುತವಾಗಿ ಜೀವನ ನಡೆಸಲು ವೆಚ್ಚ ಮಾಡುವ ಸಾಮರ್ಥ್ಯವನ್ನು ಸೂಚಿಸುತ್ತದೆ.

2005ರಲ್ಲಿ ಪ್ರೊ. ಸುರೇಶ ತೆಂಡೂಲ್ಕರ್ ಸಮಿತಿಯ ಶಿಫಾರಸ್ಸುಗಳನ್ನು ಅನುಸರಿಸಿ ಆಹಾರದ ಜೊತೆಗೆ ಶಿಕ್ಷಣ, ಆರೋಗ್ಯ, ವಿದ್ಯುತ್‌ಶಕ್ತಿ ಮತ್ತು ಸಾರಿಗೆಗಳ ಮೇಲೆ ಮಾಡುವ ತಲಾ ಮಾಸಿಕ ಅನುಭೋಗಿ ವೆಚ್ಚವನ್ನು ಅಂದಾಜಿಸಿ ಬಡತನ ರೇಖೆಯನ್ನು ರೂಪಿಸಲಾಗಿದೆ. ತದನಂತರ ಸಿ.ರಂಗರಾಜನ್ ಸಮಿತಿಯು ತೆಂಡೂಲ್ಕರ್ ಸಮಿತಿಯ ಶಿಫಾರಸ್ಸುಗಳನ್ನು ಅನುಸರಿಸಿ ಗ್ರಾಮೀಣ ಭಾಗಗಳಲ್ಲಿ ರೂ. 32 ಮತ್ತು ನಗರ ಭಾಗಗಳಲ್ಲಿ ರೂ. 47 ರಷ್ಟು ತಲಾ ಮಾಸಿಕ ಅನುಭೋಗಿ ವೆಚ್ಚವನ್ನು ಬಡತನ ರೇಖೆಯೆಂದು ನಿಗದಿಗೊಳಿಸಿದೆ. ವ್ಯಕ್ತಿಗಳು ಇದಕ್ಕಿಂತ ಹೆಚ್ಚು ಖರ್ಚು ಮಾಡಿದರೆ ಅವರನ್ನು ಬಡತನ ರೇಖೆಯ ಮೇಲೆ ಇರುವರೆಂದೂ, ಇಲ್ಲವಾದರೆ ಬಡತನ ರೇಖೆಯ ಕೆಳಗೆ ಇರುವರೆಂದೂ ವರ್ಗೀಕರಿಸಲಾಗುತ್ತದೆ. ಬಡತನ ರೇಖೆಯ ಕೆಳಗೆ ಇರುವವರೇ ಬಡವರು.

ಹಾಗೆಯೇ ಅಂತರಾಷ್ಟ್ರೀಯ ಮಟ್ಟದಲ್ಲಿ, ವಿಶ್ವ ಬ್ಯಾಂಕು ಯಾವ ವ್ಯಕ್ತಿಯು ಪ್ರತಿದಿನ 1.25 ಡಾಲರ್ ಹಣವನ್ನು ಗಳಿಸಲು ಅಸಮರ್ಥನೋ ಅಂಥವನನ್ನು ಬಡತನದ ರೇಖೆಯ ಕೆಳಗಿರುವವನು ಎಂದು ಗುರುತಿಸುತ್ತದೆ. ಈ ಮಾನದಂಡದ ಪ್ರಕಾರ, ಭಾರತದಲ್ಲಿ ಶೇ. 41ರಷ್ಟು ಜನರು ಸದ್ಯ ಬಡವರಾಗಿದ್ದಾರೆ.


**ಭಾರತದಲ್ಲಿ ಬಡತನದ ಪ್ರಮಾಣ**

ವಿವಿಧ ಸಮಿತಿಗಳು ಮತ್ತು ಕಾರ್ಯಕಾರಿ ಸಮೂಹಗಳು ನೀಡಿದ ವ್ಯಾಖ್ಯೆಗಳನ್ನು ಮತ್ತು ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ (NSSO) ಅಂದಾಜಿಸಿದ ಅನುಭೋಗಿ ವೆಚ್ಚದ ಮಾಹಿತಿ ಬಳಸಿಕೊಂಡು ಬಡತನದ ರೇಖೆಯ ಕೆಳಗಿರುವ ಜನರ ಪ್ರಮಾಣವನ್ನು ಲೆಕ್ಕ ಹಾಕಿ ಚಿತ್ರ 1ರಲ್ಲಿ ತೋರಿಸಲಾಗಿದೆ.




| | 1983 | 1987–88 | 1993–94 | 2004–05 | 2009–10 |
|---|---|---|---|---|---|
| ಗ್ರಾಮೀಣ | 46.6 | 38.7 | 37.0 | 28.2 | 20.2 |
| ನಗರ | 42.5 | 39.4 | 33.1 | 26.1 | 20.7 |
| ಒಟ್ಟು | 45.7 | 38.9 | 36.0 | 27.7 | 20.3 |

ಚಿತ್ರ 1 : ಬಡತನ ರೇಖೆಯ ಕೆಳಗೆ ಇದ್ದ ಪ್ರತಿಶತ ಜನರ ಪ್ರಮಾಣ




ಚಿತ್ರ 2 : ಭಾರತದಲ್ಲಿನ ಬಡಜನರ ಒಟ್ಟು ಸಂಖ್ಯೆ (ಲಕ್ಷಗಳಲ್ಲಿ)

1983ರಲ್ಲಿ ಶೇ.46ರಷ್ಟಿದ್ದ ಬಡತನದ ಪ್ರಮಾಣವು 2009–10ರ ವೇಳೆಗೆ ಶೇ.20ರಷ್ಟಕ್ಕೆ ಇಳಿಕೆಯಾಗಿರುವುದನ್ನು ಗಮನಿಸಬಹುದು. ಗ್ರಾಮೀಣ–ನಗರ ಪ್ರದೇಶಗಳೆರಡರಲ್ಲೂ ಬಡತನದ ಪ್ರಮಾಣ ಇಳಿಕೆಯಾಗಿದೆ. 2000ನೇ ಇಸವಿಯಿಂದೀಚೆಗೆ, ಬಡತನದ ಇಳಿಕೆ ಮತ್ತಷ್ಟು ತೀವ್ರಗೊಂಡಿದ್ದು, ಗ್ರಾಮೀಣ

©KTBS Not to be republished

ಪ್ರದೇಶದ ಬಡತನವು ನಗರ ಪ್ರದೇಶದ ಬಡತನಕ್ಕಿಂತ ವೇಗವಾಗಿ ಇಳಿಕೆ ಕಂಡಿದೆ. ದೇಶದಲ್ಲಿನ ಒಟ್ಟು ಬಡವರ ಸಂಖ್ಯೆಯನ್ನು ಚಿತ್ರ 2ರಲ್ಲಿ ತೋರಿಸಿದೆ.

ಚಿತ್ರವು ಸೂಚಿಸುವಂತೆ ಬಡಜನರ ಸಂಖ್ಯೆಯು 1973–74 ಹಾಗೂ 2004–05ರ ಅವಧಿಯಲ್ಲಿ 3213ಲಕ್ಷಗಳಿಂದ 3017 ಲಕ್ಷಗಳಿಗೆ ಇಳಿಕೆಯಾಗಿದೆ. ಅಂದರೆ ಬಡತನದ ಪ್ರತಿಶತ ಪ್ರಮಾಣವು ತೀವ್ರವಾಗಿ ಇಳಿದರೂ, ಬಡವರ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಾಣದಿರುವುದು ಮತ್ತು ಈಗಲೂ ಸುಮಾರು 30 ಕೋಟಿಯಷ್ಟು ಜನರು ಬಡವರಿರುವುದು ಆಘಾತಕಾರಿ. ಗ್ರಾಮೀಣ ಬಡವರು ಒಟ್ಟು ಬಡಜನರ ಶೇ. 73ರಷ್ಟಿದ್ದು, ಅವರ ಸಂಖ್ಯೆ ಇಳಿಕೆಯಾಗಿದ್ದು ನಗರ ಪ್ರದೇಶದ ಬಡವರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.

## ಭಾರತದಲ್ಲಿ ಬಡತನಕ್ಕೆ ಕಾರಣಗಳು

ಭಾರತದಲ್ಲಿನ ಬಡತನಕ್ಕೆ ಹಲವಾರು ಐತಿಹಾಸಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಂಶಗಳು ಕಾರಣೀಭೂತವಾಗಿವೆ. ಬಡತನದ ಪ್ರಮುಖ ಆರ್ಥಿಕ ಕಾರಣಗಳನ್ನು ಕೆಳಗಿನಂತೆ ವರ್ಣಿಸಬಹುದು.

1. **ಜನಸಂಖ್ಯೆಯಲ್ಲಿನ ತೀವ್ರ ಹೆಚ್ಚಳ :** ಜನಸಂಖ್ಯೆಯು ತೀವ್ರಗತಿಯಲ್ಲಿ ಏರಿಕೆಯಾಗಿದ್ದುದು ಏನೇ ಅಭಿವೃದ್ಧಿ ಕಾರ್ಯಕ್ರಮ ರೂಪಿಸಿದರೂ ಅದು ಹೆಚ್ಚುತ್ತಿರುವ ಜನಸಂಖ್ಯೆಗೆ ಮೂಲ ಅವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲವಾಗುತ್ತ ಸಾಗಿರುವುದು ಒಂದು ಪ್ರಮುಖ ಕಾರಣವಾಗಿದೆ.
2. **ಕಡಿಮೆ ಮಟ್ಟದ ರಾಷ್ಟ್ರೀಯ ಆದಾಯ ಹಾಗೂ ಅದರ ನಿಧಾನ ಬೆಳವಣಿಗೆ :** ಒಂದು ಕಡೆ ದೇಶದ ಅನಾಭಿವೃದ್ಧಿ ಹಾಗೂ ಮತ್ತೊಂದೆಡೆ ತೀವ್ರವಾಗಿ ಹೆಚ್ಚಿದ ಜನಸಂಖ್ಯೆ ತಲಾ ಆದಾಯವನ್ನು ಕಡಿಮೆ ಇಡುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಇದು ಒಂದು ವಿಷ ವರ್ತುಲವನ್ನು ಸೃಷ್ಟಿಸಿ, ಕಡಿಮೆ ಆದಾಯ – ಕಡಿಮೆ ಉಳಿತಾಯ – ಕಡಿಮೆ ಬಂಡವಾಳ ಹೂಡಿಕೆ – ಕಡಿಮೆ ಉತ್ಪಾದಕತೆ – ಕಡಿಮೆ ಹಾಗೂ ನಿಧಾನಗತಿಯ ಆದಾಯ ಬೆಳವಣಿಗೆ – ಮತ್ತೆ ಹೆಚ್ಚಿನ ಬಡತನದ ವಿಷವರ್ತುಲವನ್ನು ಸೃಷ್ಟಿಸಿದೆ.
3. **ಬೆಲೆಗಳಲ್ಲಿ ಹೆಚ್ಚಳ :** ನಿರಂತರವಾಗಿ ಏರುತ್ತಿರುವ ಬೆಲೆ ಪ್ರಮಾಣಗಳು ಬಡವರ ಕೊಳ್ಳುವ ಶಕ್ತಿಯನ್ನು ಕುಗ್ಗಿಸಿ, ಅವರು ಮೂಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅಸಮರ್ಥರನ್ನಾಗಿಸಿ, ಅವರನ್ನು ಇನ್ನಷ್ಟು ಬಡವರನ್ನಾಗಿಸಲು ಕಾರಣವಾಗಿವೆ.
4. **ನಿರುದ್ಯೋಗ :** ಅಭಿವೃದ್ಧಿ ಪ್ರಕ್ರಿಯೆಯು ಉದ್ಯೋಗವನ್ನು ಅರಸುತ್ತಿರುವ ಜನರನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ವಿಫಲವಾಗಿದ್ದರಿಂದ ದಿನೇ ದಿನೇ ನಿರುದ್ಯೋಗ ಹೆಚ್ಚಾಗಿ ಬಡತನವು ಕೂಡ ಹೆಚ್ಚಾಗಿದೆ.
5. **ಬಂಡವಾಳದ ಕೊರತೆ :** ಕಡಿಮೆ ಆದಾಯ ಹಾಗೂ ಉಳಿತಾಯಗಳಿಂದಾಗಿ ಹೂಡಿಕೆಗೆ ಅಗತ್ಯವಾದ ಬಂಡವಾಳವನ್ನು ಸೃಜಿಸಲು ಸಾಧ್ಯವಾಗಿಲ್ಲ. ಹೀಗಾಗಿ ಬಂಡವಾಳ ಸಂಚಯನ ಕುಂಠಿತಗೊಂಡಿದ್ದು, ಉತ್ಪಾದಕತೆ ಮತ್ತು ಆದಾಯ ಸೃಷ್ಟಿಸುವಿಕೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿ ಬಡತನಕ್ಕೆ ಕಾರಣವಾಗಿದೆ.

## ಹಸಿವು ಮತ್ತು ಆಹಾರ ಭದ್ರತೆ

ಬಡತನದ ಬಹುಮುಖ್ಯ ಲಕ್ಷಣವೆಂದರೆ ಹಸಿವು, ಅಂದರೆ ದಿನಂಪ್ರತಿ ಸೂಕ್ತ ಪ್ರಮಾಣದ ಹಾಗೂ ಪೌಷ್ಠಿಕ ಆಹಾರ ದೊರೆಯದೇ ಇರುವುದು. ಆಹಾರ ಪದಾರ್ಥಗಳು ಭೌತಿಕವಾಗಿ ದೊರೆಯದೇ ಇರುವುದು, ಅವು ಲಭ್ಯವಿದ್ದರೂ ಜನರಲ್ಲಿ ಅವುಗಳನ್ನು ಕೊಳ್ಳಲು ಸಮರ್ಪಕ ಆದಾಯ ಇಲ್ಲದಿರುವುದು ಜನರ ಆಹಾರದ ಅಭದ್ರತೆಯನ್ನು ಹೆಚ್ಚಿಸುತ್ತದೆ. ಬಹುತೇಕ ಬಡಜನರು ಅರೆಹೊಟ್ಟೆ ಮತ್ತು ಹಸಿವಿನಿಂದ ಬದುಕಬೇಕಾದ ಸ್ಥಿತಿಯಿದೆ. ಇತ್ತೀಚೆಗೆ ವಿಶ್ವದ ಹಸಿವಿನ ಪ್ರಮಾಣವನ್ನು ಅಳೆಯಲು ಅಂತರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆಯು (IFPRI) 'ವಿಶ್ವ ಹಸಿವಿನ ಸೂಚ್ಯಂಕ' ಎಂಬ ಮಾನದಂಡವನ್ನು ರೂಪಿಸಿ ಪ್ರತಿವರ್ಷ ವಿವಿಧ ದೇಶಗಳಲ್ಲಿರುವ ಹಸಿವಿನ ಪ್ರಮಾಣದ ಅಂದಾಜನ್ನು ಮಾಡುತ್ತದೆ.

© KTBS Not to be re published

**ನಿಮಗಿದು ತಿಳಿದಿರಲಿ:**

'ವಿಶ್ವ ಹಸಿವಿನ ಸೂಚ್ಯಂಕ'ದ ರಚನೆ: ಈ ಕೆಳಗಿನ ಆಯಾಮಗಳ ಮೌಲ್ಯಗಳನ್ನು ಒಟ್ಟುಗೂಡಿಸಿ ಅದನ್ನು ರಚಿಸಲಾಗುತ್ತದೆ :

- **ಅಪೌಷ್ಟಿಕತೆ :** ಒಟ್ಟು ಜನಸಂಖ್ಯೆಯಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಪ್ರಮಾಣ;
- **ಮಕ್ಕಳ ಪೋಲು ಪ್ರಮಾಣ :** ಎತ್ತರಕ್ಕೆ ತಕ್ಕುದಲ್ಲದ ಕಡಿಮೆ ತೂಕ ಹೊಂದಿದ ಐದು ವರ್ಷಗಳೊಳಗಿನ ಮಕ್ಕಳ ಪ್ರತಿಶತ ಪ್ರಮಾಣ;
- **ಕುಬ್ಜ ಮಕ್ಕಳ ಪ್ರಮಾಣ :** ವಯಸ್ಸಿಗೆ ತಕ್ಕುದಲ್ಲದ ಕಡಿಮೆ ಎತ್ತರ ಹೊಂದಿದ ಐದು ವರ್ಷಗಳೊಳಗಿನ ಮಕ್ಕಳ ಪ್ರತಿಶತ ಪ್ರಮಾಣ; ಹಾಗೂ
- **ಮಕ್ಕಳ ಮರಣ ದರ :** ಐದು ವರ್ಷಗಳೊಳಗಿನ ಮಕ್ಕಳ ಮರಣ ಪ್ರಮಾಣ.

2015ರ ವಿಶ್ವ ಹಸಿವಿನ ಸೂಚ್ಯಂಕದ ಆಧಾರದ ಮೇಲೆ ತಯಾರಿಸಲಾದ 128 ರಾಷ್ಟ್ರಗಳ ಪಟ್ಟಿಯಲ್ಲಿ ಹಸಿವಿನ ಸಮಸ್ಯೆ ಎದುರಿಸುತ್ತಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.



ಇತ್ತೀಚಿನ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ ಪ್ರಕಾರ ಭಾರತದಲ್ಲಿ ಸುಮಾರು ಶೇ.79ರಷ್ಟು ಮಕ್ಕಳು ಮತ್ತು ಶೇ.58ರಷ್ಟು ಗರ್ಭಿಣಿ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರಲ್ಲದೇ ಪ್ರತಿ ಇಬ್ಬರು ಮಕ್ಕಳಲ್ಲಿ ಒಂದು ಮಗು ಮತ್ತು ಪ್ರತಿ ಮೂವರು ಮಹಿಳೆಯರಲ್ಲಿ ಒಬ್ಬ ಮಹಿಳೆ ಕಡಿಮೆ ತೂಕ ಹೊಂದಿದ್ದಾರೆ. ವಿಶ್ವದ ಕಡಿಮೆ ತೂಕ ಹೊಂದಿದ ಮಕ್ಕಳಲ್ಲಿ ಶೇ.42ರಷ್ಟು ಮಕ್ಕಳು ಭಾರತದಲ್ಲಿದ್ದಾರೆ. ರಕ್ತಹೀನತೆ ಮತ್ತು ಕಡಿಮೆ ತೂಕ ಹಸಿವಿನ ಅಥವಾ ಆಹಾರದ ಅಲಭ್ಯತೆಯ ಪರಿಣಾಮಗಳಾಗಿವೆ.

ನಾವು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಬಹುತೇಕ ಸ್ವಾವಲಂಬನೆಯನ್ನು ಸಾಧಿಸಿದ್ದೇವೆ. ಅಂದರೆ ನಮ್ಮ ದೇಶಕ್ಕೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ನಾವೇ ಉತ್ಪಾದಿಸಿಕೊಳ್ಳುವ ಸಾಮರ್ಥ್ಯ ಪಡೆದಿದ್ದೇವೆ. ಹಾಲಿನ ಉತ್ಪಾದನೆಯಲ್ಲಿ ನಾವು ಪ್ರಪಂಚದಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದೇವೆ. ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯೂ ಗಣನೀಯವಾಗಿದೆ. ಆದರೂ ಭಾರತದಲ್ಲಿ ಅಧಿಕ ಪ್ರಮಾಣದ ಜನರು ಹಸಿವಿನಿಂದ ಬಳಲುತ್ತಿರುವುದು ಬಹುದೊಡ್ಡ ಸಮಸ್ಯೆಯಾಗಿದೆ. ಜನರಲ್ಲಿ ಆಹಾರ ಕೊಳ್ಳುವ ಶಕ್ತಿ ಇಲ್ಲದಿರುವುದು ಹಾಗೂ ಆಹಾರ ಧಾನ್ಯಗಳ ವಿತರಣೆಯಲ್ಲಿನ ದೋಷಗಳಿಂದಾಗಿ ಈ ಸಮಸ್ಯೆ ಉದ್ಭವಿಸಿದೆ.

## ಆಹಾರ ಭದ್ರತೆ

ದೇಶದ ಪ್ರತಿಯೊಬ್ಬರಿಗೂ ಕನಿಷ್ಠ ಪ್ರಮಾಣದ ಆಹಾರವನ್ನು ಅವರು ನೀಡಬಹುದಾದ ಬೆಲೆಗೆ ಮತ್ತು ಅವರು ವಾಸಿಸುವ ಸ್ಥಳದ ಸಮೀಪ ಒದಗಿಸುವುದು ಅತ್ಯಾವಶ್ಯಕ. ಇದನ್ನೇ ನಾವು ಆಹಾರ ಭದ್ರತೆ ಎನ್ನುವುದು. ಆಹಾರ ಭದ್ರತೆ ಒದಗಿಸುವುದು ಒಂದು ಬೆಂಬಲಾತ್ಮಕವಾದ ಕ್ರಮವಾಗಿದ್ದು ಜನರ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಸಹಾಯಕವಾಗುತ್ತದೆ. ಆಹಾರ ಭದ್ರತೆಯು ಈ ಮೂರು ಖಾತರಿಗಳನ್ನು ಒಳಗೊಂಡಿದೆ:

© KTBS Not to be republished

1. ದೇಶದಲ್ಲಿರುವ ಎಲ್ಲ ಜನರಿಗೆ ಸಾಕಾಗುವಷ್ಟು ಆಹಾರ ದೊರಕಿಸುವುದು.
2. ಎಲ್ಲ ಜನರಿಗೂ ಗುಣಮಟ್ಟದ ಆಹಾರವನ್ನು ಕೊಳ್ಳಲು ಸಾಮರ್ಥ್ಯ ಹೆಚ್ಚಿಸುವುದು.
3. ಬಡವರು ಆಹಾರವನ್ನು ಪಡೆಯಲು ಮತ್ತು ಜೀರ್ಣಿಸಿಕೊಳ್ಳಲು ಇರುವ ಅಡೆತಡೆಗಳನ್ನು ನಿವಾರಿಸುವುದು.

ಭಾರತದಲ್ಲಿ ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಆಹಾರ ಭದ್ರತೆಯನ್ನು ಈ ಎರಡು ಕ್ರಮಗಳ ಮೂಲಕ ಸಾಕಾರಗೊಳಿಸಲು ಪ್ರಯತ್ನಿಸಿವೆ –

1. ಕಾಪು ದಾಸ್ತಾನು 2. ಸಾರ್ವಜನಿಕ ವಿತರಣಾ ವ್ಯವಸ್ಥೆ.

**ಕಾಪು ದಾಸ್ತಾನು :** ಸರ್ಕಾರವು ಪ್ರತಿವರ್ಷ ಮಾರುಕಟ್ಟೆಯಿಂದ ಕನಿಷ್ಠ ಬೆಂಬಲ ಬೆಲೆ ನೀಡಿ ಆಹಾರ ಧಾನ್ಯಗಳನ್ನು ಖರೀದಿಸಿ ದಾಸ್ತಾನು ಮಾಡುತ್ತದೆ. ಇದರ ಸಲುವಾಗಿ 1965ರಲ್ಲಿ ಭಾರತೀಯ ಆಹಾರ ನಿಗಮವನ್ನು ಸ್ಥಾಪಿಸಿ ಅದರ ಮೂಲಕ ಆಹಾರ ಧಾನ್ಯಗಳ ಖರೀದಿ, ಅವುಗಳ ವೈಜ್ಞಾನಿಕ ಸಂಗ್ರಹಣೆಗಾಗಿ ಗೋದಾಮುಗಳ ನಿರ್ಮಾಣ ಕಾರ್ಯ ಕೈಗೊಳ್ಳುತ್ತಿದೆ. ಈ ಪ್ರಕ್ರಿಯೆಯನ್ನು ಕಾಪು ದಾಸ್ತಾನು ಎಂದು ಕರೆಯುತ್ತೇವೆ. ಹೀಗೆ ಸಂಗ್ರಹಿಸಿದ ಧಾನ್ಯಗಳನ್ನು ಜನರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಿಸಲಾಗುತ್ತದೆ.

**ಸಾರ್ವಜನಿಕ ವಿತರಣಾ ವ್ಯವಸ್ಥೆ :** ಭಾರತೀಯ ಆಹಾರ ನಿಗಮದ ಮೂಲಕ ಖರೀದಿಸಿದ ಧಾನ್ಯಗಳನ್ನು ಮಾರುಕಟ್ಟೆಯಲ್ಲಿನ ಬೆಲೆಗಳಿಗಿಂತ ಕಡಿಮೆ ಬೆಲೆಗೆ ಸರ್ಕಾರವು ಬಡಜನರಿಗೆ ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಿಸುತ್ತದೆ. ಇದೇ ಸಾರ್ವಜನಿಕ ವಿತರಣಾ ವ್ಯವಸ್ಥೆ. ಆಹಾರ ಧಾನ್ಯಗಳಲ್ಲದೇ, ಖಾದ್ಯ ತೈಲ, ಸಕ್ಕರೆ, ಸೀಮೆ ಎಣ್ಣೆ ಹಾಗೂ ಇತರ ಅವಶ್ಯಕ ವಸ್ತುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಿಸುವ ಕಾರ್ಯವನ್ನು ಸರ್ಕಾರ ಕೈಗೊಂಡಿದೆ. ಭಾರತದಾದ್ಯಂತ 5 ಲಕ್ಷಕ್ಕೂ ಹೆಚ್ಚು ನ್ಯಾಯ ಬೆಲೆ ಅಂಗಡಿಗಳು 16 ಕೋಟಿಗಿಂತಲೂ ಅಧಿಕ ಕುಟುಂಬಗಳಿಗೆ ಸೇವೆ ಸಲ್ಲಿಸುತ್ತಿವೆ.

ಈ ಸೌಲಭ್ಯಗಳನ್ನು ಪಡೆಯಲು ಪ್ರತಿಯೊಂದು ಕುಟುಂಬವು ಪಡಿತರ ಚೀಟಿ ಹೊಂದುವುದು ಅವಶ್ಯವಿದೆ. ಆರ್ಥಿಕ ಸ್ಥಿತಿ ಆಧರಿಸಿ, ವಿವಿಧ ಬಗೆಯ ಪಡಿತರ ಚೀಟಿಗಳಿದ್ದು ಈ ಚೀಟಿಗಳು ಪ್ರತಿ ಕುಟುಂಬಕ್ಕೆ ನಿರ್ದಿಷ್ಟ ಪಡಿಸಿದ ಆಹಾರ ಧಾನ್ಯ ಹಾಗೂ ಇತರ ವಸ್ತುಗಳ ಪ್ರಮಾಣಕ್ಕೆ ಬಾಧ್ಯಸ್ಥರನ್ನಾಗಿಸುತ್ತದೆ. ಹೀಗೆ ಬಡತನದ ರೇಖೆಯ ಕೆಳಗಿರುವ ಜನರ ಪಡಿತರ ಚೀಟಿಗೆ ಅಧಿಕ ಪ್ರಮಾಣದ ವಸ್ತುಗಳು ಕಡಿಮೆ ಬೆಲೆಗೆ ಅಥವಾ ಉಚಿತವಾಗಿ ಮಾಸಿಕವಾಗಿ ಪೂರೈಸಲಾಗುತ್ತದೆ. ಅತ್ಯಂತ ಬಡ ಜನರಿಗಾಗಿ ಅಂತ್ಯೋದಯ ಅನ್ನ ಯೋಜನೆ ಜಾರಿಯಲ್ಲಿದ್ದು ಅದರಡಿ ಅತ್ಯಂತ ಕಡಿಮೆ ದರಕ್ಕೆ ಆಹಾರ ವಿತರಿಸಲಾಗುತ್ತದೆ. ಇನ್ನುಳಿದ ಕುಟುಂಬಗಳಿಗೂ ನಿಗದಿಪಡಿಸಿದ ಆಹಾರ ಧಾನ್ಯ ಪ್ರಮಾಣವನ್ನು ನೀಡಲಾಗುತ್ತದೆ.

| ಅನ್ನ ಭಾಗ್ಯ |
|---|
| 2013ರಲ್ಲಿ ಜಾರಿಯಾದ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯೇ ಅನ್ನಭಾಗ್ಯ. ಇದು ಹಸಿವು ಮುಕ್ತ ಕರ್ನಾಟಕದ ಸಾಕಾರದ ಉದ್ದೇಶ ಹೊಂದಿದೆ. ಈ ಯೋಜನೆಯಡಿ ರಾಜ್ಯ ಸರ್ಕಾರವು ಬಡತನ ರೇಖೆ ಕೆಳಗಿರುವ ಕುಟುಂಬಗಳಲ್ಲಿರುವ ಪ್ರತಿ ವ್ಯಕ್ತಿಗೆ 5 ಕಿಲೋ ಆಹಾರ ಧಾನ್ಯಗಳನ್ನು (ಅಕ್ಕಿ ಮತ್ತು ಗೋದಿ/ಜೋಳ/ರಾಗಿ) ಉಚಿತವಾಗಿ ಒದಗಿಸುತ್ತಿದೆ. ಇವಲ್ಲದೇ ಪಾಮ್ ಎಣ್ಣೆ, ಅಯೋಡಿನ್‌ಯುಕ್ತ ಉಪ್ಪು ಹಾಗೂ ಸಕ್ಕರೆಯನ್ನು ಅತ್ಯಂತ ಕಡಿಮೆ ಬೆಲೆಗೆ ಒದಗಿಸಲಾಗುತ್ತಿದೆ. ಇದರ ಮೂಲಕ ರಾಜ್ಯದಲ್ಲಿ ಅಪೌಷ್ಠಿಕತೆಯನ್ನು ನಿರ್ಮೂಲನೆ ಮಾಡುವ ಇರಾದೆ ಹೊಂದಿದೆ. |

ಆಹಾರ ಭದ್ರತೆಯನ್ನು ವಿಸ್ತೃತಗೊಳಿಸಲು ಸರ್ಕಾರವು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ (ICDS)ಯನ್ನು ಜಾರಿಗೆ ತಂದಿದೆ. ಈ ಯೋಜನೆಯ ಮೂಲಕ ಮಕ್ಕಳಲ್ಲಿನ ಹಾಗೂ ಗರ್ಭಿಣಿಯರಲ್ಲಿನ

Not to be republished ©KTBS

ಅಪೌಷ್ಟಿಕತೆಯನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗಿದೆ. ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಯೋಜನೆಯನ್ನು ಜಾರಿಗೊಳಿಸಿ ಓದುತ್ತಿರುವ ಎಲ್ಲ ಮಕ್ಕಳಿಗೆ ಹೊಟ್ಟೆ ತುಂಬ ಕನಿಷ್ಠ ಒಂದು ಊಟವನ್ನಾದರೂ ನೀಡುವ ವ್ಯವಸ್ಥೆ ಮಾಡಿದೆ.

**ಬಡತನ ನಿರ್ಮೂಲನಾ ಕಾರ್ಯಕ್ರಮಗಳು :**

ಸರ್ಕಾರವು ಬಡತನವನ್ನು ನಿರ್ಮೂಲನೆ ಮಾಡಲು ಹಲವಾರು ಕ್ರಮಗಳನ್ನು ಜಾರಿಗೊಳಿಸಿದೆ. ಈ ಕಾರ್ಯಕ್ರಮಗಳ ಬಡಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿ, ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ತನ್ಮೂಲಕ ಬಡತನದ ತೀವ್ರತೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ. ಸರ್ಕಾರದ ಈ ಕ್ರಮಗಳನ್ನು ನಾಲ್ಕು ವಿಧಗಳನ್ನಾಗಿ ವರ್ಗೀಕರಿಸಬಹುದಾಗಿದೆ. ಅವುಗಳೆಂದರೆ –

**1. ಆರ್ಥಿಕ ಅಭಿವೃದ್ಧಿ ಕ್ರಮಗಳು :** ಆರ್ಥಿಕ ಅಭಿವೃದ್ಧಿ ಮತ್ತು ಬಡತನದ ನಡುವೆ ನಿಕಟವಾದ ಸಂಬಂಧವಿದೆ. ದೇಶವು ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದಂತೆ ಬಡತನದ ಪ್ರಮಾಣವು ಕಡಿಮೆಯಾಗುತ್ತದೆ. ಸರ್ಕಾರವು ಪಂಚವಾರ್ಷಿಕ ಯೋಜನೆಗಳ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತಿದೆ. ಜೊತೆಗೆ ಅಭಿವೃದ್ಧಿಯ ಫಲಗಳು ಎಲ್ಲ ವರ್ಗದ ಜನರಿಗೆ ದೊರಕುವಂತೆ ನೋಡಿಕೊಳ್ಳುತ್ತಿದೆ.

**2. ಬಡತನ ನಿರ್ಮೂಲನಾ ಕಾರ್ಯಕ್ರಮಗಳು :** ಸರ್ಕಾರವು 1960ರಿಂದೀಚೆಗೆ ಗ್ರಾಮೀಣ ಭಾಗದಲ್ಲಿನ ಜನಸಮುದಾಯಕ್ಕೆ ಅಗತ್ಯವಾಗಿರುವ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಲು ಹಲವಾರು ಉದ್ಯೋಗ ನಿರ್ಮಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಅವುಗಳಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ:

1. **ಸ್ವ–ಉದ್ಯೋಗ ಕಾರ್ಯಕ್ರಮಗಳು:** ದೇಶದಲ್ಲಿರುವ ಬಡಜನರು ಮತ್ತು ವಿದ್ಯಾವಂತ ನಿರುದ್ಯೋಗಿಗಳನ್ನು ಗುರುತಿಸಿ, ಅವರಿಗೆ ಅಗತ್ಯವಿರುವ ಸಾಲವನ್ನು ಒದಗಿಸಿ, ಸ್ವಂತ ಉದ್ಯೋಗವನ್ನು ಕೈಗೊಳ್ಳುವಂತೆ ಮಾಡಲು ಹಲವಾರು ಸ್ವ ಉದ್ಯೋಗ ಯೋಜನೆಗಳನ್ನು ಜಾರಿಗೆ ತರಲಾಗಿದೆ ಅವುಗಳಲ್ಲಿ ಮುಖ್ಯವಾದವುಗಳೆಂದರೆ: 1980ರಲ್ಲಿ ಜಾರಿಗೆ ತಂದ 'ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ' (IRDP); 1997ರಲ್ಲಿ ಜಾರಿಯಾಗಿರುವ 'ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನೆ' (SSRY); 1999ರಲ್ಲಿ ಜಾರಿಯಾಗಿರುವ 'ಸ್ವರ್ಣಜಯಂತಿ ಗ್ರಾಮ ಸ್ವ–ರೋಜಗಾರ್ ಯೋಜನೆ' (SGSRY); ಮತ್ತು 4. 2011ರಿಂದೀಚೆಗೆ ಜಾರಿಯಲ್ಲಿರುವ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಅಥವಾ ದೀನ ದಯಾಳ ಅಂತ್ಯೋದಯ ಯೋಜನೆ.
2. **ಕೂಲಿ ಉದ್ಯೋಗ ಕಾರ್ಯಕ್ರಮಗಳು:** ಸ್ವಂತ ಆಸ್ತಿಯಿಲ್ಲದ ಹಾಗೂ ಕೌಶಲ್ಯ ರಹಿತ ಬಡಜನರಿಗೆ ದಿನಗೂಲಿ ಆಧಾರದ ಉದ್ಯೋಗ ಒದಗಿಸಲು ಹಲವಾರು 'ಕೂಲಿ ಉದ್ಯೋಗ ಕಾರ್ಯಕ್ರಮ'ಗಳನ್ನು ಜಾರಿಗೆ ತರಲಾಗಿದೆ. ಗ್ರಾಮೀಣ ಭಾಗದಲ್ಲಿ ಕೆರೆ–ಕಟ್ಟೆಗಳು, ರಸ್ತೆ, ಶಾಲೆ, ಆಸ್ಪತ್ರೆ ಮುಂತಾದ ಸಮುದಾಯದ ಆಸ್ತಿಗಳನ್ನು ನಿರ್ಮಿಸುವ ಮೂಲಕ ಇವರಿಗೆ ಕೂಲಿ ಉದ್ಯೋಗ ಒದಗಿಸಿಕೊಡಲಾಗುತ್ತದೆ.

2006ರಲ್ಲಿ 'ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ' (MGNREGS) ಯನ್ನು ಜಾರಿಗೆ ತರಲಾಗಿದೆ. ಇದು ಸದ್ಯದಲ್ಲಿ ಜಾರಿಯಲ್ಲಿರುವ ಅತ್ಯಂತ ಮಹತ್ವಾಕಾಂಕ್ಷಿ ಕೂಲಿ ಉದ್ಯೋಗ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರತಿ ಬಡ ಕುಟುಂಬದ ಇಚ್ಛೆಯುಳ್ಳ ಕೆಲಸಗಾರರಿಗೆ ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸವನ್ನು ನಿರ್ದಿಷ್ಟಪಡಿಸಿದ ಕನಿಷ್ಠ ಕೂಲಿದರದಲ್ಲಿ ಒದಗಿಸುವ ಭರವಸೆ ನೀಡಲಾಗಿದ್ದು ಇದರ ಮೂಲಕ ಅವರ ಜೀವನೋಪಾಯಕ್ಕೆ ಭದ್ರತೆಯನ್ನು ಒದಗಿಸಲಾಗುತ್ತಿದೆ. ಈ ಯೋಜನೆಯಡಿ ಬಡವರಾಗಿದ್ದು ಕನಿಷ್ಠ ಕೂಲಿ ದರಕ್ಕೆ ಕೆಲಸ ಮಾಡಲು ಸಿದ್ಧರಿರುವ ಅರೆಕುಶಲ ಕೆಲಸಗಾರರು ತಮ್ಮ ಗ್ರಾಮ ಪಂಚಾಯ್ತಿಗಳಲ್ಲಿ ಹೆಸರು ನೋಂದಾಯಿಸಿ ಉದ್ಯೋಗ ಚೀಟಿ ಪಡೆಯಬೇಕು. ಇಂಥ ನೋಂದಾಯಿತ ಉದ್ಯೋಗಾಕಾಂಕ್ಷಿಗಳು ಕೆಲಸಕ್ಕೆ ಬೇಡಿಕೆ ಇಟ್ಟ 15 ದಿನಗಳಲ್ಲಿ ಉದ್ಯೋಗ ಒದಗಿಸದಿದ್ದರೆ, ಅವರಿಗೆ ನಿರುದ್ಯೋಗ ಭತ್ಯೆಯನ್ನು ನೀಡಲಾಗುವುದು.

©KTBS Not to be republished

**3. ಕನಿಷ್ಠ ಮೂಲ ಅವಶ್ಯಕತೆಗಳ ಪೂರೈಕೆ :** ಗ್ರಾಮೀಣ ಭಾಗದ ಬಡ ಜನರಿಗೆ ಅಗತ್ಯವಿರುವ ಆಹಾರ, ವಸತಿ, ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯ ಮುಂತಾದ ಕನಿಷ್ಠ ಮೂಲ ಸೌಲಭ್ಯಗಳನ್ನು ಒದಗಿಸಿ, ಅವರ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ನ್ಯಾಯ ಬೆಲೆ ಅಂಗಡಿಗಳ ಮೂಲಕ ಬಡಜನರಿಗೆ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ. 'ಯಶಸ್ವಿನಿ ಯೋಜನೆ'ಯ ಅಡಿಯಲ್ಲಿ ಬಡಜನರಿಗೆ ಆರೋಗ್ಯ ವಿಮಾ ಸೌಲಭ್ಯ ಒದಗಿಸಲಾಗುತ್ತಿದೆ. 'ಇಂದಿರಾ ಆವಾಸ್ ಯೋಜನೆ' ಮತ್ತು 'ವಾಲ್ಮೀಕಿ–ಅಂಬೇಡ್ಕರ್ ಆವಾಸ್ ಯೋಜನೆ' ಮೂಲಕ ಮನೆಯಿಲ್ಲದ ಬಡಜನರಿಗೆ ಮನೆಗಳನ್ನು ನಿರ್ಮಿಸಿಕೊಡಲಾಗುತ್ತಿದೆ. 'ನಿರ್ಮಲ ಗ್ರಾಮ' ಯೋಜನೆ ಹಾಗೂ ಇತ್ತೀಚಿನ ಸ್ವಚ್ಛ ಭಾರತ ಅಭಿಯಾನದಡಿ ಶೌಚಾಲಯಗಳನ್ನು ನಿರ್ಮಿಸಿಕೊಡಲಾಗುತ್ತಿದೆ. 2000ರಲ್ಲಿ 'ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ'(PMGY)ಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯ ಅಡಿಯಲ್ಲಿ ಗ್ರಾಮೀಣ ಬಡಜನರಿಗೆ ಪ್ರಾಥಮಿಕ ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು, ಗ್ರಾಮೀಣ ವಿದ್ಯುದೀಕರಣ ಮುಂತಾದ ಸೇವೆಗಳನ್ನು ಒದಗಿಸಲಾಗುತ್ತಿದೆ.

**4. ಸಾಮಾಜಿಕ ಭದ್ರತಾ ಕ್ರಮಗಳು:** ಸಮಾಜದ ಅತಿ ಬಡಕುಟುಂಬಗಳ ಅಸಹಾಯಕರು, ವಯಸ್ಸಾದವರು, ಅಂಗವಿಕಲರು ಮುಂತಾದವರಿಗೆ ಸರ್ಕಾರ ಒದಗಿಸುವ ರಕ್ಷಣೆಗೆ ಸಾಮಾಜಿಕ ಭದ್ರತೆ ಎನ್ನುತ್ತೇವೆ. ಅನಾಥರಾದ ಮುದುಕರಿಗೆ 'ಸಂಧ್ಯಾ ಸುರಕ್ಷಾ ಯೋಜನೆ' ಯ ಮೂಲಕ ಪ್ರತಿ ತಿಂಗಳು ವೃದ್ಧಾಪ್ಯ ವೇತನ ನೀಡಲಾಗುತ್ತಿದೆ. ದುಡಿಯಲು ಅಸಮರ್ಥರಾದ ಅಂಗವಿಕಲರಿಗೆ ಮತ್ತು ಬಡ ವಿಧವೆಯರಿಗೆ ವಿಧವಾ ಮಾಶಾಸನ ನೀಡಲಾಗುತ್ತಿದೆ.

ಹೀಗೆ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಬಡಜನರನ್ನು ಬಡತನ ರೇಖೆಯ ಮೇಲೆತ್ತಲು ಪ್ರಯತ್ನಿಸುತ್ತಿದೆ. ಇದರ ಪರಿಣಾಮವಾಗಿ ಬಡತನದ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿದೆ.

©KTBS Not to be republished

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಘಟನೆ (NSSO) ಯ ಪ್ರಕಾರ 2004–05 ರಲ್ಲಿ ಭಾರತದಲ್ಲಿ ಶೇ. ________ ಭಾಗದಷ್ಟು ಬಡಜನರಿದ್ದರು.
2. ಭಾರತದಲ್ಲಿ ಬಡಜನರನ್ನು ಗುರುತಿಸುವುದಕ್ಕಾಗಿ ಮೊಟ್ಟಮೊದಲ ಬಾರಿಗೆ ಬಡತನ ರೇಖೆಯನ್ನು ಬಳಕೆಗೆ ತಂದವರು ____________
3. ಭಾರತ ಸರ್ಕಾರವು ಆಹಾರ ಧಾನ್ಯಗಳನ್ನು ಕೊಂಡು ಸಂಗ್ರಹಿಸಲು ________ ಸಂಸ್ಥೆಯನ್ನು ಸ್ಥಾಪಿಸಿದೆ.
4. ಬಡಜನರಿಗೆ ಒದಗಿಸಲಾಗಿರುವ ಆರೋಗ್ಯ ವಿಮೆಗೆ ___________ ಎಂದು ಹೆಸರಿಸಲಾಗಿದೆ.
5. ವೃದ್ಧಾಪ್ಯ ವೇತನಕ್ಕಾಗಿ ಜಾರಿಗೊಂಡಿರುವ ಯೋಜನೆಯ ಹೆಸರು __________ .
6. ಸರ್ಕಾರವು ಆಹಾರ ಧಾನ್ಯಗಳನ್ನು ಖರೀದಿಸುವ ಬೆಲೆಗೆ ______ ಬೆಲೆ ಎಂದು ಕರೆಯಲಾಗುತ್ತದೆ.

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಬಡತನದ ಅರ್ಥ ತಿಳಿಸಿ.
2. ಮಾನವನ ಕನಿಷ್ಠ ಮೂಲಭೂತ ಅವಶ್ಯಕತೆಗಳಾವುವು?

3. ಬಡತನ ರೇಖೆ ಎಂದರೇನು?

4. ಹಸಿವಿನ ಪ್ರಮಾಣವನ್ನು ಅಳೆಯಲು ರೂಪಿಸಲಾಗಿರುವ ಸೂಚಿ ಯಾವುದು?

5. ಆಹಾರ ಭದ್ರತೆಯ ಅರ್ಥ ತಿಳಿಸಿ.

6. ಕಾಪು ದಾಸ್ತಾನು ಎಂದರೇನು?

**III. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1. ಭಾರತದಲ್ಲಿ ಬಡತನವನ್ನು ಹೇಗೆ ಗುರುತಿಸಲಾಗುತ್ತಿದೆ?

2. ಬಡತನದ ಸೂಚಿಗಳಾವುವು?

3. ಭಾರತದಲ್ಲಿ ಹಸಿವಿನ ತೀವ್ರತೆ ಮುಂದುವರೆದಿರುವುದರ ಕಾರಣಗಳೇನು?

4. ಭಾರತದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ತಿಳಿಸಿರಿ.

5. ಬಡತನ ನಿರ್ಮೂಲನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪಟ್ಟಿ ಮಾಡಿರಿ.

6. ಬಡಜನರಿಗೆ ಒದಗಿಸಲಾಗುತ್ತಿರುವ ಸಾಮಾಜಿಕ ಭದ್ರತಾ ಕ್ರಮಗಳನ್ನು ತಿಳಿಸಿ.

**IV. ಚಟುವಟಿಕೆಗಳು.**

1. ಹಾದಿ ಬದಿಯ ಖಾಲಿ ಜಾಗಗಳಲ್ಲಿ ತಾತ್ಕಾಲಿಕ ಟೆಂಟುಗಳನ್ನು ನಿರ್ಮಿಸಿಕೊಂಡು ಬದುಕುವ ಅಲೆಮಾರಿ ಜನರನ್ನು ಗಮನಿಸಿ. ಅವರ ಊಟ, ವಸತಿ, ಅವರ ಮಕ್ಕಳ ಶಿಕ್ಷಣದ ಬಗ್ಗೆ ಚರ್ಚಿಸಿ.

2. ನಿಮ್ಮ ಹತ್ತಿರದ ಗ್ರಾಮ ಪಂಚಾಯ್ತಿಗೆ ಭೇಟಿ ನೀಡಿ, ಬಡವರನ್ನು ಹೇಗೆ ಗುರುತಿಸಲಾಗುತ್ತಿದೆ ಎಂಬುದನ್ನು ತಿಳಿಯಿರಿ.

3. ನೀವು ರಾಜ್ಯದ ಆಹಾರ ಸಚಿವರೆಂದು ಭಾವಿಸಿ, ಬಡತನ ನಿವಾರಣೆಗೆ ಕೈಗೊಳ್ಳಬಹುದಾದ ಯೋಜನೆಗೆ ಪಟ್ಟಿ ಮಾಡಿ.

**V. ಯೋಜಿತ ಕಾರ್ಯ**

ನಿಮ್ಮ ಗ್ರಾಮದಲ್ಲಿರುವ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿರಿ. ಅಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

1. ಯಾವ ಯಾವ ಸರಕುಗಳನ್ನು ವಿತರಿಸುತ್ತಾರೆ?

2. ಯಾವ ಬೆಲೆಯಲ್ಲಿ ವಿತರಿಸುತ್ತಾರೆ? ಅಲ್ಲಿನ ಬೆಲೆಗೂ ಮತ್ತು ದಿನಸಿ ಅಂಗಡಿಯಲ್ಲಿ ಮಾರುವ ಅದೇ ಸರಕಿನ ಬೆಲೆಗೂ ಎಷ್ಟು ವ್ಯತ್ಯಾಸವಿದೆ?

3. ಎಷ್ಟು ಕುಟುಂಬಗಳಿಗೆ ಇಲ್ಲಿಂದ ಸರಕುಗಳನ್ನು ವಿತರಿಸುತ್ತಾರೆ.

©KTBS Not to be re published

©KTBS Not to be republished

### ಅಧ್ಯಾಯ 4

# ಶ್ರಮ ಹಾಗೂ ಉದ್ಯೋಗ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ಶ್ರಮದ ಅರ್ಥ.*
- *ಭಾರತದ ಶ್ರಮಶಕ್ತಿಯ ರಚನೆ.*
- *ಭಾರತದ ನಿರುದ್ಯೋಗ ಸಮಸ್ಯೆಯ ಸ್ವರೂಪ.*
- *ಉದ್ಯೋಗ ನಿರ್ಮಾಣ ಕಾರ್ಯಕ್ರಮಗಳು.*

ಶ್ರಮವು ಒಂದು ಮಹತ್ವದ ಹಾಗೂ ಅನಿವಾರ್ಯ ಉತ್ಪಾದನಾಂಗವಾಗಿದೆ. ಅದು ಉತ್ಪಾದನಾ ಪ್ರಕ್ರಿಯೆಯಲ್ಲಿ ಮಾನವ ಅಂಶವಾಗಿದೆ. ಶ್ರಮವಿಲ್ಲದೇ ಯಾವುದೇ ತೆರನಾದ ಉತ್ಪಾದನೆಯು ಅಸಾಧ್ಯ. ಏಕೆಂದರೆ ಶ್ರಮವು ಮಾತ್ರ ಉತ್ಪಾದನೆಯ ಮೌಲ್ಯದಲ್ಲಿ ಗಣನೀಯ ಹೆಚ್ಚಳವನ್ನು ತರಬಲ್ಲುದಾಗಿದೆ.

> ಸಂತೋಷಕ್ಕೆ ಕೈಗೊಳ್ಳುವ ಕೆಲಸಕ್ಕೆ ಹೊರತಾಗಿ ಸರಕುಗಳ ಉತ್ಪಾದನೆ ದೃಷ್ಟಿಯಿಂದ ದೇಹ ಮತ್ತು ಮನಸ್ಸು ಕೈಗೊಳ್ಳುವ ಯಾವುದೇ ಭಾಗಶಃ ಅಥವಾ ಸಂಪೂರ್ಣ ಪ್ರಯತ್ನವನ್ನು ಶ್ರಮ ಎಂದು ಕರೆಯುತ್ತಾರೆ. – ಆಲ್ಫ್ರೆಡ್ ಮಾರ್ಷಲ್

**ಶ್ರಮದ ಅರ್ಥ :** ಮಾನವರು ಸರಕು ಅಥವಾ ಸೇವೆಗಳ ಉತ್ಪಾದನೆಗಾಗಿ ಹಾಕುವ ಭೌತಿಕ ಅಥವಾ ಬೌದ್ಧಿಕ ಸಾಮರ್ಥ್ಯವನ್ನು ಶ್ರಮವೆಂದು ಕರೆಯಬಹುದು. ಅದು ಜೀವನೋಪಾಯ ಗಳಿಕೆಗಾಗಿ ಮಾನವರು ಮಾಡುವ ಎಲ್ಲ ಕಾರ್ಯಗಳನ್ನು ಒಳಗೊಂಡಿದೆ. ಅದು ಸರಕು ಅಥವಾ ಸೇವೆಗಳ ಉತ್ಪಾದನೆಯಲ್ಲಿ ಪರ್ಯಾವಸಾನಗೊಳ್ಳುತ್ತದೆ. ಆದರೆ ಸ್ವಸಂತೋಷಕ್ಕಾಗಿ ಅಥವಾ ಅನುಕಂಪದಿಂದ ಮಾಡಿದ ಕೆಲಸವನ್ನು ಶ್ರಮವೆಂದು ಪರಿಗಣಿಸಲಾಗುವುದಿಲ್ಲ. ತನ್ನ ಸೇವೆಗಳಿಗೆ ಸಂಬಳ ಪಡೆಯುವ ದಾದಿಯರ ಸೇವೆಯನ್ನು ಶ್ರಮ ಎಂದು ಪರಿಗಣಿಸಿದರೆ, ತನ್ನ ಅನಾರೋಗ್ಯಪೀಡಿತ ಮಗುವಿನ ಲಾಲನೆಗಾಗಿ ಮಾಡಿದ ಒಬ್ಬ ತಾಯಿಯ ಸೇವೆಯು ಶ್ರಮವೆಂದು ಪರಿಗಣಿತವಾಗುವುದಿಲ್ಲ.

ಶ್ರಮವು ಮಾನವನಿಗೆ ಸಂಬಂಧಿತವಾದ್ದರಿಂದ ಅದರದ್ದೇ ಆದ ಕೆಲವೊಂದು ವಿಶಿಷ್ಟ ಲಕ್ಷಣಗಳಿವೆ :

1. ಶ್ರಮವನ್ನು ಶ್ರಮಿಕನಿಂದ ಬೇರ್ಪಡಿಸಲು ಆಗುವುದಿಲ್ಲ.
2. ಶ್ರಮವನ್ನು ಸಂಗ್ರಹಿಸಿ ಇಡಲು ಆಗುವುದಿಲ್ಲ
3. ಶ್ರಮದ ಪೂರೈಕೆಯು ಕಾಲಾಂತರದಲ್ಲಿ ಬದಲಾಗುತ್ತದೆ
4. ಶ್ರಮದ ವಲಸೆಯ ಪ್ರಮಾಣವು ಕಡಿಮೆ
5. ಶ್ರಮವು ದಕ್ಷತೆಯಲ್ಲಿ ಭಿನ್ನತೆ ಹೊಂದಿದೆ

**ಶ್ರಮದ ಮಹತ್ವ :** ಶ್ರಮವು ಒಂದು ಉತ್ಪಾದಕ ಅಂಗವಾಗಿದ್ದು ಅದು ಇತರ ಉತ್ಪಾದನಾಂಗಗಳನ್ನೂ ಚುರುಕುಗೊಳಿಸಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದ ದೇಶದ ಶ್ರಮಶಕ್ತಿಯ ಪ್ರಮಾಣ ಮತ್ತು ಗುಣಮಟ್ಟ ಆ ದೇಶದ ಅಭಿವೃದ್ಧಿಯನ್ನು ತೀವ್ರಗೊಳಿಸುವಲ್ಲಿ ತುಂಬಾ ಮಹತ್ವದ್ದಾಗಿದೆ. ಶ್ರಮಶಕ್ತಿ ಹೆಚ್ಚಿಗೆ ಇದ್ದಷ್ಟೂ ಆ ದೇಶದ ಆರ್ಥಿಕ ಚಟುವಟಿಕೆಗಳ ಪ್ರಮಾಣ ಹಾಗೂ ಅಭಿವೃದ್ಧಿಯ ಮಟ್ಟ ಅಧಿಕವಾಗುತ್ತದೆ.

ಸಾಮಾನ್ಯವಾಗಿ ಶ್ರಮಶಕ್ತಿಯ ಗಾತ್ರವನ್ನು ಒಂದು ದೇಶದಲ್ಲಿರುವ 15ರಿಂದ 60 ವರ್ಷ ವಯೋಮಾನದವರ ಸಂಖ್ಯೆಯ ಆಧಾರದ ಮೇಲೆ ಅಳೆಯುತ್ತಾರೆ. ಹದಿನೈದು ವರ್ಷದ ಕೆಳಗಿನ ಮಕ್ಕಳನ್ನು

ಹಾಗೂ ಅರುವತ್ತು ವರ್ಷ ಮೇಲ್ಪಟ್ಟ ಹಿರಿಯರನ್ನು ಶ್ರಮಿಕರೆಂದು ಪರಿಗಣಿಸುವುದಿಲ್ಲ. ಸದ್ಯ ಭಾರತವು 'ಜನಸಂಖ್ಯಾ ಲಾಭಾಂಶ'ವನ್ನು ಪಡೆಯುತ್ತಿರುವ ರಾಷ್ಟ್ರವೆಂದು ಹೇಳಲಾಗುತ್ತಿದೆ. ಯುವಕರ ಹಾಗೂ ಕೆಲಸ ಮಾಡಬಹುದಾದಂಥ ಜನರ ಸಂಖ್ಯೆಯು ಬೇರೆ ರಾಷ್ಟ್ರಗಳಿಗಿಂತ ಹೆಚ್ಚಿಗಿರುವುದರಿಂದ ದೇಶದ ಉತ್ಪಾದನಾ ಸಾಮರ್ಥ್ಯ ಅತಿ ಹೆಚ್ಚು ಎಂದು ನಂಬಲಾಗಿದೆ.

**ಭಾರತದಲ್ಲಿ ಶ್ರಮಶಕ್ತಿಯ ರಚನೆ**

ಕಾರ್ಮಿಕರ ಅಥವಾ ಶ್ರಮಶಕ್ತಿಯ ಸಂರಚನೆಯನ್ನು ಅದರ ಗಾತ್ರ, ಲಿಂಗ, ಚಟುವಟಿಕೆ ಮತ್ತು ವಲಯ ಆಧಾರಿತ ಹಂಚಿಕೆಯ ಮೂಲಕ ಅಧ್ಯಯನ ಮಾಡಬಹುದು. ಭಾರತದಲ್ಲಿ ಶ್ರಮಶಕ್ತಿ ಮತ್ತು ಕಾರ್ಮಿಕರ ಕುರಿತಾದ ಮಾಹಿತಿಯನ್ನು ಜನಗಣತಿ ಹಾಗೂ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಘಟನೆಗಳು ಸಂಗ್ರಹಿಸುತ್ತವೆ. ಸದರಿ ಮಾಹಿತಿಯನ್ನು ಬಳಸಿ ಭಾರತದ ಶ್ರಮಶಕ್ತಿಯ ಸಂರಚನೆಯನ್ನು ಅಭ್ಯಸಿಸೋಣ.

**1. ಶ್ರಮಶಕ್ತಿಯ ಗಾತ್ರ:** 2011ರ ಜನಗಣತಿಯ ಅನುಸಾರ ಶೇ. 39.8ರಷ್ಟು ಜನರು ಕೆಲಸಗಾರರೆಂದು ಗುರುತಿಸಲ್ಪಟ್ಟಿದ್ದಾರೆ. ಇನ್ನುಳಿದ ಶೇ. 60ರಷ್ಟು ಜನರು ಕೆಲಸಗಾರರಲ್ಲದರ ಅವಲಂಬಿತ ಸ್ಥಿತಿಯನ್ನು ತೋರಿಸುತ್ತದೆ. ಇದು ಬಹಳಷ್ಟು ಜನರು ನಿರುದ್ಯೋಗ ಅಥವಾ ಅರೆಉದ್ಯೋಗದ ಸಮಸ್ಯೆಯಿಂದ ಬಳಲುತ್ತಿರುವುದನ್ನೂ ಸೂಚಿಸುತ್ತದೆ. ಆದರೆ 2001 ಮತ್ತು 2011ರ ಅವಧಿಯಲ್ಲಿ ಕಾರ್ಮಿಕರ ಸಂಖ್ಯೆಯು 40.2 ಕೋಟಿಗಳಿಂದ 48.2 ಕೋಟಿಗಳಿಗೆ ಹೆಚ್ಚಾಗಿರುವುದು ಅವರೆಲ್ಲರಿಗೆ ಸೂಕ್ತ ಉದ್ಯೋಗಾವಕಾಶಗಳನ್ನು ಒದಗಿಸುವ ಸರ್ಕಾರದ ಹೊಣೆಗಾರಿಕೆಯನ್ನೂ ತೋರಿಸುತ್ತದೆ.

**2. ಶ್ರಮಶಕ್ತಿಯ ಲಿಂಗ ಸಂರಚನೆ:** 2001 ಮತ್ತು 2011 ಎರಡರ ಜನಗಣತಿಗಳಲ್ಲೂ ಮಹಿಳೆಯರಲ್ಲಿನ ಕಾರ್ಮಿಕರ ಪ್ರಮಾಣವು ಶೇ. 35ರಷ್ಟಿತ್ತು. ಅಂದರೆ ಕೆಲಸದಲ್ಲಿ ಭಾಗವಹಿಸುತ್ತಿರುವ ಮಹಿಳೆಯರ ಪ್ರಮಾಣವು ಪುರುಷರಿಗಿಂತ ಕಡಿಮೆ ಇದೆ. ಮಹಿಳೆಯರಿಗೆ ಸೂಕ್ತವಾದ ಉದ್ಯೋಗಾವಕಾಶಗಳು ಇರದಿರುವುದನ್ನೂ ಮತ್ತು ಅವರ ಕೆಲ ಕಾರ್ಯಗಳನ್ನು ಕೆಲಸ ಎಂದು ಗುರುತಿಸದೇ ಇರುವುದನ್ನೂ ಈ ಮಾಹಿತಿಯು ತೋರಿಸುತ್ತದೆ.

**3. ಶ್ರಮಶಕ್ತಿಯ ಔದ್ಯೋಗಿಕ ಮತ್ತು ವಲಯವಾರು ಸಂರಚನೆ:** ಔದ್ಯೋಗಿಕ ಸಂರಚನೆಯನ್ನು ಕೃಷಿ, ಉದ್ದಿಮೆ, ಮತ್ತು ಸೇವಾ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಕಾರ್ಮಿಕರ ಪ್ರಮಾಣವನ್ನು ಆಧರಿಸಿ ಅಭ್ಯಸಿಸಬಹುದು. 2011ರಷ್ಟು ತಡವಾಗಿಯೂ ಭಾರತದಲ್ಲಿ ಅತಿ ಹೆಚ್ಚು ಪ್ರಮಾಣದ ಕಾರ್ಮಿಕರು ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದು (ಕೋಷ್ಟಕ 1 ನೋಡಿರಿ).

**ಕೋಷ್ಟಕ 1: ಭಾರತದಲ್ಲಿ ಕೆಲಸಗಾರರ ವಲಯವಾರು ವರ್ಗೀಕರಣ, 2011**

| ವಲಯ | ವಾಸಸ್ಥಳ | | ಲಿಂಗ | | ಒಟ್ಟು |
|---|---|---|---|---|---|
| | ಗ್ರಾಮೀಣ | ನಗರ | ಪುರುಷರು | ಮಹಿಳೆಯರು | |
| ಪ್ರಾಥಮಿಕ | 66.6 | 9.0 | 43.6 | 62.8 | 48.9 |
| ದ್ವಿತೀಯ | 16.0 | 31.0 | 25.9 | 20.0 | 24.3 |
| ತೃತೀಯ | 17.4 | 60.0 | 30.5 | 17.2 | 26.8 |
| ಒಟ್ಟು | 100.0 | 100.0 | 100.0 | 100.0 | 100.0 |

ಸುಮಾರು ಶೇ.66ರಷ್ಟು ಕಾರ್ಮಿಕರು ಪ್ರಾಥಮಿಕ ಅಂದರೆ ಕೃಷಿ ಮತ್ತು ಸಂಬಂಧಿತ ಕೆಲಸಗಳಲ್ಲಿ ಭಾಗಿಯಾಗಿದ್ದು, ಇನ್ನುಳಿದ ಕಾರ್ಮಿಕರು ಹೆಚ್ಚೂ ಕಡಿಮೆ ಸಮಾನವಾಗಿ ದ್ವಿತೀಯ (ಔದ್ಯಮಿಕ) ಮತ್ತು ತೃತೀಯ (ಸೇವಾ) ವಲಯಗಳಲ್ಲಿ ತೊಡಗಿಕೊಂಡಿದ್ದಾರೆ. ಪ್ರಮುಖವಾದ ಅಂಶವೆಂದರೆ ಹಲವು ವರ್ಷಗಳ ನಂತರ ಕೃಷಿಯಲ್ಲಿ ನಿರತರಾದ ಜನರ ಸಂಖ್ಯೆ ಕಡಿಮೆಯಾಗಿ, ಸೇವೆಗಳಲ್ಲಿ ತೊಡಗಿಕೊಂಡವರ

© KTBS Not to be republished

ಸಂಖ್ಯೆಯು ಕಾಲುಭಾಗಕ್ಕಿಂತ ಅಧಿಕವಾಗಿದೆ. ಈ ಔದ್ಯೋಗಿಕ ವೈವಿಧ್ಯೀಕರಣ ಆದಾಯದ ವರ್ಗೀಕರಣಕ್ಕೆ ಹೋಲಿಸಿದರೆ ತುಂಬಾ ನಿಧಾನ ಎಂದೇ ಹೇಳಬಹುದು. ಅದೇ ರೀತಿ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇ ಪ್ರಮುಖ ಉದ್ಯೋಗವಾದರೆ, ನಗರ ಪ್ರದೇಶಗಳಲ್ಲಿ ಸೇವಾ ವಲಯವು ಅತ್ಯಂತ ಪ್ರಮುಖದ್ದಾಗಿದೆ. ಹಾಗೆಯೇ ಅಧಿಕ ಪ್ರಮಾಣದ ಪುರುಷರು ಉದ್ದಿಮೆ ಹಾಗೂ ಸೇವೆಗಳಲ್ಲಿ ತೊಡಗಿಕೊಂಡಿದ್ದರೆ, ಮಹಿಳೆಯರಲ್ಲಿ ಇನ್ನೂ ಹೆಚ್ಚಿನ ಪ್ರಮಾಣದವರು ಕೃಷಿಯಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಈ ಕಾರ್ಮಿಕರ ಹಂಚಿಕೆಯು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಮಹಿಳೆಯರಿಗಾಗಿ ಕೃಷಿಯೇತರ ಉದ್ಯೋಗಗಳನ್ನು ನಿರ್ಮಿಸುವ ಅಗತ್ಯತೆಯನ್ನು ತೋರಿಸುತ್ತದೆ. ಇದರಿಂದ ಒಟ್ಟಾರೆ ಆದಾಯ ಸೃಷ್ಟಿ ಅಧಿಕವಾಗಿ ಬಡತನ ಕಡಿಮೆಯಾಗುತ್ತದೆ.

**4. ಕಾರ್ಮಿಕರ ಸಂಘಟಿತ ಹಾಗೂ ಅಸಂಘಟಿತ ವಲಯದ ಹಂಚಿಕೆ:** ಉದ್ಯೋಗದ ನಿಯಮಗಳನ್ನು ಆಧರಿಸಿ ಕಾರ್ಮಿಕರನ್ನು ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರು ಎಂದು ವಿಂಗಡಿಸಲಾಗುತ್ತದೆ. ದೇಶದ ಕಾನೂನುರೀತ್ಯ ನೋಂದಾಯಿತ ಉದ್ದಿಮೆಗಳನ್ನು ಸಂಘಟಿತ ವಲಯವೆಂತಲೂ, ಯಾವುದೇ ರೀತಿ ನೋಂದಣಿ ಮಾಡಲಾರದ ಉದ್ದಿಮೆಗಳನ್ನು ಅಸಂಘಟಿತ ವಲಯವೆಂತಲೂ ಕರೆಯುತ್ತೇವೆ. ನೋಂದಾಯಿತ ಉದ್ದಿಮೆಗಳು ಸರ್ಕಾರ ವಿಧಿಸುವ ಎಲ್ಲ ಷರತ್ತುಗಳಿಗೆ ಹಾಗೂ ನಿಯಮಗಳಿಗೆ, ಪ್ರಮುಖವಾಗಿ ಕೂಲಿ ಹಾಗೂ ಕೆಲಸದ ಭದ್ರತೆಗೆ ಬದ್ಧವಾಗಿರಬೇಕಾಗುತ್ತದೆ. ಕಾರ್ಮಿಕರಿಗೆ ನಿಗದಿತ ಕೂಲಿ ಹಾಗೂ ಇತರ ನಿಗದಿಪಡಿಸಿದ ಸವಲತ್ತುಗಳು ದೊರಕುತ್ತವೆ. ಆದರೆ ಅಸಂಘಟಿತ ವಲಯದಲ್ಲಿನ ಕಾರ್ಮಿಕರು ಸರ್ಕಾರದ ಈ ನಿಯಮಗಳಿಗೆ ಒಳಪಡುವುದಿಲ್ಲವಾದ್ದರಿಂದ ಅಲ್ಲಿ ಕೂಲಿ ಹಾಗೂ ಕೆಲಸದ ಭದ್ರತೆ ಇರುವುದಿಲ್ಲ. ಉದಾಹರಣೆಗೆ ರಿಲಯನ್ಸ್ ಸಮೂಹದ ಉದ್ದಿಮೆಗಳು, ಟಾಟಾ ಉಕ್ಕು ಉದ್ದಿಮೆ ಮುಂತಾದವುಗಳು ನೋಂದಾಯಿತ ಉದ್ದಿಮೆಗಳಾದರೆ, ಹಲವಾರು ಸಣ್ಣ ಮತ್ತು ಚದುರಿದಂತೆ ಇರುವ ವ್ಯಾಪಾರಸ್ಥರು ಅನೋಂದಾಯಿತ ಉದ್ದಿಮೆದಾರರಾಗಿದ್ದಾರೆ. ಕಟ್ಟಡ ಕಾರ್ಮಿಕರು, ಬೀದಿ ಬದಿ ವ್ಯಾಪಾರಸ್ಥರು, ಸಣ್ಣ ಅಂಗಡಿಗಳನ್ನು ಹೊಂದಿದವರು ಮುಂತಾದವರು ಈ ವರ್ಗದಲ್ಲಿ ಬರುತ್ತಾರೆ. ಇವರಿಗೆಲ್ಲ ಉದ್ಯೋಗ ಭದ್ರತೆ ಇರುವುದಿಲ್ಲ ಮತ್ತು ಅವರ ಉದ್ಯೋಗ ಸ್ಥಿತಿಗಳು ತುಂಬಾ ಕಠೋರವಾಗಿರುತ್ತವೆ. ಇಲ್ಲಿ ನಿಯಮಗಳನ್ನು ಪಾಲಿಸದೇ ಇರುವುದರಿಂದ ಮತ್ತು ಇದು ಸರ್ಕಾರದ ನಿಯಂತ್ರಣದ ಹೊರಗೆ ಇರುವುದರಿಂದ ಇದನ್ನು ಅನೌಪಚಾರಿಕ ವಲಯವೆಂತಲೂ ಕರೆಯುತ್ತಾರೆ. ಕೋಷ್ಟಕ 2ರಲ್ಲಿನ ಮಾಹಿತಿ ಹೇಳುವಂತೆ 2011–12ರಲ್ಲಿ ಕೇವಲ ಶೇ. 18ರಷ್ಟು ಕಾರ್ಮಿಕರು ನಿಯಮಿತ ಉದ್ಯೋಗ ಹೊಂದಿದ್ದು ಸಂಘಟಿತ ವಲಯದಲ್ಲಿದ್ದಾರೆ.

**ಕೋಷ್ಟಕ 2 : ಉದ್ಯೋಗ ಸ್ಥಿತಿವಾರು ಕಾರ್ಮಿಕರ ಹಂಚಿಕೆ (%)**

| ಉದ್ಯೋಗ ಸ್ಥಿತಿ | 1972–73 | 1993–94 | 2011–12 |
|---|---|---|---|
| ಸ್ವ–ಉದ್ಯೋಗ | 61.4 | 54.6 | 52.0 |
| ಸಂಬಳ ಹೊಂದಿದ ನಿಯಮಿತ ಉದ್ಯೋಗ | 15.4 | 13.6 | 18.0 |
| ಅನಿಯಮಿತ ಕೂಲಿ (ಕ್ಯಾಶುಯಲ್) ಉದ್ಯೋಗ | 23.2 | 31.8 | 30.0 |
| ಒಟ್ಟು | 100.0 | 100.0 | 100.0 |

ಶೇ.52ರಷ್ಟು ಜನರು ಸ್ವ–ಉದ್ಯೋಗಿಗಳಾಗಿದ್ದರೂ ಬಹಳಷ್ಟು ಸಾರಿ ಆ ಉದ್ಯೋಗವು ಅತ್ಯಂತ ಕಡಿಮೆ ಆದಾಯ ನೀಡುವ ಕೆಲಸವಾಗಿದ್ದು, ಬೇರೆ ಯಾವ ಪರ್ಯಾಯವೂ ಇಲ್ಲದೇ ಕುಟುಂಬದ ಎಲ್ಲರೂ ಅದರಲ್ಲಿ ತೊಡಗಿಕೊಂಡಿರುವ ಪರಿಸ್ಥಿತಿ ಸಾಮಾನ್ಯವಾಗಿ ಕಂಡು ಬರುತ್ತದೆ. ಅನಿಯಮಿತ ಕೂಲಿ ಅಥವಾ ಕ್ಯಾಶುಯಲ್ ಉದ್ಯೋಗ ಕಳೆದ ಕೆಲವು ವರ್ಷಗಳಲ್ಲಿ ಹೆಚ್ಚಾಗುತ್ತಲಿದ್ದು, ಸದ್ಯ ಸುಮಾರು ಶೇ. 30ರಷ್ಟು ಕೆಲಸಗಾರರು ಈ

© KTBS Not to be republished

ತೆರನಾದ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ.

## ನಿರುದ್ಯೋಗ ಮತ್ತು ಭಾರತದಲ್ಲಿ ನಿರುದ್ಯೋಗದ ಪ್ರಮಾಣ

ಪ್ರಸ್ತುತ ಕೂಲಿದರದಲ್ಲಿ ಕೆಲಸ ಮಾಡಲು ಇಚ್ಛಿಸುವ ಒಬ್ಬ ವ್ಯಕ್ತಿಗೆ ಕೆಲಸ ದೊರಕದೇ ಇರುವ ಸ್ಥಿತಿಯನ್ನು ನಿರುದ್ಯೋಗ ಎಂದು ಕರೆಯುತ್ತೇವೆ. ಭಾರತದಲ್ಲಿ ಕೆಲಸವಿಲ್ಲದ ಮತ್ತು ನಿರುದ್ಯೋಗಿಗಳ ಸಂಖ್ಯೆ ಅಧಿಕವಿದೆ ಅಲ್ಲದೇ ಹೆಚ್ಚಾಗುತ್ತಲಿದೆ.

> ನಿರುದ್ಯೋಗ ದರವನ್ನು ಕೆಲಸ ದೊರಕದೇ ಇರುವ ಕಾರ್ಮಿಕರ ಪ್ರತಿಶತ ಪ್ರಮಾಣವೆಂದು ಲೆಕ್ಕ ಹಾಕಲಾಗುತ್ತದೆ.

ಭಾರತದಂಥ ಬೃಹತ್ ರಾಷ್ಟ್ರದಲ್ಲಿ ಒಟ್ಟು ನಿರುದ್ಯೋಗಿಗಳ ಸಂಖ್ಯೆಯನ್ನು ಲೆಕ್ಕ ಹಾಕುವುದು ಅಷ್ಟು ಸರಳವಲ್ಲ. ಭಾರತ ಸರ್ಕಾರದ ಕಾರ್ಮಿಕ ಬ್ಯೂರೋ ಮಾಡಿದ ಸರ್ವೇಕ್ಷಣೆಯ ಪ್ರಕಾರ 1951ರಲ್ಲಿ 5 ದಶಲಕ್ಷಗಳಷ್ಟಿದ್ದ ನಿರುದ್ಯೋಗಿಗಳ ಸಂಖ್ಯೆಯು 2010ರ ವೇಳೆಗೆ 40.47 ದಶಲಕ್ಷಕ್ಕೆ ಏರಿಕೆಯಾಗಿದೆ. ಸದ್ಯ ಭಾರತದಲ್ಲಿಯ ನಿರುದ್ಯೋಗದ ಪ್ರಮಾಣವು ಒಟ್ಟು ಶ್ರಮಶಕ್ತಿಯ ಶೇ. 9.4ರಷ್ಟಿದೆ. ಪುರುಷರಲ್ಲಿ ಅದು ಶೇ. 8ರಷ್ಟಿದ್ದರೆ, ಮಹಿಳೆಯರಲ್ಲಿ ಅದು ಶೇ.14.6ರಷ್ಟಿದೆ. ಅಂತೆಯೇ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ದರವು ಶೇ. 10.1ರಷ್ಟಿದ್ದರೆ, ನಗರ ಪ್ರದೇಶದಲ್ಲಿ ಅದು ಶೇ.7.3ರಷ್ಟಿದೆ.

## ಭಾರತದಲ್ಲಿ ನಿರುದ್ಯೋಗದ ಸಮಸ್ಯೆಗೆ ಕಾರಣಗಳು

ಭಾರತದ ನಿರುದ್ಯೋಗದ ಸಮಸ್ಯೆಗೆ ಪ್ರಮುಖ ಕಾರಣಗಳೆಂದರೆ –

1. **ಉದ್ಯೋಗ ರಹಿತ ಆರ್ಥಿಕ ಬೆಳವಣಿಗೆ :** ಭಾರತದ ಇತ್ತೀಚಿನ ಆರ್ಥಿಕ ಬೆಳವಣಿಗೆಯನ್ನು ಉದ್ಯೋಗರಹಿತವೆಂದು ವರ್ಣಿಸಲಾಗುತ್ತದೆ. 1990ರಿಂದೀಚೆಗೆ ಜರುಗಿದ ಉದ್ಯಮ ರಂಗದ ಮತ್ತು ಸೇವಾ ವಲಯದ ಬೆಳವಣಿಗೆಯು ಬಂಡವಾಳ ಸಾಂದ್ರ ತಂತ್ರಜ್ಞಾನ ಬಳಸಿ ಸಾಧಿಸಿದ ಬೆಳವಣಿಗೆಯಾದ್ದರಿಂದ ಕಡಿಮೆ ಪ್ರಮಾಣದ ಉದ್ಯೋಗ ನಿರ್ಮಾಣವಾಗಿದೆ. ಹಾಗೆಯೇ, ಪ್ರಾಥಮಿಕ ವಲಯದ ಅತ್ಯಂತ ನಿಧಾನ ಗತಿಯ ಬೆಳವಣಿಗೆಯು ಗ್ರಾಮೀಣ ಪ್ರದೇಶಗಳಲ್ಲಿ ನಿರೀಕ್ಷಿಸಿದಷ್ಟು ಉದ್ಯೋಗ ಸೃಷ್ಟಿಯಾಗಿಲ್ಲ. ಹೀಗಾಗಿ ಒಟ್ಟಾರೆ ಬೆಳವಣಿಗೆಯು ಉದ್ಯೋಗರಹಿತವಾಗಿದೆ.

2. **ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳ :** ಏರುತ್ತಿರುವ ಜನಸಂಖ್ಯೆಯು ಕಾರ್ಮಿಕರ ಸಂಖ್ಯೆಯನ್ನು ದಿನೇ ದಿನೇ ಅಧಿಕಗೊಳಿಸುತ್ತಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅರೆ–ಉದ್ಯೋಗದ ಪರಿಸ್ಥಿತಿ ಇದ್ದರೆ, ನಗರ ಪ್ರದೇಶಗಳಲ್ಲಿ ಅದು ಮುಕ್ತ ರೂಪದಲ್ಲಿ ಗೋಚರಿಸುತ್ತಿದೆ.

3. **ಅಸಮಂಜಸ ತಂತ್ರಜ್ಞಾನ :** ಈಗಾಗಲೇ ತಿಳಿಸಿದ ಹಾಗೆ, ಕೃಷಿ ಹಾಗೂ ಉದ್ದಿಮೆಗಳಲ್ಲಿ ಬಳಸುತ್ತಿರುವ ತಂತ್ರಜ್ಞಾನವು ಬಂಡವಾಳ ಸಾಂದ್ರವಾಗಿದ್ದು ಭಾರತದ ಪರಿಸ್ಥಿತಿಗೆ ಅಸಮಂಜಸ ಎಂದು ಹೇಳಬಹುದು.

4. **ಕೃಷಿಯ ಮೇಲಿನ ಅವಲಂಬನೆ :** ಕೃಷಿಯು ಋತುಮಾನ ಆಧಾರಿತ ಚಟುವಟಿಕೆಯಾಗಿದ್ದು ಅದರಲ್ಲಿ ತೊಡಗಿಕೊಂಡವರಿಗೆ ವರ್ಷದ ಕೆಲವು ತಿಂಗಳುಗಳಿಗೆ ಮಾತ್ರ ಉದ್ಯೋಗ ಲಭ್ಯತೆ ಇರುತ್ತದೆ. ಆದ್ದರಿಂದ ಕೃಷಿಯ ಮೇಲಿನ ಅವಲಂಬನೆಯು ಅಧಿಕವಾಗಿದ್ದರಿಂದ ಭಾರತದಲ್ಲಿ ನಿರುದ್ಯೋಗವು ಅಧಿಕವಿದೆ.

5. **ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅವನತಿ :** ಭಾರತದಲ್ಲಿ ಸಾಕಷ್ಟು ಉದ್ಯೋಗ ಒದಗಿಸುತ್ತಿದ್ದ ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅವನತಿಯಿಂದಾಗಿಯೂ ನಿರುದ್ಯೋಗ ಅಧಿಕವಾಗಿದೆ.

©KTBS Not to be re published

6. **ಕಾರ್ಮಿಕರ ಕಡಿಮೆ ಚಲನಶೀಲತೆ :** ಕಾರ್ಮಿಕರ ಕೌಟುಂಬಿಕ ನಿಷ್ಠೆ, ಭಾಷೆ, ಧರ್ಮ, ಸಂಸ್ಕೃತಿಯಲ್ಲಿನ ಭಿನ್ನತೆಗಳು ಕಾರ್ಮಿಕರು ದೂರದ ಊರುಗಳಿಗೆ ವಲಸೆ ಹೋಗುವುದನ್ನು ನಿರ್ಬಂಧಿಸುತ್ತವೆ. ಈ ಕಾರಣದಿಂದಾಗಿಯೂ ಸಹ ಭಾರತದಲ್ಲಿ ನಿರುದ್ಯೋಗದ ಪ್ರಮಾಣ ಅಧಿಕವಿದೆ.

**ಭಾರತದಲ್ಲಿ ಉದ್ಯೋಗ ನಿರ್ಮಾಣದ ಕಾರ್ಯಕ್ರಮಗಳು**

ದೇಶದಲ್ಲಿ ಅನುಷ್ಠಾನಗೊಳಿಸಿದ ಪ್ರತಿಯೊಂದು ಪಂಚವಾರ್ಷಿಕ ಯೋಜನೆಯು ನಿರುದ್ಯೋಗವನ್ನು ಕಡಿಮೆ ಮಾಡುವ ನಿರ್ದಿಷ್ಟ ಗುರಿಯನ್ನು ಹೊಂದಿದ್ದವು. ಅಲ್ಲದೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಉದ್ಯೋಗ ಸೃಷ್ಟಿಸಲು ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿವೆ. ಅವು ಜನರಿಗೆ ಸ್ವಂತ ಉದ್ದಿಮೆ ಪ್ರಾರಂಭಿಸಿ ಸ್ವ-ಉದ್ಯೋಗ ಹೊಂದಲು ಮತ್ತು ಕೌಶಲ್ಯರಹಿತ ಕಾರ್ಮಿಕರಿಗೆ ಕೂಲಿಯಾಧಾರಿತ ಉದ್ಯೋಗ ದೊರಕಿಸುವ ಮಹದಾಸೆ ಹೊಂದಿದ್ದವು.

ಆಯಾ ಕಾಲದ ಮತ್ತು ಪರಿಸ್ಥಿತಿಯನ್ನಾಧರಿಸಿ, ಸರ್ಕಾರಗಳು ಹಲವು ರೀತಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸಿವೆ. ಈ ಕೆಳಗಿನವು ಅಂಥವುಗಳಲ್ಲಿ ಪ್ರಮುಖವಾದುವೆಂದರೆ –

**ಗ್ರಾಮೀಣ ಪ್ರದೇಶ :**

1977 : ಕೂಲಿಗಾಗಿ ಕಾಳು ಯೋಜನೆ

1979 : ಗ್ರಾಮೀಣ ಯುವಕರಿಗೆ ಸ್ವ-ಉದ್ಯೋಗಕ್ಕಾಗಿ ತರಬೇತಿ ಯೋಜನೆ

1980 : ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ

1980 : ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ

1983 : ಗ್ರಾಮೀಣ ಭೂರಹಿತರಿಗೆ ಉದ್ಯೋಗ ಖಾತ್ರಿ ಯೋಜನೆ

1989 : ಜವಾಹರ ರೋಜಗಾರ್ ಯೋಜನೆ

1993 : ಉದ್ಯೋಗ ಭರವಸೆ ಯೋಜನೆ

1999 : ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ ಯೋಜನೆ

2004 : ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆ

2006 : ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

**ನಗರ ಪ್ರದೇಶ :**

1989 : ನೆಹರು ರೋಜಗಾರ್ ಯೋಜನೆ

1990 : ನಗರ ಕೂಲಿ ಉದ್ಯೋಗ ಯೋಜನೆ

1993 : ಪ್ರಧಾನ ಮಂತ್ರಿ ರೋಜಗಾರ್ ಯೋಜನೆ

1997 : ಸ್ವರ್ಣ ಜಯಂತಿ ಶಹರಿ ರೋಜಗಾರ ಯೋಜನೆ

©KTBS Not to be re published

## ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಆಗಸ್ಟ್ 25, 2005ರಂದು ಕಾಯ್ದೆಯಾಗಿ ಪಾಸು ಮಾಡಿದ್ದರೂ ಅದು ಜಾರಿಯಾಗಿದ್ದು ಮಾತ್ರ 2–2–2006ರಂದು. ಈ ಕಾಯ್ದೆಯು ಗ್ರಾಮೀಣ ಪ್ರದೇಶದ ಯಾವುದೇ ಕುಟುಂಬದ ಒಬ್ಬ ವಯಸ್ಕ ಕಾರ್ಮಿಕನಿಗೆ ಪ್ರತಿವರ್ಷ ಒಂದು ನೂರು ದಿನಗಳ ಕೌಶಲ್ಯರಹಿತ ಉದ್ಯೋಗ ಖಾತ್ರಿಯನ್ನು ಕನಿಷ್ಠ ಕೂಲಿದರದಲ್ಲಿ ನೀಡುವ ಸಾಂವಿಧಾನಿಕ ಖಾತ್ರಿ ಒದಗಿಸುತ್ತದೆ. ಒಂದು ವೇಳೆ ಉದ್ಯೋಗ ನೀಡುವಲ್ಲಿ ಸರ್ಕಾರ ವಿಫಲವಾದರೆ, ಆ ವ್ಯಕ್ತಿಗೆ ನಿರುದ್ಯೋಗ ಭತ್ಯೆ ನೀಡುವ ನಿಯಮವನ್ನು ಈ ಯೋಜನೆ ಒಳಗೊಂಡಿದೆ. ನರೇಗ ಯೋಜನೆಯು ನೂರು ಪ್ರತಿಶತ ನಗರ ಜನಸಂಖ್ಯೆ ಇರುವ ಜಿಲ್ಲೆಗಳನ್ನು ಹೊರತು ಪಡಿಸಿ ಭಾರತದ ಎಲ್ಲ ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ.

ಅನ್ವಯಿಕ ಆರ್ಥಿಕ ಸಂಶೋಧನೆಯ ರಾಷ್ಟ್ರೀಯ ಪರಿಷತ್ತಿನ (NCAER) ಒಂದು ವರದಿಯ ಪ್ರಕಾರ ಎಮ್‌ಜಿನರೇಗವು ವಿಶ್ವದ ಅತ್ಯಂತ ಬೃಹತ್ತಾದ ಬಡತನ ನಿರ್ಮೂಲನಾ ಕಾರ್ಯಕ್ರಮವಾಗಿದ್ದು, ಬಡತನ ನಿರ್ಮೂಲನೆಯಲ್ಲಿ ಮತ್ತು ಮಹಿಳೆಯರ ಸಬಲೀಕರಣದಲ್ಲಿ ಯಶಸ್ಸನ್ನು ಸಾಧಿಸಿದೆ. ಸದರಿ ಕಾರ್ಯಕ್ರಮದ ಪರಿಣಾಮಗಳೆಂದರೆ: ಪ್ರಥಮ ಬಾರಿಗೆ ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ಕೂಲಿ ನೀಡಲಾಗಿದ್ದು, ಸದರಿ ಯೋಜನೆಯ ಪ್ರಯೋಜನ ಪಡೆದವರಲ್ಲಿ ಪುರುಷರಿಗಿಂತ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದಾರೆ. ಮಹಿಳೆಯರ ಭಾಗವಹಿಸುವಿಕೆ ಅಧಿಕವಾದಂತೆ ಕುಟುಂಬದ ಆದಾಯ ವೃದ್ಧಿಯಾಗಿದೆ. ಯೋಜನೆಯ ದೆಸೆಯಿಂದಾಗಿ ಜನರು ಬ್ಯಾಂಕ್ ಸೇವೆ ಪಡೆಯುವ ಪ್ರಮಾಣವೂ ಹೆಚ್ಚಿದೆ. ಆದರೆ ಹಿಂದಿನ ಉದ್ಯೋಗ ಕಾರ್ಯಕ್ರಮಗಳಂತೆಯೇ ಈ ಯೋಜನೆಯು ಸಹ ಕಳಪೆಯಾಗಿ ಜಾರಿಗೊಂಡಿದೆಯಲ್ಲದೇ ಉಸ್ತುವಾರಿ ಸಹ ಸೂಕ್ತವಾಗಿಲ್ಲ. ಹೀಗಾಗಿ ಈ ಯೋಜನೆಯ ಸಹ ನಿರೀಕ್ಷಿತ ಪ್ರಮಾಣದಲ್ಲಿ ಫಲಿತಾಂಶ ನೀಡಿಲ್ಲ.

**ಮಹಿಳಾ ಕಾರ್ಮಿಕರ ಸ್ಥಿತಿಗತಿ :**

ಭಾರತದಲ್ಲಿ ಮಹಿಳೆಯರ ಉದ್ಯೋಗಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಲಕ್ಷಣಗಳನ್ನು ಗಮನಿಸಬೇಕು:

1. **ಮಹಿಳಾ ಕೆಲಸದ ಅಲ್ಪತೆ :** ಭಾರತದಲ್ಲಿ ಮಹಿಳಾ ಕಾರ್ಮಿಕರ ಪ್ರಮಾಣ ಇಳಿಕೆಯಾಗುತ್ತಿದ್ದು, ನಗರ ಪ್ರದೇಶಗಳಲ್ಲಿ ಶೇ.31ರಷ್ಟು ಮತ್ತು ನಗರ ಪ್ರದೇಶಗಳಲ್ಲಿ ಶೇ. 20ರಷ್ಟು ಕಾರ್ಮಿಕರ ಪ್ರಮಾಣವಿದೆ. 1990ರಲ್ಲಿ ಸುಮಾರು ಶೇ.40ರಷ್ಟಿದ್ದುದು, 2011–12ರ ವೇಳೆಗೆ ಶೇ.22.5ಕ್ಕೆ ಇಳಿಕೆಯಾಗಿದೆ.

2. **ಉದ್ಯೋಗಕ್ಕೆ ಅಡೆತಡೆಗಳು:** ಮಹಿಳೆಯರು ಉದ್ಯೋಗ ಅರಸುವಲ್ಲಿ ಹಲವಾರು ಅಡೆತಡೆಗಳಿದ್ದು, ಉದ್ಯೋಗದ ಆಯ್ಕೆ, ಕೆಲಸದ ಪರಿಸ್ಥಿತಿಗಳು, ಕೆಲಸದ ಭದ್ರತೆ, ವೇತನ ತಾರತಮ್ಯ, ಮನೆ ಹಾಗೂ ಕೆಲಸದ ಬಾಧ್ಯತೆಗಳಲ್ಲಿ ಸಮತೋಲನ ಸಾಧಿಸುವುದು, ಮುಂತಾದ ಸಮಸ್ಯೆಗಳು ಮಹಿಳೆಯರು ಉದ್ಯೋಗ ಮಾಡುವುದನ್ನು ಕಠಿಣಗೊಳಿಸುತ್ತವೆ.

3. **ಮಹಿಳೆಯರ ಆರ್ಥಿಕ ಅವಲಂಬನೆ:** 2004–05ನೇ ಸಾಲಿನಲ್ಲಿ ಶೇ.85ರಷ್ಟು ಮಹಿಳೆಯರು ಆರ್ಥಿಕವಾಗಿ ಪುರುಷರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿದ್ದರು ಮತ್ತು ಆ ಪ್ರಮಾಣ ಕಾಲ ಕಳೆದಂತೆ ಏರಿಕೆಯಾಗಿ ಮಹಿಳೆಯರ ಉದ್ಯೋಗ ರಾಹಿತ್ಯದ ಸ್ಥಿತಿಯನ್ನು ಬಿಂಬಿಸುತ್ತದೆ.

4. **ಅನಿಯಮಿತ ಅಥವಾ ಕ್ಯಾಶುಯೆಲ್ ಉದ್ಯೋಗ:** ಬಹಳಷ್ಟು ಮಹಿಳಾ ಕಾರ್ಮಿಕರು ಪ್ರಾಥಮಿಕ ವಲಯದಲ್ಲಿ ಕೆಲಸ ಮಾಡುತ್ತಲಿದ್ದು (63%, ಪುರುಷರಲ್ಲಿ ಅದು 44%) ಅಲ್ಲಿ ಉತ್ಪಾದಕತೆ ಕಡಿಮೆಯಿರುತ್ತದೆ. ಹಾಗೆಯೇ ಶೇ.13ರಷ್ಟು ಮಹಿಳೆಯರು ನಿಯಮಿತ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದರೆ, ಪುರುಷರದ್ದು ಶೇ.20ರಷ್ಟಿರುತ್ತದೆ. ನಗರ ಪ್ರದೇಶಗಳಲ್ಲಿ ಮಹಿಳೆಯರು ಮನೆಕೆಲಸದ ಉದ್ಯೋಗ ಮಾಡುತ್ತಲಿದ್ದು ಅವರು ತುಂಬಾ ನಿಕೃಷ್ಟ ಸ್ಥಿತಿಯಲ್ಲಿದ್ದಾರೆ.

Not to be re published ©KTBS

ಶಿಕ್ಷಣದ ಜೊತೆಗೆ ಸಾಮಾಜಿಕ ಸೇವೆಗಳ ಮೇಲೆ ಅಧಿಕ ವೆಚ್ಚ ಮಾಡುವುದರಿಂದ ಮಹಿಳೆಯರ ಕಾರ್ಮಿಕರ ಪಾಲುದಾರಿಕೆಯನ್ನು ಹೆಚ್ಚಿಸಬಲ್ಲುದು. ಹಾಗೆಯೇ, ಅತ್ಯುನ್ನತ ಹುದ್ದೆಗಳಲ್ಲಿ (ಐಎಎಸ್, ಐಪಿಎಸ್, ಕೆಎಎಸ್, ಮುಂತಾದವು) ಅಲ್ಲದೇ, ವಿಧಾನ ಸಭೆಗಳಲ್ಲಿ, ವಿಧಾನ ಪರಿಷತ್ತುಗಳಲ್ಲಿ ಮತ್ತು ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸುವುದರಿಂದ ಅವರ ಒಟ್ಟಾರೆ ಕೆಲಸದ ಘನತೆಯನ್ನು ಹೆಚ್ಚಿಸಬಹುದಾಗಿದೆ.

## ಅಭ್ಯಾಸಗಳು

**I. ಕೆಳಗೆ ನೀಡಿರುವ ವಾಕ್ಯಗಳಲ್ಲಿ ಸೂಕ್ತವಾದ ಶಬ್ದವನ್ನು ತುಂಬಿರಿ.**

1. ಉತ್ಪಾದನೆಯಲ್ಲಿ ಶ್ರಮವು __________ ಉತ್ಪಾದನಾಂಗವಾಗಿದೆ.
2. ಕೆಲಸ ಮಾಡುವ ವಯೋಮಾನವು _________ ವರ್ಷವಾಗಿದೆ.
3. ಭಾರತದ ಒಟ್ಟು ಶ್ರಮಶಕ್ತಿಯಲ್ಲಿ ಮಹಿಳಾ ಶ್ರಮಶಕ್ತಿಯ ಪಾಲು _______ ಆಗಿರುತ್ತದೆ.
4. ಆರ್ಥಿಕ ಅಭಿವೃದ್ಧಿಯಾದಂತೆ ________ ವಲಯದಲ್ಲಿ ಕಾರ್ಮಿಕರ ಪಾಲು ಇಳಿಕೆಯಾಗುತ್ತದೆ.
5. ಎಮ್‌ಜಿನರೇಗ ಕಾನೂನನ್ನು ಪಾಸು ಮಾಡಿದ ವರ್ಷವು __________.

**II. ಈ ಕೆಳಗಿನವುಗಳ ಕುರಿತು ಸಮೂಹ ಚರ್ಚೆ ಮಾಡಿ ಉತ್ತರಿಸಿ.**

1. ಶ್ರಮದ ಅರ್ಥವೇನು?
2. ಅಸಂಘಟಿತ ವಲಯವೆಂದರೇನು?
3. ನಿರುದ್ಯೋಗವನ್ನು ವ್ಯಾಖ್ಯಾನಿಸಿ.
4. ನಿರುದ್ಯೋಗದ ದರವನ್ನು ಹೇಗೆ ಅಳೆಯಲಾಗುತ್ತದೆ?
5. ಭಾರತದಲ್ಲಿ ನಿರುದ್ಯೋಗದ ಸಮಸ್ಯೆಗಳನ್ನು ವಿವರಿಸಿ.
6. ಭಾರತದ ಮಹಿಳಾ ಉದ್ಯೋಗದ ಲಕ್ಷಣಗಳನ್ನು ತಿಳಿಸಿ.
7. ಎಮ್‌ಜಿನರೇಗ ಯೋಜನೆಯ ಉದ್ದೇಶಗಳನ್ನು ಮತ್ತು ಕಾರ್ಯಾಚರಣೆಯ ಕುರಿತು ಬರೆಯಿರಿ.

**III. ಯೋಜಿತ ಕಾರ್ಯ**

1. ನಿರುದ್ಯೋಗಿ ಜನರ ಸಂದರ್ಶನ ಮಾಡಿ ನಿರುದ್ಯೋಗದ ಕಾರಣ ಹಾಗೂ ವಿಧಗಳನ್ನು ತಿಳಿಯಲು ಪ್ರಯತ್ನಿಸಿ.
2. ಶ್ರಮಶಕ್ತಿಯ ಲಿಂಗ ಲಕ್ಷಣಗಳ ಕುರಿತು ಒಂದು ವರದಿ ತಯಾರಿಸಿ.

**IV. ಚಟುವಟಿಕೆ.**

1. ಒಂದು ಉದ್ದಿಮೆಗೆ ಭೇಟಿ ನೀಡಿ ಅಲ್ಲಿನ ಕೆಲಸದ ಸ್ಥಿತಿಗಳು ಮತ್ತು ಶ್ರಮ ವಿಭಜನೆಯ ಕುರಿತಾದ ವರದಿ ತಯಾರಿಸಿ.

◈ ◈ ◈

Not to be republished ©KTBS

# ಅಧ್ಯಾಯ – 2

# ಹಣಕಾಸಿನ ನಿರ್ವಹಣೆ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- *ವ್ಯವಹಾರ ಸಂಸ್ಥೆಗಳಲ್ಲಿ ಹಣಕಾಸಿನ ಅರ್ಥ.*
- *ವ್ಯವಹಾರ ಸಂಸ್ಥೆಗಳಲ್ಲಿ ಹಣಕಾಸಿನ ಪಾತ್ರ ಮತ್ತು ಪ್ರಾಮುಖ್ಯತೆ.*
- *ವ್ಯವಹಾರ ಸಂಸ್ಥೆಗಳಲ್ಲಿ ಹಣಕಾಸಿನ ಪೂರೈಕೆ, ಅಲ್ಪಾವಧಿ ಹಾಗೂ ದೀರ್ಘಾವಧಿ ಬೇಡಿಕೆ.*
- *ವ್ಯವಹಾರ ಸಂಸ್ಥೆಗಳಿಗೆ ಹಣಕಾಸನ್ನು ಪೂರೈಸುವ ಸಂಸ್ಥೆಗಳು, ಬಂಡವಾಳ ಮಾರುಕಟ್ಟೆ, ಷೇರು ಮಾರುಕಟ್ಟೆ.*

**ವ್ಯವಹಾರ ಸಂಸ್ಥೆಗಳಲ್ಲಿ ಹಣಕಾಸಿನ ಅರ್ಥ :**

ಹಣಕಾಸು ಎಂದರೆ ವ್ಯವಹಾರ ಸಂಸ್ಥೆಗಳ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಹಣದ ಸಂಗ್ರಹಣೆ ಮತ್ತು ಅದನ್ನು ಲಾಭದಾಯಕ ಬಳಕೆಗಾಗಿ ಉಪಯೋಗಿಸುವುದು ಎಂದು ಅರ್ಥ

**ಗುಟಮನ್** ಮತ್ತು **ಡಾಗಲ್**‌ರ ಪ್ರಕಾರ, "ಒಂದು ವ್ಯವಹಾರ ಸಂಸ್ಥೆಯ ಹಣಕಾಸಿನ ಚಟುವಟಿಕೆಯು ಯೋಜನೆ, ಸಂಗ್ರಹಣೆ, ನಿಯಂತ್ರಣ ಮತ್ತು ನಿಧಿಗಳ ಕಾರ್ಯಾಚರಣೆಗಳನ್ನು ಹೊಂದಿರುತ್ತದೆ".

ಮೇಲಿನ ಅರ್ಥ ಮತ್ತು ವ್ಯಾಖ್ಯೆಯಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ವ್ಯವಹಾರ ಸಂಸ್ಥೆಗಳ ಹಣಕಾಸಿನ ಪ್ರಕ್ರಿಯೆ ಎಂದರೆ ನಿಧಿಗಳ ಸಂಗ್ರಹಣೆ, ಹಂಚಿಕೆ ಮತ್ತು ಅದನ್ನು ಸಮರ್ಪಕವಾಗಿ ನಿಭಾಯಿಸುವುದೇ ಆಗಿದೆ.

**ವ್ಯವಹಾರ ಸಂಸ್ಥೆಗಳಲ್ಲಿ ಹಣಕಾಸಿನ ಪಾತ್ರ ಮತ್ತು ಪ್ರಾಮುಖ್ಯತೆ :**

1. **ಹಣಕಾಸು:** ವ್ಯವಹಾರ ಸಂಸ್ಥೆಗಳ ಜೀವರಕ್ತವಾಗಿದೆ. ಹಣಕಾಸು ಇಲ್ಲದೆ ಯಾವುದೇ ವ್ಯವಹಾರ ಚಟುವಟಿಕೆಗಳು ಸಾಧ್ಯವಿಲ್ಲ.
2. **ಹಣಕಾಸು:** ಉತ್ಪಾದನೆಯ ಕಾರ್ಯದಲ್ಲಿ ಮತ್ತು ವಸ್ತುಗಳನ್ನು ಹಾಗೂ ಸೇವೆಗಳನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಬೇಕಾಗುವ ಸಾಧನಗಳನ್ನು ಪೂರೈಸುತ್ತದೆ.
3. **ಹಣಕಾಸು:** ವ್ಯವಹಾರ ಸಂಸ್ಥೆಗಳ ಹಲವಾರು ಅಂಗಗಳು ತಮ್ಮ ಗುರಿಗಳನ್ನು ಸಾಧಿಸುವುದು ಮತ್ತು ವ್ಯವಹಾರ ನಡೆಸಿಕೊಂಡು ಹೋಗುವ ದಿಕ್ಕಿನಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
4. **ಹಣಕಾಸು:** ಬಂಡವಾಳವನ್ನು ತೊಡಗಿಸುವುದರಲ್ಲಿ ಹಾಗೂ ವಿನಿಯೋಗ ಮಾಡುವ ದಿಕ್ಕಿನಲ್ಲಿ ಒಂದು ನಿಯಂತ್ರಿತ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತದೆ.
5. **ಹಣಕಾಸು:** ಸಂಸ್ಥೆಯನ್ನು ಆಧುನಿಕತೆಗೊಳಿಸುವುದು. ವೈವಿಧ್ಯತೆಮಾಡುವುದು ವಿಸ್ತರಿಸುವುದು ಹಾಗೂ ವೃದ್ಧಿಗೊಳಿಸುವುದರಲ್ಲಿ ಸಹಾಯ ಮಾಡುತ್ತದೆ.
6. **ಹಣಕಾಸು:** ಸಂಸ್ಥೆಯು ಕೈಗೊಳ್ಳುವ ಹೊಸ ಪರಿಶೋಧನೆಗಳು, ಮಾರುಕಟ್ಟೆ ಸಮೀಕ್ಷೆ, ಜಾಹಿರಾತು ಹಾಗೂ ಸಂಸ್ಥೆಯ ಬಗ್ಗೆ ಹೆಚ್ಚು ಪ್ರಚಾರ ಪಡಿಸುವಲ್ಲಿ ಅವಶ್ಯಕವಾಗಿದೆ.
7. ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹಣಕಾಸಿನ ಅವಶ್ಯಕತೆ ಹೆಚ್ಚಾಗಿದೆ.
8. ಹಣಕಾಸಿನ ಸ್ಥಿರತೆ ಒಂದು ಸಂಸ್ಥೆಯ ಯೋಗ್ಯತೆಯನ್ನು ಹೆಚ್ಚಿಸುತ್ತದೆ.

Not to be republished ©KTBS

**ವ್ಯವಹಾರ ಸಂಸ್ಥೆಗಳಿಗೆ ಹಣಕಾಸಿನ ಪೂರೈಕೆ**

ವ್ಯವಹಾರ ಸಂಸ್ಥೆಗಳು ತಾವು ಪಡೆದ ಹಣವನ್ನು ಹಿಂದಿರುಗಿಸುವಲ್ಲಿ ಸಾಮಾನ್ಯವಾಗಿ ಎರಡು ಅವಧಿಗಳ ಹಣಕಾಸು ಬೇಕಾಗುತ್ತದೆ. ಯಾವುವೆಂದರೆ (1) ಅಲ್ಪಾವಧಿ ಹಣಕಾಸು (2) ದೀರ್ಘಾವಧಿ ಹಣಕಾಸು

**ಅಲ್ಪಾವಧಿ ಹಣಕಾಸು :** ದಿನವಹಿ ಕಾರ್ಯವಹಿವಾಟುಗಳಿಗಾಗಿ ವ್ಯವಹಾರ ಸಂಸ್ಥೆಗಳಿಗೆ ಬೇಕಾಗುವ ಹಣದ ಅವಶ್ಯಕತೆಯನ್ನು ಅಲ್ಪಾವಧಿ ಹಣಕಾಸು ಎನ್ನುತ್ತೇವೆ.

ಸಾಮಾನ್ಯವಾಗಿ ಈ ಅವಧಿಯು ಒಂದು ವರ್ಷಕ್ಕೆ ಸೀಮಿತವಾಗಿರುತ್ತದೆ. ಅಲ್ಪಾವಧಿ ಹಣಕಾಸಿನ ಅವಶ್ಯಕತೆ ಈ ಕೆಳಗಿನ ಚಟುವಟಿಕೆಗಳಿಗೆ ಬೇಕಾಗುತ್ತದೆ. ಇದು ಸಂಸ್ಥೆಯ ಕಾರ್ಯಶೀಲ ಬಂಡವಾಳಕ್ಕಾಗಿ (Working capital) ಅವಶ್ಯಕವಾಗಿದೆ. ಅಂದರೆ ಕಚ್ಚಾ ಪದಾರ್ಥಗಳನ್ನು ಕೊಳ್ಳಲು, ವೇತನ ಮತ್ತು ಕೂಲಿಗಳನ್ನು ಕೊಡಲು, ಮಾರುಕಟ್ಟೆಗೆ ತಗಲುವ ವೆಚ್ಚಗಳನ್ನು ಭರಿಸಲು ಹಾಗೂ ಆಡಳಿತಾತ್ಮಕ ವೆಚ್ಚಗಳಿಗಾಗಿ ಹಣಕಾಸು ಬೇಕಾಗುತ್ತದೆ.

ಸಂಸ್ಥೆಗಳಿಗೆ ವಸ್ತುಗಳನ್ನು ಮಾರಾಟ ಮಾಡಿದಾಗಿನಿಂದ ಅವುಗಳ ಬೆಲೆ ಬರುವವರೆಗೂ ಕೆಲವು ಸಮಯ ತೆಗೆದುಕೊಳ್ಳುತ್ತದೆ. ಈ ಅವಧಿಯಲ್ಲಿ ತಗಲುವ ವೆಚ್ಚಗಳನ್ನು ಭರಿಸಲು ಅಲ್ಪಾವಧಿ ಹಣಕಾಸಿನ ಅವಶ್ಯಕತೆ ಇರುತ್ತದೆ.

**ಅಲ್ಪಾವಧಿ ಹಣಕಾಸಿನ ಮೂಲಗಳು:** ವ್ಯವಹಾರ ಸಂಸ್ಥೆಗಳು ಅಲ್ಪಾವಧಿಗಾಗಿ ಹಣವನ್ನು ಅನೇಕ ಮೂಲಗಳಿಂದ ಸಂಗ್ರಹಿಸುತ್ತವೆ. ಅವುಗಳೆಂದರೆ :

**ಎ) ವ್ಯಾಪಾರ ಸಾಲ:** ವ್ಯಾಪಾರ ಸಾಲವೆಂದರೆ ಸಂಸ್ಥೆಗಳು ಸರಕುಗಳನ್ನು ಪೂರೈಕೆ ಮಾಡುವವರಿಂದ ಪಡೆಯುವ ಸಾಲ. ಸಾಮಾನ್ಯವಾಗಿ ವ್ಯವಹಾರ ಸಂಸ್ಥೆಗಳು ಸರಕುಗಳನ್ನು ತೆಗೆದುಕೊಂಡು ಎರಡು ಮೂರು ತಿಂಗಳಲ್ಲಿ ಹಣವನ್ನು ಪಾವತಿ ಮಾಡುತ್ತಾರೆ.

**ಬಿ) ಬ್ಯಾಂಕು ಉದ್ದರಿ ಅಥವಾ ಬ್ಯಾಂಕುಸಾಲ:** ಸಾಮಾನ್ಯವಾಗಿ ವ್ಯವಹಾರ ಬ್ಯಾಂಕುಗಳಿಂದ ಮೂರು ತಿಂಗಳಿಂದ ಒಂದು ವರ್ಷದವರೆಗೂ ಮರುಪಾವತಿ ಮಾಡಲು ಸಾಲಪಡೆಯುತ್ತಾರೆ. ವ್ಯವಹಾರ ಸಂಸ್ಥೆಗಳಿಗೆ ಬ್ಯಾಂಕುಗಳು "ಓವರ್‌ಡ್ರಾಫ್ಟ್" ಮೂಲಕ ಕೂಡ ಹಣವನ್ನು ಒದಗಿಸುತ್ತವೆ.

ಸಿ) **ಗ್ರಾಹಕ ಮುಂಗಡಗಳು :** ಕೆಲವು ಸಂದರ್ಭಗಳಲ್ಲಿ ವ್ಯವಹಾರ ಸಂಸ್ಥೆಗಳು ತಾವು ಸರಕುಗಳನ್ನು ಮಾರಾಟ ಮಾಡುವ ಗ್ರಾಹಕರಿಂದ ಮುಂಗಡವಾಗಿ ಹಣವನ್ನು ಪಡೆಯುತ್ತಾರೆ.

ಡಿ) **ಅಲ್ಪಾವಧಿ ಸಾರ್ವಜನಿಕ ಠೇವಣಿಗಳು ಅಥವಾ ಕಂತುಗಳ ಮೂಲಕ ಸಾಲ:** ಇವುಗಳ ಪ್ರಕಾರ ವ್ಯವಹಾರ ಸಂಸ್ಥೆಗಳು ಕೆಲವು ಸಂದರ್ಭಗಳಲ್ಲಿ ಸಾರ್ವಜನಿಕರಿಂದ ಠೇವಣಿಗಳನ್ನು ಸಂಗ್ರಹಿಸುತ್ತವೆ ಅಥವ ಸ್ಥಳೀಯ ಲೇವಾದೇವಿಗಾರರಿಂದ ಕಂತುಗಳ ಮೂಲಕ ಹಣವಾಪಸ್ಸು ಮಾಡುವ ರೀತಿಯಲ್ಲಿ ಹಣವನ್ನು ಸಂಗ್ರಹಿಸುತ್ತವೆ.

ಇ) **ಸ್ಥಳೀಯ ಲೇವಾದೇವಿಗಾರರಿಂದ (ಸಾಹುಕಾರರು) ಸಾಲಪಡೆಯುವುದು:** ಕೆಲವು ಅತಿ ಜರೂರು ಸಂದರ್ಭಗಳಲ್ಲಿ ವ್ಯವಹಾರ ಸಂಸ್ಥೆಗಳು ಸ್ಥಳೀಯ ಲೇವಾದೇವಿಗಾರರಿಂದ ಅಲ್ಪಾವಧಿಗೆ ಸಾಲವನ್ನು ಪಡೆಯುತ್ತವೆ.

**ದೀರ್ಘಾವಧಿ ಹಣಕಾಸು:** ಸಾಮಾನ್ಯವಾಗಿ ಈ ಅವಧಿಯ ಸಾಲದ ಮರುಪಾವತಿ ಹೆಚ್ಚು ಸಮಯಕ್ಕೆ ಅಂದರೆ ಒಂದು ವರ್ಷಕ್ಕೆ ಮೀರಿರುತ್ತದೆ.

ಈ ಸಾಲವು ಅಭಿವೃದ್ಧಿ ಕಾರ್ಯಗಳಾದ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸುವುದು, ಆಧುನಿಕ ಉತ್ಪಾದನಾ

©KTBS Not to be re published

ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವುದು ಮುಂತಾದುವುಗಳಿಗೆ ಅನ್ವಯವಾಗುತ್ತದೆ. ಈ ರೀತಿಯ ಸಾಲವು ಸ್ಥಿರ ಬಂಡವಾಳದ ಕೆಲಸಗಳನ್ನು ಮಾಡುವುದಕ್ಕೆ ಬೇಕಾಗುತ್ತದೆ. ಉದಾ : ಸ್ಥಿರ ಆಸ್ತಿಗಳನ್ನು ಹೊಂದುವುದು ಮತ್ತು ಪ್ರಸ್ತುತ ಉತ್ಪಾದನಾ ಕಾರ್ಯಗಳನ್ನು ಆಧುನಿಕ ಕಾರ್ಯಗಳಿಗೆ ವಿಸ್ತರಿಸುವುದು ಮುಂತಾದುವು.

ದೀರ್ಘಾವಧಿ ಸಾಲವು ಅಲ್ಪಾವಧಿ ಸಾಲಕ್ಕಿಂತ ದುಭಾರಿಯಾಗಿರುತ್ತದೆ ಅಂದರೆ ಬಡ್ಡಿದರ ಹೆಚ್ಚಾಗಿರುತ್ತದೆ. ಈ ಸಾಲವನ್ನು ಷೇರುಗಳನ್ನು ಕೊಡುವುದರ ಮೂಲಕ ಅಥವಾ ವಂತಿಗೆಗಳ ಮೂಲಕ ಪಡೆಯುತ್ತವೆ ಮತ್ತು ಹಣಕಾಸಿನ ಸಂಸ್ಥೆಗಳಿಂದಲೂ ಪಡೆಯುತ್ತವೆ.

ಎ) **ಷೇರುಗಳನ್ನು ಕೊಡುವ ಮೂಲಕ ಸಂಗ್ರಹ :** ಕೂಡು ಬಂಡವಾಳ ಸಂಸ್ಥೆಗಳು ಬಂಡವಾಳವನ್ನು ಸಣ್ಣ ಸಣ್ಣ ಕನಿಷ್ಠ ಮೊತ್ತದ ಮೂಲಕ ಸಂಗ್ರಹಿಸುತ್ತವೆ. ಕೂಡು ಬಂಡವಾಳ ಸಂಸ್ಥೆಗಳನ್ನು ಪ್ರಾರಂಭಿಸುವಾಗ ಪ್ರವರ್ತಕರು ಷೇರುಗಳನ್ನು ಸಾರ್ವಜನಿಕರಿಗೆ ಹಂಚುತ್ತಾರೆ ಹಾಗೂ ಈ ಸಂಸ್ಥೆಗಳು ತಮಗೆ ಬಂಡವಾಳ ಹೆಚ್ಚಿಸಿಕೊಳ್ಳಬೇಕಾದ ಸಂದರ್ಭಗಳು ಬಂದಾಗಲೂ ಷೇರುಗಳನ್ನು ಸಾರ್ವಜನಿಕರಿಗೆ ಹಂಚುತ್ತವೆ.

ಬಿ) **ಸಾಲಪತ್ರಗಳನ್ನು ನೀಡುವ ಮೂಲಕ ಹಣಕಾಸಿನ ಸಂಗ್ರಹಣೆ :** ಕೂಡು ಬಂಡವಾಳ ಸಂಸ್ಥೆಗಳು ದೀರ್ಘಾವಧಿ ಸಾಲವನ್ನು ಸಂಗ್ರಹಿಸಲು ಸಾಲಪತ್ರಗಳನ್ನು ಸಾರ್ವಜನಿಕರಿಗೆ ನೀಡುವುದರ ಮೂಲಕ ಹಣವನ್ನು ಸಂಗ್ರಹಿಸಲು ಅವಕಾಶವಿದೆ. ಈ ಸಾಲಪತ್ರಗಳು (Debentures) ಸಂಸ್ಥೆಯ ಸಾಲಪತ್ರಗಳಾಗಿವೆ ಒಂದು ಸಂಸ್ಥೆಯು ತನ್ನ ಮೊಹರಿನ ಮೇಲೆ ಸಾರ್ವಜನಿಕರಿಗೆ ಸಾಲಪತ್ರಗಳನ್ನು ನೀಡಿ ಸಾಲವನ್ನು ಒಂದು ಅವಧಿಯ ನಂತರ ಮರುಪಾವತಿ ಮಾಡುವ ಕರಾರನ್ನು ಸಾಲಪತ್ರಗಳಲ್ಲಿ ತಿಳಿಸಿರುತ್ತವೆ. ಒಂದು ನಿರ್ಧಿಷ್ಟ ದರದ ಬಡ್ಡಿ ಹಾಗೂ ಸಾಲಪತ್ರವನ್ನು ಹೊಂದಿರುವವರಿಗೆ ಕೊಡಲು ಒಪ್ಪಿರುತ್ತವೆ, ಈ ಮೂಲಕ ಕೂಡ ವ್ಯವಹಾರ ಸಂಸ್ಥೆಗಳು ದೀರ್ಘಾವಧಿ ಸಾಲವನ್ನು ಸಾರ್ವಜನಿಕರಿಂದ ಸಂಗ್ರಹಿಸುತ್ತವೆ.

**ವ್ಯವಹಾರ ಸಂಸ್ಥೆಗಳಿಗೆ ಹಣಕಾಸನ್ನು ಪೂರೈಸುವ ಸಂಸ್ಥೆಗಳು**

**ಹಣಕಾಸಿನ ಸಂಸ್ಥೆಗಳು :** ಸಾಂಘಿಕ ಸಂಸ್ಥೆಗಳು ಮತ್ತು ಕೈಗಾರಿಕೆಗಳಿಗೆ ದೀರ್ಘಾವಧಿ ಸಾಲವನ್ನು ನೀಡಲು ಕೆಲವು ಹಣಕಾಸಿನ ಸಂಸ್ಥೆಗಳು ಸ್ಥಾಪಿತವಾಗಿವೆ. ಅವುಗಳೆಂದರೆ.

1. ಭಾರತೀಯ ಕೈಗಾರಿಕಾ ಹಣಕಾಸು ನಿಗಮ (IFCI)
2. ರಾಜ್ಯ ಹಣಕಾಸು ನಿಗಮಗಳು (SFC's)
3. ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (IBRD)
4. ಆಯಾತ ಮತ್ತು ನಿರ್ಯಾತ ಬ್ಯಾಂಕು ಅಥವ ಆಮದು ಮತ್ತು ರಫ್ತು ಬ್ಯಾಂಕು (EXIM Bank)
5. ವಾಣಿಜ್ಯ ಬ್ಯಾಂಕುಗಳು (Commercial Banks)
6. ಸಹಕಾರಿ ಬ್ಯಾಂಕುಗಳು. (Co-oprative Banks)

1. **ಭಾರತೀಯ ಕೈಗಾರಿಕಾ ಹಣಕಾಸು ನಿಗಮ (IFCI) :** ಈ ಸಂಸ್ಥೆಯು ಪಾರ್ಲಿಮೆಂಟಿನ ಕಾಯಿದೆಯ ಪ್ರಕಾರ ಕೈಗಾರಿಕೆಗಳಿಗೆ ದೀರ್ಘಾವಧಿ ಸಾಲಗಳನ್ನು ಕೊಡಲು 1948 ರಲ್ಲಿ ಸ್ಥಾಪಿತವಾಯಿತು. ಈ ನಿಗಮವು ಸಾರ್ವಜನಿಕ ನಿಯಮಿತ ಕಂಪನಿಗಳು, ಸಹಕಾರಿ ಸಂಘಗಳು ಮತ್ತು ರಾಜ್ಯ ಸರ್ಕಾರದ ಒಡೆತನದಲ್ಲಿನ ನಿಯಮಿತ ಕಂಪನಿಗಳಿಗೆ ಸಾಲವನ್ನು ಕೊಡುತ್ತದೆ.

2. **ರಾಜ್ಯ ಹಣಕಾಸು ನಿಗಮಗಳು (SFCs) :** ಭಾರತದ ಪಾರ್ಲಿಮೆಂಟು 1951ರಲ್ಲಿ ರಾಜ್ಯ ಸರ್ಕಾರಗಳು ತಮ್ಮ ರಾಜ್ಯಗಳಲ್ಲಿ ರಾಜ್ಯ ಹಣಕಾಸು ನಿಗಮಗಳನ್ನು ಸ್ಥಾಪಿಸಲು ಕಾಯಿದೆಯನ್ನು ಮಾಡಿತು. ಈ ಕಾಯಿದೆಯು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆ. ರಾಜ್ಯ

Not to be re published ©KTBS

ಹಣಕಾಸು ನಿಗಮಗಳು ತಮ್ಮ ರಾಜ್ಯಗಳಲ್ಲಿನ ಸಣ್ಣ ಪ್ರಮಾಣದ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸನ್ನು ಒದಗಿಸುತ್ತವೆ.

3. **ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (IDBI) :** ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳ ಕಾಯಿದೆ 1964 ರ ಪ್ರಕಾರ ಪ್ರಾರಂಭವಾಯಿತು. ಇದು 1976 ರ ತನಕ ಭಾರತೀಯ ರಿಜರ್ವ್ ಬ್ಯಾಂಕ್‌ನ ಒಡೆತನದಲ್ಲಿದ್ದು 1976 ರಲ್ಲಿ ಒಡೆತನವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲಾಯಿತು. ಈಗ ಇದು ಸ್ವಾ–ಯತ್ತ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ಈ ಬ್ಯಾಂಕು ಕಂಪನಿಗಳ ಷೇರುಗಳನ್ನು ಕೊಂಡುಕೊಳ್ಳುವುದರ ಮೂಲಕ ಕಂಪನಿಗಳಿಗೆ ದೀರ್ಘಾವಧಿ ಹಣಕಾಸಿನ ಅವಶ್ಯಕತೆಯನ್ನು ನೇರವಾಗಿ ನಿರ್ವಹಿಸುತ್ತದೆ. ಈ ಬ್ಯಾಂಕ್ ಭಾರತೀಯ ಕೈಗಾರಿಕಾ ಹಣಕಾಸು ನಿಗಮ ಮತ್ತು ರಾಜ್ಯ ಹಣಕಾಸು ನಿಗಮಗಳ ಷೇರುಗಳನ್ನು ಸಹ ಕೊಂಡುಕೊಳ್ಳುತ್ತದೆ ಹಾಗೂ ಈ ನಿಗಮಗಳಿಗೆ ಸಾಲವನ್ನು ಕೊಡುತ್ತದೆ.

4. **ಆಯಾತ ನಿರ್ಯಾತ ಬ್ಯಾಂಕು (EXIM BANK) :** ಇದು ಭಾರತದ ನಿರ್ಯಾತ (ರಫ್ತು) ಮತ್ತು ಆಯಾತ (ಆಮದು) ಬ್ಯಾಂಕಾಗಿದೆ. ಇದನ್ನು 1982 ರಲ್ಲಿ ಸ್ಥಾಪಿಸಲಾಯಿತು. ಇದು ಸರ್ಕಾರಿ ಒಡೆತನದ ಬ್ಯಾಂಕಾಗಿದೆ. ಇದು ಆಮದು ಮತ್ತು ರಫ್ತು ಮಾಡುವ ಸಂಸ್ಥೆಗಳಿಗೆ ಹಣಕಾಸನ್ನು ಒದಗಿಸುತ್ತದೆ.

ಈ ಮೇಲೆ ಹೇಳಿದ ಅನೇಕ ಹಣಕಾಸಿನ ಸಂಸ್ಥೆಗಳಲ್ಲದೆ ವ್ಯಾಪಾರ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಬ್ಯಾಂಕುಗಳಿಂದ ಕೂಡ ಹಣವನ್ನು ಸಾಲವಾಗಿ ಪಡೆಯುತ್ತವೆ. ಇದೇ ಅಲ್ಲದೆ ವ್ಯವಹಾರ ಸಂಸ್ಥೆಗಳಿಗೆ ದೀರ್ಘಕಾಲದ ಸಾರ್ವಜನಿಕ ಠೇವಣಿಗಳಿಂದ ಮತ್ತು ಸಾಹಸ ಬಂಡವಾಳದಿಂದ ಕೂಡ ಹಣಕಾಸಿನ ಸೌಲಭ್ಯಗಳು ಲಭಿಸುತ್ತವೆ.

**ದೀರ್ಘಕಾಲದ ಸಾರ್ವಜನಿಕ ಠೇವಣಿಗಳು:** ವ್ಯವಹಾರ ಸಂಸ್ಥೆಗಳು ತಮ್ಮ ದೀರ್ಘಾವದಿ ಹಣದ ಅವಶ್ಯಕತೆಗಳನ್ನು ಸಾರ್ವಜನಿಕರಿಂದ ದೀರ್ಘಕಾಲದ ಠೇವಣಿಗಳ ಮೂಲಕ ಕೂಡ ಸಂಗ್ರಹಿಸುತ್ತವೆ. ಈ ರೀತಿ ಠೇವಣಿಗಳನ್ನು ಪಡೆಯಲು ಹೆಚ್ಚು ನಿಯಮಾಚರಣೆಗಳಿಲ್ಲದೆ ಸುಲಭವಾಗಿ ಪಡೆಯಬಹುದು. ಸಂಸ್ಥೆಗಳು ಈ ರೀತಿಯ ಠೇವಣಿಗಳನ್ನು ಐದು ವರ್ಷಗಳ ಅವಧಿಗೆ ಸಂಗ್ರಹಿಸಬಹುದು. ಈ ಠೇವಣಿಗಳು ಸಾಮಾನ್ಯವಾಗಿ ಭದ್ರತೆ ಇಲ್ಲದೆ ಇರುವುದಾಗಿರುತ್ತವೆ. ಈ ಠೇವಣಿಗಳ ಮೇಲೆ ಶೇ.8 ರಿಂದ 10ರವರೆಗೆ ಬಡ್ಡಿಯನ್ನು ಕೊಡಬಹುದು. ಆದರೆ ಈ ಠೇವಣಿಗಳ ಒಟ್ಟು ಮೊತ್ತ ಸಂದಾಯವಾದ ಬಂಡವಾಳಕ್ಕಿಂತ ಶೇ 25 ರಷ್ಟನ್ನು ಮೀರುವಂತಿಲ್ಲ. ಈ ಸಾಲಗಳಿಂದ ಸಾರ್ವಜನಿಕರೂ ಸಹ ತಮ್ಮ ಹಣವನ್ನು ಠೇವಣಿಗಳಂತೆ ಇಟ್ಟು ಲಾಭ ಪಡೆಯಲು ಸಾಧ್ಯವಾಗುತ್ತದೆ.

**ಸಾಹಸ ಬಂಡವಾಳ (Venture capital):** ಸಾಹಸ ಬಂಡವಾಳವೆಂದರೆ ಹೊಸ ಮತ್ತು ಸಂಶೋಧನಾತ್ಮಕವಾದ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ವ್ಯವಹಾರ ಸಂಸ್ಥೆಗಳ ಹಣದ ಅವಶ್ಯಕತೆಯ ಮೂಲ ರೀತಿಯದ್ದಾಗಿದೆ. ಸಂಸ್ಥೆಗಳು ತಯಾರುಮಾಡುವ ಉತ್ಪನ್ನಗಳು ಹೆಚ್ಚು ನಷ್ಟಭಯದ ಅಪಾಯದಿಂದ ಕೂಡಿರುತ್ತವೆ. ಆದರೆ ಹೆಚ್ಚು ಪ್ರತಿಫಲ ನೀಡುತ್ತವೆ. ಈ ಸಾಹಸ ಬಂಡವಾಳ ಕಂಪನಿಗಳು ಬಂಡವಾಳವನ್ನು ಒದಗಿಸುವುದರ ಜೊತೆಗೆ ಕಂಪನಿಗಳ ತಾಂತ್ರಿಕ ಕೆಲಸಗಳಲ್ಲಿ ಕ್ರಿಯಾಶೀಲ ಆಸಕ್ತಿಯನ್ನು ತೋರಿಸುತ್ತವೆ.

**ಅನ್ಯೋನ್ಯ ನಿಧಿಗಳು (Mutual Funds):** ಭಾರತದಲ್ಲಿ ದೀರ್ಘಾವಧಿ ಸಾಲಗಳನ್ನು ಒದಗಿಸುವ ಸಂಸ್ಥೆಗಳಲ್ಲಿ ಅನ್ಯೋನ್ಯ ನಿಧಿಗಳು ಕೂಡ ಒಂದಾಗಿವೆ. ಇವು ಮೊದಲಿಗೆ 1964 ರಲ್ಲಿ ತಲೆ ಎತ್ತಿದವು. ಈಗ ಖಾಸಗಿರಂಗ ಮತ್ತು ಸಾರ್ವಜನಿಕ ರಂಗದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇವು ಸ್ಥಾಪಿಸಲ್ಪಟ್ಟಿವೆ. ಅನ್ಯೋನ್ಯ ನಿಧಿ ಎಂದರೆ ಸಾರ್ವಜನಿಕರ ಉಳಿತಾಯವನ್ನು ಒಟ್ಟು ಸೇರಿಸುವ ವೈವಿಧ್ಯಮಯ ಬಂಡವಾಳ ಪತ್ರಗಳು, ಇವು ಸರ್ಕಾರಿ ಬಂಡವಾಳ ಪತ್ರಗಳು, ಠೇವಣೆ ಪತ್ರಗಳು ಇತ್ಯಾದಿಗಳಲ್ಲಿ ಹೂಡಿಕೆ ಮಾಡುವ ಹಣಕಾಸಿನ ಮಾಧ್ಯಮವಾಗಿರುತ್ತದೆ. ಉದಾಹರಣೆಗಳೆಂದರೆ ಯೂನಿಟ್ ಟ್ರಸ್ಟ್ ಆಫ್ ಇಂಡಿಯ (UT I) SBI, ಮಾಗ್ನಮ್

©KTBS Not to be republished

ಈಕ್ವಿಟಿ ಫಂಡ್, ಜೀವವಿಮಾ ಬೆಳವಣಿಗೆ ಠೇವಣಿ, ಮಾರುಕಟ್ಟೆ ಯೋಜನೆ, ICICI ಪ್ರುಡೆನ್ಷಿಯಲ್ ಫಂಡ್ ಆದಾಯ ಠೇವಣಿ, ಬಜಾಜ್ ಅಲಿಯನ್ಸ್ ಮುಂತಾದುವು.

ಅಂತರ ರಾಷ್ಟ್ರೀಯ ಮಟ್ಟದ ಹಣಕಾಸಿನ ಮೂಲಗಳಲ್ಲಿ ಜಾಗತಿಕ ನ್ಯಾಸಧಾರಿ ರಶೀದಿಗಳು (GDR) ಮತ್ತು ಅಮೆರಿಕದ ಠೇವಣಿ ರಶೀದಿಗಳು (AMD) ಮುಖ್ಯ ಪಾತ್ರ ವಹಿಸುತ್ತವೆ.

**ಹಣಕಾಸಿನ ಮಾರುಕಟ್ಟೆಗಳು :** (Financial Markets) ಹಣಕಾಸಿನ ಮಾರುಕಟ್ಟೆಗಳಲ್ಲಿ ಎರಡು ವಿಧಗಳಿವೆ. ಯಾವುವೆಂದರೆ :

1) ಹಣದ ಮಾರುಕಟ್ಟೆ (Money Market),

2) ಬಂಡವಾಳ ಮಾರುಕಟ್ಟೆ (Capital Market)

1. **ಹಣದ ಮಾರುಕಟ್ಟೆ (Money Market):** ಹಣದ ಮಾರುಕಟ್ಟೆಯೆಂದರೆ ಒಂದು ಆರ್ಥಿಕ ವ್ಯವಸ್ಥೆಯಲ್ಲಿ ಅಲ್ಪಾವಧಿ ಸಾಲವನ್ನು ಕೊಡುವ ಮತ್ತು ಕೊಳ್ಳುವ ಹಣಕಾಸಿನ ಸಂಸ್ಥೆಗಳಿಗೆ ಸಂಬಂಧ ಪಟ್ಟಿದ್ದಾಗಿದೆ. ಇಂತಹ ಮಾರುಕಟ್ಟೆಯು ಕಾರ್ಯಶೀಲ ಬಂಡವಾಳಕ್ಕಾಗಿ ವ್ಯವಹಾರ ಸಂಸ್ಥೆಗಳಿಗೆ ಹಣಕಾಸನ್ನು ಒದಗಿಸುತ್ತದೆ. ಈ ಮಾರುಕಟ್ಟೆಯಲ್ಲಿ ಸಾಲಗಳ ಮೇಲಿನ ಬಂಡವಾಳ, ಬಡ್ಡಿದರ ನಿಗಧಿಪಡಿಸಿರುವ ಬಡ್ಡಿ ದರಕ್ಕಿಂತ ಹೆಚ್ಚಾಗಿರುತ್ತದೆ ಈ ಮಾರುಕಟ್ಟೆಗಳಿಂದ ಸಾಲಗಳನ್ನು ಒಂದು ದಿನದಿಂದ ಒಂದುವಾರ, ಒಂದು ತಿಂಗಳು, 3 ರಿಂದ 6 ತಿಂಗಳುಗಳ ಅವಧಿಗೆ ಪಡೆಯಬಹುದು. ಈ ಸಾಲಗಳನ್ನು ವ್ಯಾಪಾರಿ ವಿನಿಮಯ ಪತ್ರಗಳು ಅಲ್ಪಾವಧಿ ಸಹಕಾರಿ ಬಾಂಡ್‌ಗಳು, ಖಜಾನೆ ವಿನಿಮಯ ಪತ್ರಗಳು ಮುಂತಾದುವುಗಳ ಉದ್ದರಿ ಸಾಧನಗಳ ಮೇಲೆ ಪಡೆಯಬಹುದು. ಈ ದಿಸೆಯಲ್ಲಿ ವಾಣಿಜ್ಯ ಬ್ಯಾಂಕುಗಳು ಮತ್ತು ಖಾಸಗಿ ಲೇವಾದೇವಿಗಾರರು ಪ್ರಮುಖ ಪಾತ್ರ ವಹಿಸುತ್ತಾರೆ.

2. **ಬಂಡವಾಳ ಮಾರುಕಟ್ಟೆ (Capital Market):** ಬಂಡವಾಳ ಮಾರುಕಟ್ಟೆಯೆಂದರೆ ದೀರ್ಘಾವಧಿಗೆ ಬಂಡವಾಳ ಸಾಲ ನೀಡುವುದಕ್ಕಾಗಿ ಮತ್ತು ಸಾಲ ಪಡೆಯುವುದಕ್ಕಾಗಿ ಸೌಲಭ್ಯ ಕಲ್ಪಿಸುವ ಸಾಂಸ್ಥಿಕ ವ್ಯವಸ್ಥೆಗಳಾಗಿವೆ. ಸಾಮಾನ್ಯವಾಗಿ ಇವು ಸಂಸ್ಥೆಗಳ ಸ್ಥಿರ ಬಂಡವಾಳಕ್ಕಾಗಿ ಸಾಲವನ್ನು ನೀಡುತ್ತವೆ. ಇಲ್ಲಿ ಬಡ್ಡಿದರವು ಹಣದ ಮಾರುಕಟ್ಟೆ ವಿಧಿಸುವುದಕ್ಕಿಂತ ಕಡಿಮೆ ಇರುತ್ತದೆ. ಇವು 20 ರಿಂದ 30 ವರ್ಷದ ಅವಧಿಗೆ ಸಾಲ ಒದಗಿಸುತ್ತವೆ. ಬಂಡವಾಳ ಮಾರುಕಟ್ಟೆಯಲ್ಲಿ ಹಣಕಾಸಿನ ಸಂಸ್ಥೆಗಳು, ಬಂಡವಾಳ ಸಂಸ್ಥೆಗಳು (finance corporations) ಹೂಡಿಕೆ ವಿಶ್ವಸ್ಥ ಸಮಿತಿಗಳು (Investment Trusts), ಅನ್ಯೋನ್ಯ ನಿಧಿಗಳು ಪ್ರಮುಖವಾದವು.

**ಷೇರುಮಾರುಕಟ್ಟೆ (ಷೇರುಗಳ ವಿನಿಮಯ ಕೇಂದ್ರ) (Stock Exchange):** ಇದು ಬಂಡವಾಳ ಮಾರುಕಟ್ಟೆಯ ಒಂದು ಘಟಕವಾಗಿದೆ. ಚಾಲ್ತಿಯಲ್ಲಿರುವ ಷೇರುಗಳನ್ನು ಮತ್ತು ಬಾಂಡುಗಳನ್ನು ಖರೀದಿದಾರರು ಮತ್ತು ಮಾರಾಟಗಾರರು ಅಥವಾ ಅವರ ಪ್ರತಿನಿಧಿಗಳು ವ್ಯವಹಾರ ಮಾಡುವ ಒಂದು ಸ್ಥಳವಾಗಿದೆ. ಪ್ರಪಂಚದ ಮೊದಲ ಷೇರುಮಾರುಕಟ್ಟೆ 1773 ರಲ್ಲಿ ಲಂಡನ್ ಪಟ್ಟಣದಲ್ಲಿ ರೂಪಿತಗೊಂಡಿತು. ಭಾರತದಲ್ಲಿ ಮೊದಲ ಷೇರುಮಾರುಕಟ್ಟೆ 1875 ರಲ್ಲಿ ಮುಂಬೈಪಟ್ಟಣದಲ್ಲಿ ಪ್ರಾರಂಭವಾಯಿತು. ಈಗ ಭಾರತದಲ್ಲಿ 24 ಷೇರುಮಾರುಕಟ್ಟೆಗಳಿವೆ. ಇವುಗಳಲ್ಲಿ ಹದಿಮೂರು ಸಾರ್ವಜನಿಕ ನಿಯಂತ್ರಣ ಕಂಪನಿಗಳಾಗಿವೆ, ಆರು ಕಂಪನಿಗಳು ಭರವಸೆಯಿಂದ ಕೂಡಿದ ನಿಯಮಿತ ಕಂಪನಿಗಳಾಗಿವೆ, ಉಳಿದವು ಸ್ವಪ್ರೇರಣೆಯ ಲಾಭಗಳಿಕೆಯ ಸಂಸ್ಥೆಗಳಾಗಿವೆ. ಎಂಟು ಷೇರುಮಾರುಕಟ್ಟೆಗಳು ಮಾತ್ರ ಖಾಯಂ ಷೇರುಮಾರುಕಟ್ಟೆಗಳಾಗಿದ್ದು, ಉಳಿದವು ತಮ್ಮ ಇರುವಿಕೆಯನ್ನು ಪ್ರತಿವರ್ಷವೂ ನವೀಕರಿಸಬೇಕಾಗುತ್ತದೆ.

ಷೇರುಮಾರುಕಟ್ಟೆಗಳು ಷೇರುಗಳನ್ನು ಮತ್ತು ಭದ್ರತಾ ಪತ್ರಗಳನ್ನು (Securities) ಕೊಳ್ಳುವಿಕೆ ಮತ್ತು ಮಾರುವಿಕೆಯನ್ನು ನಿಯಂತ್ರಿಸುತ್ತವೆ ಮತ್ತು ಹಿಡಿತದಲ್ಲಿಟ್ಟು ಕೊಂಡಿರುತ್ತವೆ. ಇವು ಸರ್ಕಾರದಿಂದ ನಿಯಂತ್ರಿಸಲ್ಪಡುತ್ತವೆ. ಇವು ಷೇರುಗಳನ್ನು ಮತ್ತು ಬಾಂಡುಗಳನ್ನು ಮಾರುವುದು ಮತ್ತು ಕೊಳ್ಳುವುದೇ ಅಲ್ಲದೆ

©KTBS Not to be republished

ಇವುಗಳನ್ನು ಹೊಂದಿರುವ ಷೇರು ಮಾರುಕಟ್ಟೆಯ ಸದಸ್ಯರಿಗೆ ತಮ್ಮ ವಹಿವಾಟುಗಳನ್ನು ನಿರ್ವಹಿಸಲು ಸ್ಥಳಾವಕಾಶವನ್ನು ಮಾಡಿ ಕೊಡುತ್ತದೆ. ಈ ಸದಸ್ಯರು ತಮ್ಮದೇ ಲೆಕ್ಕದಲ್ಲಿ ನಿಯಮಗಳು, ಕಾಯಿದೆಗಳು ಮತ್ತು ನಿಯಂತ್ರಣಗಳಿಗೆ ಒಳಪಟ್ಟಿರುತ್ತಾರೆ.

ರಾಷ್ಟ್ರೀಯ ಷೇರು ವಿನಿಮಯ ಕೇಂದ್ರವನ್ನು (NSE) ದೇಶದಾದ್ಯಂತ ಷೇರುಗಳ ವಹಿವಾಟನ್ನು ನಡೆಸಲು ಸ್ಥಾಪಿಸಲಾಗಿದೆ. ಈ ಸಂಸ್ಥೆಯು ಹೂಡಿಕೆದಾರರಿಗೆ ಅಂತರ ರಾಷ್ಟ್ರೀಯ ಬಂಡವಾಳ ಮಾರುಕಟ್ಟೆಗಳ ದಿಕ್ಕಿನಂತೆ ಭಾರತದ ಹಣಕಾಸಿನ ಮಾರುಕಟ್ಟೆಯನ್ನು ನಡೆಸಲು ಸಹಾಯ ಮಾಡುತ್ತದೆ. ಇದು 1993 ರಲ್ಲಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ಈಗ ಇದು ಕಂಪ್ಯೂಟರ್ ಪದ್ಧತಿ, ದೂರವಾಣಿ, ಟೆಲೆಕ್ಸ್ ಮತ್ತು ಫ್ಯಾಕ್ಸ್‌ಗಳ ನೆರವಿನಿಂದ ದೇಶದ ಮೂಲೆ ಮೂಲೆಗೂ ವ್ಯಾಪಾರ ನಡೆಸುತ್ತದೆ. ಈ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದಲ್ಲಿ ದಲ್ಲಾಳಿಗಳಿಗೆ ಮಾತ್ರ ವ್ಯಾಪಾರ ಮಾಡಲು ಅವಕಾಶವಿರುತ್ತದೆ. ಷೇರುದಾರರು ತಮ್ಮ ಷೇರುಗಳನ್ನು ಮಾರಲು ಅಥವಾ ಕೊಳ್ಳಲು ಬ್ಯಾಂಕಿನಲ್ಲಿ ಒಂದು ವಿಶೇಷ ಖಾತೆ ತೆರೆಯಬೇಕಾಗುತ್ತದೆ. ಇದಕ್ಕೆ ಡಿಮ್ಯಾಟ್ (Demat) ಲೆಕ್ಕ ಎನ್ನುತ್ತೇವೆ. ಈ ಡಿಮ್ಯಾಟ್ ಖಾತೆಯು ಷೇರುಗಳ ಭದ್ರತೆಯನ್ನು ಕಾಪಾಡುತ್ತದೆ. ಈ ಡಿಮ್ಯಾಟ್ ಖಾತೆ ಇಲ್ಲದೆ ಷೇರುಗಳನ್ನು ಮಾರಲು ಮತ್ತು ಕೊಳ್ಳಲು ಸಾಧ್ಯವಿಲ್ಲ.

## ಅಭ್ಯಾಸಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಜಾಗಗಳನ್ನು ಸೂಕ್ತವಾದ ಪದಗಳಿಂದ ತುಂಬಿರಿ.**

1. ವ್ಯವಹಾರ ಸಂಸ್ಥೆಗಳಿಗೆ ಎರಡು ರೀತಿಯ ಹಣಕಾಸಿನ ಅವಶ್ಯಕತೆ ಇರುತ್ತದೆ. ಅವು ಯಾವುವೆಂದರೆ ____________ ಮತ್ತು ____________
2. ವಸ್ತುಗಳನ್ನು ಪೂರೈಸುವವರು ಕೊಳ್ಳುವವರಿಂದ ಸಾಲಪಡೆಯುತ್ತಾರೆ. ಇದನ್ನು __________ಸಾಲ ಎನ್ನುತ್ತಾರೆ.
3. ವ್ಯವಹಾರ ಸಂಸ್ಥೆಗಳು ತಮ್ಮ ದಿನವಹಿ ಕಾರ್ಯಗಳಿಗಾಗಿ ____________ ರೀತಿಯ ಸಾಲವನ್ನು ಪಡೆಯುತ್ತಾರೆ.
4. ಅತ್ಯಂತ ತ್ವರಿತ ಬೇಡಿಕೆಗಳಿಗಾಗಿ ವ್ಯವಹಾರ ಸಂಸ್ಥೆಗಳು ____________ ರಿಂದ ಸಾಲ ಪಡೆ–ಯುತ್ತಾರೆ.
5. ಕೂಡು ಬಂಡವಾಳ ಸಂಸ್ಥೆಗಳ ಬಂಡವಾಳವನ್ನು ಚಿಕ್ಕ ಚಿಕ್ಕ ಭಾಗಗಳಾಗಿ ವಿಂಗಡಿಸಿರುತ್ತಾರೆ ಇವುಗಳನ್ನು________________ ಎಂದು ಕರೆಯುತ್ತಾರೆ.
6. ವ್ಯವಹಾರ ಸಂಸ್ಥೆಗಳ ಆಯಾತ ಮತ್ತು ನಿರ್ಯಾತಗಳಿಗಾಗಿ ಸಾಲ ನೀಡುವ ಬ್ಯಾಂಕು ______________ಬ್ಯಾಂಕಾಗಿದೆ.
7. ಭಾರತೀಯ ಕೈಗಾರಿಕಾ ಹಣಕಾಸು ನಿಗಮವು _________ ಇಸವಿಯಲ್ಲಿ ಸ್ಥಾಪಿತವಾಯಿತು.
8. ಭಾರತದಲ್ಲಿ ಮೊಟ್ಟಮೊದಲ ಷೇರುಮಾರುಕಟ್ಟೆ ___________ ಪಟ್ಟಣದಲ್ಲಿ ಪ್ರಾರಂಭವಾಯಿತು.

**II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದನ್ನು ಗುಂಪುಗಳಲ್ಲಿ ಚರ್ಚಿಸಿ ಎರಡು, ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ವ್ಯವಹಾರ ಶಾಸ್ತ್ರದಲ್ಲಿ ಹಣಕಾಸು ನಿರ್ವಹಣೆ ಎಂದರೇನು?

© KTBS Not to be re published

2. ವ್ಯವಹಾರ ಸಂಸ್ಥೆಗಳಿಗೆ ಬೇಕಾದ ಎರಡು ರೀತಿಯ ಸಾಲಗಳಾವುವು?

3. ವ್ಯವಹಾರ ಸಂಸ್ಥೆಗಳಿಗೆ ಅಲ್ಪಾವಧಿ ಸಾಲಕ್ಕಾಗಿ ಇರುವ ಯಾವುದಾದರೂ ನಾಲ್ಕು ಮೂಲಗಳನ್ನು ತಿಳಿಸಿ?

4. ವ್ಯವಹಾರ ಸಂಸ್ಥೆಗಳಿಗೆ ಅಲ್ಪಾವಧಿ ಸಾಲ ಏಕೆ ಬೇಕಾಗುತ್ತದೆ ತಿಳಿಸಿ?

5. ದೀರ್ಘಾವಧಿ ಸಾಲ ಎಂದರೇನು?

6. ಅನ್ಯೋನ್ಯ ನಿಧಿಗಳ ಯಾವುದಾದರು ಮೂರು ಸಂಸ್ಥೆಗಳನ್ನು ತಿಳಿಸಿ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಗುಂಪಿನಲ್ಲಿ ಚರ್ಚಿಸಿ, ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ವ್ಯವಹಾರ ಸಂಸ್ಥೆಗಳಿಗೆ ಹಣಕಾಸಿನ ಪ್ರಾಮುಖ್ಯತೆ ಮತ್ತು ಪಾತ್ರವನ್ನು ತಿಳಿಸಿ.

2. ವ್ಯವಹಾರ ಸಂಸ್ಥೆಗಳಿಗೆ ದೀರ್ಘಾವಧಿ ಸಾಲದ ಅವಶ್ಯಕತೆಗಳಾವುವು? ಸ್ಥೂಲವಾಗಿ ವಿವರಿಸಿ.

3. "ಷೇರುಗಳು ಮತ್ತು ಸಾಲ ಪತ್ರಗಳು ದೀರ್ಘಾವಧಿ ಸಾಲದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ." ಅವುಯಾವುವು ? ಅವು ಹೇಗೆ ಸಹಾಯ ಮಾಡುತ್ತವೆ?

4. ಭಾರತ ಹಣಕಾಸು ನಿಗಮ (IFCI) ಮತ್ತು ರಾಜ್ಯ ಹಣಕಾಸು ನಿಗಮಗಳು (SFC) ವಾಣಿಜ್ಯ ಸಂಸ್ಥೆಗಳಿಗೆ ವ್ಯವಹಾರಕ್ಕೆ ಹಣಕಾಸು ಪೂರೈಸಲು ಯಾವ ಪಾತ್ರ ವಹಿಸುತ್ತವೆ?

5. ಸಾರ್ವಜನಿಕ ದೀರ್ಘಾವಧಿ ಠೇವಣಿಗಳೆಂದರೇನು? ಅವುಗಳಿಂದ ಸಾರ್ವಜನಿಕರಿಗಾಗುವ ಅನುಕೂಲತೆಗಳೇನು?

6. ಹಣಕಾಸು ಮಾರುಕಟ್ಟೆ ಎಂದರೇನು? ಇದು ಬಂಡವಾಳ ಮಾರುಕಟ್ಟೆಗಿಂತ ಹೇಗೆ ಭಿನ್ನವಾಗಿದೆ?

7. ವ್ಯವಹಾರ ಸಂಸ್ಥೆಗಳಿಗೆ ಷೇರುಮಾರುಕಟ್ಟೆಗಳ ಪಾತ್ರವನ್ನು ಸ್ಥೂಲವಾಗಿ ವಿವರಿಸಿ.

**IV. ಚಟುವಟಿಕೆ :**

1. ನಿಮ್ಮ ಹತ್ತಿರದ ಬ್ಯಾಂಕಿಗೆ ಭೇಟಿ ನೀಡಿ ಅಲ್ಲಿನ ವ್ಯವಹಾರ ಸಂಘಟನೆ, ಮುಂಗಡ ನೀಡುವ ವಿಷಯಗಳ ಬಗ್ಗೆ ವ್ಯವಸ್ಥಾಪಕರಿಂದ ಮಾಹಿತಿ ಸಂಗ್ರಹಿಸಿ.

2. ಷೇರುಮಾರುಕಟ್ಟೆ ಬಗ್ಗೆ ದಿನಪತ್ರಿಕೆಗಳಲ್ಲಿ ಮತ್ತು ಅಂತರ್ಜಾಲದಲ್ಲಿ ಬರುವ ಮಾಹಿತಿಗಳನ್ನು ಸಂಗ್ರಹಿಸಿ. ಷೇರು ಮಾರುಕಟ್ಟೆಯ ಏರಿಳಿತದ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ.

◈ ◈ ◈

©KTBS Not to be republished

# ಅಧ್ಯಾಯ – 3

# ವ್ಯವಹಾರಶಾಸ್ತ್ರದಲ್ಲಿ ಲೆಕ್ಕಬರಹ

**ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.**

- ಲೆಕ್ಕಬರಹದ ಅರ್ಥ ಮತ್ತು ವ್ಯಾಖ್ಯೆಗಳು.
- ವ್ಯವಹಾರ ಶಾಸ್ತ್ರದಲ್ಲಿ ಲೆಕ್ಕಬರಹದ ಅವಶ್ಯಕತೆ.
- ಖಾತೆಗಳ ಬಗ್ಗೆ ವಿವರಣೆ. ವಿವಿಧ ಖಾತೆಗಳ ಜಮಾ, ಖರ್ಚು ನಿಯಮಗಳು.
- ವ್ಯವಹಾರದ ವಿವಿಧ ವಹಿವಾಟುಗಳನ್ನು ರೋಜು ಪುಸ್ತಕ ಮತ್ತು ಖಾತೆಗಳಲ್ಲಿ ದಾಖಲೆ ಮಾಡುವುದು.
- ವ್ಯವಹಾರದ ಸಂಘಟನೆಗಳ ಆಸ್ತಿ ಮತ್ತು ಜವಾಬ್ದಾರಿಗಳನ್ನು ಅರಿಯುವುದು.
- ಅಂತಿಮವಾಗಿ ಒಂದು ಅವಧಿಯಲ್ಲಿ ವ್ಯಾಪಾರದ ಪೂರ್ಣ ಫಲಿತಾಂಶಗಳನ್ನು ತಿಳಿಯುವುದು.

### ಲೆಕ್ಕಬರಹದ ಅರ್ಥ ಮತ್ತು ವ್ಯಾಖ್ಯೆಗಳು

**ಅರ್ಥ :** ಹಣ ಅಥವಾ ಹಣಕ್ಕೆ ಪರಿವರ್ತಿಸಬಹುದಾದ ವ್ಯಾಪಾರ ವಹಿವಾಟುಗಳನ್ನು ಗುರ್ತಿಸಿ, ಅವುಗಳ ಹಣದ ಮೌಲ್ಯವನ್ನು ತಿಳಿದುಕೊಂಡು, ಅವುಗಳನ್ನು ವರ್ಗೀಕರಿಸಿ, ತುಲನೆ ಮಾಡಿ, ಅರ್ಥ ವಿವರಣೆಯೊಂದಿಗೆ ಅವುಗಳ ಫಲಿತಾಂಶಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವಂತೆ ಒಂದು ನಿರ್ದಿಷ್ಟ ಪುಸ್ತಕಗಳಲ್ಲಿ ಕ್ರಮಬದ್ಧವಾಗಿ ದಾಖಲೆ ಮಾಡುವ ಕಲೆಯನ್ನು ಲೆಕ್ಕಬರಹ ಎನ್ನುತ್ತೇವೆ.

ಸಾಮಾನ್ಯ ಅರ್ಥದಲ್ಲಿ ವ್ಯವಹಾರದ ಫಲಿತಾಂಶಗಳನ್ನು ತಿಳಿದುಕೊಳ್ಳಲು ವ್ಯವಹಾರದ ವಹಿವಾಟುಗಳನ್ನು ಕ್ರಮಬದ್ಧವಾಗಿ ದಾಖಲೆ ಮಾಡುವ ವಿಧಾನಕ್ಕೆ ಲೆಕ್ಕಬರಹ ಎಂದು ಕರೆಯಬಹುದು.

### ವ್ಯಾಖ್ಯೆಗಳು

1. ಅಮೆರಿಕದ ಸರ್ಟಿಫೈಡ್ ಪಬ್ಲಿಕ್ ಅಕೌಂಟೆಂಟರ ಸಂಸ್ಥೆಯು (AICPA - American Institute of Certified Public Accountants) ಲೆಕ್ಕಬರಹವನ್ನು ಈ ರೀತಿ ವ್ಯಾಖ್ಯಾನಿಸುತ್ತದೆ. "ಲೆಕ್ಕವು ಹೆಚ್ಚಿನ ಪ್ರಮಾಣದಲ್ಲಿ ಹಣಕಾಸಿನ ಸ್ವರೂಪದ ಮತ್ತು ಫಲಿತಾಂಶವನ್ನು ತೋರಿಸುವ ವ್ಯವಹಾರಗಳನ್ನು ಮತ್ತು ಘಟನೆಗಳನ್ನು ಅರ್ಥವತ್ತಾದ ರೀತಿಯಲ್ಲಿ ಮತ್ತು ನಗದು ರೂಪದಲ್ಲಿ ದಾಖಲಿಸುವ, ವರ್ಗೀಕರಿಸುವ ಮತ್ತು ಸಂಕ್ಷಿಪ್ತಗೊಳಿಸುವ ಒಂದು ಕಲೆಯಾಗಿದೆ".

2. ಅಮೆರಿಕದ ಅಕೌಂಟಿಂಗ್ ಅಸೋಸಿಯೇಶನ್ (A.A.A - American Accounting Association) ಎಂಬ ಸಂಸ್ಥೆಯು ಲೆಕ್ಕ ಬರಹವನ್ನು ಹೀಗೆ ವ್ಯಾಖ್ಯಾನಿಸುತ್ತದೆ. "ಆರ್ಥಿಕ ಮಾಹಿತಿಯನ್ನು ಬಳಸುವವರು ಸೂಕ್ತ ತೀರ್ಮಾನಗಳನ್ನು ಮತ್ತು ನಿರ್ಣಯಗಳನ್ನು ತೆಗೆದು ಕೊಳ್ಳಲು ಅನುಕೂಲವಾಗುವಂತೆ ಮಾಹಿತಿಯನ್ನು ಗುರ್ತಿಸುವ, ಮೌಲ್ಯೀಕರಿಸುವ ಮತ್ತು ಸಂಪರ್ಕಿಸುವ ಪ್ರಕ್ರಿಯೆಯಾಗಿದೆ".

### ಲೆಕ್ಕ ಬರಹದ ಲಕ್ಷಣಗಳು (Features of Accounting) :

1. ಲೆಕ್ಕಬರಹವು ವಿಜ್ಞಾನವೂ ಆಗಿದೆ ಮತ್ತು ಕಲೆಯೂ ಆಗಿದೆ ಏಕೆಂದರೆ ಲೆಕ್ಕಬರಹವು ಕೆಲವು ನಿರ್ದಿಷ್ಟ ವಿಧಾನಗಳನ್ನು ಮತ್ತು ನಿಯಮಗಳನ್ನು ಹೊಂದಿದೆ ಆದುದರಿಂದ ಅದು ವಿಜ್ಞಾನವಾಗಿದೆ.

Not to be re published ©KTBS

ಲೆಕ್ಕಬರಹವು, ಹಲವು ಉದ್ದೇಶಗಳನ್ನು ಈಡೇರಿಸಲು ಕೆಲವು ವಿಧಾನಗಳನ್ನು ಅನುಸರಿಸುತ್ತದೆ ಆದುದರಿಂದ ಅದು ಕಲೆ ಆಗಿದೆ.

2. ಲೆಕ್ಕಬರಹವು ವ್ಯಾಪಾರದ ವಹಿವಾಟುಗಳನ್ನು ವಿಂಗಡಿಸುತ್ತದೆ.

3. ಲೆಕ್ಕಬರಹವು ವ್ಯಾಪಾರದ ವಹಿವಾಟುಗಳನ್ನು ಹಣದ ರೂಪದ ಮೌಲ್ಯ ಎಷ್ಟಿದೆ ಎಂದು ತೋರಿಸುತ್ತದೆ.

4. ಲೆಕ್ಕಬರಹವು ವ್ಯಾಪಾರದ ವಹಿವಾಟುಗಳನ್ನು ವರ್ಗೀಕರಿಸಿ, ನಿರ್ದಿಷ್ಟವಾದ ಮತ್ತು ಸಂಬಂಧ ಪಟ್ಟ ಖಾತೆಗಳಲ್ಲಿ ದಾಖಲೆ ಮಾಡುತ್ತದೆ.

5. ಲೆಕ್ಕಬರಹವು ವ್ಯಾಪಾರದ ವಹಿವಾಟುಗಳನ್ನು ಸಂಕ್ಷಿಪ್ತಗೊಳಿಸಿ ಹಾಗೂ ಖಾತೆಗಳಿಂದ ಮಾಹಿತಿ ಪಡೆದು ಅಂತಿಮ ಲೆಕ್ಕಗಳಾದ ವ್ಯಾಪಾರಖಾತೆ, ಲಾಭನಷ್ಟದ ಖಾತೆ ಮತ್ತು ಆಸ್ತಿ ಜವಾಬ್ದಾರಿ ಪಟ್ಟಿಗಳನ್ನು ತಯಾರಿಸುತ್ತದೆ.

5. ಲೆಕ್ಕಬರಹವು ವ್ಯಾಪಾರದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವಂತೆ ಫಲಿತಾಂಶಗಳನ್ನು ತಿಳಿಸುತ್ತದೆ.

**ಲೆಕ್ಕಬರಹದ ಅವಶ್ಯಕತೆ :**

W.C.F. ಹಾರ್ಟ್‌ಲಿ ಅವರ ಪ್ರಕಾರ "ದೇಹಕ್ಕೆ ಆಹಾರ ಹೇಗೆ ಮುಖ್ಯವೋ ಹಾಗೆಯೇ ವ್ಯಾಪಾರಕ್ಕೆ ಲಾಭ ಮುಖ್ಯವಾಗಿದೆ". ಪ್ರತಿಯೊಂದು ವ್ಯಾಪಾರ ಸಂಘಟನೆಯು ಲಾಭ ಗಳಿಸುವ ಉದ್ದೇಶದಿಂದ ವ್ಯಾಪಾರವನ್ನು ಪ್ರಾರಂಭಿಸುತ್ತದೆ. ವ್ಯಾಪಾರದ ವಹಿವಾಟುಗಳಾದ ವಸ್ತುಗಳನ್ನು ತಯಾರಿಸುವುದು, ವಸ್ತುಗಳನ್ನು ಕೊಳ್ಳುವುದು, ವಸ್ತುಗಳನ್ನು ಮಾರುವುದು, ಕೆಲವು ಆದಾಯಗಳನ್ನು ಗಳಿಸುವುದು, ವೆಚ್ಚಗಳನ್ನು ಮಾಡುವುದು, ಲಾಭಗಳನ್ನು ಪಡೆಯುವುದು ಹಾಗೂ ನಷ್ಟಗಳನ್ನು ಅನುಭವಿಸುವುದು ಮುಂತಾದುವುಗಳಾಗಿರುತ್ತವೆ. ಇವೆಲ್ಲವುಗಳ ಫಲಿತಾಂಶವನ್ನು ತಿಳಿದುಕೊಳ್ಳುವುದು ಅತಿ ಮುಖ್ಯವಾಗಿರುತ್ತದೆ. ಒಂದು ನಿರ್ದಿಷ್ಟ ಅವಧಿಗೆ ವ್ಯಾಪಾರ ಸಂಘಟನೆಯು ಗಳಿಸಿದ ನಿವ್ವಳ ಲಾಭ ಎಷ್ಟು ಅಥವಾ ಅನುಭವಿಸಿದ ನಷ್ಟ ಎಷ್ಟೆಂಬುದನ್ನು ತಿಳಿದುಕೊಳ್ಳುವುದು ಅವಶ್ಯವಾಗಿರುತ್ತದೆ. ಇತರರಿಂದ ಬರಬೇಕಾದ ಹಣ ಎಷ್ಟು ಮತ್ತು ಇತರರಿಗೆ ಕೊಡಬೇಕಾದ ಹಣ ಎಷ್ಟು ಎಂಬುದನ್ನೂ ಸಹ ತಿಳಿದುಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲ ಲೆಕ್ಕಗಳನ್ನು ಬರೆದಿಡಬೇಕಾಗುತ್ತದೆ. ಅತಿ ಸಾಮಾನ್ಯ ಉದಾಹರಣೆ ತೆಗೆದುಕೊಂಡರೆ ಹಳ್ಳಿಯ ಒಬ್ಬ ಹಾಲು ಮಾರುವ ಹೆಂಗಸು ಯಾರಿಗಾದರೂ ಹಾಲು ಮಾರಿದರೆ ಅದರ ಪ್ರಮಾಣಕ್ಕನುಗುಣವಾಗಿ ಗೋಡೆಯ ಮೇಲೆ ಗೆರೆಗಳನ್ನು ಅಥವಾ ಚುಕ್ಕೆಗಳನ್ನು ಹಾಕುತ್ತಾಳೆ. ಒಂದು ಲೀಟರ್ ಆದರೆ ಒಂದು ಗೆರೆ ಅಥವಾ ಒಂದು ಪೂರ್ಣ ಚುಕ್ಕೆ, ಅರ್ಧ ಲೀಟರ್ ಆದರೆ ಅರ್ಧಗೆರೆ ಅಥವಾ ಅರ್ಧ ಚುಕ್ಕೆ ಇಡುತ್ತಾಳೆ. ಅವಧಿಯ ನಂತರ ಯಾರ್ಯಾರಿಗೆ ಎಷ್ಟೆಷ್ಟು ಹಾಲನ್ನು ಮಾರಿದ್ದಾಳೆಂದು ಗೆರೆಗಳನ್ನು ಅಥವ ಚುಕ್ಕೆಗಳನ್ನು ಕೂಡಿಸುವ ಮೂಲಕ ತಿಳಿಯುತ್ತಾಳೆ ಮತ್ತು ಹಣವನ್ನು ವಸೂಲು ಮಾಡುತ್ತಾಳೆ. ಹಾಗೆಯೇ ಹಲವಾರು ವಹಿವಾಟುಗಳನ್ನು ನಡೆಸುವ ಒಂದು ವ್ಯಾಪಾರ ಸಂಸ್ಥೆ ವಹಿವಾಟುಗಳ ಪರಿಣಾಮಗಳನ್ನು ತಿಳಿದುಕೊಳ್ಳಲು ಬೇರೆ ಬೇರೆಯಾಗಿ ಲೆಕ್ಕಗಳನ್ನು ಬರೆದಿಡಬೇಕಾಗುತ್ತದೆ. ಇದರಿಂದ ವ್ಯಾಪಾರ ಸಂಸ್ಥೆಯು ಸರಕುಗಳನ್ನು ಮಾರಿದ್ದೆಷ್ಟು, ಕೊಂಡಿದ್ದೆಷ್ಟು ಅದರಿಂದ ಬಂದ ಲಾಭ ಎಷ್ಟು, ಯಾರ್ಯಾರು ಎಷ್ಟೆಷ್ಟು ಹಣ ಕೊಡಬೇಕು, ತಾವು ಎಷ್ಟು ಹಣ ಪಾವತಿ ಮಾಡಬೇಕು ಮುಂತಾದುವುಗಳೆಲ್ಲವನ್ನು ತಿಳಿದುಕೊಂಡು, ಒಂದು ಅವಧಿಯಲ್ಲಿ ಸಂಸ್ಥೆ ಗಳಿಸಿದ ಲಾಭ ಅಥವಾ ಅನುಭವಿಸಿದ ನಷ್ಟ ಎಷ್ಟು ಎಂಬುದನ್ನು ತಿಳಿದುಕೊಳ್ಳಬೇಕಾದರೆ ಲೆಕ್ಕಬರಹ ಅವಶ್ಯಕವಾಗಿರುತ್ತದೆ.

©KTBS Not to be republished

**ಲೆಕ್ಕಬರಹದ ಉಪಯೋಗಗಳು ಅಥವಾ ಪ್ರಯೋಜನಗಳು :**

1. ಲೆಕ್ಕಬರಹದ ದಾಖಲೆಗಳು ವ್ಯಾಪಾರ ಸಂಘಟನೆಗಳ ಜಮಾ ಖರ್ಚಿನ ಖಾಯಂ ದಾಖಲಾತಿಗಳಾಗಿವೆ.
2. ಲೆಕ್ಕಬರಹದ ದಾಖಲೆಗಳು ವ್ಯವಹಾರ ವಹಿವಾಟುಗಳ ಪೂರ್ಣ ಮಾಹಿತಿಯನ್ನು ನೀಡುತ್ತವೆ.
3. ಲೆಕ್ಕಬರಹಗಳಿಂದ ವರ್ಷದಿಂದ ವರ್ಷಕ್ಕೆ ವ್ಯಾಪಾರದ ಫಲಿತಾಂಶಗಳನ್ನು ಹೋಲಿಕೆ ಮಾಡುವುದು ಸಾಧ್ಯವಾಗುತ್ತದೆ.
4. ಲೆಕ್ಕಬರಹಗಳಿಂದ ವ್ಯಾಪಾರದ ಹಣಕಾಸಿನ ಸಾಮರ್ಥ್ಯ ಗೊತ್ತಾಗುತ್ತದೆ.
5. ಲೆಕ್ಕಬರಹದಿಂದ ವ್ಯಾಪಾರ ಸಂಘಟನೆಯು ಇತರರಿಗೆ ಕೊಡಬೇಕಾದ ಹಣ ಎಷ್ಟೆಂಬುದನ್ನು ವ್ಯಾಪಾರ ಸಂಘಟನೆಗೆ ಇತರರಿಂದ ಬರಬೇಕಾದ ಹಣ ಎಷ್ಟೆಂಬುದು ತಿಳಿಯಲು ಸಾಧ್ಯವಾಗುತ್ತದೆ.
6. ಲೆಕ್ಕಬರಹಗಳು ಲೆಕ್ಕಪತ್ರ ದಾಖಲೆಗಳನ್ನು ರುಜುವಾತು ಪಡಿಸುವ ಪ್ರಮಾಣ ಪತ್ರಗಳಾಗಿರುತ್ತವೆ. ಸರ್ಕಾರಕ್ಕಾಗಲೀ ಅಥವಾ ಬೇರಾವುದೇ ಸಂಸ್ಥೆಗಳಿಗಾಗಲಿ ವ್ಯಾಪಾರ ಸಂಘಟನೆಯ ಸ್ಥಾನ–ಮಾನವನ್ನು ತಿಳಿಸಿಕೊಡಬೇಕಾದ ಹಾಗೂ ಕಾನೂನಿಗೊಳಪಡುವಂತಹ ಸಂದರ್ಭಗಳಲ್ಲಿ ಲೆಕ್ಕ ಬರಹದ ದಾಖಲೆಗಳು ಅತ್ಯಾವಶ್ಯಕವಾಗಿರುತ್ತವೆ.
7. ಲೆಕ್ಕಬರಹ ದಾಖಲೆಗಳು ವ್ಯಾಪಾರ ಸಂಘಟನೆಯ ಮುಂದಿನ ವರ್ಷಗಳ ಯೋಜನೆಗಳಿಗೆ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವ ವಿಷಯಗಳಿಗೆ ತುಂಬ ಪ್ರಯೋಜನಕಾರಿಯಾಗಿರುತ್ತವೆ.

**ಲೆಕ್ಕಬರಹದ ವಿಧಗಳು**

ಲೆಕ್ಕಬರಹದಲ್ಲಿ ಜಮ ಮತ್ತು ಖರ್ಚು ಮುಖ್ಯ ಪಾತ್ರವನ್ನು ವಹಿಸುತ್ತದೆ. ಈ ಜಮ ಮತ್ತು ಖರ್ಚಿನ ದಾಖಲೆಗಳನ್ನು ಸಂಬಂಧ ಪಟ್ಟ ಲೆಕ್ಕ ಪುಸ್ತಕಗಳಲ್ಲಿ ದಾಖಲೆ ಮಾಡುವ ಕಲೆಯನ್ನು ಲೆಕ್ಕಬರಹ ನಿರ್ವಹಣೆ (Book-Keeping) ಎಂದು ಕರೆಯುತ್ತಾರೆ. ಜಮ ಮತ್ತು ಖರ್ಚಿನ ಲೆಕ್ಕಗಳನ್ನು ದಾಖಲೆ ಮಾಡುವ ಪುಸ್ತಕಕ್ಕೆ ಖಾತೆ (Ledger) ಎನ್ನುತ್ತೇವೆ.

**ಲೆಕ್ಕಬರಹದ ದಾಖಲೆಗಳಲ್ಲಿ ಎರಡು ವಿಧಗಳಿವೆ.**

1. ದ್ವಿ–ನಮೂದು ಪದ್ಧತಿ (Double - Entry System)
2. ಏಕ–ನಮೂದು ಪದ್ಧತಿ (Single - Entry System)

**ದ್ವಿ–ನಮೂದು ಪದ್ಧತಿ :** ಪ್ರತಿಯೊಂದು ವ್ಯಾಪಾರ ವಹಿವಾಟು ಎರಡು ಅಂಶಗಳಿಂದ ಕೂಡಿರುತ್ತದೆ. ಒಂದು ಅಂಶ ಫಲಕೊಡುತ್ತದೆ, ಮತ್ತೊಂದು ಅಂಶ ಫಲ (Benefit) ಪಡೆಯುತ್ತದೆ. ಈ ಎರಡೂ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಲೆಕ್ಕ ಪುಸ್ತಕಗಳಲ್ಲಿ ದಾಖಲೆ ಮಾಡಬೇಕಾಗುತ್ತದೆ. ಪ್ರತಿ ಅಂಶಕ್ಕೂ ಒಂದು ಲೆಕ್ಕ ಅಥವಾ ಖಾತೆ ಇರುತ್ತದೆ. ಒಂದು ಲೆಕ್ಕ ಫಲ ಪಡೆದರೆ ಮತ್ತೊಂದು ಲೆಕ್ಕ ಫಲ ಕೊಡುತ್ತದೆ. ಪ್ರತಿ ಲೆಕ್ಕ ಅಥವ ಖಾತೆಯು ಎರಡು ಕಡೆಗಳನ್ನು ಹೊಂದಿರುತ್ತದೆ. (ನಮೂನೆ ಮುಂದೆ ಕೊಟ್ಟಿದೆ) ಹೀಗಾಗಿ ಒಂದು ಖಾತೆ ಫಲ ಪಡೆದರೆ ಮತ್ತೊಂದು ಖಾತೆ ಫಲ ಕೊಡುತ್ತದೆ. ಇವುಗಳನ್ನು ದಾಖಲೆ ಮಾಡುವಾಗ ಒಂದು ವಹಿವಾಟನ್ನು ಎರಡು ಖಾತೆಗಳಲ್ಲಿ ವಿರುದ್ಧ ಕಡೆಗಳಲ್ಲಿ ದಾಖಲೆ ಮಾಡುತ್ತೇವೆ. ಇದನ್ನು ದ್ವಿ–ನಮೂದು ಪದ್ಧತಿ ಎನ್ನುತ್ತೇವೆ. ಈ ಪದ್ಧತಿಯು ನವೀನ ಹಾಗೂ ವೈಜ್ಞಾನಿಕ ರೀತಿಯ ಲೆಕ್ಕಬರಹದ ರೀತಿಯದ್ದಾಗಿದೆ.

**ಉದಾ:** ನಗದಿಗೆ ಸರಕು ಮಾರಿದ್ದು, ಇಲ್ಲಿ ನಗದು ಖಾತೆ ಫಲ ಪಡೆಯುತ್ತದೆ. ಸರಕು ಮಾರಿದ ಖಾತೆ

Not to be re published ©KTBS

ಫಲ ಕೊಡುತ್ತದೆ. ನಗದು ಖಾತೆಯಲ್ಲಿ ಒಂದು ಕಡೆ ದಾಖಲು ಮಾಡಿದರೆ ಸರಕು ಮಾರಾಟ ಖಾತೆಯಲ್ಲಿ ವ್ಯತಿರಿಕ್ತ ಕಡೆ ದಾಖಲೆ ಮಾಡುತ್ತೇವೆ. ಫಲ (Benefit) ಪಡೆದ ಖಾತೆಯ ಖರ್ಚು ಕಡೆ ದಾಖಲಾದರೆ ಫಲ ಕೊಡುವ ಖಾತೆಯ ಜಮ ಕಡೆ ದಾಖಲು ಮಾಡುತ್ತೇವೆ. (ವಹಿವಾಟುಗಳ ದಾಖಲೆ ಮುಂದೆ ಕೊಡಲಾಗಿದೆ)

**ಏಕ ನಮೂದು ಪದ್ಧತಿ:** ಕೆಲವು ವ್ಯಾಪಾರ ಸಂಸ್ಥೆಗಳು ದ್ವಿ ನಮೂದು ಪದ್ಧತಿಯನ್ನು ಪೂರ್ತಿಯಾಗಿ ಅನುಸರಿಸದೆ ವ್ಯಾಪಾರದ ವಹಿವಾಟುಗಳ ಒಂದು ಅಂಶ ಮಾತ್ರ ಗಣನೆಗೆ ತೆಗೆದುಕೊಂಡು ಒಂದು ಲೆಕ್ಕ ಅಥವಾ ಖಾತೆಯ ಒಂದು ಕಡೆ ಮಾತ್ರ ದಾಖಲೆ ಮಾಡುತ್ತಾರೆ. ಕೆಲವು ವಹಿವಾಟುಗಳನ್ನು ದಾಖಲೆ ಮಾಡುವುದೇ ಇಲ್ಲ. ಕೆಲವು ವಹಿವಾಟುಗಳ ಎರಡು ಅಂಶಗಳನ್ನು ಗಣನೆಗೆ ತೆಗೆದುಕೊಂಡು ಎರಡು ಖಾತೆಗಳಲ್ಲಿ ದಾಖಲೆ ಮಾಡುತ್ತಾರೆ. ಈ ರೀತಿಯ ಲೆಕ್ಕ ದಾಖಲು ಪದ್ಧತಿಯನ್ನು ಏಕ–ನಮೂದು ಪದ್ಧತಿ ಎನ್ನುತ್ತೇವೆ. ಈ ಪದ್ದತಿಯಲ್ಲಿ ಅನೇಕ ವೇಳೆ ವಹಿವಾಟುಗಳ ಪೂರ್ಣ ಚಿತ್ರಣ ದೊರೆಯುವುದಿಲ್ಲ. ಆದುದರಿಂದ ಸಾಮಾನ್ಯವಾಗಿ ಎಲ್ಲ ವ್ಯಾಪಾರ ಸಂಘಟನೆಗಳೂ ದ್ವಿ–ನಮೂದು ಪದ್ಧತಿಯನ್ನು ಅನುಸರಿಸಿ ಲೆಕ್ಕಬರಹಗಳನ್ನು ಇಟ್ಟಿರುತ್ತಾರೆ.

**ದ್ವಿ–ನಮೂದು ಪ್ರಕಾರ ಲೆಕ್ಕಬರಹಗಳನ್ನು ಇಟ್ಟಿರುವ ಅಥವಾ ನಿರ್ವಹಿಸುವ ಕ್ರಮ:**

1. ದಿನವಹಿ ವ್ಯವಹಾರ ವಹಿವಾಟುಗಳು ನಡೆದಾಗ ಕಚ್ಚಾಪುಸ್ತಕದಲ್ಲಿ ದಾಖಲೆ ಮಾಡಲಾಗುತ್ತದೆ (Rough book)
2. ಕಚ್ಚಾಪುಸ್ತಕದ ವಹಿವಾಟುಗಳನ್ನು ವಿಶ್ಲೇಷಿಸಿ ಯಾವ ಖಾತೆಯ ಖರ್ಚಿನ ಕಡೆ ದಾಖಲಾಗಬೇಕು ಮತ್ತು ಯಾವ ಖಾತೆಯ ಜಮ ಕಡೆ ದಾಖಲಾಗಬೇಕೆಂದು ತಿಳಿದು ಈ ಕೆಳಗಿನ ನಮೂನೆಯ ರೋಜು ಪುಸ್ತಕ (Journal) ದಲ್ಲಿ ದಾಖಲೆ ಮಾಡಲಾಗುತ್ತದೆ.

**ರೋಜು ಪುಸ್ತಕದ ನಮೂನೆ**

| ದಿನಾಂಕ | ವಿವರಣೆ | ಖಾತೆ ಪುಟ | ಖರ್ಚು ಮೊಬಲಗು (ರೂ. ಗಳಲ್ಲಿ | ಜಮ ಮೊಬಲಗು (ರೂ. ಗಳಲ್ಲಿ) |
|---|---|---|---|---|
| ............ | ............ ಖಾತೆ – ಖರ್ಚು<br>............ ಖಾತೆ ಜಮ.<br>(ವಿವರಣೆ ............) | –<br>– | * * * * * | <br>* * * * * |

ವಹಿವಾಟುಗಳ ದಾಖಲೆಗಳು ಪೂರ್ಣ ವಿವರಗಳೊಂದಿಗೆ ಮೊದಲು ರೋಜು ಪುಸ್ತಕದಲ್ಲಿ ದಾಖಲಾಗುವುದರಿಂದ ರೋಜು ಪುಸ್ತಕವನ್ನು ದಾಖಲೆಗಳ ಮೂಲಪುಸ್ತಕ ಎನ್ನುತ್ತಾರೆ.

1. ರೋಜು ಪುಸ್ತಕದ ದಾಖಲೆಗಳನ್ನು ಸಂಬಂಧಪಟ್ಟ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ.
2. ಒಂದು ಅವಧಿಯ ನಂತರ ಅಥವಾ ಅವಶ್ಯವೆನಿಸಿದಾಗ ಖಾತೆಗಳ ಶಿಲ್ಕು ಕಂಡು ಹಿಡಿಯಲಾಗುತ್ತದೆ. ಶಿಲ್ಕು ಅಂದರೆ ಎರಡು ಕಡೆಗಳಿಗಿರುವ ವ್ಯತ್ಯಾಸ (ಎಲ್ಲಾ ಖಾತೆಗಳ ಜಮ ಮತ್ತು ಖರ್ಚುಗಳ ಶಿಲ್ಕುಗಳ ಮೊತ್ತ ಸಮವಾಗಿರಬೇಕು.)
3. ಈ ಶಿಲ್ಕುಗಳ ಪಟ್ಟಿಯನ್ನು ತಯಾರಿಸಲಾಗುತ್ತದೆ. ಇದನ್ನು ತಾಳೆಪಟ್ಟಿ (Trial balance) ಎನ್ನುತ್ತೇವೆ.
3. ತಾಳೆ ಪಟ್ಟಿಯ ತಯಾರಿಕೆಯ ನಂತರ ಆಖೈರು ಲೆಕ್ಕಗಳನ್ನು ತಯಾರಿಸಲಾಗುತ್ತದೆ.

©KTBS Not to be re published

4. ಅಖೈರು ಲೆಕ್ಕಗಳು ಮೂರು ಭಾಗಗಳಾಗಿರುತ್ತವೆ.

ಎ) ವ್ಯಾಪಾರ ಖಾತೆ (Trading account)

ಬಿ) ಲಾಭ ಮತ್ತು ನಷ್ಟದ ಖಾತೆ (Profit and Loss account)


(ಸಾಮಾನ್ಯವಾಗಿ ಈ ಎರಡು ಲೆಕ್ಕಗಳನ್ನು ಒಟ್ಟಿಗೆ ಬರೆಯುವುದು ರೂಢಿಯಲ್ಲಿದೆ)

ಉದಾ : ............. ರವರ ............... ಅವಧಿಯ ಅಂತ್ಯಕ್ಕೆ ವ್ಯಾಪಾರ ಮತ್ತು ಲಾಭ ಮತ್ತು ನಷ್ಟದ ಖಾತೆ.

ಸಿ) ಆಸ್ತಿ ಮತ್ತು ಜವಾಬ್ದಾರಿ ಪಟ್ಟಿ : (Balance Sheet) ಇಲ್ಲಿ ವ್ಯಾಪಾರದ ಎಲ್ಲ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಪಟ್ಟಿ ಮಾಡಲಾಗುತ್ತದೆ. (ಆಸ್ತಿ ಮತ್ತು ಜವಾಬ್ದಾರಿ ಪಟ್ಟಿಯನ್ನು ಅಡಾವೆ ಪತ್ರಿಕೆ ಎಂದೂ ಕರೆಯುತ್ತಾರೆ)

ಈ ಎಲ್ಲಾ ದಾಖಲೆಗಳನ್ನು ಲೆಕ್ಕಬರಹ ವರ್ತುಲ ರೇಖಾ ಚಕ್ರ ಎನ್ನುತ್ತೇವೆ.

**ಲೆಕ್ಕಬರಹದ ವರ್ತುಲ ರೇಖಾ ಚಿತ್ರ (Accounting cycle)**




**ಖಾತೆಗಳ ವರ್ಗೀಕರಣ :**

ವ್ಯಾಪಾರ ಸಂಸ್ಥೆಗಳು ವಹಿವಾಟುಗಳನ್ನು ಬರೆದಿಡಲು ಮೂರು ಪ್ರಕಾರದ ಖಾತೆಗಳನ್ನು ರೂಢಿಸಿಕೊಂಡಿರುತ್ತವೆ.

1. ವ್ಯಕ್ತಿ ಖಾತೆಗಳು ಅಥವಾ ವ್ಯಕ್ತಿ ವಾಚಕಖಾತೆಗಳು (Personal Accounts)
2. ಆಸ್ತಿ ಖಾತೆಗಳು ಅಥವಾ ವಸ್ತು ವಾಚಕಖಾತೆಗಳು (Real Accounts)
3. ನಾಮ ಮಾತ್ರ ಖಾತೆಗಳು ಅಥವಾ ನಾಮವಾಚಕಖಾತೆಗಳು (Nominal Accounts)

**ವ್ಯಕ್ತಿ ಖಾತೆಗಳು :** ಸಂಸ್ಥೆಯು ವ್ಯಕ್ತಿಗಳೊಂದಿಗೆ ಅಥವ ಸಂಸ್ಥೆಗಳೊಂದಿಗೆ ಮಾಡಲಾದ ವ್ಯವಹಾರಗಳನ್ನು ಬರೆದಿಡುವ ಖಾತೆಗಳನ್ನು ವ್ಯಕ್ತಿ ಖಾತೆಗಳೆನ್ನುತ್ತೇವೆ. ಉದಾ: ಸುರೇಶ್‌ರವರ ಖಾತೆ, ಬ್ಯಾಂಕು ಖಾತೆ, ರಾಜನ್‌ರವರ ಖಾತೆ. ABC ಪಾಲುದಾರಿಕೆ ಖಾತೆ, *x* ಕಂಪನಿ ಖಾತೆ ಇತ್ಯಾದಿ.

**ಆಸ್ತಿ ಖಾತೆಗಳು :** ಸಂಸ್ಥೆಯು ತನ್ನ ಅಧೀನದಲ್ಲಿರುವ ಪ್ರತಿಯೊಂದು ಆಸ್ತಿ ಅಥವಾ ಸ್ವತ್ತುಗಳಿಗೆ ಅಥವಾ ಸರಕುಗಳಿಗೆ ಸಂಬಂಧಪಟ್ಟ ವ್ಯವಹಾರಗಳನ್ನು ಬರೆದಿಡುವ ಖಾತೆಗಳನ್ನು ಆಸ್ತಿ ಖಾತೆಗಳು ಎನ್ನುತ್ತೇವೆ. ಉದಾ : ಕಟ್ಟಡಗಳ ಖಾತೆ, ನಗದು ಖಾತೆ, ಪೀಠೋಪಕರಣಗಳ ಖಾತೆ, ಯಂತ್ರಗಳ ಖಾತೆ, ಇತ್ಯಾದಿ.

©KTBS Not to be republished

**ನಾಮ ಮಾತ್ರ ಖಾತೆಗಳು ಅಥವಾ ನಾಮ ವಾಚಕ ಖಾತೆಗಳು (Nominal Accounts)**: ಸಂಸ್ಥೆಯು ಗಳಿಸಿದ ಆದಾಯಗಳ ಅಥವಾ ಲಾಭಕ್ಕೆ ಮತ್ತು ಪಾವತಿ ಮಾಡುವ ಅನೇಕ ವೆಚ್ಚಗಳಿಗೆ ಅಥವಾ ನಷ್ಟಗಳಿಗೆ ಪ್ರತಿಯೊಂದಕ್ಕೂ ಒಂದೊಂದು ಖಾತೆ ಇಡಬೇಕಾಗುತ್ತದೆ. ಇವುಗಳನ್ನು ನಾಮ ಮಾತ್ರ ಖಾತೆಗಳು ಅಥವ ಲಾಭ ನಷ್ಟದ ಖಾತೆಗಳು ಎನ್ನುತ್ತೇವೆ. ಉದಾ: ಸಂಬಳಗಳು ಕೊಟ್ಟಿದ್ದು, ಬ್ಯಾಂಕಿನಿಂದ ಬಡ್ಡಿ ಬಂದಿದ್ದು, ಕೂಲಿ ಕೊಟ್ಟಿದ್ದು, ತೆರಿಗೆಗಳನ್ನು ಪಾವತಿ ಮಾಡಿದ್ದು, ಬಾಡಿಗೆ ಕೊಟ್ಟಿದ್ದು, ಬಾಡಿಗೆ ಪಡೆದಿದ್ದು, ಕಮೀಷನ್ ಪಾವತಿ ಮಾಡಿದ್ದು, ಕಮೀಷನ್ ಪಡೆದಿದ್ದು, ವಿಮೆ ವೆಚ್ಚ, ಸಾರಿಗೆ ವೆಚ್ಚ ಮುಂತಾದವು.

**ದಾಖಲೆಗಳಲ್ಲಿ ಜಮ, ಖರ್ಚಿನ ನಿಯಮಗಳು:** ವ್ಯಾಪಾರದ ವಹಿವಾಟುಗಳನ್ನು ದಾಖಲೆ ಮಾಡಲು ಮೂರು ಪ್ರಕಾರಗಳ ಖಾತೆಗಳನ್ನು ವ್ಯಾಪಾರ ಸಂಸ್ಥೆಗಳು ಇಟ್ಟಿರುತ್ತವೆಂದು ತಿಳಿದೆವು. ಈಗ ಈ ಮೂರು ಪ್ರಕಾರದ ಖಾತೆಗಳಿಗೆ ಖರ್ಚು ಮತ್ತು ಜಮೆಗಳನ್ನು ದಾಖಲೆ ಮಾಡಲು ಪಾಲಿಸಬೇಕಾದ ನಿಯಮಗಳಿವೆ. ಯಾವುವೆಂದು ತಿಳಿಯೋಣ.

> **ನಿಮಗಿದು ತಿಳಿದಿರಲಿ :**
> ಲೆಕ್ಕ ಪುಸ್ತಕಗಳಲ್ಲಿ ಖರ್ಚು ಎಂಬ ಪದಕ್ಕೆ *(Debit)* *'Dr'* ಎಂದು, ಜಮ *(Credit)* ಎಂಬ ಪದಕ್ಕೆ *'Cr'* ಎಂದು ಉಪಯೋಗಿಸುತ್ತೇವೆ.

**ವ್ಯಕ್ತಿ ವಾಚಕ ಖಾತೆಗಳಿಗೆ:** ಫಲ ಪಡೆದುಕೊಂಡವರ ಖಾತೆಗೆ ಖರ್ಚು (Debit), ಫಲ ಕೊಟ್ಟವರ ಖಾತೆಗೆ ಜಮ (Credit), (Debit - the receiver and Credit - the giver)

**ಆಸ್ತಿ ಖಾತೆಗಳಿಗೆ:** ಆಸ್ತಿ ಒಳಗೆ ಬಂದರೆ ಆ ಖಾತೆಗೆ ಖರ್ಚು, ಆಸ್ತಿ ಹೊರಗೆ ಹೋದರೆ ಆ ಖಾತೆಗೆ ಜಮ (Debit-What comes in, Credit-What goes out)

**ನಾಮವಾಚಕ ಖಾತೆಗಳಿಗೆ:** ನಷ್ಟ ಅಥವಾ ವೆಚ್ಚದ ಖಾತೆಗಳಿಗೆ ಖರ್ಚು, ಲಾಭ ಅಥವಾ ಆದಾಯ ಗಳಿಕೆಯ ಖಾತೆಗಳಿಗೆ ಜಮ (Debit- all expenses and losses. Credit-all incomes and gains)

**ಮೇಲಿನ ನಿಯಮಗಳಿಗನುಸಾರವಾಗಿ ಖರ್ಚು ಮತ್ತು ಜಮೆಯ ಉದಾಹರಣೆಗಳು:**

1. ರಾಜನ್‌ರವರು 80,000ರೂ ಗಳೊಂದಿಗೆ ವ್ಯಾಪಾರ ಪ್ರಾರಂಭಿಸಿದ್ದು: ಇಲ್ಲಿನ ಎರಡು ಖಾತೆಗಳು (a) ನಗದು ಖಾತೆ–ಆಸ್ತಿ ಖಾತೆ ನಗದು ಬಂದಿದ್ದು – ನಗದು ಖಾತೆಯಲ್ಲಿ ಖರ್ಚಿನ ಕಡೆ ದಾಖಲಾಗಬೇಕು. (b) ಬಂಡವಾಳ ಖಾತೆ – ಇದು ವ್ಯಕ್ತಿ ವಾಚಕ ಖಾತೆ–ಫಲ ಕೊಟ್ಟಿದ್ದು– ಆದ್ದರಿಂದ ಬಂಡವಾಳ ಖಾತೆಯಲ್ಲಿ ಜಮೆ ಕಡೆ ದಾಖಲಾಗಬೇಕು.

> **ಗಮನಿಸಿ :**
> ವ್ಯಾಪಾರ ಪ್ರಾರಂಭಿಸಲು ತಂದ ಹಣವನ್ನು ಬಂಡವಾಳ ಎನ್ನುತ್ತೇವೆ. ಇದು ವ್ಯಕ್ತಿವಾಚಕ ಖಾತೆಯಡಿಯಲ್ಲಿ ಸೇರುತ್ತದೆ.

2. ಬ್ಯಾಂಕಿಗೆ ಹಣ ರವಾನಿಸಿದ್ದು 50,000/– ಇಲ್ಲಿನ ಎರಡು ಖಾತೆಗಳು (a) ಬ್ಯಾಂಕು ಖಾತೆ – ವ್ಯಕ್ತಿ ವಾಚಕ ಖಾತೆ – ಬ್ಯಾಂಕು ಫಲ ಪಡೆಯುತ್ತದೆ – ಬ್ಯಾಂಕು ಖಾತೆಯಲ್ಲಿ ಖರ್ಚಿನ ಕಡೆ ದಾಖಲಾಗಬೇಕು. (b) ನಗದು ಖಾತೆ – ಆಸ್ತಿ ಖಾತೆ, ನಗದು ಹೋಯಿತು ಆದ್ದರಿಂದ ನಗದು ಖಾತೆಯಲ್ಲಿ ಜಮೆ ಕಡೆ ದಾಖಲಾಗಬೇಕು.

## ಖಾತೆ

ಖಾತೆಯು ವ್ಯಾಪಾರ ಸಂಸ್ಥೆಗಳಲ್ಲಿ ಲೆಕ್ಕಗಳನ್ನು ಹೊಂದಿರುತ್ತದೆ. (ವ್ಯಕ್ತಿ ಖಾತೆಗಳು, ಆಸ್ತಿ ಖಾತೆಗಳು ಮತ್ತು ನಾಮವಾಚಕ ಖಾತೆಗಳು) ರೋಜು ಪುಸ್ತಕದಲ್ಲಿ ದಾಖಲೆಗಳನ್ನು ಮಾಡಿದ ನಂತರ ಪ್ರತಿ ರೋಜು ದಾಖಲೆಯನ್ನು ಅವುಗಳ ಸಂಬಂಧಪಟ್ಟ ಖಾತೆಗಳಿಗೆ ವರ್ಗಾಯಿಸುತ್ತೇವೆ. ಖಾತೆಯು ಎರಡು ಕಡೆಗಳನ್ನು ಹೊಂದಿದ್ದು ಎಡಗಡೆಯ ಭಾಗದಲ್ಲಿ ಖರ್ಚು ಬಾಬ್ತುಗಳನ್ನು ಬಲಗಡೆಯ ಭಾಗದಲ್ಲಿ ಜಮೆ ಬಾಬ್ತುಗಳನ್ನು ದಾಖಲೆ ಮಾಡಲಾಗುತ್ತದೆ.

©KTBS
Not to be re published

**ಖಾತೆಯ ನಮೂನೆ ಈ ಕೆಳಕಂಡಂತಿರುತ್ತದೆ.**

**ಖರ್ಚು** ..............................**ಖಾತೆ** **ಜಮ**

| ದಿನಾಂಕ | ವಿವರಣೆ | ರೋ. ಪುಟ | ಮೊಬಲಗು ರೂ.ಗಳಲ್ಲಿ | ದಿನಾಂಕ | ವಿವರಣೆ | ರೋ. ಪುಟ | ಮೊಬಲಗು ರೂ.ಗಳಲ್ಲಿ |
|---|---|---|---|---|---|---|---|
| ಈ ಅಂಕಣದಲ್ಲಿ ವಹಿವಾಟಿನ ತಾರೀಖನ್ನು ನಮೂದಿಸುತ್ತೇವೆ. | ಯಾವ ಖಾತೆಗೆ ಜಮ ಹಾಕಲಾಗಿದೆಯೋ ಆ ಖಾತೆಯ ಹೆಸರನ್ನು ಬರೆಯುತ್ತೇವೆ. | ರೋಜು ಪುಸ್ತಕದ ಪುಟ ನಮೂದಿಸುತ್ತೇವೆ. | ವಹಿವಾಟಿನ ಮೊಬಲಗು ದಾಖಲಾಗುತ್ತದೆ. | ಈ ಅಂಕಣದಲ್ಲಿ ವಹಿವಾಟಿನ ತಾರೀಖನ್ನು ನಮೂದಿಸುತ್ತೇವೆ. | ಯಾವ ಖಾತೆಯಿಂದ ಖರ್ಚು ಹಾಕಲಾಗಿದೆಯೋ ಆ ಖಾತೆ-ಯ ಹೆಸರನ್ನು ಬರೆಯುತ್ತೇವೆ. | ರೋಜು ಪುಸ್ತಕದ ಪುಟ ನಮೂದಿಸುತ್ತೇವೆ. | ವಹಿವಾಟಿನ ಮೊಬಲಗು ದಾಖಲಾಗುತ್ತದೆ. |

**ರೋಜು ಪುಸ್ತಕದ ದಾಖಲೆಗಳನ್ನು ಖಾತೆಗೆ ವರ್ಗಾಹಿಸುವುದು.**

(ವಿವರಣೆ ಅಂಕಣದಲ್ಲಿ ಖರ್ಚಿನ ಕಡೆ ಯಾವ ಖಾತೆಗೆ ಜಮೆ ಆಗಿದೆ ಎಂದು ದಾಖಲಿಸುತ್ತೇವೆ ಹಾಗೂ ಜಮ ಕಡೆ ಯಾವ ಖಾತೆಯಿಂದ ಖರ್ಚು ಆಗಿದೆಯೆಂದು ದಾಖಲಿಸುತ್ತೇವೆ.

ಉದಾ: ನಗದುಖಾತೆ ಖರ್ಚು ಇಲ್ಲಿ ನಗದು ಖಾತೆಯಲ್ಲಿ ಖರ್ಚಿನ ಕಡೆ ಬಂಡವಾಳ ಖಾತೆಗೆ ಎಂದು ಬರೆಯುತ್ತೇವೆ. ಬಂಡವಾಳ ಖಾತೆಯಲ್ಲಿ ಜಮೆ ಕಡೆ ನಗದು ಖಾತೆಯಿಂದ ಎಂದು ಬರೆಯುತ್ತೇವೆ.

**ಖಾತೆಗಳ ಶಿಲ್ಕು ಕಂಡು ಹಿಡಿಯುವುದು**

ಯಾವುದೇ ಒಂದು ವ್ಯಾಪಾರ ಸಂಸ್ಥೆಯಾಗಲಿ ಒಂದು ಅವಧಿಯ ನಂತರ ಅಥವಾ ಅವಶ್ಯವೆನಿಸಿದಾಗ ತಮ್ಮ ಹಣಕಾಸಿನ ಸ್ಥಿತಿಯನ್ನಾಗಲೀ ಅಥವಾ ಹಣಕಾಸಿನ ಫಲಿತಾಂಶವನ್ನಾಗಲಿ ತಿಳಿಯುವುದು ಅತ್ಯಾವಶ್ಯಕ. ಸಂಸ್ಥೆಗಳು ತಮ್ಮ ಎಲ್ಲಾ ವಹಿವಾಟುಗಳನ್ನು ಖಾತೆಗಳಲ್ಲಿ ದಾಖಲೆ ಮಾಡಿರುತ್ತವೆ. ಈ ದಾಖಲೆಗಳ ಶಿಲ್ಕುಗಳನ್ನು ಕಂಡುಹಿಡಿಯುವುದು ಹಣಕಾಸಿನ ಸ್ಥಿತಿ ತಿಳಿಯಲು ಅತ್ಯಾವಶ್ಯಕವಾಗಿದೆ. ಖಾತೆಗಳ ಶಿಲ್ಕುಗಳನ್ನು ಕಂಡುಹಿಡಿಯುವ ಕ್ರಮವು ಈ ರೀತಿ ಇರುತ್ತದೆ. ಪ್ರತಿ ಖಾತೆಯ ಹೆಚ್ಚು ಮೊತ್ತ ಇರುವ ಕಡೆಯ ಮೊಬಲಗನ್ನು ಒಂದೇ ಸಾಲಿನಲ್ಲಿ ಎರಡು ಕಡೆಗಳ ಮೊಬಲಗುಗಳ ಕೆಳಗೆ ನಮೂದಿಸಲಾಗುತ್ತದೆ. ನಂತರ ಹೆಚ್ಚು ಮೊತ್ತದ ಕಡೆಗೂ, ಕಡಿಮೆ ಮೊತ್ತದ ಕಡೆಗೂ ಇರುವ ವ್ಯತ್ಯಾಸವನ್ನು ಅಂದರೆ ಶಿಲ್ಕನ್ನು ಕಡಿಮೆ ಮೊತ್ತ ಇರುವ ಕಡೆ ಮೊಬಲಗುಗಳ ಮತ್ತು ಒಟ್ಟು ಮೊತ್ತದ ಮಧ್ಯೆ ದಾಖಲೆ ಮಾಡುತ್ತಾರೆ. ಖರ್ಚಿನ ಕಡೆ ಎಷ್ಟು ಮೊತ್ತ ಜಾಸ್ತಿ ಇರುತ್ತದೋ ಅದನ್ನು ಆ ಖಾತೆಯ ಖರ್ಚು ಶಿಲ್ಕು ಎಂದೂ ಜಮೆ ಕಡೆ ಎಷ್ಟು ಮೊತ್ತ ಜಾಸ್ತಿ ಇರುತ್ತದೋ ಅದು ಆ ಖಾತೆಯ ಜಮಾ ಶಿಲ್ಕು ಎಂದು ಕರೆಯುತ್ತಾರೆ. ಈ ಶಿಲ್ಕನ್ನು ಮುಂದಿನ ಅವಧಿಗೆ, ಮುಂದುವರೆಸಿ ಅಖೈರುಶಿಲ್ಕು ಎಂದು ತೋರಿಸುತ್ತಾರೆ. ಮುಂದಿನ ಅವಧಿಯಲ್ಲಿ ಈ ಶಿಲ್ಕನ್ನು ಮುಂದುವರೆದ ಪ್ರಾರಂಭ ಶಿಲ್ಕು ಎಂದು ನಮೂದಿಸಿ ಖಾತೆಯು ಪ್ರಾರಂಭವಾಗುತ್ತದೆ. ಬಂಡವಾಳ ಖಾತೆಯೊಂದನ್ನು ಹೊರತುಪಡಿಸಿ ಉಳಿದೆಲ್ಲ ವ್ಯಕ್ತಿವಾಚಕ ಖರ್ಚು ಶಿಲ್ಕು ಮತ್ತು ಜಮ ಶಿಲ್ಕುಗಳ ಮೊತ್ತವನ್ನು ಕಂಡುಕೊಂಡು ಆಸ್ತಿ ಕಡೆ ಸಾಲಿಗರು ಎಂದು ಖರ್ಚು ಶಿಲ್ಕುಗಳ ಮೊತ್ತವನ್ನು ಸಾಲಗಾರರೆಂದು ಜಮ ಶಿಲ್ಕುಗಳ ಮೊತ್ತವನ್ನು, ಜವಾಬ್ದಾರಿ ಕಡೆ ತೋರಿಸಲಾಗುತ್ತದೆ. ಬೇರೆ ಬೇರೆಯಾಗಿ ತೋರಿಸಬೇಕಿಲ್ಲ.

©KTBS Not to be republished

**ಮಾಹಿತಿಗಾಗಿ:**

ಸರಕು ಖಾತೆಯನ್ನು ಬೇರೆ ಬೇರೆಯಾಗಿ, ಸರಕು ಮಾರಿದ ಖಾತೆ ಮತ್ತು ಸರಕುಕೊಂಡ ಖಾತೆ ಎಂದು ತೋರಿಸಬೇಕು ಹಾಗೆಯೇ ಸರಕು ಹಿಂದಿರುಗಿಸಿದ್ದು ಮತ್ತು ಸರಕು ಹಿಂದಿರುಗಿ ಬಂದದ್ದನ್ನು ಬೇರೆ ಬೇರೆಯಾಗಿ ತೋರಿಸಬೇಕು. ಈ ಖಾತೆಗಳ ಮೊತ್ತಗಳನ್ನು ತಾಳೆ ಪಟ್ಟಿಯಲ್ಲಿ ತೋರಿಸಲಾಗುತ್ತದೆ. ಶಿಲ್ಕು ಮಾಡುವ ಅವಶ್ಯಕತೆ ಇರುವುದಿಲ್ಲ.

ಹಿಂದೆ ತಿಳಿಸಿದಂತೆ ಸರಕು ಮಾರಾಟದ ಮೊತ್ತ, ಸರಕು ಕೊಂಡ ಮೊತ್ತ, ಸರಕು ಹಿಂದಿರುಗಿ ಬಂದ ಮೊತ್ತ ಮತ್ತು ಸರಕು ಹಿಂದಿರುಗಿಸಿದ ಮೊತ್ತಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತೇವೆ. ಈ ಎಲ್ಲ ಖಾತೆಗಳ ಶಿಲ್ಕುಗಳ ಪಟ್ಟಿಯನ್ನು ತಯಾರಿಸಲಾಗುತ್ತದೆ. ಈ ಪಟ್ಟಿಯನ್ನು **'ತಾಳೆಪಟ್ಟಿ'** (Trial Balance) ಎಂದು ಕರೆ–ಯುತ್ತಾರೆ. ತಾಳೆ ಪಟ್ಟಿಯ ಎರಡು ಕಡೆಗಳೂ ಸಮನಾಗಿರಬೇಕು. ಆಗ ಲೆಕ್ಕಗಳ ದಾಖಲೆಗಳು ಸರಿಯಾಗಿದೆ ಎಂದು ಪರಿಗಣಿಸಲಾಗುವುದು.

**ಇದು ನಿಮಗೆ ತಿಳಿದಿರಲಿ:**

* ಪ್ರತಿಯೊಂದು ಖಾತೆ ಅಥವ ಲೆಕ್ಕಕ್ಕೂ ಒಂದು ಪುಟ ಅಥವಾ ಹೆಚ್ಚು ಪುಟಗಳನ್ನು ವಹಿವಾಟುಗಳಿಗನುಸಾರವಾಗಿ ಇಡಲಾಗುತ್ತದೆ.
* ರೋಜು ಪುಟ ಅಂಕಣದಲ್ಲಿ ರೋಜುಪುಸ್ತಕದ ಯಾವ ಪುಟದಲ್ಲಿ ಈ ಖಾತೆಯ ರೋಜು ದಾಖಲೆ ಮಾಡಲಾಗಿದೆಯೋ ಆ ಪುಟದ ಸಂಖ್ಯೆ ದಾಖಲೆ ಮಾಡಲಾಗುತ್ತದೆ.

**ಗಮನಿಸಿ:**

ತಾಳೆ ಪಟ್ಟಿಯ ಖರ್ಚು ಶಿಲ್ಕುಗಳ ಮೊತ್ತ ಜಮೆ ಶಿಲ್ಕುಗಳ ಮೊತ್ತ ಎರಡು ಒಂದೇ ಇರುವುದರಿಂದ ರೋಜುದಾಖಲೆಗಳು ಮತ್ತು ಖಾತೆಗಳಿಗೆ ಅವುಗಳ ವರ್ಗಾವಣೆ ಸರಿಯಾಗಿದೆಯೆಂದು ತಿಳಿಯಬಹುದು.

## ಅಖ್ಯೆರು ಲೆಕ್ಕಗಳು

ಅಖ್ಯೆರು ಲೆಕ್ಕಗಳು ಸಾಮಾನ್ಯವಾಗಿ ಎರಡು ಪಟ್ಟಿಗಳಿಂದ ಕೂಡಿರುತ್ತದೆ.

1. ವ್ಯಾಪಾರ ಮತ್ತು ಲಾಭದ ನಷ್ಟದ ಖಾತೆ. 2. ಆಸ್ತಿ ಮತ್ತು ಜವಾಬ್ದಾರಿ ಪಟ್ಟಿ

ವ್ಯಾಪಾರ ಮತ್ತು ಲಾಭ ನಷ್ಟದ ಖಾತೆಯನ್ನು ಕೆಲವೊಮ್ಮೆ ಎರಡು ಭಾಗಗಳಾಗಿ ವ್ಯಾಪಾರಖಾತೆ ಮತ್ತು ಲಾಭದ ನಷ್ಟದ ಖಾತೆ ಎಂದು ತಯಾರಿಸಲಾಗುತ್ತದೆ. ಸಾಮಾನ್ಯವಾಗಿ ಇವೆರಡನ್ನು ಒಟ್ಟಿಗೆ ಸೇರಿಸಿ ವ್ಯಾಪಾರ ಮತ್ತು ಲಾಭನಷ್ಟದ ಖಾತೆ ಎಂದು ಒಂದನ್ನೇ ತಯಾರಿಸುವುದು ರೂಢಿಯಲ್ಲಿದೆ.

ವ್ಯಾಪಾರ ಖಾತೆಯು ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಸರಕುಗಳ ಪ್ರಾರಂಭ ಶಿಲ್ಕು, ಸರಕುಗಳನ್ನು ಕೊಂಡಿದ್ದು, ಸರಕುಗಳನ್ನು ಮಾರಿದ್ದು, ಸರಕುಗಳನ್ನು ಹಿಂದಿರುಗಿಸಿದ್ದ ಹಾಗೂ ಹಿಂದಿರುಗಿ ಬಂದಿದ್ದು, ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಉಂಟಾದ ವೆಚ್ಚಗಳು ಉದಾ: ಸಾಗಾಣಿಕೆ ವೆಚ್ಚ, ಆಮದು ಸುಂಕ ತಯಾರಿಕಾ ವೆಚ್ಚಗಳು, ಕೂಲಿ, ಮಜೂರಿ ಮಂತಾದುವನ್ನು ಒಳಗೊಂಡಿರುತ್ತದೆ. ವ್ಯಾಪಾರ ಖಾತೆಯ ಅಂತಿಮ ಪರಿಣಾಮ, ವ್ಯಾಪಾರದಿಂದ ಅಥವಾ ವಸ್ತುಗಳ ತಯಾರಿಕೆಯಿಂದ ಆದ ಲಾಭ ಅಥವಾ ನಷ್ಟ ಇದನ್ನು ಸ್ಥೂಲ ಲಾಭ ಅಥವಾ ಸ್ಥೂಲ ನಷ್ಟ ಎಂದು ಕರೆಯುತ್ತಾರೆ. ಇದನ್ನು ಲಾಭ ನಷ್ಟದ ಖಾತೆಗೆ ವರ್ಗಾಯಿಸುತ್ತೇವೆ. ಲಾಭ ನಷ್ಟದ ಖಾತೆಯಲ್ಲಿ ವ್ಯಾಪಾರದಿಂದ ಬಂದ ಲಾಭವನ್ನು ಅಥವಾ ನಷ್ಟವನ್ನು ಪರಿಗಣನೆಗೆ ತೆಗೆದುಕೊಂಡು ಸಂಸ್ಥೆ ಗಳಿಸಿದ ಎಲ್ಲ ಆದಾಯಗಳು ಲಾಭಗಳು, ವೆಚ್ಚಗಳು, ನಷ್ಟಗಳು ಇವನ್ನು ತೋರಿಸಲಾಗುತ್ತದೆ. ಅಂತಿಮ ಫಲಿತಾಂಶದ ನಿವ್ವಳ ಲಾಭ ಅಥವಾ ನಷ್ಟವನ್ನು ಬಂಡವಾಳ ಖಾತೆಗೆ ವರ್ಗಾಯಿಸುತ್ತೇವೆ. ಸ್ಥಿರಾಸ್ತಿಗಳು ಪ್ರತಿವರ್ಷ ತಮ್ಮ ಮುಖ ಬೆಲೆಯಲ್ಲಿ ಕೊಂಚ ಭಾಗ ಕಳೆದುಕೊಳ್ಳುತ್ತವೆ. ಇದನ್ನು ಸವಕಳಿ ಎನ್ನುತ್ತೇವೆ. ಈ ಸವಕಳಿಯನ್ನು ಸ್ಥಿರಾಸ್ತಿಗಳಲ್ಲಿ ಕಳೆಯಬೇಕು ಹಾಗೂ ಸವಕಳಿಯನ್ನು ಲಾಭ–ನಷ್ಟದ ಖಾತೆಯಲ್ಲಿ ಖರ್ಚಿನ ಕಡೆ

Not to be re published ©KTBS

ತೋರಿಸಬೇಕು. ಆಸ್ತಿ ಮತ್ತು ಜವಾಬ್ದಾರಿ ಪಟ್ಟಿಯು ಸಂಸ್ಥೆಯ ಎಲ್ಲ ಆಸ್ತಿಗಳನ್ನು ಮತ್ತು ಜವಾಬ್ದಾರಿಗಳನ್ನು ಒಳಗೊಂಡಿರುತ್ತದೆ. ಇದು ಪಟ್ಟಿಯಾಗಿದ್ದು ಆಸ್ತಿಗಳು ಮತ್ತು ಜವಾಬ್ದಾರಿಗಳೆಂದು ತೋರಿಸುತ್ತೇವೆ. ಆಸ್ತಿ ಮತ್ತು ಜವಾಬ್ದಾರಿಗಳ ವ್ಯತ್ಯಾಸ ಬಂಡವಾಳವಾಗಿರುತ್ತದೆ.

## ಅಭ್ಯಾಸಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ವ್ಯಾಪಾರದ ದಿನವಹಿ ವಹಿವಾಟುಗಳನ್ನು ಬರೆದಿಡುವ ಪುಸ್ತಕವನ್ನು ____________ ಪುಸ್ತಕ ಎನ್ನುತ್ತೇವೆ.
2. ಸಂಬಳ ಕೊಟ್ಟ ವಹಿವಾಟು ____________ ಖಾತೆಯಡಿಯಲ್ಲಿ ಬರುತ್ತದೆ.
3. ನವೀನ ಮತ್ತು ಶಾಸ್ತ್ರೀಯ ಲೆಕ್ಕಪತ್ರಗಳನ್ನಿಡುವ ಪದ್ದತಿಯನ್ನು ____________ ಪದ್ದತಿ ಎನ್ನುತ್ತಾರೆ.
4. ಒಂದು ಖಾತೆಯ ಜಮ ಮತ್ತು ಖರ್ಚುಗಳ ವ್ಯತ್ಯಾಸವನ್ನು ____________ ಎನ್ನುತ್ತೇವೆ.
5. ನಗದಿನೊಂದಿಗೆ ವ್ಯಾಪಾರ ಪ್ರಾರಂಭಿಸಿದ ಎರಡು ಖಾತೆಗಳು ________ ಮತ್ತು ______ ಆಗಿವೆ.
6. ಆಖೈರು ಲೆಕ್ಕಗಳಲ್ಲಿ ವ್ಯಾಪಾರದಿಂದ ಬಂದ ಲಾಭವನ್ನು ____________ ಖಾತೆಗೆ ವರ್ಗಾಯಿಸುತ್ತಾರೆ.
7. ಸ್ಥಿರಾಸ್ತಿಗಳು ಪ್ರತಿವರ್ಷ ತಮ್ಮ ಮುಖಬೆಲೆಯಲ್ಲಿ ಕಳೆದುಕೊಳ್ಳುವ ಕೊಂಚ ಭಾಗವನ್ನು ____________ ಎನ್ನುತ್ತಾರೆ.
8. ಒಬ್ಬ ವ್ಯಾಪಾರಿಯ ಆಸ್ತಿ ಮತ್ತು ಜವಾಬ್ದಾರಿಗಳಿಗಿರುವ ವ್ಯತ್ಯಾಸವು ಆ ವ್ಯಾಪಾರಿಯ ____________ ಆಗಿರುತ್ತದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

1. ಲೆಕ್ಕಬರಹದಲ್ಲಿ ಮೂಲ ದಾಖಲೆಯ ಪುಸ್ತಕ ಯಾವುದು? ಅದನ್ನು ಏಕೆ ಮೂಲದಾಖಲೆಯ ಪುಸ್ತಕ ಎನ್ನುತ್ತೇವೆ?
2. ಖಾತೆಗಳ ವಿಧಗಳಾವುವು? ಉದಾಹರಣೆ ಕೊಡಿ.
3. ವ್ಯಾಪಾರದಲ್ಲಿ ಲೆಕ್ಕಬರಹದ ಅವಶ್ಯಕತೆ ಏನು?
4. ದ್ವಿನಮೂದು ಪದ್ಧತಿಯ ಲೆಕ್ಕಬರಹ ಎಂದರೇನು?
5. ಆಖೈರು ಲೆಕ್ಕಗಳಾವುವು? ಲಾಭನಷ್ಟದ ಖಾತೆಯ ಫಲಿತಾಂಶದ ಪರಿಣಾಮವೇನು?
6. ಸರಕು ಮಾರಿದ್ದು ಮತ್ತು ಸರಕು ಖರೀದಿ ಖಾತೆಗಳ ಶಿಲ್ಕು ಕಂಡು ಹಿಡಿಯುವ ಅವಶ್ಯಕತೆ ಇಲ್ಲ. ಏಕೆ?
7. ಸ್ಥಿರಾಸ್ತಿಗಳ ಸವಕಳಿಯ ಪರಿಣಾಮ ಏನಾಗಿರುತ್ತದೆ?

◈ ◈ ◈

Not to be re published ©KTBS